prajavani.net prajavani
ಗುರುವಾರ, ನವೆಂಬರ್ 20, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 320 | ಪುಟ 14
www.prajavani.net

ನಗರವಾಸಿಗಳ ಸಂಖ್ಯೆ ಹೆಚ್ಚಳ
ಭಾರತ ಸೇರಿದಂತೆ 7 ದೇಶಗಳಲ್ಲಿನ ನಗರ ನಿವಾಸಿಗಳ ಸಂಖ್ಯೆಗೆ 2025ರಿಂದ 2050ರ ಅವಧಿಯಲ್ಲಿ 50 ಕೋಟಿಯಷ್ಟು ಹೆಚ್ಚುವರಿಯಾಗಿ ಸೇರ್ಪಡೆಯಾಗುವ ಸಾಧ್ಯತೆಯಿದೆ ಎಂದು ವಿಶ್ವಸಂಸ್ಥೆ ತಿಳಿಸಿದೆ

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

'ವಂದೇ ಭಾರತ್ ಸ್ಲೀಪರ್ ಶೀಘ್ರ'
ದೇಶದ ಮೊದಲ 'ವಂದೇ ಭಾರತ್ ಸ್ಲೀಪರ್' ರೈಲು ಡಿಸೆಂಬರ್‌ನಲ್ಲಿ ಸಂಚಾರ ಆರಂಭಿಸಲಿದೆ ಎಂದು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರು ತಿಳಿಸಿದ್ದಾರೆ

ಸೆನ್ಸೆಕ್ಸ್ 85,186 | ನಿಫ್ಟಿ 26,052 | $/₹ 88.48 | ಚಿನ್ನ (Std. 10g) ₹1,28,600 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹1,66,800 (ಬೆಂಗಳೂರು)

ಕೆಪಿಸಿಎಲ್: ಡಿ.27, 28ಕ್ಕೆ ಮರು ಪರೀಕ್ಷೆ

ಬೆಂಗಳೂರು: ಕರ್ನಾಟಕ ವಿದ್ಯುತ್ ನಿಗಮದಲ್ಲಿ ಖಾಲಿ ಇರುವ ಸಹಾಯಕ ಎಂಜಿನಿಯರ್, ಕಿರಿಯ ಎಂಜಿನಿಯರ್ ಸೇರಿದಂತೆ ಇತರ ಹುದ್ದೆಗಳಿಗೆ ನಡೆಸಲಾಗಿದ್ದ ಪರೀಕ್ಷೆಯನ್ನು ಸುಪ್ರೀಂ ಕೋರ್ಟ್ ರದ್ದುಪಡಿಸಿದ ಕಾರಣ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಮರು ಪರೀಕ್ಷಾ ವೇಳಾಪಟ್ಟಿಯನ್ನು ಪ್ರಕಟಿಸಿದೆ.

ಈ ಹಿಂದೆ ಪರೀಕ್ಷೆ ಬರೆದಿದ್ದ ಅಭ್ಯರ್ಥಿಗಳಿಗೆ ಡಿ.27 ಮತ್ತು 28ರಂದು ಮರು ಪರೀಕ್ಷೆ ನಡೆಸಲಾಗುತ್ತದೆ ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ಹೇಳಿದ್ದಾರೆ.

ಅಭ್ಯರ್ಥಿಗಳು ವೆಬ್‌ಸೈಟ್‌ನಲ್ಲಿ ನೀಡಿರುವ ಲಿಂಕ್ ಮೇಲೆ ಕ್ಲಿಕ್ ಮಾಡಿ ಯಾವ ಹುದ್ದೆಗೆ ಅರ್ಜಿ ಸಲ್ಲಿಸಲಾಗಿತ್ತು ಎಂಬ ಮಾಹಿತಿಯನ್ನು ನಮೂದಿಸಬೇಕು ಎಂದು ಸಲಹೆ ನೀಡಿದ್ದಾರೆ.

₹7.11 ಕೋಟಿ 'ಹಗಲು' ದರೋಡೆ

ಐ.ಟಿ. ಆರ್‌ಬಿಐ ಅಧಿಕಾರಿಗಳ ಸೋಗಿನಲ್ಲಿ ಸಿಎಂಎಸ್ ವಾಹನ ಅಡ್ಡಗಟ್ಟಿ ಕೃತ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಟಿಎಂ ಕೇಂದ್ರಕ್ಕೆ ಹಣ ತುಂಬಲು ಹೊರಟಿದ್ದ ಸಿಎಂಎಸ್ ಏಜೆನ್ಸಿ ವಾಹನವನ್ನು ಆದಾಯ ತೆರಿಗೆ ಇಲಾಖೆ, ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದ ಅಧಿಕಾರಿಗಳ ಸೋಗಿನಲ್ಲಿ ಅಡ್ಡಗಟ್ಟಿ, ₹7.11 ಕೋಟಿ ದರೋಡೆ ನಡೆಸಿದ ಆರೋಪಿಗಳು ಪರಾರಿಯಾಗಿರುವ ಘಟನೆ ಬುಧವಾರ ಮಧ್ಯಾಹ್ನ 12ರಿಂದ 1 ಗಂಟೆಯ ನಡುವೆ ನಗರದಲ್ಲಿ ನಡೆದಿದೆ.

ಪ್ರಕರಣ ನಡೆದ ಕೆಲವೇ ತಾಸಿನಲ್ಲಿ ದರೋಡೆಕೋರರ ಸುಳಿವು ಪೊಲೀಸರಿಗೆ ಲಭಿಸಿದೆ. ಆರೋಪಿಗಳ ಬಂಧನಕ್ಕೆ ವಿಶೇಷ ತಂಡಗಳನ್ನು ರಚಿಸಲಾಗಿದ್ದು ತನಿಖೆ ಚುರುಕುಗೊಂಡಿದೆ. ನಗರದಲ್ಲಿ ಹಗಲು ವೇಳೆ ನಡೆದ ದೊಡ್ಡ ದರೋಡೆ ಪ್ರಕರಣ ಇದಾಗಿದೆ.

ಸೌತ್ ಎಂಡ್ ಸರ್ಕಲ್ ಹಾಗೂ ಅಶೋಕ ಪಿಲ್ಲರ್ ನಡುವೆ ಇರುವ ಎಟಿಎಂಗೆ ಹಣ ಹಾಕಲೆಂದು ಜಿಜೆ 01 ಎಚ್‌ಟಿ 9173 ನೋಂದಣಿ ಸಂಖ್ಯೆಯ ವಾಹನವು ಹೊರಟಿತ್ತು. ಇನ್ನೊವಾ ಕಾರಿನಲ್ಲಿ ಬಂದಿದ್ದ ಎಂಟು ದರೋಡೆಕೋರರು, ಸಿಎಂಎಸ್ ವಾಹನವನ್ನು ಅಡ್ಡಗಟ್ಟಿ 'ನಾವು ಆದಾಯ ತೆರಿಗೆ ಇಲಾಖೆ, ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದ ಅಧಿಕಾರಿಗಳು' ಎಂದು ಹೆದರಿಸಿದ್ದರು. 'ಹಣಕ್ಕೆ ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಬೇಕು' ಎಂದು ಹೇಳಿ ಸಿಎಂಎಸ್ ವಾಹನದಲ್ಲಿದ್ದ ನಾಲ್ವರಲ್ಲಿ ಚಾಲಕನನ್ನು ಬಿಟ್ಟು ಮೂವರನ್ನು ಕೆಳಗಿಸಿ, ಇನ್ನೊವಾ ಕಾರಿಗೆ ಹತ್ತಿಸಿಕೊಂಡಿದ್ದರು. ಹಣವಿದ್ದ ವಾಹನವನ್ನು ಡೇರಿ ವೃತ್ತದ ಮೇಲ್ಸೇತುವೆಗೆ ಕೊಂಡೊಯ್ದು, ಅಲ್ಲಿ ಇನ್ನೊವಾ ಕಾರಿಗೆ ಆ ಹಣ ತುಂಬಿಸಿಕೊಂಡು ಪರಾರಿಯಾಗಿದ್ದಾರೆ. ಇನ್ನೊವಾದಲ್ಲಿದ್ದ ಸಿಎಂಎಸ್ ಏಜೆನ್ಸಿಯ ಮೂವರು ಸಿಬ್ಬಂದಿಯನ್ನು ಮಾರ್ಗ ಮಧ್ಯದಲ್ಲಿ ಬಿಟ್ಟು ಹೋಗಿದ್ದಾರೆ.

ಮಾಹಿತಿ ತಿಳಿದ ಕೆಲವೇ ಕ್ಷಣಗಳಲ್ಲಿ ಸುದ್ದಗುಂಟೆಪಾಳ್ಯ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿದ್ದರು. ಅಷ್ಟರಲ್ಲಿ ಎಂಟು ಮಂದಿ ದರೋಡೆಕೋರರು ಪರಾರಿ ಆಗಿದ್ದರು. ಹಲವು ಕಡೆ ಹಣ ತುಂಬಿದ ವಾಹನವನ್ನು ಹಿಂಬಾಲಿಸುತ್ತಿರುವುದು ಸಿ.ಸಿ.ಟಿ.ವಿ. ಕ್ಯಾಮೆರಾಗಳಲ್ಲಿ ಸೆರೆಯಾಗಿದೆ.

6



ಚಿತ್ರಗಳು: ಗುರು ನಾವಳ್ಳಿ



ನಕಲಿ ನಂಬರ್ ಪ್ಲೇಟ್ ಬಳಕೆ

ಇನೊವಾ ಕಾರಿಗೆ ನಕಲಿ ನಂಬರ್ ಪ್ಲೇಟ್ ಅಳವಡಿಸಿಕೊಂಡು ದರೋಡೆಕೋರರು ಸಂಚು ನಡೆಸಿರುವುದು ಪತ್ತೆಯಾಗಿದೆ.

ಕೆಎ03 ಎನ್‌ಸಿ 8052 ನೋಂದಣಿ ಸಂಖ್ಯೆ ವಾಹನದಲ್ಲಿ ಬಂದ ಆರೋಪಿಗಳು ಕೃತ್ಯ ಎಸಗಿದ್ದಾರೆ. ಆದರೆ, ಈ ನೋಂದಣಿ ಸಂಖ್ಯೆಯನ್ನು ಪರಿಶೀಲಿಸಿದಾಗ ಮೂಲ ಸಂಖ್ಯೆಯು ಮಾರುತಿ ಸ್ವಿಫ್ಟ್ ಕಾರಿಗೆ ಸಂಬಂಧಿಸಿದ್ದಾಗಿದೆ ಎಂಬುದು ಗೊತ್ತಾಗಿದೆ. ಹಲವು ದಿನಗಳಿಂದ ಸಂಚು ರೂಪಿಸಿ, ದರೋಡೆ ನಡೆಸಿರುವ ಸಾಧ್ಯತೆಯಿದೆ. ಸಿಎಂಎಸ್ ಸಿಬ್ಬಂದಿಯ ಮೊಬೈಲ್ ಫೋನ್ ಜಪ್ತಿ ಮಾಡಲಾಗಿದೆ. ಕರೆಗಳ ವಿವರ ಪರಿಶೀಲನೆ ನಡೆಸಲಾಗುತ್ತಿದೆ.

ಶಂಕಿತರ ಜತೆಗೆ ಚಾಲಕ ಸಂಪರ್ಕದಲ್ಲಿರುವುದು ಪತ್ತೆಯಾಗಿದೆ ಎಂದು ಮೂಲಗಳು ಹೇಳಿವೆ.

'ಕೈ' ಅಧ್ಯಕ್ಷಗಿರಿ 'ತ್ಯಾಗ' ಶಿವಕುಮಾರ್ ಸುಳಿವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ತಮ್ಮ ಬಳಿ ಇರುವ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ (ಕೆಪಿಸಿಸಿ) ಅಧ್ಯಕ್ಷ ಸ್ಥಾನ ತೊರೆಯುವ ಸುಳಿವು ನೀಡಿದ್ದಾರೆ.

ರಾಜ್ಯದಲ್ಲಿ ಮುಖ್ಯಮಂತ್ರಿ ಬದಲಾವಣೆ ಸುದ್ದಿ, ಕೆಪಿಸಿಸಿ ಅಧ್ಯಕ್ಷ ಸ್ಥಾನದ ಮೇಲೆ ಕಣ್ಣಿಟ್ಟಿರುವ ಸಿದ್ದರಾಮಯ್ಯ ಅವರ ಆಪ್ತರ ಹೇಳಿಕೆಗಳು ಹಲವು ದಿನಗಳಿಂದ ಚರ್ಚೆಯ ವಿಷಯವಾಗಿವೆ. ಈ ಹೊತ್ತಲ್ಲೇ ಪಕ್ಷದ ಅಧ್ಯಕ್ಷ ಸ್ಥಾನ ತೊರೆಯುವ ಶಿವಕುಮಾರ್ ಅವರ ಮಾತುಗಳು ಕಾಂಗ್ರೆಸ್ ವಲಯದಲ್ಲಿ ಸಂಚಲನ ಮೂಡಿಸಿವೆ.

ಶಿವಕುಮಾರ್ ಹೇಳಿದ್ದೇನು?: ಕಾಂಗ್ರೆಸ್ ಭವನದಲ್ಲಿ ಬುಧವಾರ ಹಮ್ಮಿಕೊಂಡಿದ್ದ ದಿವಂಗತ ಪ್ರಧಾನಿ ಇಂದಿರಾ ಗಾಂಧಿ ಅವರ ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಅಧ್ಯಕ್ಷ ಸ್ಥಾನದಲ್ಲಿ ನಾನು ಶಾಶ್ವತವಾಗಿ ಇರಲು ಬಯಸುವುದಿಲ್ಲ. 2020ರಲ್ಲಿ ಅಧ್ಯಕ್ಷನಾಗಿ ಅಧಿಕಾರ ಸ್ವೀಕರಿಸಿದ್ದೆ. ಈಗಾಗಲೇ ಐದು ವರ್ಷ ಪೂರೈಸಿದ್ದೇನೆ. 2023ರ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಬಹುಮತ ಪಡೆದು ಅಧಿಕಾರಕ್ಕೆ ಬಂದಾಗ ಉಪ ಮುಖ್ಯಮಂತ್ರಿಯಾದೆ' ಎಂದು ಹೇಳಿದರು.

6

'ಕೆಲವರಿಗೆ ಅಧಿಕಾರ ಮಾತ್ರ ಬೇಕು'

'ಕೆಲವರಿಗೆ ಅಧಿಕಾರ ಮಾತ್ರ ಬೇಕು. ಕಾಂಗ್ರೆಸ್ ಕಚೇರಿ ದೇವಾಲಯ ಎಂಬುದನ್ನು ಕೆಲವರು ಮರೆತಿದ್ದಾರೆ' ಎಂದು ಡಿ.ಕೆ.ಶಿವಕುಮಾರ್ ಹೇಳಿದರು.

'100 ಕಾಂಗ್ರೆಸ್ ಕಚೇರಿಗಳ ನಿರ್ಮಾಣಕ್ಕೆ ಶಂಕುಸ್ಥಾಪನೆ ಹಮ್ಮಿಕೊಂಡಿದ್ದೇವೆ. ಇದಕ್ಕೆ ಯಾರು ಸಹಕಾರ ನೀಡಿದ್ದಾರೆ, ನೀಡಿಲ್ಲ ಎಂದು ಪಟ್ಟಿ ನೀಡಲು ಎಐಸಿಸಿ ನಾಯಕರು ಸೂಚಿಸಿದ್ದಾರೆ. ಕೆಲವರು ಆಸಕ್ತಿ ತೋರಿದ್ದಾರೆ, ಕೆಲವರು ತೋರಿಲ್ಲ. ಇದಕ್ಕೆ ಉತ್ತರ ನೀಡುವುದಿಲ್ಲ. ದೆಹಲಿ ನಾಯಕರು ಸರಿಯಾದ ಸಮಯದಲ್ಲಿ ಉತ್ತರ ನೀಡುತ್ತಾರೆ' ಎಂದು ಹೇಳಿದರು.

ಚಿನಕುರುಳಿ ಪ್ರಕಾಶ್ ಶೆಟ್ಟಿ

ಬಿಹಾರ: ಇಂದು ನಿತೀಶ್ ಪ್ರಮಾಣ

ಪ್ರಜಾವಾಣಿ ವಾರ್ತೆ

ಪಟ್ನಾ: ಜೆಡಿಯು ಮುಖ್ಯಸ್ಥ ನಿತೀಶ್ ಕುಮಾರ್ ಅವರು 10ನೇ ಬಾರಿಗೆ ಬಿಹಾರದ ಮುಖ್ಯಮಂತ್ರಿಯಾಗಿ ಗುರುವಾರ ಪ್ರಮಾಣ ವಚನ ಸ್ವೀಕರಿಸಲಿದ್ದು, ಪ್ರಧಾನಿ ನರೇಂದ್ರ ಮೋದಿ ಸಮಾರಂಭದಲ್ಲಿ ಪಾಲ್ಗೊಳ್ಳಲಿದ್ದಾರೆ.

ಎನ್‌ಡಿಎ ಮೈತ್ರಿಕೂಟದ ಸದಸ್ಯ ಪಕ್ಷಗಳ ಜಂಟಿ ಸಭೆಯಲ್ಲಿ ನಿತೀಶ್ ಕುಮಾರ್ ಅವರನ್ನು ಎನ್‌ಡಿಎ ಶಾಸಕಾಂಗ ಪಕ್ಷದ (ಎನ್‌ಡಿಎಎಲ್‌ಪಿ) ನಾಯಕನನ್ನಾಗಿ ಬುಧವಾರ ಅವಿರೋಧವಾಗಿ ಆಯ್ಕೆ ಮಾಡಲಾಯಿತು. ಅದರ ಬೆನ್ನಲ್ಲೇ ಅವರು, ರಾಜ್ಯಪಾಲ ಮೊಹಮ್ಮದ್ ಖಾನ್ ಅವರನ್ನು ಸಂಜೆ ಭೇಟಿಯಾಗಿ ನಿರ್ಗಮಿತ ಸರ್ಕಾರದ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದರು. ಇದಕ್ಕೂ ಮುನ್ನ ನಿತೀಶ್ ಅವರನ್ನು ಜೆಡಿಯು ಶಾಸಕಾಂಗ ಪಕ್ಷದ ನಾಯಕನನ್ನಾಗಿ ಆಯ್ಕೆ ಮಾಡಲಾಗಿತ್ತು. ಮತ್ತೊಂದೆಡೆ, ಬಿಜೆಪಿ ನಾಯಕರ ಸಭೆಯಲ್ಲಿ ಸಾಮ್ರಾಟ್ ಚೌಧರಿ ಅವರನ್ನು ಬಿಜೆಪಿಯ ಶಾಸಕಾಂಗ ಪಕ್ಷದ ನಾಯಕನನ್ನಾಗಿ, ವಿಜಯ್ ಸಿನ್ಹಾ ಅವರನ್ನು ಉಪನಾಯಕನನ್ನಾಗಿ ಆರಿಸಲಾಯಿತು. ಈ ಇಬ್ಬರೂ ನಾಯಕರು ನಿರ್ಗಮಿತ ಸರ್ಕಾರದಲ್ಲಿ ಉಪ ಮುಖ್ಯಮಂತ್ರಿಗಳಾಗಿದ್ದರು.

ಡಿಸಿಎಂ ಸ್ಥಾನಕ್ಕೆ ಚಿರಾಗ್?: ಹೊಸ ಸರ್ಕಾರದಲ್ಲಿ ಎರಡನೇ ಉಪ ಮುಖ್ಯಮಂತ್ರಿ ಸ್ಥಾನ ಬಿಜೆಪಿ ಅಥವಾ ಎಲ್‌ಜೆಪಿ (ಆರ್) ಪಾಲಾಗಲಿದೆಯೇ ಎಂಬುದು ಕುತೂಹಲ ಮೂಡಿಸಿದೆ.

7

ಗ್ಯಾಂಗ್‌ಸ್ಟರ್ ಅನ್ಮೋಲ್ ಬಿಷ್ಣೋಯಿ ಸೆರೆ

ನವದೆಹಲಿ (ಪಿಟಿಐ): ಮಹಾರಾಷ್ಟ್ರದ ಎನ್‌ಸಿಪಿ ಮುಖಂಡ ಬಾಬಾ ಸಿದ್ದಿಕಿ ಹತ್ಯೆ ಪ್ರಕರಣದ ಪ್ರಮುಖ ಆರೋಪಿ, ಕುಖ್ಯಾತ ಗ್ಯಾಂಗ್‌ಸ್ಟರ್ ಲಾರೆನ್ಸ್ ಬಿಷ್ಣೋಯಿ ಸಹೋದರ ಅನ್ಮೋಲ್ ಬಿಷ್ಣೋಯಿಯನ್ನು ಎನ್‌ಐಎ ಬುಧವಾರ ಬಂಧಿಸಿದೆ.

ಹಲವು ಅಪರಾಧ ಪ್ರಕರಣಗಳಲ್ಲಿ ಭಾಗಿಯಾಗಿರುವ ಅನ್ಮೋಲ್ 2022ರಿಂದ ತಲೆಮರೆಸಿಕೊಂಡಿದ್ದ. ಕಳೆದ ವರ್ಷದ ನವೆಂಬರ್‌ನಲ್ಲಿ ಅಮೆರಿಕದಲ್ಲಿ ಈತನನ್ನು ಬಂಧಿಸಲಾಗಿತ್ತು. ಮಂಗಳವಾರ ಅಮೆರಿಕದಿಂದ ಗಡಿಪಾರು ಮಾಡಲಾದ ಅನ್ಮೋಲ್‌ನನ್ನು ಬುಧವಾರ ದೆಹಲಿಯಲ್ಲಿ ಎನ್‌ಐಎ ಬಂಧಿಸಿತು.

ಮುಂಬೈನಲ್ಲಿ ನಟ ಸಲ್ಮಾನ್ ಖಾನ್ ಮನೆ ಮುಂಭಾಗದಲ್ಲಿ ಕಳೆದ ವರ್ಷ ನಡೆದ ಗುಂಡಿನ ದಾಳಿ, ಪಂಜಾಬಿ ಗಾಯಕ ಸಿಧು ಮೂಸೇವಾಲ ಹತ್ಯೆ ಸೇರಿದಂತೆ ಹಲವು ಪ್ರಕರಣಗಳಲ್ಲಿ ಅನ್ಮೋಲ್ ಪೊಲೀಸರಿಗೆ ಬೇಕಾಗಿದ್ದ. ಪೊಲೀಸರು ಈತನಿಗಾಗಿ ಲುಕ್‌ಔಟ್ ನೋಟಿಸ್ ಹೊರಡಿಸಿದ್ದರು. ಈತನ ವಿರುದ್ಧ ಎನ್‌ಐಎ 2023ರಲ್ಲಿ ಆರೋಪಪಟ್ಟಿ ಸಲ್ಲಿಸಿತ್ತು.

ಗ್ಯಾಂಗ್‌ಸ್ಟರ್ ಲಾರೆನ್ಸ್ ಬಿಷ್ಣೋಯಿ ಮತ್ತು ಸಹಚರ ಗೋಲ್ಡಿ ಬ್ರಾರ್ ತಂಡವು 2020ರಿಂದ 2023ರ ಅವಧಿಯಲ್ಲಿ ದೇಶದಲ್ಲಿ ನಡೆಸಿರುವ ಹಲವು ಅಪರಾಧ ಕೃತ್ಯಗಳಲ್ಲಿ ಅನ್ಮೋಲ್‌ನ ನೇರ ಪಾತ್ರ ಇರುವುದು ತನಿಖೆಯಲ್ಲಿ ದೃಢಪಟ್ಟಿದೆ.

10

11 ದಿನ ಎನ್‌ಐಎ ಕಸ್ಟಡಿಗೆ

ದೆಹಲಿ ಹೈಕೋರ್ಟ್ ಅನ್ಮೋಲ್‌ನನ್ನು 11 ದಿನ ಎನ್‌ಐಎ ಕಸ್ಟಡಿಗೆ ಬುಧವಾರ ಒಪ್ಪಿಸಿದೆ. ಎನ್‌ಐಎ ಅಧಿಕಾರಿಗಳು ಅನ್ಮೋಲ್‌ನನ್ನು ಬುಧವಾರ ಸಂಜೆ ಬಿಗಿ ಭದ್ರತೆಯಲ್ಲಿ ಪಟಿಯಾಲ ಹೌಸ್ ಕೋರ್ಟ್‌ಗೆ ಹಾಜರುಪಡಿಸಿ, 15 ದಿನ ಕಸ್ಟಡಿ ವಿಚಾರಣೆಗೆ ಅನುಮತಿ ಕೋರಿದರು.

ವಿಶೇಷ ನ್ಯಾಯಮೂರ್ತಿ ಪ್ರಶಾಂತ್ ಶರ್ಮಾ ಅವರು, 11 ದಿನ ಕಸ್ಟಡಿಗೆ ನೀಡಲು ಒಪ್ಪಿದರು.

ಎನ್‌ಐಎ ಕಸ್ಟಡಿ ಅವಧಿ ಪೂರ್ಣಗೊಂಡ ನಂತರ ನವೆಂಬರ್ 29ರಂದು ಅನ್ಮೋಲ್‌ನನ್ನು ಮತ್ತೆ ನ್ಯಾಯಾಲಯದ ಮುಂದೆ ಹಾಜರು ಪಡಿಸಲಾಗುವುದು ಎಂದು ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ರಾಹುಲ್ ತ್ಯಾಗಿ ಸುದ್ದಿಗಾರರಿಗೆ ತಿಳಿಸಿದರು.

ಪ್ರಕಟಣೆ : ಮೈಸೂರು-ಚಾಮರಾಜನಗರ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿ.,

ಹವಾಮಾನ ಮುನ್ಸೂಚನೆ: ನಗರದಲ್ಲಿ ಭಾಗಶಃ ಮೋಡ ಕವಿದ ವಾತಾವರಣ ಇರಲಿದೆ.

‘ಅಕ್ರಮ ಬಳಕೆದಾರರ ಮೇಲೆ ಕ್ರಮ’

ಬೆಂಗಳೂರು: ತಂತ್ರಜ್ಞಾನ ಹಾಗೂ ವಿಶೇಷ ಪಡೆ ಬಳಸಿ ನೀರಿನ ಸೋರಿಕೆ ಹಾಗೂ ಅಕ್ರಮ ಬಳಕೆಗೆ ತಡೆಯೊಡ್ಡಲಾಗುತ್ತಿದೆ. ಹೀಗಿದ್ದರೂ ಅಕ್ರಮ ಸಂಪರ್ಕ ಪಡೆದಿರುವವರ ನಿರ್ದಾಕ್ಷಿಣ್ಯವಾಗಿ ಕ್ರಮ ಜರುಗಿಸಬೇಕು ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೂಚನೆ ನೀಡಿದರು.

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಅಕ್ರಮ ಸಂಪರ್ಕ ಪತ್ತೆ ಮತ್ತು ನೀರಿನ ಸೋರಿಕೆ ತಡೆಗೆ ನೂತನವಾಗಿ ರಚಿಸಿರುವ ನೀಲಿ ಪಡೆ ಮತ್ತು ರೋಬೋಟಿಕ್ ತಂತ್ರಜ್ಞಾನ ಅಳವಡಿಕೆ ಯೋಜನೆಗಳಿಗೆ ಬುಧವಾರ ಚಾಲನೆ ನೀಡಿ ಅವರು ಮಾತನಾಡಿದರು.

ಬೆಂಗಳೂರಿನ ಜನರಿಗೆ ಪರಿಶುದ್ಧ ನೀರು ನೀಡುವ ಜವಾಬ್ದಾರಿ ಸರ್ಕಾರದ ಮೇಲಿದೆ. ಅಕ್ರಮ ನೀರು ಸೋರಿಕೆಗೆ ಕಡಿವಾಣ ಹಾಕುವ ಮೂಲಕ, ಕಲುಷಿತ ನೀರು ಪತ್ತೆ ಹಚ್ಚಿ ಪರಿಶುದ್ಧ ನೀರು ನೀಡುವ ನಿಟ್ಟಿನಲ್ಲಿ ಬೆಂಗಳೂರು ಜಲ ಮಂಡಳಿ ಅಳವಡಿಸಿಕೊಂಡಿರುವ ನೂತನ ರೋಬೋಟಿಕ್ ತಂತ್ರಜ್ಞಾನ ದೇಶಕ್ಕೆ ಮಾದರಿ ಎಂದು ಹೇಳಿದರು.

ಇದೇ ವೇಳೆ ನಗರದ ಹಲವು ಕಡೆಗಳಲ್ಲಿ ರೋಬೋಟಿಕ್ ಎಐ ತಂತ್ರಜ್ಞಾನದ ಮೂಲಕ ಒಳಚರಂಡಿಯ ಹೂಳೆತ್ತುವ ಯಂತ್ರವನ್ನು ಪರಿಶೀಲಿಸಲಾಯಿತು. ಶಾಸಕ ರಿಜ್ವಾನ್ ಅರ್ಷದ್, ಜಲಮಂಡಳಿಯ ಅಧ್ಯಕ್ಷ ರಾಮ್ ಪ್ರಸಾತ್ ಮನೋಹರ್, ಆಡಳಿತಾಧಿಕಾರಿ ಮದನ್ ಮೋಹನ್, ಪ್ರಧಾನ ಮುಖ್ಯ ಎಂಜಿನಿಯರ್ ಬಿ.ಎಸ್.ದಲಾಯತ್ ಉಪಸ್ಥಿತರಿದ್ದರು.

ಬಳಕೆ ಹೇಗೆ?

ಮಂಡಳಿಯು ಅಳವಡಿಸಿಕೊಂಡಿರುವ ರೊಬ್ಬಾಟಿಕ್ ಎಐ ತಂತ್ರಜ್ಞಾನದ ಆಧಾರಿತ ಮೂಲಕ ನೀರಿನ ಸೋರಿಕೆಯನ್ನು ಪತ್ತೆ ಹಚ್ಚಿ ಅದರ ಮಾಹಿತಿಯನ್ನು ಮಂಡಳಿ ಡ್ಯಾಶ್ ಬೋರ್ಡ್‌ಗೆ ಕಳುಹಿಸಲಿದೆ. ಈ ಮಾಹಿತಿ ಆಧಾರಿತವಾಗಿ ಮಂಡಳಿ ತಕ್ಷಣ ಕಾರ್ಯ ಪ್ರವೃತ್ತವಾಗಲಿರುವ ಪ್ರಾತ್ಯಕ್ಷಿಕೆಯನ್ನು ಪ್ರದರ್ಶಿಸಲಾಯಿತು.

ಟೆಕಿ ಕೊಂದ ಸಂಬಂಧಿ

ಪ್ರಜಾವಾಣಿ ವಾರ್ತೆ

ಆನೇಕಲ್: ಕೆಲವು ವರ್ಷಗಳ ಹಿಂದೆ ತೆರೆ ಕಂಡ ‘ದೃಶ್ಯಂ’ ಸಿನಿಮಾ ಮಾದರಿಯಲ್ಲಿ ಸಾಫ್ಟ್‌ವೇರ್ ಎಂಜಿನಿಯರ್‌ರೊಬ್ಬರನ್ನು ಕೊಂದ ನಿರ್ಮಾಣ ಹಂತದ ಮನೆಯಲ್ಲಿ ಶವವನ್ನು ಹೂತು ಹಾಕಿದ ಪ್ರಕರಣವನ್ನು ಅತ್ತಿಬೆಲೆ ಪೊಲೀಸರು ಭೇದಿಸಿದ್ದಾರೆ.

ಸಾಫ್ಟ್‌ವೇರ್ ಎಂಜಿನಿಯರ್ ಶ್ರೀನಾಥ್ (30) ಶವವನ್ನು ಆಂಧ್ರಪ್ರದೇಶದ ಕುಪ್ಪಂನ ನಿರ್ಮಾಣ ಹಂತದ ಮನೆಯೊಂದರಿಂದ ಅತ್ತಿಬೆಲೆ ಪೊಲೀಸರು ಹೊರ ತೆಗೆದಿದ್ದಾರೆ.

ಈ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಶ್ರೀನಾಥ್ ಸಹೋದರ ಸಂಬಂಧಿ ಪ್ರಭಾಕರ್ ಮತ್ತು ಆತನ ಸ್ನೇಹಿತ ಜಗದೀಶ್ ಎಂಬುವರನ್ನು ಪೊಲೀಸರು ಬಂಧಿಸಿದ್ದಾರೆ. ಹಣಕಾಸಿನ ವಹಿವಾಟು ಕೊಲೆಗೆ ಕಾರಣ ಎಂದು ಪೊಲೀಸರು ತಿಳಿಸಿದ್ದಾರೆ.

ಮೂಲತಃ ಕುಪ್ಪಂನ ಶ್ರೀನಾಥ್ ಬೆಂಗಳೂರಿನ ಸಾಫ್ಟ್‌ವೇರ್ ಕಂಪನಿಯೊಂದರಲ್ಲಿ ಎಂಜಿನಿಯರ್ ಆಗಿದ್ದರು. ಪತ್ನಿ ಮತ್ತು ಮಗುವಿನೊಂದಿಗೆ ಅತ್ತಿಬೆಲೆಯ ನೆರಳೂರಿನಲ್ಲಿ ವಾಸವಾಗಿದ್ದರು.

ಪುತ್ರಿಯನ್ನೇ ಕೊಲ್ಲಲು ಯತ್ನಿಸಿದ ತಾಯಿ

ದೇವಸ್ಥಾನಕ್ಕೆ ಕರೆದೊಯ್ದು ಕೃತ್ಯ, ಆತ್ಮಹತ್ಯೆಗೆ ಮುಂದಾದ ಮಹಿಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೂಜೆಯ ನೆಪದಲ್ಲಿ ದೇವಸ್ಥಾನಕ್ಕೆ ಪುತ್ರಿಯನ್ನು ಕರೆದೊಯ್ದು ಹತ್ಯೆಗೆ ಯತ್ನಿಸಿ, ಬಳಿಕ ತಾಯಿಯೂ ಆತ್ಮಹತ್ಯೆಗೆ ಯತ್ನಿಸಿರುವ ಘಟನೆ ಸಂಪಿಗೆಹಳ್ಳಿ ಠಾಣೆ ವ್ಯಾಪ್ತಿಯಲ್ಲಿ ಬುಧವಾರ ಮುಂಜಾನೆ ನಡೆದಿದೆ.

ಆನೇಕಲ್ ನಿವಾಸಿ ರಮ್ಯಾ(25) ಹಲ್ಲೆಗೆ ಒಳಗಾದವರು. ಕೃತ್ಯ ಎಸಗಿದ ರಮ್ಯಾ ಅವರ ತಾಯಿ ಸುಜಾತಾ (49) ಕೂಡ ಕುತ್ತಿಗೆ ಕೊಯ್ದುಕೊಂಡು ಆತ್ಮಹತ್ಯೆಗೆ ಯತ್ನಿಸಿದ್ದಾರೆ ಎಂದು ಮೂಲಗಳು ಹೇಳಿವೆ.

‘ಇಬ್ಬರನ್ನೂ ಆಸ್ಪತ್ರೆಗೆ ದಾಖಲಿಸಲಾಗಿದೆ. ಚಿಕಿತ್ಸೆ ಪಡೆಯುತ್ತಿದ್ದಾರೆ. ಸುಜಾತಾ ಚೇತರಿಸಿಕೊಂಡ ಬಳಿಕ ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುವುದು’ ಎಂದು ಪೊಲೀಸರು ಮಾಹಿತಿ ನೀಡಿದರು.

ಏನಿದು ಪ್ರಕರಣ?: ಆರೋಪಿ ಸುಜಾತಾ ಅಗ್ರಹಾರ ಲೇಔಟ್‌ನಲ್ಲಿ ಪುತ್ರಿ ಜತೆಗೆ ನೆಲಸಿದ್ದರು. ಐದು ವರ್ಷಗಳ ಹಿಂದೆ ರಮ್ಯಾ ಅವರನ್ನು ಆನೇಕಲ್ ನಿವಾಸಿ ಸೋಮಶೇಖರ್ ಅವರ ಜತೆಗೆ ಮದುವೆ ಮಾಡಿಕೊಡಲಾಗಿತ್ತು. ದಂಪತಿಗೆ ಇಬ್ಬರು ಮಕ್ಕಳು ಜನಿಸಿದ್ದು, ಅಕಾಲಿಕವಾಗಿ ಮೃತಪಟ್ಟಿದ್ದರು. ಮಕ್ಕಳು ಮೃತಪಟ್ಟದ್ದರಿಂದ ರಮ್ಯಾ ಅವರು ಮಾನಸಿಕವಾಗಿ ನೊಂದಿದ್ದರು.

ಪುತ್ರಿ ಕರೆಸಿಕೊಂಡು ದೇಗುಲದಲ್ಲಿ ಪೂಜೆ: ಮಾನಸಿಕವಾಗಿ ನೊಂದಿದ್ದ ಪುತ್ರಿಯನ್ನು ತಾಯಿ ಅಗ್ರಹಾರ ಲೇಔಟ್‌ನಲ್ಲಿ ಇರುವ ಹರಿಹರೇಶ್ವರ ದೇವಸ್ಥಾನಕ್ಕೆ ಕರೆದೊಯ್ದು ಪೂಜೆ ಮಾಡಿಸುತ್ತಿದ್ದರು. ತಾಯಿ ಹಾಗೂ ಮಗಳು ಇಬ್ಬರೇ ಬುಧವಾರ ಮುಂಜಾನೆ 4 ಗಂಟೆ ಸುಮಾರಿಗೆ ಪೂಜೆ ಮಾಡಲು ದೇವಸ್ಥಾನಕ್ಕೆ ತೆರಳಿದ್ದರು. ಆಗ ಸುಜಾತಾ ತನ್ನ ಬಳಿ ತಂದಿದ್ದ ಮಾರಕಾಸ್ತ್ರದಿಂದ ರಮ್ಯಾ ಅವರ ಕುತ್ತಿಗೆ ಕೊಯ್ದು ಹತ್ಯೆಗೆ ಯತ್ನಿಸಿದ್ದರು. ಪುತ್ರಿಯ ಕುತ್ತಿಗೆ ಭಾಗದಲ್ಲಿ ರಕ್ತ ಬರುತ್ತಿದ್ದಂತೆಯೇ ಹೆದರಿದ್ದ ಸುಜಾತಾ, ತಾನೂ ಕತ್ತು ಕೊಯ್ದುಕೊಂಡು ಸ್ಥಳದಿಂದ ಪರಾರಿಯಾಗಿದ್ದರು. ದೇವಸ್ಥಾನ ಸಮೀಪದಲ್ಲೇ ಸುಜಾತಾ ಅರೆ ಪ್ರಜ್ಞಾವಸ್ಥೆಯಲ್ಲಿ ಬಿದ್ದಿದ್ದರು.

ಘಟನೆಗೆ ಸ್ಪಷ್ಟ ಕಾರಣ ತಿಳಿದು ಬಂದಿಲ್ಲ. ಸುಜಾತಾ ಅವರ ವಿಚಾರಣೆ ಬಳಿಕ ಕೃತ್ಯಕ್ಕೆ ಕಾರಣ ಏನೆಂಬುದು ಗೊತ್ತಾಗಲಿದೆ ಎಂದು ಪೊಲೀಸರು ಮಾಹಿತಿ ನೀಡಿದರು. ಸುಜಾತಾ ಪತಿಯಿಂದ ದೂರವಾಗಿ ಪ್ರತ್ಯೇಕವಾಗಿ ನೆಲಸಿದ್ದರು. ಪುತ್ರಿಯ ಮಕ್ಕಳು ಅಕಾಲಿಕವಾಗಿ ಮೃತಪಟ್ಟದ್ದರಿಂದ ಸುಜಾತಾ ಸಹ ಮಾನಸಿಕ ಖಿನ್ನತೆಗೆ ಒಳಗಾಗಿದ್ದರು ಎಂದು ಪೊಲೀಸರು ಹೇಳಿದ್ದಾರೆ.

ಸೊಸೆ ಕೊಂದ ಮಾವನ ಬಂಧನ

ಅಪರಾಧ ಸುದ್ದಿ

ಬೆಂಗಳೂರು: ಹೊಂಗಸಂದ್ರದ ಬಳಿಯ ಮುನಿಸುಬ್ಬಾರೆಡ್ಡಿ ಲೇಔಟ್‌ನಲ್ಲಿ ನಡೆದಿದ್ದ ಗಾರ್ಮೆಂಟ್ಸ್ ಉದ್ಯೋಗಿ ಕೊಲೆ ಪ್ರಕರಣದಲ್ಲಿ ಆರೋಪಿಯನ್ನು ಬೊಮ್ಮನಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಕೆ.ಆರ್.ಪುರದ ಬಳಿಯ ಕನಕನಗರದ ನಿವಾಸಿ ಮಂದಣ್ಣ (67) ಬಂಧಿತ ಆರೋಪಿ. ಸೊಸೆ ಪ್ರಮೋದಾ (35) ಅವರ ಕತ್ತು ಕೊಯ್ದು ಕೊಲೆ ಮಾಡಿ ಮಂದಣ್ಣ ಪರಾರಿಯಾಗಿದ್ದ ಎಂದು ಪೊಲೀಸರು ಹೇಳಿದರು.

ಮಂದಣ್ಣನ ಮಗ ಸುರೇಶ್ ಅವರನ್ನು ಮದುವೆಯಾಗಿದ್ದ ಪ್ರಮೋದಾ, ಕೌಟುಂಬಿಕ ಕಾರಣಕ್ಕೆ ಪತಿಯಿಂದ ದೂರವಾಗಿ ಮುನಿಸುಬ್ಬಾರೆಡ್ಡಿ ಲೇಔಟ್‌ನ ಬಾಡಿಗೆ ಮನೆಯಲ್ಲಿ ಒಬ್ಬರೇ ವಾಸವಾಗಿದ್ದರು. ಸುರೇಶ್ ಅವರು ತಂದೆ ಮಂದಣ್ಣ ಮತ್ತು ಮಗಳ ಜತೆಗೆ ಕನಕನಗರದಲ್ಲಿ ನೆಲಸಿದ್ದರು.

ಸೊಸೆ ಪ್ರಮೋದಾ ಅವರಿಗೆ ಮಂದಣ್ಣ ಪರಿಚಿತರಿಂದ ₹1 ಲಕ್ಷ ಹಣವನ್ನು ಕೊಡಿಸಿದ್ದ, ಆದರೆ, ಪ್ರಮೋದಾ ಅವರಿಗೆ ಬಡ್ಡಿ ಪಾವತಿ ಸಾಧ್ಯವಾಗಿರಲಿಲ್ಲ. ಇದರಿಂದ ಕೋಪಗೊಂಡಿದ್ದ ಮಂದಣ್ಣ, ನ. 15ರ ರಾತ್ರಿ ಪ್ರಮೋದಾ ಅವರ ಮನೆಗೆ ಬಂದು ಹಣ ವಾಪಸ್ ಕೇಳಿದ್ದ. ಆಗ ಪ್ರಮೋದಾ ನಿಂದಿಸಿದ್ದರು. ಆಗ ಗಲಾಟೆ ನಡೆದು ಚಾಕುವಿನಿಂದ ಕತ್ತು ಕೊಯ್ದು ಕೊಲೆ ಮಾಡಿ ಪರಾರಿ ಆಗಿದ್ದ ಎಂದು ಪೊಲೀಸರು ಹೇಳಿದರು.

ಆರೋಪಿತ ವ್ಯಕ್ತಿಯ ಹಾಜರಾತಿ ಅವಶ್ಯಕತೆ ಕುರಿತ ಘೋಷಣೆ

(ಸಿಆರ್.ಪಿ.ಸಿ. ಸೆಕ್ಷನ್ 82 ನೋಡಿರಿ)

ನನ್ನ ಎದುರು ಒಂದು ದೂರು ದಾಖಲಾಗಿದ್ದು, ಸದರಿ ದೂರಿನಲ್ಲಿ ಆರೋಪಿತ ವ್ಯಕ್ತಿ **ಅಲೋಯ್ ಬಿನ್ ಓಕಫೋರ್, ವಿಳಾಸ ಬೆಂಗಳೂರು, ಚನ್ನರಾಯಪಟ್ಟಣ, ಬೆಂಗಳೂರು, ಕರ್ನಾಟಕ** ಎಂಬ ಆಸಾಮಿ ಅಪರಾಧ ಎಸಗಿರುತ್ತಾನೆ (ಅಪರಾಧ ಎಸಗಿರುವ ಗುಮಾನಿ ಮೇರೆಗೆ) ದೆಹಲಿಯ ನಿಹಾಲ್ ವಿಹಾರ ಪೊಲೀಸ್ ಠಾಣೆಯಲ್ಲಿ ಫಾರಿನ್ ಆಕ್ಟ್ ಸೆಕ್ಷನ್ 14ರ ಅಡಿಯಲ್ಲಿ ಎಫ್‌ಐಆರ್ ನಂ. 1024/2021 ದಾಖಲಾಗಿರುತ್ತದೆ ಮತ್ತು ಸದರಿ [illegible] ... 1024/2021 ಕೇಸ್‌ಗೆ ಸಂಬಂಧಿತ ಆರೋಪಿತ ವ್ಯಕ್ತಿ ಅಲೋಯ್ ಎಂಬ ಆಸಾಮಿಯು ದಿನಾಂಕ 22.12.2025 ರೊಳಗೆ, ಸದರಿ ನ್ಯಾಯಾಲಯಕ್ಕೆ ಹಾಜರಾಗಿ, ಸದರಿ ದೂರಿಗೆ ಉತ್ತರ ನೀಡುವುದು ಅವಶ್ಯವಾಗಿದೆ ತಿಳಿಸಲಾಗಿದೆ.

ಆದೇಶದ ಮೇರೆಗೆ
ಶ್ರೀ. ಕೋಮಲ್ ಗಾರ್ಗ್
ಜುಡಿಷಿಯಲ್ ಮ್ಯಾಜಿಸ್ಟ್ರೇಟ್ ಫಸ್ಟ್ ಕ್ಲಾ–03,
ವೆಸ್ಟ್ ಡಿಸ್ಟಿ., ಕೊಠಡಿ ಸಂ. 292,
ತೀಸ್ ಹಜಾರಿ ಕೋರ್ಟ್, ದೆಹಲಿ.

DP/15499/OD/2025
(Court Matter)

ನೈಋತ್ಯ ರೈಲ್ವೆ

ಬಿಡ್ ಸಂ.: GEM/2025/B/6886916
ದಿನಾಂಕ: 13.11.2025

ಅಂದಾಜು ಮೌಲ್ಯ ರೂ. 10,67,22,893.09

ಟೆಂಡರ್ ಸಂ.: E-GSU-ELE-2025-26-OT-GeM-03

04.12.2025, 16:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ http://gem.gov.in ಗೆ ಲಾಗ್ ಆನ್ ಆಗಿ

ಉಪ ಮುಖ್ಯ ಎಲೆಕ್ಟ್ರಿಕಲ್ ಇಂಜಿನಿಯರ್/ಗತಿ ಶಕ್ತಿ ಘಟಕ ಬೆಂಗಳೂರು

PUB/658/AAF/PRB/SWR/2025-26

ಕಾಯ್ದಿರಿಸದ ಟಿಕೇಟುಗಳನ್ನು ಸುಲಭವಾಗಿ ಬುಕಿಂಗ್ ಮಾಡಲು ಗೂಗಲ್ ಪ್ಲೇ ಸ್ಟೋರ್‌ನಿಂದ ಯುಟಿಎಸ್ ಮೊಬೈಲ್ ಆ್ಯಪ್‌ಅನ್ನು ಡೌನ್‌ಲೋಡ್ ಮಾಡಿರಿ

South Western Railway - SWR | SWRRLY | SWRAILWAYHQ | sw_railways

ವಿಧಾನಸೌಧದ ಬಳಿ ಘಟನೆ, ಎಫ್‌ಐಆರ್ ದಾಖಲು

ನೇಪಾಳ ಯುವಕರ ಹೊಡೆದಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸೌಧದ ಎದುರಿನ ‘ನಮ್ಮ ಮೆಟ್ರೊ’ ನಿಲ್ದಾಣದ ಬಳಿ ಎರಡು ಗುಂಪುಗಳ ಯುವಕರು ಪರಸ್ಪರ ಹೊಡೆದಾಟ ಮಾಡಿಕೊಂಡಿದ್ದು, ಈ ಸಂಬಂಧ ವಿಧಾನಸೌಧ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹೊಡೆದಾಡಿರುವವರ ಗುಂಪಿನಲ್ಲಿ ಅಂದಾಜು 30 ಮಂದಿ ಯುವಕರು ಇದ್ದರು. ಈ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ. ಅದನ್ನು ಆಧರಿಸಿ, ತನಿಖೆ ನಡೆಸಲಾಗುತ್ತಿದೆ. ನೇಪಾಳದ ಯುವಕರು ಗಲಾಟೆ

ಗಲಾಟೆಯ ದೃಶ್ಯ

ಮಾಡಿಕೊಂಡಿದ್ದಾರೆ ಎಂಬುದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ.

ಸ್ಥಳದಲ್ಲಿದ್ದ ಗಸ್ತು ಪೊಲೀಸರು ಗುಂಪು ಚದುರಿಸಿ ಕಳುಹಿಸಿದ್ದಾರೆ.

‘ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿರುವ ವಿಡಿಯೊ ಆಧರಿಸಿ ಗಲಾಟೆಗೆ ಕಾರಣರಾದವರ ಪತ್ತೆಗೆ ಕಾರ್ಯಾಚರಣೆ ನಡೆಯುತ್ತಿದೆ. ಘಟನೆಯು ಭಾನುವಾರ ರಾತ್ರಿ ನಡೆದಿದೆ’ ಎಂದು ಪೊಲೀಸರು ಹೇಳಿದರು. ‘ಅದೇ ಸ್ಥಳದಲ್ಲಿ ಹೋಗುತ್ತಿದ್ದ ವಿದ್ಯಾರ್ಥಿಯಿಂದ ಆರೋಪಿಗಳು ₹9 ಸಾವಿರ ನಗದು ಮತ್ತು ಮೊಬೈಲ್ ಫೋನ್ ಸೇರಿ ಬೆಲೆಬಾಳುವ ವಸ್ತುಗಳನ್ನು ಕಿತ್ತುಕೊಂಡು ಹೋಗಿದ್ದಾರೆ ಎಂಬ ಆರೋಪವಿದೆ. ಪರಿಶೀಲಿಸಲಾಗುತ್ತಿದೆ’ ಎಂದು ಮೂಲಗಳು ಹೇಳಿವೆ.

ದರ್ಶನ್‌ಗೆ ಹೆಚ್ಚುವರಿ ಕಂಬಳಿ ನೀಡಲು ಕೋರ್ಟ್ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿತ್ರದುರ್ಗದ ರೇಣುಕ ಸ್ವಾಮಿ ಕೊಲೆ ಪ್ರಕರಣದ ಆರೋಪಿ, ನಟ ದರ್ಶನ್ ಅವರಿಗೆ ಹೆಚ್ಚುವರಿ ಕಂಬಳಿ ನೀಡಲು 57ನೇ ಎಸಿಎಂಎಂ ನ್ಯಾಯಾಲಯ ಬುಧವಾರ ಸೂಚಿಸಿತು.

ಕೊಲೆ ಪ್ರಕರಣದಲ್ಲಿ ದರ್ಶನ್ ನ್ಯಾಯಾಂಗ ಬಂಧನದಲ್ಲಿರುವ ದರ್ಶನ್, ಪವಿತ್ರಾಗೌಡ ಸೇರಿದಂತೆ ಆರು ಮಂದಿ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಿಂದ ವಿಡಿಯೊ ಕಾನ್ಫರೆನ್ಸ್ ಮೂಲಕ ನ್ಯಾಯಾಲಯಕ್ಕೆ ಹಾಜರಾದರು. ಇತರೆ ಆರೋಪಿಗಳು ಕೋರ್ಟ್‌ಗೆ ಖುದ್ದು ಹಾಜರಾಗಿದ್ದರು.

ಆರೋಪಿಗಳ ಹಾಜರಾತಿ ಪಡೆದ ನ್ಯಾಯಾಧೀಶರು, ವಿಚಾರಣೆ ನಡೆಸಿದರು. ಇದೇ ವೇಳೆ ದರ್ಶನ್ ಅವರು ನ್ಯಾಯಾಧೀಶರ ಬಳಿ ಮನವಿ ಸಲ್ಲಿಸಿದರು.

‘ಕಳೆದ ಕೆಲವು ದಿನಗಳಿಂದ ತುಂಬ ಚಳಿಯಿದೆ. ಹೆಚ್ಚುವರಿ ಕಂಬಳಿ ಕೇಳಿದರೂ ಜೈಲಿನ ಸಿಬ್ಬಂದಿ ನೀಡುತ್ತಿಲ್ಲ. ಯಾರಿಗೂ ನಿದ್ರೆ ಮಾಡಲು ಸಾಧ್ಯವಾಗುತ್ತಿಲ್ಲ. ಮನೆಯವರು ತಂದುಕೊಟ್ಟಿರುವ ಬೆಡ್‌ಶೀಟ್ ಸಹ ಬಳಸಲು ಬಿಡುತ್ತಿಲ್ಲ. ಈಗಲಾದರೂ ಹೆಚ್ಚುವರಿ ಕಂಬಳಿ ನೀಡುವಂತೆ ಕಾರಾಗೃಹದ ಸಿಬ್ಬಂದಿಗೆ ಸೂಚಿಸಿ’ ಎಂದು ನ್ಯಾಯಾಧೀಶರಲ್ಲಿ ದರ್ಶನ್ ಮನವಿ ಮಾಡಿದರು. ದರ್ಶನ್ ಅವರ ವ್ಯವಸ್ಥಾಪಕ ನಾಗರಾಜ್ ಸಹ ಹೆಚ್ಚುವರಿ ಕಂಬಳಿಗಾಗಿ ಬೇಡಿಕೆ ಇಟ್ಟರು.

ಆಗ ನ್ಯಾಯಾಧೀಶ ಈರಪ್ಪಣ್ಣ ಪವಡಿ ನಾಯ್ಕ್ ಅವರು ಹೆಚ್ಚುವರಿ ಕಂಬಳಿ ನೀಡುವಂತೆ ಅಧಿಕಾರಿಗಳಿಗೆ ಮೌಖಿಕವಾಗಿ ಸೂಚಿಸಿದರು.

ವಿಚಾರಣಾಧೀನ ಕೈದಿಗಳಿಗೆ ಈ ಹಿಂದೆಯೇ ಕನಿಷ್ಠ ಸೌಲಭ್ಯ ಕಲ್ಪಿಸುವಂತೆ ಸೂಚನೆ ನೀಡಲಾಗಿತ್ತು. ಪದೇ ಪದೇ ಸೂಚನೆ ನೀಡಿದ್ದರೂ ಯಾವ ಕಾರಣಕ್ಕೆ ನೀಡಿಲ್ಲ. ಆರೋಪಿಗಳು ಮನುಷ್ಯರಲ್ಲವೇ ಎಂದು ಪ್ರಶ್ನಿಸಿದರು. ಈ ಹಿಂದೆ ದರ್ಶನ್ ಅವರು ಹೆಚ್ಚುವರಿ ಹಾಸಿಗೆ, ದಿಂಬು ನೀಡುವಂತೆ ಕೋರ್ಟ್‌ಗೆ ಮನವಿ ಸಲ್ಲಿಸಿದ್ದರು. ಅಲ್ಲದೇ ವಾಕಿಂಗ್ ಅವಕಾಶ ನೀಡುವಂತೆಯೇ ಕೋರಿದ್ದರು.

ವಿಡಿಯೊ ಕಾನ್ಫರೆನ್ಸ್ ಮೂಲಕ ಹಾಜರಾಗಿದ್ದ ಪವಿತ್ರಾಗೌಡ ಅವರಿಗೆ ‘ನೀವು ಏನಾದರೂ ಹೇಳುವುದು ಇದೆಯೇ’ ಎಂದು ನ್ಯಾಯಾಧೀಶರು ಪ್ರಶ್ನಿಸಿದರು. ಆಗ ಪವಿತ್ರಾಗೌಡ ಅವರು ಪ್ರತಿಕ್ರಿಯೆ ನೀಡಲಿಲ್ಲ. ಸಿಆರ್‌ಪಿಸಿ ಸೆಕ್ಷನ್ 294 ಅಡಿ ದಾಖಲೆಗಳನ್ನು ಸಾಕ್ಷ್ಯವಾಗಿ ಮಾರ್ಕಿಂಗ್ ಮಾಡಲು ಅನುಮತಿ ಕೇಳಿ ಪ್ರಾಸಿಕ್ಯೂಷನ್ ಸಲ್ಲಿಸಿದ ಅರ್ಜಿಗೆ ಆಕ್ಷೇಪಿಸಿ ಆರೋಪಿಗಳ ಪರ ವಕೀಲರು ಲಿಖಿತ ಮೆಮೊ ಸಲ್ಲಿಸುವುದಾಗಿ ತಿಳಿಸಿದರು. ಬಳಿಕ ವಿಚಾರಣೆಯನ್ನು ಡಿ.3ಕ್ಕೆ ಮುಂದೂಡಲಾಯಿತು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

BUSINESS

Business Offers

Finance

MSME LOANS
Available for any startups companies And Existing Running companies Available for Manufacturing Units, Shops, Establishments Etc
Contact- 7204995189

CONNECT ಕ್ಲಾಸಿಫೈಡ್ಸ್

ಸ್ಥಾಪನೆ: 1974 | ನೋಂದಣಿ ಸಂಖ್ಯೆ: 3174/74–75 | ರಾಜ್ಯ ಪ್ರಶಸ್ತಿ ಪತ್ರ | ದೂರವಾಣಿ: 080–23324233

ಪ್ರಕಾಶನಗರ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ.
PRAKASHNAGAR CREDIT CO-OPERATIVE SOCIETY LTD.

ಹೃತ್ಪೂರ್ವಕ ಅಭಿನಂದನೆಗಳು

ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ. ಬೆಂಗಳೂರು ಮತ್ತು ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ. ಬೆಂಗಳೂರು

ದಿನಾಂಕ: 14.11.2025, ಶುಕ್ರವಾರ ಬೆಳಿಗ್ಗೆ 11.00 ಗಂಟೆಗೆ ಬೆಂಗಳೂರು ಅರಮನೆ ಮೈದಾನದಲ್ಲಿ “72ನೇ ಅಖಿಲ ಭಾರತ ಸಹಕಾರ ಸಪ್ತಾಹ–2025” ಹಾಗೂ “ಸಹಕಾರ ರತ್ನ” ಪ್ರಶಸ್ತಿ ಪ್ರಧಾನ ಸಮಾರಂಭ ಆಚರಣೆ ಸಂದರ್ಭದಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಜಿ.ಚಂದ್ರಕುಮಾರ್, ಅಧ್ಯಕ್ಷರು, ಪ್ರಕಾಶನಗರ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ., ಬೆಂಗಳೂರು. ಇವರು ಸಹಕಾರ ಸಂಘದಲ್ಲಿ ಸಲ್ಲಿಸಿರುವ ಸೇವೆಯನ್ನು ಸ್ಮರಿಸಿ ಕರ್ನಾಟಕ ಸರ್ಕಾರವು “ಉತ್ತಮ ಸಹಕಾರಿಗಳು” ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.

ಶ್ರೀ ಜಿ. ಚಂದ್ರಕುಮಾರ್, ಅಧ್ಯಕ್ಷರು
S/o ಲೇಟ್ ಶ್ರೀ ಎಸ್. ಗಂಗಾಧರಂ ರೆಡ್ಡಿ ಬೆಂಗಳೂರು

ಪ್ರಕಾಶನಗರ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ. ಆಡಳಿತ ಮಂಡಳಿ ಪರವಾಗಿ
ಪಿ.ಶಿವರಾಮು, ಉಪಾಧ್ಯಕ್ಷರು | ಎಸ್.ಆದಿಶೇಷ, ಕಾರ್ಯದರ್ಶಿ

PUBLIC NOTICE

PUBLIC NOTICE

This is to inform General Public that my client has entered into an agreement to sell dt:17-11-2025 to purchase the schedule property belonging to (i) Sri.Dinesh Kumar Srinivasa Murthy alias S Dinesh Kumar, Son of Late D Srinivasa Murthy, (ii) Smt.Rajalakshmi S, Wife of Late D Srinivasa Murthy, (iii) Smt.Nirmala D, Wife of Sri.S Dinesh Kumar, (iv) Sri.Dishan D, Son of Sri.S Dinesh Kumar and (v) Sri.Darshan D, Son of Sri.S Dinesh Kumar, all are residing at No.807/5, Twenty Fourth 'A' Cross, K R Road, Banashankari Second Stage, Bangalore – 560 070;

Sri.Dinesh Kumar Srinivasa Murthy alias S Dinesh Kumar, has lost / misplaced the registered Sale Deed dated 08-09-2000 in favour of Sri.Srinivasa Murthy and registered as document No:2159/2000-01, Book I, Volume 2254, Pages 88 to 90 and registered in the office of the Sub Registrar, Jayanagar, Bangalore City, in respect of the schedule property. In the said circumstances, he has lodged a complaint with the Bangalore City Police on 25-08-2025 vide lost report No:1769497/2025 and in this regard the Advocate of Sri.Dinesh Kumar Srinivasa Murthy alias S Dinesh Kumar has published a public notice dated 03-09-2025 in daily newspapers The New Indian Express on 04-09-2025, informing the general public that he has lost the original of the above document and calling for objections if any;

Any, person, having any claim over the schedule property claiming through the predecessors in title or any other person, may lodge their objections or claims, in writing with all supporting documentary evidence by speed post with regard to such claim with the undersigned within 21 (twenty one) days hereof, failing which my client will proceed to conclude the Sale Transaction. Any claims lodged thereafter will not be entertained by my client;

SCHEDULE

All that piece and parcel of entire property bearing Municipal No.807/5 (CITB site bearing No.807, situated at Fifteenth Cross, Seventh Block Jayanagar Extension, West of Kanakapura Road, Bangalore), now situated at Twenty Fourth 'A' Cross, Banashankari Second Stage, Bangalore, within the limits and administration of Bruhat Bangalore Mahanagara Palike, Bangalore, Corporation Ward No:166-Karisandra (old ward No.56), PID No.56-49-807/5, EPID No.3150174252, together with ground and first floors totally measuring 2362 sq.ft. of RCC roof, Mossaic flooring, Jungle wood structures standing thereon and bounded on the:

East by : Site bearing CITB No.806;
West by : Site bearing CITB No.808;
North by : Road;
South by : Site bearing CITB No.814;
MEASURING: East to West : 35 ft.; North to South : 51 ft.;
In all admeasuring 1,785 sq.ft.;

N S RACHANA, N C JANARDHAN, ADVOCATES
RACHANA LAW ASSOCIATES,
“Lakshmideep”, I Floor, No:2980, 17th Cross, Banashankari II Stage,
BANGALORE-560 070. PH : 9731810810 / 9886284325
Dt:19-11-2025

ವಿಶ್ವವಿಖ್ಯಾತ ಕೇರಳ ಜೋತಿಷ್ಯರು
ಶ್ರೀ ಗುರೂಜಿ ಜಿ.ಕೆ.ಡಿ. ದಿವ್ಯದಾಸನ್
ಕಳೆದ 35 ವರ್ಷಗಳಿಂದ ಬೆಂಗಳೂರಿನಲ್ಲಿ ನಿರಂತರವಾಗಿ ನೆಲೆಸಿದ್ದಾರೆ. ಇವರನ್ನು ಇಂದೇ ಭೇಟಿಮಾಡಿ ನಿಮ್ಮ ಉದ್ಯೋಗ, ವ್ಯಾಪಾರ, ಅದೃಷ್ಟ, ಕುಟುಂಬ ಸಮಸ್ಯೆ,ಮದುವೆಯೋಗ, ಪ್ರೇಮ–ಪ್ರೀತಿ, ಆರೋಗ್ಯ, ವಿದೇಶ ಪ್ರಯಾಣ, ಶತ್ರು ದೋಷ, ಲಕ್ಷ್ಮಿಯೋಗ ಮತ್ತು ಮಕ್ಕಳ ವಿದ್ಯಾಭ್ಯಾಸ ಮತ್ತು ನಿಮ್ಮ ಜೀವನವು ಉತ್ತಮವಾಗಿ ಮೂಡಿಬರಲು ಕೇರಳ ಜ್ಯೋತಿಷ್ಯ ಶಕ್ತಿಯ ಮೂಲಕವಾಗಿಯೂ, ಗುರೂಜಿಯ ದಿವ್ಯಶಕ್ತಿಯಿಂದಲೂ, ಶಕ್ತಿಯುತವಾದ ಪರಿಹಾರ ನೀಡುವರು.
ಸೂಚನೆ : ಇಲ್ಲಿ ಹೇಳುವ ವಿಚಾರಗಳನ್ನು ರಹಸ್ಯವಾಗಿ ಇಡಲಾಗುತ್ತದೆ.
ಸಂದರ್ಶನದ ಸ್ಥಳ: ಶ್ರೀ ಗುರೂಜಿ ಜಿ.ಕೆ.ಡಿ. ದಿವ್ಯದಾಸನ್ (ಕೇರಳ)
ನಿವಾಸ: #24, ಗುರುಕೃಪ ನಿಲಯ, 1ನೇ ಅಡ್ಡರಸ್ತೆ, ಕೆ.ಇ.ಬಿ. ಕಛೇರಿ ರಸ್ತೆ, ಬಾನಸವಾಡಿ, ಸಿಟಿ ಸೂಪರ್ ಮಾರ್ಕೆಟ್ ಹತ್ತಿರ, ಕುಳ್ಳಪ್ಪ ವೃತ್ತ, ಕಮ್ಮನಹಳ್ಳಿ, ಬೆಂಗಳೂರು–560084.
Ph: 98441 65272 / 90365 52207
ಭೇಟಿಯ ವೇಳೆ: ಬೆಳಗ್ಗೆ 9 ರಿಂದ ಮಧ್ಯಾಹ್ನ 1 ರವರೆಗೆ ಸಂಜೆ 3 ರಿಂದ ರಾತ್ರಿ 8 ರವರೆಗೆ (ಭಾನುವಾರವೂ ತೆರೆದಿರುತ್ತದೆ)

PERSONAL

Change of Name

CHANGE OF NAME
I, Mir Mohamad Moosa S/o Mir Mohammed Tariq, R/at #51, Miller Road, 2nd Cross, Bengaluru North, Benson Town Post, Bengaluru-560046 have changed my name to MIR MOHAMMED MOOSA vide affidavit dated 19.11.2025 before notary Keer Hassan, Bengaluru.

Happy 11th Birthday SARA!!
On this special day, the world feels a little brighter because you're in it.
Eleven years ago, you arrived like a gift in my life.
I still have fond memories from the day you were born until meeting you last year for your 10th birthday.
Sorry, I couldn't come this year to meet you.
Though distance keeps us apart right now, my heart travels to you every single day.
I feel so happy and proud that you are my daughter.
You are loved beyond measure, today and always.
May your year be filled with laughter, new discoveries, and the kind of joy that makes your eyes shine.
Happy Birthday to you, my PRINCESS!!
With Love from Appa, PRAKASH

NOTICE INVITING TENDER

President Alliance Francaise de Bangalore, invites item rate tender (in two bid) through physical mode from the technically qualified agencies for the following work : -

NIT No.	Name of Work
AF/Interior works/Tender -01 dated 04/11/2025.	Interior Refurbishment Works of Library including allied modification works, internal electrical and HVAC works for Alliance Francaise de Thimmaiah Road, Vasanth Nagar, Bengaluru, Karnataka – 560052. **Estimated Cost:** Rs.50.00 Lakhs. **Completion period:** 75 days. **Similar nature of works:** Agencies who have experience in carrying out Interior & refurbishment works like, modification of existing facility, Acoustic panelling, False ceiling, False flooring, Partitions, Flooring, Modular furniture, Sliding -folding acoustic partition wall etc., including internal electrical & networking works and highwall/ cassette type AC units.

Prospective bidders who have carried out similar nature of works are requested to collect the tender documents from the office of Alliance Francaise de Thimmaiah Road, Vasanth Nagar, Bengaluru, Karnataka – 560052 by paying **Rs.2500.00** towards the cost of the tender documents from **20/11/2025 to 27/11/2025** during office hours between 11am to 4.30pm. Bid clarifications if any shall be sent to the authority concerned by e-mail on or before 30/11/2025. Last date for submission of tenders in physical mode **05/12/2025 (15:00 hrs.)**. Last date of Receipt of EMD **(Rs.1.25 Lkahs) 05/12/2025 (15:00 hrs).** i.e along with tender submission in a separate sealed cover. Opening of tender (Technical bids) on 05/12/2025 at 15:30 hrs. Opening of Financial bid on **07/12/2025 at 15:30 hrs.** Detailed NIT is available tender document. For further clarification, please contact on 7899562404/7388026885, E-mail – info.afbangalore@afindia.org

CHANGE OF NAME
I, Lavanya Naikodi D/O Pramod Naikodi born on 08.08.2007 residing at E 402 Gopalan Sanskriti, Mylasandra, Kengeri Bengaluru 560059, have changed my name to LAVANYA NAIKODI SHARMA vide affidavit dated 06.07.2022 before notary K.Venkateshan, Bengaluru

CHANGE OF NAME
I, SADHIQ C, residing at # 9, 3rd Floor, 2nd Cross Line, M.D.Block, Malleshwaram, Bengaluru - 560003, have changed my name to SADIK C vide affidavit dtd: 19-11-2025 before notary H.S. Sakalesh Aradhya, Bengaluru. Henceforth I shall be called as SADIK C only.

CHANGE OF NAME
I, Mohammed Owiz S/o Mohammed Ziya, R/at No.5, Graound Floor, 1st Cross, Hidayath Street, Sarvodaya Nagar, Arabic College Post, Bengaluru-560045 , have changed my name to MOHAMMED OWAIZ vide affidavit dated 18.11.2025 before notary I. Kanikha Raja. Bengaluru.

AUTOMOTIVE

Four Wheelers Selling

Maruti

MARUTI IGNIS available for immediate sale. Automatic (2018) 52000 km. Strictly no brokers only genuine buyers. Contact 8870347278.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

CHANGE OF NAME
I, HEMA SOODAMANI Alias HEMA D/o. Soodamani R/o. No. 2D, 504, Block 2, Provident Tree Apartment Herohalli, Vishwaneedam Post, Bangalore-560 091 have changed my name and shall hereafter be known as HEMA SOODAMANI vide affidavit dated 06-11-2025 Sworn before Notary H.R. Karunakara, Bangalore.

I, AVINASH, s/o Subhash, aged 22 years, R/at Kusrampalli Thanda village, Kollur post, Chincholi taluk, Kalaburagi district, Karnataka, hereby declare that I have changed my name to Avinash Rathod for all official purposes.

ನೈಋತ್ಯ ರೈಲ್ವೆ

ಇ–ಟೆಂಡರು ಸೂಚನೆ ಸಂ.: 29/2025, ದಿನಾಂಕ: 13.11.2025

ಭಾರತದ ರಾಷ್ಟ್ರಪತಿಯವರ ಪರವಾಗಿ, ಕೆಳಗೆ ಸಹಿಮಾಡಿದವರು ಕೇವಲ ಆರ್‌ಇಪಿಎಸ್ ಮೂಲಕ ಕೆಳಗಿನ ಸಾಮಗ್ರಿಗಳನ್ನು ಒದಗಿಸಲು ಇ–ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರು ಮುಕ್ತಾಯದ ಸಮಯ: 10.30 ಗಂಟೆ.

ಕ್ರಸಂ.	ಟೆಂಡರು ಸಂ.	ಸಂಕ್ಷಿಪ್ತವಾದ ವಿವರಗಳು	ಪರಿಮಾಣ	ಟೆಂಡರು ದಿನಾಂಕ
01	56251038ಎ	ರೂಟ್ ಎಲ್ಇಡಿ ಸಿಗ್ನಲ್ ಲೈಟಿಂಗ್ ಯೂನಿಟ್ 110 ವೋಲ್ಟ್ ಎಸಿ	900 ಸಂ.	04.12.2025
02	56251042ಎ	ಆಸ್ಪೆಕ್ಟ್ ಎಲ್ಇಡಿ ಮೈನ್ ಸಿಗ್ನಲ್ ಯೂನಿಟ್ 110 ವೋಲ್ಟ್ ಎಸಿ ಕೆಂಪು / ಹಸಿರು / ಹಳದಿ	2030 ಸಂ.	09.12.2025
03	56251097	ಪಿವಿಸಿ ಪವರ್ ಕೇಬಲ್ 2ಸಿx25 ಚ. ಮಿಮೀ.	150 ಕಿಮೀ.	10.12.2025
04	56255048ಎ	48 ಫೈಬರ್ ಆರ್ಮರ್ಡ್ ಆಪ್ಟಿಕಲ್ ಫೈಬರ್ ಕೇಬಲ್	1500 ಕಿಮೀ.	10.12.2025
05	19251031	ಬೋಲ್ಟ್ ಹೆಕ್ಸ್ ಹೆಡ್, ನಟ್ ಹೆಕ್ಸ್ ಲಾಕ್, ವಾಷರ್ ಫ್ಲಾಟ್ – 10 ಐಟಂಗಳ ಸೆಟ್‌ಗಳು	23 ಸೆಟ್	12.12.2025
06	46245001ಬಿ	ಅನ್–ಇನುಲೇಟೆಡ್ ಕ್ಯಾಡ್ಮಿಯಂ ಕಾಪರ್ ಕ್ಯಟೆನರಿ ವಯರ್ (19 / 2.10 ಮಿಮೀ.) 65 ಚ.ಮಿಮೀ.	21000 ಮೀ.	18.12.2025
07	43251022ಎ	ಡಿಸ್‌ಕನೆಕ್ಟಿಂಗ್ ಮತ್ತು ಅರ್ಥಿಂಗ್ ಡಿವೈಸ್ ರೇಟಿಂಗ್ 63 ಆಂಪ್ಸ್ (ಎಸಿ–23), 750 ವೋಲ್ಟ್ ಎಸಿ	224	18.12.2025

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

PUB/655/AAMO/PRB/SWR/2025-26 | ಪ್ರಧಾನ ಮುಖ್ಯ ಸಾಮಗ್ರಿ ವ್ಯವಸ್ಥಾಪಕರು, ಹುಬ್ಬಳ್ಳಿ

ಕಾಯ್ದಿರಿಸದ ಟಿಕೇಟುಗಳನ್ನು ಸುಲಭವಾಗಿ ಬುಕಿಂಗ್ ಮಾಡಲು ಗೂಗಲ್ ಪ್ಲೇ ಸ್ಟೋರ್‌ನಿಂದ ಯುಟಿಎಸ್ ಮೊಬೈಲ್ ಆ್ಯಪ್‌ಅನ್ನು ಡೌನ್‌ಲೋಡ್ ಮಾಡಿರಿ

South Western Railway - SWR | SWRRLY | SWRAILWAYHQ | sw_railways

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯಪಾಲಕ ಇಂಜಿನೀಯರ್‌ರವರ ಕಛೇರಿ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ–562101
ದೂರವಾಣಿ ಸಂಖ್ಯೆ: ಕಛೇರಿ: 08156–295427
ಫ್ಯಾಕ್ಸ್: 08156–295427 ಇಮೇಲ್ – eemidcbpura@gmail.com

ತಿದ್ದುಪಡಿ ಟೆಂಡರ್ ಅಧಿಸೂಚನೆ

ಸಂಖ್ಯೆ: ಕಾಸಬ/ತಾಂಶಾ/ತಾಂಸ/ ಟೆಂಡರ್ ತಿದ್ದುಪಡಿ ಸಂಖ್ಯೆ: 1942/2025–26
ದಿನಾಂಕ : 19/11/2025.

ಈ ಕಚೇರಿ ಪ್ರೀ ಕ್ವಾಲಿಫಿಕೇಶನ್ ಟೆಂಡರ್ ಪ್ರಕಟಣೆ ಸಂಖ್ಯೆ: 14/2025–26 ದಿನಾಂಕ : 10/11/2025 ಟೆಂಡರ್‌ನ ಇಂಡೆಂಟ್ ಸಂಖ್ಯೆ: EE/MI/PQ/BLR/H&NVALLEY/2025-26, ಗಳಲ್ಲಿನ ಕೆ.ಡಬ್ಲ್ಯೂ–6 ಬಿಡ್ ಡಾಕ್ಯೂಮೆಂಟ್‌ನಲ್ಲಿ ಕೆಲವು ಷರತ್ತುಗಳನ್ನು ತಿದ್ದುಪಡಿ ಮಾಡಲಾಗಿದೆ. ತಿದ್ದುಪಡಿ ಮಾಡಿರುವ ವಿವರಗಳನ್ನು www.kppp.karnataka.gov.in ನಲ್ಲಿ ಪಡೆಯ ಬಹುದಾಗಿರುತ್ತದೆ. ಉಳಿದ ಷರತ್ತುಗಳಲ್ಲಿ ಯಾವುದೇ ಬದಲಾವಣೆಗಳು ಇರುವುದಿಲ್ಲ.

ಸಹಿ/– ಕಾರ್ಯಪಾಲಕ ಇಂಜಿನಿಯರ್
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ
(ಸಿಐಎನ್: ಯು40109ಕೆಎ1999ಎಸ್‌ಜಿಸಿ025521)

ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಕವಿಪ್ರನಿನಿಯು, ಕೆಳಕಂಡ ಸೇವೆಗಳಿಗಾಗಿ ಟೆಂಡರನ್ನು ಆಹ್ವಾನಿಸಿದೆ.

ಸಂಖ್ಯೆ: ಕಾನಿಇಂ/ಯೋವಿ/ದ/2025-26/2968-70 ದಿನಾಂಕ: 18.11.2025

1) ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಯೋಜನೆ ವಿಭಾಗ–ದಕ್ಷಿಣ, ಬೆಂಗಳೂರು ವ್ಯಾಪ್ತಿಯಲ್ಲಿ ಬರುವ ಕಛೇರಿಗೆ 2 ಸಂಖ್ಯೆಯ ಹೌಸ್‌ಕೀಪಿಂಗ್ ಸೇವೆಗಳ ಸಿಬ್ಬಂದಿಯನ್ನು ಒದಗಿಸುವ ಬಗ್ಗೆ.

ಸಂಖ್ಯೆ: ಕಾನಿಇಂ/ಯೋವಿ/ದ/ಉಅ/2025-26/2972-73 ದಿನಾಂಕ: 18.11.2025

2) ಅಧೀಕ್ಷಕ ಇಂಜಿನಿಯರ್ (ವಿ), ಪ್ರಸರಣ (ಯೋಜನೆ) ಬೆಂಗಳೂರು ನಗರ ವೃತ್ತದ ವ್ಯಾಪ್ತಿಯಲ್ಲಿ ಬರುವ ಪೀಣ್ಯ ಯೋಜನೆ ಉಗ್ರಾಣಕ್ಕೆ 9 ಸಂಖ್ಯೆಯ ಭದ್ರತಾ ಸಿಬ್ಬಂದಿಗಳನ್ನು ಒದಗಿಸುವ ಬಗ್ಗೆ.

ಟೆಂಡರ್‌ಗಳನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ ಸ್ವೀಕರಿಸಲಾಗುವುದು. ಹೆಚ್ಚಿನ ವಿವರಗಳಿಗೆ ಕವಿಪ್ರನಿನಿ ವೆಬ್‌ಸೈಟ್ https://kppp.karnataka.gov.in ನ ಹೈಪರ್‌ಲಿಂಕ್ "E Procurement KPTCL" ಅಥವಾ ನೇರವಾಗಿ ವೆಬ್‌ಸೈಟ್ https://kppp.karnataka.gov.in ನಲ್ಲಿ ಲಾಗಿನ್ ಮಾಡಿ ಕ್ರ.ಸಂ. (1): ದಿನಾಂಕ: 21.11.2025, ಹಾಗೂ ಕ್ರ.ಸಂ (2): 22.11.2025 ರಂದು ಅಥವಾ ನಂತರ ಪಡೆಯಬಹುದು. ಇತರೆ ಹೆಚ್ಚಿನ ಮಾಹಿತಿಗಾಗಿ ಕೆಳಸಹಿದಾರರ ಕಛೇರಿಯನ್ನು ಸಂಪರ್ಕಿಸಬಹುದು.

ಸಹಿ/– ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಯೋಜನೆ ವಿಭಾಗ–ದಕ್ಷಿಣ,
ಕವಿಪ್ರನಿನಿ, ಆನಂದ ರಾವ್ ವೃತ್ತ, ಬೆಂಗಳೂರು – 560009.

ನಗರಸಭಾ ಕಾರ್ಯಾಲಯ ಚನ್ನಪಟ್ಟಣ
ಬೆಂಗಳೂರು ದಕ್ಷಿಣ ಜಿಲ್ಲೆ – 562 160.
ದೂ. : 080–27251235. ಇ–ಮೇಲ್ : ka.channapatna.cmc@gmail.com
ವೆಬ್‌ಸೈಟ್ : www.channapatnacity.mrc.gov.in

ಸಂಖ್ಯೆ : ನ.ಸ.ಚ./ಹೆಚ್.ಎಸ್./ಎ.ಟಿ./ಸಿಆರ್–27/2025–26
ದಿನಾಂಕ : 18–11–2025

ಟೆಂಡರ್ ಪ್ರಕಟಣೆ

ಚನ್ನಪಟ್ಟಣ ನಗರಸಭೆಗೆ ಕೆ.ಟಿ.ಟಿ.ಪಿ. ಕಾಯ್ದೆ 1999 ಮತ್ತು ನಿಯಮಗಳು 2000 ರನ್ವಯ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ನಿಯಮದನ್ವಯ ಕರ್ನಾಟಕ ಪಬ್ಲಿಕ್ ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತಾರ **04 ಸಂಖ್ಯೆ ಅಟೋ ಟಿಪ್ಪರ್ ವಾಹನಗಳನ್ನು ಪೂರೈಸಲು** ಟೆಂಡರ್ ಆಹ್ವಾನಿಸಲಾಗಿದೆ.

ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : 03–12–2025 ರ ಸಂಜೆ 5.00 ಗಂಟೆ ವರೆಗೆ. ಅರ್ಹ ಪೂರೈಕೆದಾರರು / ಗುತ್ತಿಗೆದಾರರು / ಏಜನ್ಸಿಯವರು ಹೆಚ್ಚಿನ ವಿವರಗಳಿಗೆ ಕರ್ನಾಟಕ ಪಬ್ಲಿಕ್ ಪ್ರೋಕ್ಯೂರ್‌ಮೆಂಟ್ ವೆಬ್‌ಸೈಟ್‌ನಲ್ಲಿ https://kppp.karnataka.gov.in ಅಪ್‌ಲೋಡ್ ಮಾಡಿರುವ ಟೆಂಡರ್ ಡಾಕ್ಯುಮೆಂಟ್‌ನಲ್ಲಿ ಪಡೆಯಬಹುದು.

ಅನುದಾನದ ವಿವರ : 2024–25 ನೇ ಸಾಲಿನ 15ನೇ ಹಣಕಾಸು ಅಯೋಗದ ಅನುದಾನ.

1) ಕಾಮಗಾರಿಯ ವಿವರ : Procurement of 04 No 3.0 Cum to 3.5 Cum Capacity Hydraulic Box Auto Tipper, ಟೆಂಡರ್ ಸಂಖ್ಯೆ : DMA/2025-26/ IND5612, ಟೆಂಡರ್‌ಗಿಟ್ಟ ಮೊತ್ತ : ರೂ. 45.00 ಲಕ್ಷ, ಇ.ಎಂ.ಡಿ. ಮೊತ್ತ : ರೂ. 90,000.00/–.

ಸಹಿ/– ಪೌರಾಯುಕ್ತರು,
ನಗರಸಭೆ, ಚನ್ನಪಟ್ಟಣ.

ಡಿಐಪಿಆರ್/ರಾಮನಗರ/452/ಮಣಿಪಾಲ್/2025–26

‘ವಿಜಯಲಕ್ಷ್ಮಿಗೆ ವಿಡಿಯೊ ಕಳುಹಿಸಿದ್ದೆ’

ಪ್ರಜಾವಾಣಿ ವಾರ್ತೆ

ಧನ್ವೀರ್

ಬೆಂಗಳೂರು: ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ಕೈದಿಗಳಿಗೆ ವಿಶೇಷ ಆತಿಥ್ಯ ನೀಡಿದ್ದ ಪ್ರಕರಣದಲ್ಲಿ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದ್ದ ವಿಡಿಯೊಗಳಿಗೆ ಸಂಬಂಧಿಸಿದಂತೆ ದರ್ಶನ್ ಆಪ್ತ, ನಟ ಧನ್ವೀರ್ ಅವರು ಎರಡನೇ ಬಾರಿಗೆ ವಿಚಾರಣೆಗೆ ಹಾಜರಾಗಿದ್ದಾರೆ.

ಜೈಲಿನಿಂದ ಬಿಡುಗಡೆಯಾಗಿದ್ದ ಕೈದಿಯಿಂದ ವಿಡಿಯೊ ಹಾಗೂ ಫೋಟೊಗಳನ್ನು ಪಡೆದು ಸಾಮಾಜಿಕ ಜಾಲತಾಣದಲ್ಲಿ ಹರಿಯಬಿಟ್ಟಿರುವ ಅನುಮಾನದ ಅಡಿ ಧನ್ವೀರ್ ಅವರಿಗೆ ನೋಟಿಸ್ ಜಾರಿ ಮಾಡಲಾಗಿತ್ತು.

‘ದರ್ಶನ್ ಅವರಿಗೆ ಜೈಲಾಧಿಕಾರಿಗಳು ಹಾಸಿಗೆ, ದಿಂಬು ನೀಡಿರಲಿಲ್ಲ. ಅವರು ಹಾಸಿಗೆ, ದಿಂಬು ಪಡೆದುಕೊಳ್ಳಲು ನ್ಯಾಯಾಲಯದ ಮೆಟ್ಟಿಲೇರಿದ್ದರು. ಅಲ್ಲೂ ಹಿನ್ನಡೆ ಆಗಿತ್ತು. ಅದೇ ಕಾರಣಕ್ಕೆ ಜೈಲಿನ ಒಳಗೆ ನಡೆಯುತ್ತಿರುವ ಅಕ್ರಮಗಳ ಕುರಿತು ವಿಡಿಯೊವನ್ನು ಧನ್ವೀರ್ ಅವರು ಜೈಲಿನಿಂದ ಬಿಡುಗಡೆಯಾಗಿದ್ದ ಕೈದಿಯಿಂದ ಪಡೆದು ಬಹಿರಂಗ ಪಡಿಸಿದ್ದಾರೆ ಎಂಬ ಅನುಮಾನದ ಮೇರೆಗೆ ಕಳೆದ ವಾರವು ವಿಚಾರಣೆ ನಡೆಸಲಾಗಿತ್ತು. ಎರಡನೇ ಬಾರಿ ಮತ್ತೆ ವಿಚಾರಣೆ ನಡೆಸಲಾಗಿದೆ’ ಎಂದು ಮೂಲಗಳು ಹೇಳಿವೆ.

‘ವಕೀಲರೊಬ್ಬರು ವಿಡಿಯೊಗಳನ್ನು ನನಗೆ ಕಳುಹಿಸಿದ್ದರು. ಆ ವಿಡಿಯೊಗಳನ್ನು ದರ್ಶನ್ ಅವರ ಪತ್ನಿ ವಿಜಯಲಕ್ಷ್ಮಿ ಅವರಿಗೆ ಕಳುಹಿಸಿದ್ದೆ. ನಾನು ಯಾವುದೇ ವಿಡಿಯೊಗಳನ್ನು ಸಾಮಾಜಿಕ ಜಾಲತಾಣದಲ್ಲಿ ಅಪ್‌ಲೋಡ್ ಮಾಡಿಲ್ಲ’ ಎಂದು ಧನ್ವೀರ್ ವಿಚಾರಣೆ ವೇಳೆ ತಿಳಿಸಿದ್ದಾರೆ’ ಎಂದು ಗೊತ್ತಾಗಿದೆ. ‘ವಿಜಯಲಕ್ಷ್ಮಿ ಅವರ ವಿಚಾರಣೆಗೆ ಹಿರಿಯ ಅಧಿಕಾರಿಗಳು ಅನುಮತಿ ನೀಡಿದ್ದಾರೆ. ಅವರಿಗೂ ನೋಟಿಸ್ ನೀಡಿ ಹೇಳಿಕೆ ದಾಖಲು ಮಾಡಿಕೊಳ್ಳಲಾಗುವುದು’ ಎಂದು ಪೊಲೀಸ್ ಮೂಲಗಳು ಹೇಳಿವೆ.

ಸೋಂಪುರ: ಕಸ ಸುರಿದು ಪ್ರತಿಭಟನೆ

ದಾಬಸ್ ಪೇಟೆ: ಇಲ್ಲಿನ ಸೋಂಪುರ ಗ್ರಾಮ ಪಂಚಾಯಿತಿಯ ಮುಂದೆ ತಿಮ್ಮನಾಯಕನಹಳ್ಳಿ ಗ್ರಾಮಸ್ಥರು ಕಸವನ್ನು ಸುರಿದು ಪ್ರತಿಭಟನೆ ಮಾಡಿದ್ದಾರೆ.

ಬುಧವಾರ ಗ್ರಾಮಸ್ಥರೊಬ್ಬರು ಮೃತಪಟ್ಟಿದ್ದರಿಂದ ಅಂತ್ಯಕ್ರಿಯೆ ಮಾಡಲು ಊರಿನವರು ಸ್ಮಶಾನಕ್ಕೆ ಹೋಗಿ ನೋಡಿದರೆ, ಅಲ್ಲಿ ಬರೀ ತ್ಯಾಜ್ಯ ತುಂಬಿತ್ತು. ಇದರಿಂದ ಕಂಗಾಲಾದ ಗ್ರಾಮಸ್ಥರು ಕಸವನ್ನು ತುಂಬಿಕೊಂಡು ಬಂದು ಗ್ರಾಮ ಪಂಚಾಯಿತಿ ಕಚೇರಿ ಮುಂದೆ ಸುರಿದು ಪ್ರತಿಭಟನೆ ಮಾಡಿದರು.

ಸ್ಮಶಾನಕ್ಕಾಗಿ ಗ್ರಾಮಕ್ಕೆ ಕಂದಾಯ ಇಲಾಖೆ ಎರಡು ಎಕರೆ ಜಮೀನನ್ನು ನೀಡಿತ್ತು. ಇದಕ್ಕೆ ಸೋಂಪುರ ಗ್ರಾಮ ಪಂಚಾಯಿತಿ ಕಾಂಪೌಂಡ್ ಹಾಕದೆ ಹಾಗೆಯೇ ಬಿಟ್ಟಿದೆ. ಇದರಿಂದಾಗಿ ಇಲ್ಲಿ ಕೆಲವರು ನಿತ್ಯ ಕಸ ತಂದು ಸುರಿಯುತ್ತಿರುವುದರಿಂದ ಸ್ಮಶಾನ ಮುಚ್ಚುವ ಪರಿಸ್ಥಿತಿಗೆ ಬಂದಿದೆ ಎಂದು ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದರು.

ಬಿಜಿಎಸ್‌ಇ ಪ್ರಾಪರ್ಟೀಸ್ ಆ್ಯಂಡ್ ಸೆಕ್ಯುರಿಟೀಸ್ ಲಿಮಿಟೆಡ್
(ಮುಂಚಿನ ಹೆಸರು: ಬೆಂಗಳೂರು ಸ್ಟಾಕ್ ಎಕ್ಸ್‌ಚೇಂಜ್ ಲಿಮಿಟೆಡ್)
CIN No.U70102KA1937PLC001292
ಸ್ಟಾಕ್ ಎಕ್ಸ್‌ಚೇಂಜ್ ಟವರ್ಸ್, ನಂ. 51, 1ನೇ ಕ್ರಾಸ್, ಜೆ. ಸಿ. ರಸ್ತೆ,
ಬೆಂಗಳೂರು 560027 ಫೋನ್: 080–41575566
ಇಮೇಲ್: ed_secretary@bgse.co.in;

ಸದಸ್ಯರಿಗೆ ಸೂಚನೆ

ಅಂಚೆ ಮತಪತ್ರ ಸೂಚನೆಯಲ್ಲಿ ಹೇಳಿರುವಂತಹ ವಿಶೇಷ ವ್ಯವಹಾರ / ಸಾಮಾನ್ಯ ನಿರ್ಣಯಕ್ಕೆ ಸಂಬಂಧಿಸಿದಂತೆ ಕಂಪನಿಗಳ ಕಾಯಿದೆ, 2013 ರ ಕಲಮು 110 ಮತ್ತು ಇತರ ಅನ್ವಯವಾಗುವ ನಿಬಂಧನೆಗಳ ಅಡಿಯಲ್ಲಿ ಇ–ಮತದಾನ/ಅಂಚೆ ಮತಪತ್ರಗಳ ಮೂಲಕ ಕಂಪನಿಯ ಷೇರುದಾರರ ಅನುಮೋದನೆ/ಒಪ್ಪಿಗೆಯನ್ನು ಕೋರುತ್ತ ಇಮೇಲ್‌ಗಳನ್ನು ನೋಂದಾಯಿಸಿಕೊಂಡಿರುವವರಿಗೆ ಇಮೇಲ್‌ಗಳ ಮೂಲಕ ಮತ್ತು ಇಮೇಲ್‌ಗಳನ್ನು ನೋಂದಾಯಿಸಿಕೊಂಡಿಲ್ಲದವರಿಗೆ ಅಂಚೆ ಮತಪತ್ರ ನಮೂನೆಗಳು ಹಾಗೂ ಅಂಚೆಶುಲ್ಕವನ್ನು ಪಾವತಿಸಿರುವ ನಮ್ಮ ವಿಳಾಸವುಳ್ಳ ಲಕೋಟೆಗಳ ಸಹಿತವಾಗಿ ಸ್ಪೀಡ್ ಪೋಸ್ಟ್ ಮೂಲಕ ಅಂಚೆ ಮತದಾನದ ಸೂಚನೆಯನ್ನು ಕಳುಹಿಸುವುದನ್ನು ಕಂಪನಿಯು ನವೆಂಬರ್ 19, 2025 ರಂದು ಪೂರ್ಣಗೊಳಿಸಿದೆ ಎಂದು ಕಂಪನಿಯ ಸದಸ್ಯರಿಗೆ ಈ ಮೂಲಕ ತಿಳಿಸಲಾಗಿದೆ. ಅಂಚೆ ಮತದಾನವನ್ನು ನ್ಯಾಯಯುತವಾಗಿ ಮತ್ತು ಪಾರದರ್ಶಕವಾಗಿ ನಡೆಸಲು ಮಂಡಳಿಯು ಶ್ರೀ ವಿ ಜಯಗೋಪಾಲ್ (ಸಿಪಿ ಸಂ. 5389), ಇವರನ್ನು ಸೂಕ್ಷ್ಮ ಪರಿಶೀಲಕರಾಗಿ ನೇಮಿಸಿಕೊಂಡಿದೆ. ಕಂಪನಿಯ ಸದಸ್ಯರೆಲ್ಲರೂ ದಯವಿಟ್ಟು ಗಮನಿಸಬೇಕು: ಕಂಪನಿಯು ರಿಮೋಟ್ ಇ–ವೋಟಿಂಗ್‌ಗಾಗಿ ಸಿಡಿಎಸ್‌ಎಲ್‌ನ ಸೇವೆಗಳನ್ನು ನಿಯೋಜಿಸಿಕೊಂಡಿದೆ. ಶನಿವಾರ, ಡಿಸೆಂಬರ್ 20, 2025 ಸಂಜೆ 5.00 ಗಂಟೆ ಅಥವಾ ಅದಕ್ಕೂ ಮೊದಲು ವಿಧ್ಯುಕ್ತವಾಗಿ ಭರ್ತಿ ಮಾಡಿ ಸಹಿ ಮಾಡಿದ ಅಂಚೆ ಮತಪತ್ರವನ್ನು ಸೂಕ್ಷ್ಮ ಪರಿಶೀಲಕರಿಗೆ ಹಿಂದಿರುಗಿಸುವ ಮೂಲಕ ಸದಸ್ಯರು ತಮ್ಮ ಸಮ್ಮತಿ ಅಥವಾ ಅಸಮ್ಮತಿಯನ್ನು ತಿಳಿಸಬೇಕು ಎಂದು ಈ ಮೂಲಕ ವಿನಂತಿಸುತ್ತಿದ್ದೇವೆ. ಡಿಸೆಂಬರ್ 20, 2025 ರ ನಂತರ ಸದಸ್ಯರಿಂದ ಅಂಚೆ ಮತಪತ್ರ ನಮೂನೆಗಳು ಬಂದರೆ ಕಟ್ಟುನಿಟ್ಟಾಗಿ ಅಂತಹ ಸದಸ್ಯರಿಂದ ಯಾವುದೇ ಉತ್ತರ ಸ್ವೀಕಾರವಾಗಲಿಲ್ಲ ಎಂದು ಪರಿಗಣಿಸಲಾಗುತ್ತದೆ. ನವೆಂಬರ್ 14, 2025 ರಂದು ಸದಸ್ಯರ ರಿಜಿಸ್ಟರ್/ಡಿಪಾಸಿಟರಿಗಳ ದಾಖಲಾತಿಯಲ್ಲಿ ಸದಸ್ಯರ ಹೆಸರಿನಲ್ಲಿ ನೋಂದಾಯಿಸಲಾದ ಷೇರುಗಳಿಗೆ ಪಾವತಿಸಿರುವ ಮೌಲ್ಯದ ಆಧಾರದ ಮೇಲೆ ಮತದಾನದ ಹಕ್ಕುಗಳನ್ನು ಲೆಕ್ಕಹಾಕಲಾಗುತ್ತದೆ. ಯಾವುದೇ ಸದಸ್ಯರಿಗೆ ಅಂಚೆ ಮತಪತ್ರ ನಮೂನೆಗಳು ಲಭಿಸಿರದಿದ್ದರೆ ಮತ್ತು ಅದರ ನಕಲುಗಳನ್ನು ಪಡೆಯಲು ಬಯಸುತ್ತಿದ್ದರೆ ಅಥವಾ ಅಂಚೆ ಮತಪತ್ರ ಪ್ರಕ್ರಿಯೆಗೆ ಸಂಬಂಧಿಸಿದಂತೆ ಕುಂದುಕೊರತೆಗಳಿವೆ ಎಂದು ದೂರನ್ನು ನೀಡಲು ಬಯಸುತ್ತಿದ್ದರೆ ಅಂತಹವರು ದಯವಿಟ್ಟು ಸಂಪರ್ಕಿಸಿ: ಕಂಪನಿಯ ರಿಜಿಸ್ಟ್ರಾರ್ ಮೆ. ಬಿಜಿಎಸ್‌ಇ ಫೈನಾನ್ಷಿಯಲ್ ಲಿಮಿಟೆಡ್, ಸ್ಟಾಕ್ ಎಕ್ಸ್‌ಚೇಂಜ್ ಟವರ್ಸ್, ನಂ. 51, 1 ನೇ ಕ್ರಾಸ್, ಜೆ.ಸಿ. ರಸ್ತೆ, ಬೆಂಗಳೂರು – 560027, ಫೋನ್: 080–41329661, ಇಮೇಲ್: vp-rta@bfsl.co.in.

ಅಂಚೆ ಮತದಾನದ ಫಲಿತಾಂಶಗಳನ್ನು ಮಂಗಳವಾರ, ಡಿಸೆಂಬರ್ 23, 2025 ರಂದು ಕಂಪನಿಯ ನೋಂದಾಯಿತ ಕಛೇರಿಯಲ್ಲಿ ಪ್ರಕಟಿಸಲಾಗುವುದು.

ಇ–ಮತದಾನ ಶುಕ್ರವಾರ, 21–11–2025 ರಂದು ಬೆಳಗ್ಗೆ 09.00 ಕ್ಕೆ ಪ್ರಾರಂಭವಾಗಿ ಶನಿವಾರ, 20–12–2025 ರಂದು ಸಂಜೆ 05.00 ಕ್ಕೆ ಮುಕ್ತಾಯಗೊಳ್ಳುತ್ತದೆ.

ನಿರ್ದೇಶಕರ ಮಂಡಲಿಯ ಆದೇಶದ ಮೇರೆಗೆ
ಬಿಜಿಎಸ್‌ಇ ಪ್ರಾಪರ್ಟೀಸ್ ಆ್ಯಂಡ್ ಸೆಕ್ಯುರಿಟೀಸ್ ಲಿಮಿಟೆಡ್ ಪರವಾಗಿ
ಸಹಿ/– (ವಿನೋದ್ ಗೌತಮಚಂದ್ ಜೈನ್)
ಸ್ಥಳ: ಬೆಂಗಳೂರು
ದಿನಾಂಕ: ನವೆಂಬರ್ 7, 2025
ಕಾರ್ಯನಿರ್ವಾಹಕ ನಿರ್ದೇಶಕರು DIN: 00248275

369 ವಾರ್ಡ್‌: ಅಂತಿಮ ಅಧಿಸೂಚನೆ

ಜಿಬಿಎ: ಒಂದು ವಾರ್ಡ್‌ ಹೆಚ್ಚಿಸಿಕೊಂಡ ಪಶ್ಚಿಮ ನಗರ ಪಾಲಿಕೆ



ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ವ್ಯಾಪ್ತಿಯಲ್ಲಿರುವ ಐದು ನಗರ ಪಾಲಿಕೆಗಳಿಗೆ ವಾರ್ಡ್‌ಗಳ ಮರು ವಿಂಗಡಣೆಯನ್ನು ಅಂತಿಮಗೊಳಿಸಿ, ನಗರಾಭಿವೃದ್ಧಿ ಇಲಾಖೆ ಅಧಿಸೂಚನೆ ಹೊರಡಿಸಿದೆ.

ಬೆಂಗಳೂರು ಪಶ್ಚಿಮ ನಗರ ಪಾಲಿಕೆಯಲ್ಲಿ ಕರಡು ಅಧಿಸೂಚನೆಯಲ್ಲಿ 111 ವಾರ್ಡ್‌ಗಳಿದ್ದವು. ಅಂತಿಮ ಅಧಿಸೂಚನೆಯಲ್ಲಿ ಈ ಸಂಖ್ಯೆ 112ಕ್ಕೇರಿದೆ. ಇನ್ನುಳಿದ ನಾಲ್ಕು ನಗರ ಪಾಲಿಕೆಗಳ ವಾರ್ಡ್‌ ಸಂಖ್ಯೆಯಲ್ಲಿ ಬದಲಾವಣೆಯಾಗಿಲ್ಲ. ಐದು ನಗರ ಪಾಲಿಕೆಗಳಲ್ಲಿ ಒಟ್ಟಾರೆ 369 ವಾರ್ಡ್‌ಗಳಿವೆ.

ಬಿಬಿಎಂಪಿ ಇರುವಾಗ ಹಲವು ಬಾರಿ ವಾರ್ಡ್‌ ಗಡಿ ಪುನರ್‌ರಚಿಸುವ ಪ್ರಯತ್ನಗಳಾಗಿದ್ದವು. 198 ವಾರ್ಡ್‌ಗಳನ್ನು 243ಕ್ಕೆ ಹೆಚ್ಚಿಸಲಾಗಿತ್ತು. ಮತ್ತೆ 225ಕ್ಕೆ ಇಳಿಸಲಾಗಿತ್ತು. ಜಿಬಿಎ ಆದ ಬಳಿಕ ಐದು ಪಾಲಿಕೆಗಳನ್ನು ರಚಿಸಲಾಗಿತ್ತು. ಸೆಪ್ಟೆಂಬರ್ 2 ರಂದು ಐದು ನಗರ ಪಾಲಿಕೆಗಳು ಅಸ್ತಿತ್ವಕ್ಕೆ ಬಂದಿದ್ದವು. ಸೆಪ್ಟೆಂಬರ್ 30ರಂದು ವಾರ್ಡ್‌ಗಳ ಕರಡು ಅಧಿಸೂಚನೆ ಹೊರಡಿಸಲಾಗಿತ್ತು. ನವೆಂಬರ್ 1ಕ್ಕೆ ಅಂತಿಮ ಅಧಿಸೂಚನೆಯಾಗಬೇಕಿತ್ತು. ಸುಪ್ರೀಂ ಕೋರ್ಟ್‌ನಲ್ಲಿ ಹೆಚ್ಚಿನ ಮನವಿ ಕೋರಿದ್ದರೂ ಫಲಿಸಲಿಲ್ಲ. 15 ದಿನದಲ್ಲಿ ವಾರ್ಡ್‌ಗಳನ್ನು ಅಂತಿಮಗೊಳಿಸಿ ಎಂದು ಸುಪ್ರೀಂ ಕೋರ್ಟ್ ನ.4ರಂದು ಸೂಚಿಸಿತ್ತು. ಅದರಂತೆ, ವಾರ್ಡ್‌ಗಳ ಅಂತಿಮ ಅಧಿಸೂಚನೆ ಹೊರಬಿದ್ದಿದೆ.

'ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ– 2024' ಮೇ 15ರಂದು ಜಾರಿಯಾಯಿತು. ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ಉನ್ನತ ಸಂಸ್ಥೆಯಾಗಿದೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಬದಲು ಐದು ನಗರಪಾಲಿಕೆಗಳು ಮತ್ತು ವಾರ್ಡ್‌ ಸಮಿತಿ ಹೀಗೆ ಮೂರು ಹಂತದ ಆಡಳಿತವನ್ನು ಈ ಕಾಯ್ದೆ ಮೂಲಕ ಪರಿಚಯಿಸಲಾಯಿತು.

ಜಿಬಿಎ ಮುಖ್ಯ ಆಯುಕ್ತ ಎಂ. ಮಹೇಶ್ವರ ರಾವ್ ಅಧ್ಯಕ್ಷತೆಯಲ್ಲಿ ವಾರ್ಡ್‌ ಪುನರ್‌ರಚನಾ ಸಮಿತಿಯನ್ನು ರಚಿಸಲಾಯಿತು. 2011ರ ಜನಗಣತಿ ಮತ್ತು ಇತ್ತೀಚಿನ ಜನಸಂಖ್ಯೆಯನ್ನು ಪರಿಗಣಿಸಿ ವಾರ್ಡ್‌ ಗಡಿಗಳನ್ನು ನಿರ್ಧರಿಸುವ ಜವಾಬ್ದಾರಿ ಈ ಸಮಿತಿಯದ್ದಾಗಿತ್ತು. 368 ವಾರ್ಡ್‌ಗಳನ್ನು ಈ ಸಮಿತಿ ಶಿಫಾರಸು ಮಾಡಿತ್ತು. ಸರ್ಕಾರವು ಅಂತಿಮ ಅಧಿಸೂಚನೆಯಲ್ಲಿ ಮತ್ತೊಂದು ವಾರ್ಡ್‌ ಅನ್ನು ಸೇರಿಸಿದೆ.

ಸಿಎಂಆರ್ ಸಂಸ್ಥಾಪನಾ ದಿನಾಚರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿಎಂಆರ್ ಸಮೂಹ ಶಿಕ್ಷಣ ಸಂಸ್ಥೆಗಳ ಸಂಸ್ಥಾಪನಾ ದಿನಾಚರಣೆ ಮತ್ತು ನೂತನ ಶೈಕ್ಷಣಿಕ ಭವನದ ಉದ್ಘಾಟನಾ ಕಾರ್ಯಕ್ರಮ ಬುಧವಾರ ನಡೆಯಿತು.

ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಮಾತನಾಡಿ, 'ಬೆರಳೆಣಿಕೆಯಷ್ಟು ವಿದ್ಯಾರ್ಥಿಗಳಿಂದ ಆರಂಭವಾದ ಸಿಎಂಆರ್ ಶಿಕ್ಷಣ ಸಂಸ್ಥೆ ಇಂದು ಸಮೂಹ ಶಿಕ್ಷಣ ಸಂಸ್ಥೆಗಳಾಗಿ ಹಾಗೂ ವಿಶ್ವವಿದ್ಯಾಲಯವಾಗಿ ಬೆಳೆದು 20 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುತ್ತಿದೆ. ಈ ಸಂಸ್ಥೆಯಲ್ಲಿ ವ್ಯಾಸಂಗ ಮಾಡಿದ ವಿದ್ಯಾರ್ಥಿಗಳು ಉನ್ನತ ಮಟ್ಟದ ಉದ್ಯೋಗ ಪಡೆದು ದೇಶ-ವಿದೇಶಗಳಲ್ಲಿ ಸಿಎಂಆರ್ ಶಿಕ್ಷಣ ಸಂಸ್ಥೆಗಳ ಕೀರ್ತಿಯನ್ನು ಬೆಳಗಿಸಿದ್ದಾರೆ' ಎಂದು ಶ್ಲಾಘಿಸಿದರು.

ಎನ್‌ಪಿಎಸ್ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ಸ್ ಅಧ್ಯಕ್ಷ ಕೆ.ಪಿ. ಗೋಪಾಲಕೃಷ್ಣ, ಸಿಎಂಆರ್ ಸಮೂಹ ಶಿಕ್ಷಣ ಸಂಸ್ಥೆಗಳು ಮತ್ತು ಸಿಎಂಆರ್ ವಿಶ್ವವಿದ್ಯಾಲಯ ಅಧ್ಯಕ್ಷ ಕೆ.ಸಿ ರಾಮಮೂರ್ತಿ ಮಾತನಾಡಿದರು.

₹12.82 ಕೋಟಿ ವಿದ್ಯಾರ್ಥಿ ಪ್ರೋತ್ಸಾಹಧನವನ್ನು ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ನೀಡಲಾಯಿತು. 207 ವಿದ್ಯಾರ್ಥಿಗಳು ವಿದ್ಯಾರ್ಥಿ ವೇತನ, 18 ವಿದ್ಯಾರ್ಥಿಗಳು ಕ್ರೀಡಾ ಪ್ರತಿಭಾ ವೇತನ, 22 ವಿದ್ಯಾರ್ಥಿಗಳು ನಾಯಕತ್ವ ಪ್ರತಿಭಾ ಪುರಸ್ಕಾರ, 2,112 ವಿದ್ಯಾರ್ಥಿಗಳು ಶುಲ್ಕ ರಿಯಾಯಿತಿ ಪಡೆದರು.

ಅಂತರರಾಷ್ಟ್ರೀಯ ಕಬಡ್ಡಿ ಆಟಗಾರ ಸಿ ಹೊನ್ನಪ್ಪ ಗೌಡ, ಸಿಎಂಆರ್ ವಿ.ವಿ ಕುಲಾಧಿಪತಿ ಸಬಿತಾ ರಾಮಮೂರ್ತಿ, ಸಿಎಂಆರ್ ಜ್ಞಾನಧಾರ ಟ್ರಸ್ಟ್ ಕಾರ್ಯದರ್ಶಿ ಕೆ.ಸಿ. ಜಗನ್ನಾಥ ರೆಡ್ಡಿ, ಸಹ ಕುಲಾಧಿಪತಿ ಜಯದೀಪ್ ಕೆ.ಆರ್. ರೆಡ್ಡಿ, ಏಕ್ಯಾ ಸಮೂಹ ಶಾಲೆಗಳ ಸಂಸ್ಥಾಪಕಿ ತ್ರೀಸ್ತಾ ರಾಮಮೂರ್ತಿ, ಕುಲಪತಿ ಎಚ್. ಬಿ.ರಾಘವೇಂದ್ರ ಉಪಸ್ಥಿತರಿದ್ದರು.

ಸಿಎಂಆರ್ ಸಮೂಹ ಶಿಕ್ಷಣ ಸಂಸ್ಥೆಗಳ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮದಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ವಿತರಿಸಲಾಯಿತು

'ಜಿಬಿಎ ಚುನಾವಣೆಗೆ ಎಎಪಿ ಸಿದ್ಧತೆ'

ಬೆಂಗಳೂರು: 'ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಚುನಾವಣೆಗೆ ಎಎಪಿಯು ಸಕಲ ಸಿದ್ಧತೆ ಮಾಡಿಕೊಂಡಿದ್ದು, ಚುನಾವಣಾ ಸಮಿತಿಯನ್ನು ಈಗಾಗಲೇ ರಚಿಸಲಾಗಿದೆ' ಎಂದು ಎಎಪಿ ರಾಜ್ಯ ಘಟಕದ ಅಧ್ಯಕ್ಷ ಮುಖ್ಯಮಂತ್ರಿ ಚಂದ್ರು ಹೇಳಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಬೆಂಗಳೂರು ಪಾಲಿಕೆಗೆ ಚುನಾವಣೆ ನಡೆಸದೆ ಐದು ವರ್ಷಗಳಾಗಿವೆ. ಕಾಂಗ್ರೆಸ್, ಬಿಜೆಪಿ ಮತ್ತು ಜೆಡಿಎಸ್‌ನ ಶಾಸಕರಿಗೆ ಈ ಬಗ್ಗೆ ಕಾಳಜಿಯೇ ಇಲ್ಲ. ಬೆಂಗಳೂರು ಈಗ, 'ಗಾರ್ಬೇಜ್ ಸಿಟಿ' ಎಂದಾಗಿದೆ. ಸ್ಥಳೀಯ ಸಂಸ್ಥೆಗಳಲ್ಲಿ ಜನ ಪ್ರತಿನಿಧಿಗಳು ಇಲ್ಲದೆ, ಶಾಸಕರು ಮತ್ತು ಅಧಿಕಾರಿಗಳೇ ಆಡಳಿತ ನಡೆಸುತ್ತಿರುವುದರಿಂದ ಹೀಗಾಗಿದೆ' ಎಂದರು. ಪಕ್ಷದ ರಾಷ್ಟ್ರೀಯ ಜಂಟಿ ಕಾರ್ಯದರ್ಶಿ ಪೃಥ್ವಿ ರೆಡ್ಡಿ, ಕಾರ್ಯದರ್ಶಿ ಸೀತಾರಾಮ್ ಗುಂಡಪ್ಪ ಮಾತನಾಡಿದರು.

'ಮಕ್ಕಳ ಮನೋಲೋಕವನ್ನು ಅರಳಿಸಿ'

ಬೆಂಗಳೂರು: ಮಕ್ಕಳ ಆಲೋಚನೆಗಳ ಒಳಗೆ ಮೊಳಕೆಯೊಡೆಯುವ ಕಲೆ, ಅವರ ಕೈಗಳು, ಕಂಠದ ಮೂಲಕ ವ್ಯಕ್ತವಾಗುತ್ತದೆ. ಆದ್ದರಿಂದ ನಾವು ಮಕ್ಕಳ ಮನೋಲೋಕವನ್ನು ಅರಳಿಸಬೇಕು ಎಂದು ಮುಖ್ಯಮಂತ್ರಿಯವರ ಮಾಧ್ಯಮ ಸಲಹೆಗಾರ ಕೆ.ವಿ. ಪ್ರಭಾಕರ್ ಹೇಳಿದರು.

ಬಾಲಭವನದಲ್ಲಿ ಬುಧವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಕ್ಕಳಿಗೆ ಕಲಾಶ್ರೀ ಪ್ರಶಸ್ತಿ ನೀಡಿ ಅವರು ಮಾತನಾಡಿದರು.

ಬಾಲಭವನದಲ್ಲಿ ಬುಧವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಕ್ಕಳಿಗೆ ಕಲಾಶ್ರೀ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಕೆ.ವಿ. ಪ್ರಭಾಕರ್, ಬಾಲ ಭವನದ ಅಧ್ಯಕ್ಷ ಬಿ.ಆರ್.ನಾಯ್ಡು ಉಪಸ್ಥಿತರಿದ್ದರು

ಸಂಕ್ಷಿಪ್ತ ಸುದ್ದಿ

ಫೆಲೋಶಿಪ್‌ಗೆ ಅರ್ಜಿ ಆಹ್ವಾನ

ಬೆಂಗಳೂರು: 'ಮಕ್ಕಳ ಸಾಹಿತ್ಯದಲ್ಲಿ ಅನುಭವಿ ಅಥವಾ ಉದಯೋನ್ಮುಖ ಬರಹಗಾರರಿಂದ ವಿವಿಧ ಪ್ರಕಾರದ ಕಥೆ, ಕವಿತೆ, ನಾಟಕ, ಜೀವನಚರಿತ್ರೆ, ಪ್ರವಾಸ ಕಥನ ಮತ್ತು ಕಾದಂಬರಿಗಳು ಸೇರಿದಂತೆ ಕನ್ನಡದಲ್ಲಿ ಮೂಲ ಬರಹಗಳನ್ನು ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯ ಆಹ್ವಾನಿಸಿದೆ. ಆಯ್ಕೆಯಾದ ಬರಹಗಾರರಿಗೆ ಗರಿಷ್ಠ ₹10 ಸಾವಿರ ಫೆಲೋಶಿಪ್ ನೀಡಲಿದೆ.

ಆಸಕ್ತ ಬರಹಗಾರರು https://forms.gle/zdy9nKeboxB2kuAm7 ಲಿಂಕ್‌ನಲ್ಲಿ ಅರ್ಜಿಯನ್ನು ಪಡೆದು ಸಲ್ಲಿಸಬಹುದು. ಕನ್ನಡದ ಮೂಲ ಬರಹದ ಮಾದರಿ ಅಥವಾ ವಿಸ್ತೃತ ಸಾರಾಂಶವನ್ನು (1000 ಶಬ್ದಗಳವರೆಗೆ, ಯೂನಿಕೋಡ್‌ನಲ್ಲಿ) ನವೆಂಬರ್ 30ರ ಒಳಗಾಗಿ ಸಲ್ಲಿಸಬೇಕು. ಮಾಹಿತಿಗಾಗಿ ದಿನೇಶ್ ಮಡಗಾಂವ್ಕರ್ (9844049489) ಅಥವಾ kannada.makkalasahitya@apu.edu.in ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ವಿದ್ಯುತ್ ವ್ಯತ್ಯಯ ಇಂದಿನಿಂದ

ಬೆಂಗಳೂರು: ಸೋಲದೇವನಹಳ್ಳಿ ಉಪ ಕೇಂದ್ರದಲ್ಲಿ ತುರ್ತು ನಿರ್ವಹಣಾ ಕಾಮಗಾರಿ ಕೈಗೊಳ್ಳಲಾಗಿದ್ದು, ಜಾಲಹಳ್ಳಿ ವಿಭಾಗದ ಎನ್- 9ಉಪ ವಿಭಾಗದಲ್ಲಿ ನವೆಂಬರ್ 20ರಿಂದ 23ರವರಗೆ ಬೆಳಿಗ್ಗೆ 10.30ರಿಂದ ರಾತ್ರಿ 8.30ರವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

ವಿದ್ಯುತ್ ವ್ಯತ್ಯಯವಾಗುವ ಸ್ಥಳಗಳು: ತರಬನಹಳ್ಳಿ, ಹುರುಳಿ ಚಿಕ್ಕನಹಳ್ಳಿ, ಟಿ.ಬಿ. ಕ್ರಾಸ್, ಹೆಸರಘಟ್ಟ, ದ್ವಾರಕಾನಗರ, ಚಿಕ್ಕಬಾಣಾವರ, ಮಾರುತಿ ನಗರ. ಗಣಪತಿ ನಗರ, ಶಾಂತಿನಗರ, ಬ್ರದರ್ಸ್ ಕಾಲೊನಿ, ಕೃಷ್ಣಾ ಕಾಲೇಜು ರಸ್ತೆ, ರಾಘವೇಂದ್ರ ಲೇಔಟ್, ಸಾಸುವೆಘಟ್ಟ, ಬಜ್ಜಪ್ಪ ಲೇಔಟ್, ಶಿವಕುಮಾರಸ್ವಾಮೀಜಿ ಲೇಔಟ್, ಗುಡ್ಡದಹಳ್ಳಿ, ದಾಸೇನಹಳ್ಳಿ, ಹೊಸಹಳ್ಳಿ ಪಾಳ್ಯ, ಡ್ಯಾನಿಶ್ ಫಾರ್ಮ್, ಕೆಎಂಎಫ್, ಗಾಣಿಗರಹಳ್ಳಿ, ಕೆರೆಗುಡ್ ಲೈನ್, ಕೆ.ಟಿ. ಪುರ, ಐಐಎಚ್‌ಆರ್, ಐವರ ಕೊಂಡಪುರ, ಲಿಂಗನಹಳ್ಳಿ, ಮಾದಪ್ಪನಹಳ್ಳಿ, ಕಾಳೇನಹಳ್ಳಿ ಶಿವಕೋಟೆ ಗ್ರಾಮ, ಮಾವಳ್ಳಿಪುರ, ಕೊಂಡಶೆಟ್ಟಿಹಳ್ಳಿ, ಕುರುಬರಹಳ್ಳಿ, ಪಾಕೇಗೌಡನಪಾಳ್ಯ, ರಾಘವೇಂದ್ರ ಧಾಮ, ಬೈಲಕೆರೆ, ಆಚಾರ್ಯ ಕಾಲೇಜು ಮುಖ್ಯರಸ್ತೆ, ಅಚ್ಯುತ್ ನಗರ, ಸೋಲದೇವನಹಳ್ಳಿ, ಸಾಸುವೆಘಟ್ಟ ಮತ್ತು ಸುತ್ತಮುತ್ತಲಿನ ಪ್ರದೇಶಗಳು.

ರಾಜಾನುಕುಂಟೆ 66/11 ವಿದ್ಯುತ್ ಉಪಕೇಂದ್ರದಲ್ಲಿ ತುರ್ತು ನಿರ್ವಹಣಾ ಕಾಮಗಾರಿ ಕೈಗೊಂಡ ಹಿನ್ನೆಲೆಯಲ್ಲಿ ಹೆಬ್ಬಾಳ ವಿಭಾಗದ ಸಿ-7 ಉಪ ವಿಭಾಗದಲ್ಲಿ ನ. 21ರ ಬೆಳಗ್ಗೆ 10ರಿಂದ ಸಂಜೆ 4 ಗಂಟೆವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಲಿದೆ.

ವಿದ್ಯುತ್ ವ್ಯತ್ಯಯವಾಗುವ ಸ್ಥಳಗಳು: ಹೊನ್ನೇನಹಳ್ಳಿ, ಸಿಂಗನಾಯಕನಹಳ್ಳಿ, ರಾಜಾನುಕುಂಟೆ, ಮಾರಸಂದ್ರ, ಶ್ರೀರಾಮನಹಳ್ಳಿ, ನೆಲಕುಂಟೆ, ಹನಿಯೂರು, ಚೆಲ್ಲಹಳ್ಳಿ, ಕೆಎಂಎಫ್, ಬೈರಾಪುರ, ದಿಬ್ಬೂರು, ಕಾಕೋಲು, ಸೊನ್ನೇನಹಳ್ಳಿ, ಸೆಂಚುರ್ ಲೇಔಟ್ ಮತ್ತು ಸುತ್ತಮುತ್ತಲಿನ ಪ್ರದೇಶಗಳು.

'ಕಡಲೆಕಾಯಿ ಪರಿಷೆ'ಗೆ ಆರು ಲಕ್ಷ ಜನ

ಬಸವನಗುಡಿಯ ಮುಖ್ಯರಸ್ತೆ ಸುತ್ತಮುತ್ತ ಮೂರು ದಿನಗಳಿಂದ ಜನಜಾತ್ರೆ

ಪ್ರಜಾವಾಣಿ ವಾರ್ತೆ

ಕಡಲೆಕಾಯಿ ಪರಿಷೆಯ ಮೇಲುಸ್ತುವಾರಿ ವಹಿಸಿದ್ದ ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ

ಬೆಂಗಳೂರು: ಕಾರ್ತಿಕ ಮಾಸದ ಕೊನೆಯ ಸೋಮವಾರ ಆರಂಭವಾಗಿರುವ ಐತಿಹಾಸಿಕ ಕಡಲೆಕಾಯಿ ಪರಿಷೆ ಸಂದರ್ಭ ಬಸವನಗುಡಿಯ ಸುತ್ತಮುತ್ತಲಿನ ರಸ್ತೆಗಳು ಜನಜಾತ್ರೆಯಿಂದ ಮುಳುಗಿಹೋಗಿವೆ. ಮೂರು ದಿನಗಳಲ್ಲಿ ಆರು ಲಕ್ಷಕ್ಕೂ ಹೆಚ್ಚು ಜನ ಭೇಟಿ ನೀಡಿದ್ದಾರೆ.

ಬಸವನಗುಡಿ ಮುಖ್ಯರಸ್ತೆ ಹಾಗೂ ಸುತ್ತಮುತ್ತಲಿನ ರಸ್ತೆಗಳಲ್ಲಿ 'ಕಡಲೆಕಾಯಿ ಪರಿಷೆಯ' ಸಂಭ್ರಮ ಮೂರು ದಿನದಿಂದ ಕಳೆಗಟ್ಟಿದೆ. ಈ ವರ್ಷ ಅಧಿಕೃತವಾಗಿಯೇ ಐದು ದಿನ ಪರಿಷೆಯನ್ನು ಧಾರ್ಮಿಕ ಪರಿಷತ್ ಆಯೋಜಿಸಿದೆ. ನ.17ರ ಸೋಮವಾರ ಪರಿಷೆ ಆರಂಭವಾಗಿದ್ದರೂ, ಶನಿವಾರದಿಂದಲೇ ಜಾತ್ರೆ ಸಡಗರ ಆರಂಭವಾಗಿತ್ತು.

ದೊಡ್ಡ ಬಸವಣ್ಣನೊಂದಿಗೆ ದೊಡ್ಡ ಗಣಪತಿ, ಕಾರಂಜಿ ಆಂಜನೇಯನ ದರ್ಶನ ಪಡೆದ ಜನರು ಜಾತ್ರೆಯ ಸೊಬಗನ್ನು ಸವಿದರು. ಸೋಮವಾರದಿಂದ ಬುಧವಾರದವರೆಗೆ ಬೆಳಿಗ್ಗೆಯಿಂದಲೂ ಜನರು ಪರಿಷೆಗೆ ಬಂದು ಕಡಲೆಕಾಯಿ ಖರೀದಿ ನಡೆಸಿದರು. ಸಂಜೆಯ ವೇಳೆಯಲ್ಲಿ ಕಾಲಿಡಲೂ ಸಾಧ್ಯವಿಲ್ಲದಷ್ಟು ಜನರಾಶಿ ಬಸವನಗುಡಿ ಮುಖ್ಯ ರಸ್ತೆಯಲ್ಲಿ ಕಂಡುಬಂದಿತು.

ಕಡಲಕಾಯಿ ಪರಿಷೆಯಲ್ಲಿ ಮೊದಲನೇ ಬಾರಿಗೆ ವಿಶೇಷ ದೀಪಾಲಂಕಾರ ಹಾಗೂ ಹೂವಿನ ಅಲಂಕಾರ ಮಾಡಲಾಗಿದ್ದು, ಭಕ್ತರನ್ನು ಆಕರ್ಷಿಸುತ್ತಿದೆ. ನಾರ್ತ್ ರೋಡ್, ಕೆ.ಆರ್. ರಸ್ತೆ, ಆಶ್ರಮ ವೃತ್ತ, ಡಿವಿಜಿ ರಸ್ತೆ, ಗಾಂಧಿ ಬಜಾರ್ ಮುಖ್ಯರಸ್ತೆ, ನೆಟ್ಟಕಲ್ಲಪ್ಪ ಸರ್ಕಲ್ ರಸ್ತೆ, ಎನ್.ಆರ್. ಕಾಲೊನಿ ರಸ್ತೆಯಲ್ಲಿನ ದೀಪಾಲಂಕಾರ ವಿವಿಧ ವಯೋಮಾನದವರನ್ನೂ ಸೆಳೆಯಿತು.

ಪರಿಷೆಯಲ್ಲಿ ಈ ಬಾರಿ 4,500ಕ್ಕೂ ಮಳಿಗೆಗಳಿದ್ದು, ಪ್ರತಿದಿನವೂ ಬಿಬಿಎಂಪಿ ವತಿಯಿಂದ ಸ್ವಚ್ಛತೆ ಕಾರ್ಯ ನಡೆಯುತ್ತಿದೆ. ಬೆಂಗಳೂರು ನಗರದ ನಿವಾಸಿಗಳಲ್ಲದೆ, ಬೆಂಗಳೂರು ದಕ್ಷಿಣ, ಬೆಂಗಳೂರು ಗ್ರಾಮಾಂತರ ಜಿಲ್ಲೆಯಿಂದ ಜನರು ಹೆಚ್ಚಾಗಿ ಬರುತ್ತಿದ್ದಾರೆ.

ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ಪ್ರತಿದಿನವೂ ಬಸವನಗುಡಿ ಪ್ರದೇಶಕ್ಕೆ ಭೇಟಿ ನೀಡಿ, ವ್ಯವಸ್ಥೆಗಳ ಮೇಲೆ ನಿಗಾವಹಿಸುತ್ತಿದ್ದಾರೆ. ಪರಿಷೆ ನಡೆಯುತ್ತಿರುವ ರಸ್ತೆಯ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಭದ್ರತೆಗೆ ಆದ್ಯತೆ ನೀಡಿದ್ದು, ಸಿ.ಸಿ.ಟಿ.ವಿ ಕ್ಯಾಮೆರಾಗಳನ್ನು ಅಳವಡಿಸಲಾಗಿದೆ. 800ಕ್ಕೂ ಹೆಚ್ಚು ಪೊಲೀಸರನ್ನು ನಿಯೋಜಿಸಲಾಗಿದೆ.

ರಸ್ತೆಯ ಎರಡೂ ಬದಿಯ ಜೊತೆಗೆ ಮಧ್ಯಭಾಗದಲ್ಲೂ ಕಡಲೆಕಾಯಿಯನ್ನು ರಾಶಿರಾಶಿ ಹಾಕಿಕೊಂಡು ಮಾರಾಟ ಮಾಡಲಾಗುತ್ತಿದೆ. ಹಸಿ, ಒಣ, ಬೇಯಿಸಿದ, ಹುರಿದ ಕಡಲೆಕಾಯಿ ಸೇರು ಲೆಕ್ಕಾಚಾರದಲ್ಲಿ ₹30ರಿಂದ ₹80ರವರೆಗೂ ದರ ನಿಗದಿಯಾಗಿತ್ತು. ನಾಲ್ಕಾರು ಬಗೆಯ ಕಡಲೆಕಾಯಿಯ ಆಕರ್ಷಣೆಯ ಜತೆಗೆ ಬೇಲ್, ಬಜ್ಜಿ, ಮಸಾಲ ಹಪ್ಪಳ, ಆಲೂ ಟ್ವಿಸ್ಟರ್ ಸೇರಿದಂತೆ ವಿವಿಧ ಭಕ್ಷ್ಯಗಳು, ಆಟಿಕೆ ಆಕರ್ಷಿಸುತ್ತಿವೆ. ಜಗಮಗಿಸುವ ಬೆಳಕಿನಲ್ಲಿ ಆಟದ ಮೋಜು ಕೂಡಾ ಇದೆ.

ಪ್ಲಾಸ್ಟಿಕ್ ಮುಕ್ತ: 'ಕಡಲೆಕಾಯಿ ಖರೀದಿಗೆ ಪ್ಲಾಸ್ಟಿಕ್ ಚೀಲ ಕೊಡುವುದಿಲ್ಲ' ಎಂದು ಮಾರಾಟಗಾರರು ಕಟ್ಟುನಿಟ್ಟಾಗಿ ಹೇಳುತ್ತಿದ್ದರೂ, ಅಕ್ಕಪಕ್ಕದಲ್ಲಿ ಬಟ್ಟೆ ಚೀಲಗಳನ್ನೂ ಮಾರಾಟ ಮಾಡಲಾಗುತ್ತಿತ್ತು. 'ಪ್ಲಾಸ್ಟಿಕ್ ಮುಕ್ತ ಕಡಲೆಕಾಯಿ ಪರಿಷೆ' ಎಂಬ ಫಲಕಗಳೂ ಇದ್ದವು. ಕಡಲೆಕಾಯಿ ಖರೀದಿಸಿ ಕೊಂಡೊಯ್ಯಲು ಹಲವು ಮಂದಿ ಬಟ್ಟೆಯ ಚೀಲಗಳನ್ನು ತಂದಿದ್ದರು.

ಕೋಟಿಗೂ ಹೆಚ್ಚು ವಹಿವಾಟು

ಬಸವನಗುಡಿಯ ಪರಿಷೆಯಲ್ಲಿ ಕಡಲೆಕಾಯಿ ಮಾರಾಟದ ವಹಿವಾಟು ಒಂದು ಕೋಟಿಗೂ ಹೆಚ್ಚಾಗಿದೆ ಎನ್ನಲಾಗಿದೆ. ಕಳೆದ ವರ್ಷಕ್ಕಿಂತ ದುಪ್ಪಟ್ಟು ಪ್ರಮಾಣದಲ್ಲಿ ಮಳಿಗೆಗಳಿದ್ದು, ವ್ಯಾಪಾರವೂ ಚೆನ್ನಾಗಿ ಆಗಿದೆ. ಮಳಿಗೆಗೆ ಶುಲ್ಕ ಇಲ್ಲದ್ದರಿಂದ, ಶುಕ್ರವಾರದಿಂದಲೇ ಸಾಕಷ್ಟು ಮಂದಿ ಮಳಿಗೆ ಪ್ರಾರಂಭಿಸಿದ್ದರು.

ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು, ರಾಮನಗರ ಜಿಲ್ಲೆ ಸೇರಿದಂತೆ ತಮಿಳುನಾಡು, ಆಂಧ್ರಪ್ರದೇಶದಿಂದ ಕಡಲೆಕಾಯಿ ತಂದು ಇಲ್ಲಿ ಮಾರಾಟ ಮಾಡಲಾಗುತ್ತಿದೆ. ನೇರವಾಗಿ ರೈತರೇ ಮಾರಾಟ ಮಾಡುತ್ತಿರುವುದು ಹೆಚ್ಚಾಗಿ ಕಂಡುಬರಲಿಲ್ಲ.

'ಒಂದು ಕೋಟಿಗೂ ಹೆಚ್ಚು ರೂಪಾಯಿಗಳ ವಹಿವಾಟು ಪರಿಷೆಯಲ್ಲಿ ನಡೆದಿದೆ' ಎಂದು ವ್ಯಾಪಾರಿ ಮೋಹನ್, ಚಂದ್ರು ಹೇಳಿದರು. ಬಿಲ್ ಅಥವಾ ಲೆಕ್ಕಾಚಾರದ ವ್ಯಾಪಾರವಲ್ಲದ್ದರಿಂದ ಇಷ್ಟೇ ವಹಿವಾಟು ನಡೆದಿದೆ ಎಂದು ನಿಖರವಾಗಿ ಹೇಳಲು ಸಾಧ್ಯವಿಲ್ಲ ಎಂದರು.

ಪರಿಷೆಯಲ್ಲಿ ಖರೀದಿ ನಡೆಸಿದ ಜನರು

ಸುದ್ದಿ 2 ನಿಮಿಷ

ನನ್ನ ಕೋಟಾ ಬೇರೆ, ಮಗಳ ಕೋಟಾ ಬೇರೆ: ಮುನಿಯಪ್ಪ

ನವದೆಹಲಿ: ಸಚಿವ ಸಂಪುಟ ಪುನರ್ ರಚನೆ ಸಂದರ್ಭದಲ್ಲಿ ನನ್ನ ಕೋಟಾ ಬೇರೆ, ಮಗಳ (ಕೆಜಿಎಫ್ ಶಾಸಕಿ ರೂಪಕಲಾ ಶಶಿಧರ್) ಕೋಟಾ ಬೇರೆ ಎಂದು ಆಹಾರ ಸಚಿವ ಕೆ.ಎಚ್.ಮುನಿಯಪ್ಪ ತಿಳಿಸಿದರು.

ಬುಧವಾರ ಇಲ್ಲಿ ಸುದ್ದಿಗಾರರ ಜತೆಗೆ ಮಾತನಾಡಿದ ಅವರು, 'ನಾನು ಪಕ್ಷದ ಹಿರಿಯ ನಾಯಕ. ಅಲ್ಲದೇ, ನನ್ನ ಜಿಲ್ಲೆ ಬೇರೆ. ರೂಪಾ ಬೇರೆ ಜಿಲ್ಲೆ ಪ್ರತಿನಿಧಿಸುತ್ತಿದ್ದಾರೆ. ಅವರನ್ನು ನನ್ನ ಜತೆಗೆ ಹೋಲಿಕೆ ಮಾಡಬೇಡಿ. ನನ್ನ ಹಾಗೆ ಪಕ್ಷದಲ್ಲಿ ಹಲವು ಹಿರಿಯ ನಾಯಕರು ಇದ್ದಾರೆ' ಎಂದು ಮಾರ್ಮಿಕವಾಗಿ ಹೇಳಿದರು.

'ರಾಜ್ಯದಲ್ಲಿ ದಲಿತ ಮುಖ್ಯಮಂತ್ರಿ ಆಗಬೇಕು ಎಂಬುದು ನಮ್ಮ ಬೇಡಿಕೆ ಇದೆ. ಈ ವಿಷಯವನ್ನು ಹೈಕಮಾಂಡ್ ತೀರ್ಮಾನಕ್ಕೆ ಬಿಟ್ಟಿದ್ದೇವೆ. ಎಐಸಿಸಿ ಮಲ್ಲಿಕಾರ್ಜುನ ಖರ್ಗೆ ಅವರು ಮುಖ್ಯಮಂತ್ರಿ ಆಗಬೇಕಿತ್ತು. ಆದರೆ, ಸಂದರ್ಭ ಬರಲಿಲ್ಲ' ಎಂದರು.

'ಖರ್ಗೆ ಅವರನ್ನು ಭೇಟಿ ಮಾಡಿ ರಾಜ್ಯದ ರಾಜಕೀಯ ವಿದ್ಯಮಾನಗಳ ಬಗ್ಗೆ ಚರ್ಚಿಸಿದ್ದೇನೆ. ಯಾರಿಗೆ ಏನೇ ಮಾತು ಕೊಟ್ಟಿದ್ದರೂ ಬೇಗನೇ ತೀರ್ಮಾನ ಮಾಡಿ ಎಂದು ಹೇಳಿದ್ದೇನೆ. ಪ್ರತಿದಿನ ಮುಖ್ಯಮಂತ್ರಿ ಬದಲಾವಣೆ ಎಂಬ ಸುದ್ದಿ ಬರುತ್ತಾ ಇರಬಾರದು. ಇಂತಹ ಗೊಂದಲಗಳಿಂದ ಅಭಿವೃದ್ಧಿ ಕೆಲಸಗಳಿಗೆ ಅಡ್ಡಿ ಆಗಲಿದೆ' ಎಂದು ಅವರು ಹೇಳಿದರು.

'ವಿದ್ಯಾ' ದಕ್ಷಿಣ ವಲಯ'ದ 15ನೇ ವಾರ್ಷಿಕೋತ್ಸವ 23ಕ್ಕೆ

ಬೆಂಗಳೂರು: 'ಸಮಗ್ರ ಕೌಶಲ ಅಭಿವೃದ್ಧಿ ತರಬೇತಿ ನೀಡುತ್ತಿರುವ 'ವಿದ್ಯಾ' ದಕ್ಷಿಣ ವಲಯದ 15ನೇ ವಾರ್ಷಿಕೋತ್ಸವ ಸಮಾರಂಭವು ಜೆ.ಸಿ. ರಸ್ತೆಯಲ್ಲಿರುವ ಟೌನ್‌ಹಾಲ್‌ನಲ್ಲಿ ನ.23ರ ಸಂಜೆ 4.30ಕ್ಕೆ ನಡೆಯಲಿದೆ' ಎಂದು ವಿದ್ಯಾ ಎನ್‌ಜಿಒನ ಸಂಸ್ಥಾಪಕಿ ರಶ್ಮಿ ಮಿಶ್ರಾ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾಡಿದ ಅವರು, 'ವಿದ್ಯಾ ದಕ್ಷಿಣ ವಲಯವು ಬೆಂಗಳೂರಿನಲ್ಲಿ ಎರಡು ಹಾಗೂ ಚೆನ್ನೈನಲ್ಲಿ ಒಂದು ಕೇಂದ್ರ ಹೊಂದಿದೆ. ಇದುವರೆಗೆ 146 ಯೋಜನೆಗಳನ್ನು ಜಾರಿಗೊಳಿಸಿದೆ' ಎಂದು ಹೇಳಿದರು.

'ವಿದ್ಯಾ ಒಂದು ಸರ್ಕಾರೇತರ ಸಂಸ್ಥೆಯಾಗಿದ್ದು, ಮಕ್ಕಳಿಗೆ ಗುಣಮಟ್ಟದ ಶಿಕ್ಷಣ, ಯುವಜನರು ಹಾಗೂ ಮಹಿಳೆಯರ ಸಮಗ್ರ ಅಭಿವೃದ್ಧಿಗೆ ಅಗತ್ಯವಿರುವ ಕೌಶಲ ಅಭಿವೃದ್ಧಿ ತರಬೇತಿಗಳನ್ನು ನೀಡುತ್ತದೆ. ಶಿಕ್ಷಣ, ಕೌಶಲ ಅಭಿವೃದ್ಧಿ ತರಬೇತಿಗೆ ಸಂಬಂಧಿಸಿದ 300ಕ್ಕೂ ಹೆಚ್ಚು ಯೋಜನೆಗಳು 8 ಲಕ್ಷಕ್ಕೂ ಹೆಚ್ಚು ಜನರನ್ನು ನೇರವಾಗಿ ತಲುಪಿದೆ' ಎಂದು ಮಾಹಿತಿ ನೀಡಿದರು.

'ವಿದ್ಯಾ ಸಂಸ್ಥೆಯ ದೆಹಲಿಯ ಗುರುಗ್ರಾಮ, ಹಿಮಾಚಲ ಪ್ರದೇಶದ ದಾದ್, ಲಖನೌ, ವಾರಾಣಸಿ, ಮುಂಬೈ, ಪುಣೆ, ಗೋವಾ, ಬೆಂಗಳೂರು, ಶಿವಮೊಗ್ಗ, ಮಡಿಕೇರಿ, ಭಟ್ಕಳ, ಮುರ್ಡೇಶ್ವರ ಮತ್ತು ಚೆನ್ನೈನಲ್ಲಿನ ಸರ್ಕಾರಿ ಶಾಲೆಗಳು ಹಾಗೂ ಸರ್ಕಾರಿ ಸಂಸ್ಥೆಗಳ ಪಾಲುದಾರಿಕೆಯಲ್ಲಿ ಡಿಜಿಟಲ್ ಸಾಕ್ಷರತೆ, ವೃತ್ತಿಪರ ತರಬೇತಿ ಮತ್ತು ಸಮುದಾಯ ಅಭಿವೃದ್ಧಿ ಕೆಲಸಗಳನ್ನು ಮಾಡುತ್ತಿದೆ' ಎಂದು ತಿಳಿಸಿದರು.

'ವಿದ್ಯಾ ದಕ್ಷಿಣ ವಲಯದ ವಾರ್ಷಿಕೋತ್ಸದಲ್ಲಿ ಕರ್ನಾಟಕ ಡಿಜಿಟಲ್ ಆರ್ಥಿಕ ಮಿಷನ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸಂಜೀವ್ ಕುಮಾರ್ ಗುಪ್ತಾ ಅವರು ಸಮಾರಂಭದ ಅತಿಥಿಯಾಗಿ ಭಾಗವಹಿಸಲಿದ್ದಾರೆ' ಎಂದರು.

ಸಾಂಸ್ಕೃತಿಕ ಮುನ್ನೋಟ

'ಪುಕ್ಕಟೆ ಸಲಹೆ' ನಾಟಕ ಪ್ರದರ್ಶನ

ಪುಕ್ಕಟೆ ಸಲಹೆ ನಾಟಕದ ದೃಶ್ಯ

ಬೆಂಗಳೂರು: ವಿಶ್ವ ಕಲಾ ಸಂಗಮದಿಂದ ಇದೇ 21ರಂದು ಸಂಜೆ 7ಕ್ಕೆ ಮಲ್ಲತ್ತಹಳ್ಳಿಯ ಕಲಾಗ್ರಾಮದಲ್ಲಿ 'ಪುಕ್ಕಟೆ ಸಲಹೆ' ನಾಟಕ ಪ್ರದರ್ಶನವಾಗಲಿದೆ.

ಈ ನಾಟಕವನ್ನು ಎಚ್. ಡುಂಡಿರಾಜ್ ಅವರು ರಚಿಸಿದ್ದು, ಬಿ. ಅಶೋಕ ಅವರು ನಿರ್ದೇಶನ ಮಾಡಿದ್ದಾರೆ. ಪುಕ್ಕಟೆ ಸಲಹೆ ಹಾಸ್ಯನಾಟಕದಲ್ಲಿ ನಿತ್ಯ ಟಿ.ವಿಗಳಲ್ಲಿ ವಿಜೃಂಭಿಸುವ ಜ್ಯೋತಿಷಿಗಳ ಹಾವಳಿಯನ್ನು, ಅವರ ನಿಜಬಣ್ಣ, ಅವಾಂತರಗಳನ್ನು ಹಾಸ್ಯದ ಮೂಲಕ ಪ್ರಸ್ತುತಪಡಿಸಲಾಗಿದೆ.

ಮಾಹಿತಿಗೆ: 9945977184

ಆಕಾಶವಾಣಿ ಸಂಗೀತ ಸಮ್ಮೇಳನ 22ಕ್ಕೆ

ಬೆಂಗಳೂರು: ಬೆಂಗಳೂರು ಆಕಾಶವಾಣಿ ಕೇಂದ್ರದಿಂದ ಇದೇ 22ರಂದು ಸಂಜೆ 6ಕ್ಕೆ ಇಂದಿರಾನಗರದ ಸಂಗೀತ ಸಭಾ ಆವರಣದ ಪುರಂದರ ಭವನದಲ್ಲಿ ಆಕಾಶವಾಣಿ ಸಂಗೀತ ಸಮ್ಮೇಳನ ಆಯೋಜಿಸಲಾಗಿದೆ.

ದೇಶದಾದ್ಯಂತ ಒಂದೇ ಸಮಯದಲ್ಲಿ ನಡೆಯುವ ವಿಶಿಷ್ಟ ಸಮ್ಮೇಳನವಾಗಿದ್ದು, ಇದರಲ್ಲಿ ಬೆಂಗಳೂರು ಸಹೋದರರಾದ ಎಂ.ಬಿ. ಹರಿಹರನ್ ಮತ್ತು ಎಸ್. ಅಶೋಕ್ ಅವರ ಸಂಗೀತ ಕಛೇರಿ ನಡೆಯಲಿದೆ. ಲಕ್ಷ್ಮೀ ನಾಗರಾಜ್ ಮತ್ತು ತಂಡದಿಂದ ಲಘು ಸಂಗೀತ ಕಾರ್ಯಕ್ರಮವೂ ಹಮ್ಮಿಕೊಳ್ಳಲಾಗಿದೆ. ಸಂಸದ ಡಾ.ಸಿ. ಎನ್. ಮಂಜುನಾಥ್ ಅವರು ಪಾಲ್ಗೊಳ್ಳಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಬೆಂಗಳೂರು ಸಹೋದರರಾದ ಎಂ.ಬಿ.ಹರಿಹರನ್ ಮತ್ತು ಎಸ್.ಅಶೋಕ್

23ಕ್ಕೆ 'ಮತ್ತೆ ಮುಖ್ಯಮಂತ್ರಿ' ನಾಟಕ ಪ್ರದರ್ಶನ



'ಮತ್ತೆ ಮುಖ್ಯಮಂತ್ರಿ' ನಾಟಕದಲ್ಲಿ ಮುಖ್ಯಮಂತ್ರಿ ಚಂದ್ರು

ಬೆಂಗಳೂರು: ಕಲಾ ಗಂಗೋತ್ರಿ ರಂಗ ತಂಡವು ಇದೇ 23ರಂದು ಸಂಜೆ 5.30ಕ್ಕೆ ಜೆ.ಸಿ. ರಸ್ತೆಯಲ್ಲಿರುವ ರವೀಂದ್ರ ಕಲಾಕ್ಷೇತ್ರದಲ್ಲಿ 'ಮತ್ತೆ ಮುಖ್ಯಮಂತ್ರಿ' ರಾಜಕೀಯ ವಿಶೇಷ ನಾಟಕ ಪ್ರದರ್ಶನ ಇದೆ.

ನಾಟಕವನ್ನು ಕೆ.ವೈ. ನಾರಾಯಣಸ್ವಾಮಿ ರಚಿಸಿದ್ದು, ಬಿ.ವಿ. ರಾಜಾರಾಂ ಅವರು ನಿರ್ದೇಶಿಸಿದ್ದಾರೆ. ಮುಖ್ಯ ಪಾತ್ರದಲ್ಲಿ 'ಮುಖ್ಯಮಂತ್ರಿ' ಚಂದ್ರು ಅಭಿನಯಿಸಲಿದ್ದಾರೆ. ಕಲಾ ಗಂಗೋತ್ರಿ 55ನೇ ವರ್ಷದ ಅಂಗವಾಗಿ ಮತ್ತೆ ಮುಖ್ಯಮಂತ್ರಿ ನಾಟಕ ಕೃತಿಯನ್ನು ಬಿಡುಗಡೆ ಮಾಡಲಾಗುತ್ತದೆ. ಸಚಿವ ಎಚ್.ಸಿ. ಮಹದೇವಪ್ಪ, ಮಾಜಿ ಶಾಸಕ ವೈ.ಎಸ್.ವಿ. ದತ್ತ, ರಾಜ್ಯಸಭಾ ಮಾಜಿ ಸದಸ್ಯ ಎಲ್. ಹನುಮಂತಯ್ಯ, ಸಾಹಿತಿ ಜಿ. ರಾಮಕೃಷ್ಣ ಭಾಗವಹಿಸಲಿದ್ದಾರೆ. ಸಾರ್ವಜನಿಕರಿಗೆ ಉಚಿತ ಪ್ರವೇಶವಿದೆ ಎಂದು ಆಯೋಜಕರು ತಿಳಿಸಿದ್ದಾರೆ.

ಮಾಹಿತಿಗೆ: 99723 98931, 99864 83097.

'ವಂದೇ ಮಾತರಂ' 150 ವರ್ಷಗಳ ಸಂಭ್ರಮಾಚರಣೆ

ಬೆಂಗಳೂರು: 'ವಂದೇ ಮಾತರಂ' 150 ವರ್ಷಗಳ ಸಂಭ್ರಮಾಚರಣೆಯ ಅಂಗವಾಗಿ ಶ್ರೀ ವೀಣಾವಾಣಿ ಸಂಗೀತ ಶಾಲೆಯಿಂದ ನವೆಂಬರ್ 22ರಂದು ಬೆಳಿಗ್ಗೆ 10ಕ್ಕೆ ಬನಶಂಕರಿಯ ಎರಡನೇ ಹಂತದಲ್ಲಿರುವ ಶಾಸಕರ ಕಚೇರಿಯಲ್ಲಿ ಒಂದು ಸಾವಿರ ಕಂಠ ಗಾಯನ ಸಮಾರಂಭವನ್ನು ಹಮ್ಮಿಕೊಳ್ಳಲಾಗಿದೆ.

ಈ ಸಮಾರಂಭದಲ್ಲಿ ಒಂದು ಸಾವಿರ ಮೀಟರ್‌ನ ತ್ರಿವರ್ಣ ಧ್ವಜ ಪ್ರದರ್ಶನ ಹಾಗೂ 100 ಮಂದಿಯಿಂದ ಭರತನಾಟ್ಯ ಪ್ರದರ್ಶನ ಹಾಗೂ 100 ಜನ ಸಂಗೀತ ವಾದ್ಯಗಳನ್ನು ನುಡಿಸಲಿದ್ದಾರೆ. ಗಾಯಕ ವಿಜಯ್ ಪ್ರಕಾಶ್ ಅವರು ಸಮಾರಂಭ ಉದ್ಘಾಟಿಸಲಿದ್ದು, ವಿರೋಧ ಪಕ್ಷದ ನಾಯಕ ಆರ್. ಅಶೋಕ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಶಾಲೆಯ ನಿರ್ದೇಶಕ ಬಾದಮ್ ಗಿರೀಶ್ ಕುಮಾರ್ ತಿಳಿಸಿದ್ದಾರೆ.

ಪ್ರತಿ ಗುರುವಾರ ಪ್ರಕಟವಾಗುವ 'ಸಾಂಸ್ಕೃತಿಕ ಮುನ್ನೋಟ' ಅಂಕಣದಲ್ಲಿ ಪ್ರಕಟಿಸಲು ಸಾಹಿತ್ಯ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಸಂಬಂಧಿಸಿದ ವಿವರಗಳನ್ನು ಈ ಕೆಳಗಿನ ಇ-ಮೇಲ್‌ಗೆ nagaradalli_indu@prajavani.co.in (ಬುಧವಾರ ಸಂಜೆ 6 ಗಂಟೆ ಒಳಗೆ) ಕಳುಹಿಸಿ

'ಫೆಬ್ರುವರಿಯಿಂದ ಇಂದಿರಾ ಕಿಟ್'

ನವದೆಹಲಿ: 'ಅನ್ನಭಾಗ್ಯ ಯೋಜನೆಯಡಿ ಹೆಚ್ಚುವರಿಯಾಗಿ ನೀಡುತ್ತಿರುವ ಐದು ಕಿಲೋ ಅಕ್ಕಿಯ ಬದಲು ಪ್ರತಿ ಪಡಿತರ ಚೀಟಿಗೆ 'ಇಂದಿರಾ' ಆಹಾರ ಕಿಟ್ ವಿತರಣೆ ಯೋಜನೆಯನ್ನು ಜನವರಿ ಅಥವಾ ಫೆಬ್ರುವರಿಯಿಂದ ಜಾರಿಗೊಳಿಸಲು ತಯಾರಿ ಮಾಡಿಕೊಂಡಿದ್ದೇವೆ' ಎಂದು ಆಹಾರ ಸಚಿವ ಕೆ.ಎಚ್.ಮುನಿಯಪ್ಪ ತಿಳಿಸಿದರು.

ಕೇಂದ್ರ ಆಹಾರ ಸಚಿವ ಪ್ರಲ್ಹಾದ ಜೋಶಿ ಅವರನ್ನು ಬುಧವಾರ ಭೇಟಿ ಮಾಡಿದ ಬಳಿಕ ಸುದ್ದಿಗಾರರ ಜತೆಗೆ ಮಾತನಾಡಿದ ಅವರು, 'ಎಂಎಸ್‌ಪಿಯಲ್ಲಿ ಆರು ಲಕ್ಷ ಟನ್ ರಾಗಿ ಖರೀದಿ ಮಾಡಲಾಗಿದೆ. ಕೇಂದ್ರ ಸರ್ಕಾರದ ನಿರ್ದೇಶನದ ಪ್ರಕಾರ ಈ ಖರೀದಿ ಪ್ರಕ್ರಿಯೆ ನಡೆಸಲಾಗಿತ್ತು' ಎಂದರು.

'ರಸ್ತೆ ಕತ್ತರಿಸುವವರಿಗೆ ದಂಡ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಿಬಿಎ ವ್ಯಾಪ್ತಿಯಲ್ಲಿ ಅನಧಿಕೃತವಾಗಿ ರಸ್ತೆ ಕತ್ತರಿಸುವವರಿಗೆ ದಂಡ ವಿಧಿಸಬೇಕು ಎಂದು ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಐದು ನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ ನಡೆದ ಸಭೆಯಲ್ಲಿ ಮಾತನಾಡಿದ ಅವರು, ರಸ್ತೆ ಕತ್ತರಿಸುವಿಕೆಗೆ ಮಾರ್ಕ್ಸ್ ತಂತ್ರಾಂಶದ ಮೂಲಕ ಬಂದಿರುವ ಅರ್ಜಿಗಳನ್ನು ಪರಿಶೀಲಿಸಿ, ನಿಯಮಾನುಸಾರ ಏಕ ಗವಾಕ್ಷಿ ಪದ್ಧತಿಯಲ್ಲಿ ಅನುಮತಿ ನೀಡಬೇಕು ಎಂದರು.

ಆಯಾ ನಗರ ಪಾಲಿಕೆಗಳಲ್ಲಿ ಅನಧಿಕೃತವಾಗಿ ರಸ್ತೆ ಕತ್ತರಿಸುವುದು ಕಂಡುಬಂದರೆ ಅವರಿಗೆ ದಂಡ ವಿಧಿಸುವುದರ ಜೊತೆಗೆ ಶಿಸ್ತು ಕ್ರಮಕೈಗೊಳ್ಳಬೇಕು. ಅಲ್ಲದೆ, ತಮ್ಮಿಂದಲೇ ಕತ್ತರಿಸಿದ ಭಾಗವನ್ನು ದುರಸ್ತಿಪಡಿಸುವಂತೆ ನಿರ್ದೇಶಿಸಿದರು.

ಆಸ್ತಿ ತೆರಿಗೆ ಸಂಗ್ರಹಿಸಲು ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು. ಹೆಚ್ಚು ಬಾಕಿ ಉಳಿಸಿಕೊಂಡಿರುವ ಸುಸ್ತಿದಾರರು, ಪರಿಷ್ಕರಣೆ ಪ್ರಕರಣಗಳು ಮತ್ತು ನ್ಯಾಯಾಲಯಗಳಲ್ಲಿರುವ ಪ್ರಕರಣಗಳನ್ನು ಇತ್ಯರ್ಥಪಡಿಸಿ ತೆರಿಗೆ ಸಂಗ್ರಹಣೆ ಹೆಚ್ಚಿಸಲು ಸೂಚಿಸಿದರು.

ಬಿ-ಖಾತಾದಿಂದ ಎ-ಖಾತಾ ಪರಿವರ್ತನೆಗೆ ಬಂದಿರುವ ಅರ್ಜಿಗಳನ್ನು ಪಾಲಿಕೆವಾರು ಪರಿಶೀಲಿಸಿ, ನಿಯಮಾನುಸಾರ ಇತ್ಯರ್ಥಪಡಿಸಬೇಕು. ಜೊತೆಗೆ ಇ-ಖಾತಾ ಪಡೆಯಲು ಬಂದಿರುವ ಅರ್ಜಿಗಳನ್ನು ಕಾಲಮಿತಿಯೊಳಗಾಗಿ ವಿಲೇವಾರಿ ಮಾಡಲು ಹೇಳಿದರು.

ಟೋಯಿಂಗ್ ವಾಹನ: ನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ಅನುಪಯುಕ್ತ ವಾಹನಗಳನ್ನು ಟೋಯಿಂಗ್ ಮಾಡಲು ತಕ್ಷಣ ಟೆಂಡರ್ ಕರೆದು ಯಂತ್ರಗಳನ್ನು ಖರೀದಿಸಬೇಕು. ಸಂಚಾರ ಪೊಲೀಸರೊಂದಿಗೆ ಸಮನ್ವಯ ಸಾಧಿಸಿ, ಟೋಯಿಂಗ್ ಮಾಡುವ ವಾಹನಗಳಿಗಾಗಿ ಪಾಲಿಕೆವಾರು ನಿರ್ದಿಷ್ಟ ಸ್ಥಳ ಗುರುತಿಸಬೇಕು' ಎಂದು ಮಹೇಶ್ವರ್ ರಾವ್ ತಿಳಿಸಿದರು.

'ವೈಟ್ ಟಾಪಿಂಗ್‌ಗೆ ವೇಗ ನೀಡಿ'

ನಗರದ 220.68 ಕಿ.ಮೀ ಉದ್ದದ 140 ರಸ್ತೆಗಳಲ್ಲಿ 17 ಪ್ಯಾಕೇಜ್ ಅಡಿಯಲ್ಲಿ ವೈಟ್ ಟಾಪಿಂಗ್ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ. ಇದರಲ್ಲಿ 79.08 ಕಿ.ಮೀ ಉದ್ದದ 39 ರಸ್ತೆಗಳ ಕೆಲಸ ಪೂರ್ಣಗೊಂಡಿದೆ. 141.59 ಕಿ.ಮೀ ಉದ್ದದ 101 ರಸ್ತೆಗಳಲ್ಲಿ ಕಾಮಗಾರಿ ಪ್ರಗತಿಯಲ್ಲಿದ್ದು, ಇನ್ನೂ ಪ್ರಾರಂಭವಾಗದ ರಸ್ತೆಗಳಲ್ಲಿ ಕೂಡಲೇ ಕಾರ್ಯ ಆರಂಭಿಸುವ ಸಲುವಾಗಿ ವಿವಿಧ ಇಲಾಖೆಗಳ ಜೊತೆ ಸಮನ್ವಯ ಸಾಧಿಸಿ ಕೆಲಸ ಮಾಡಲು ಮಹೇಶ್ವರ್ ರಾವ್ ಸೂಚಿಸಿದರು.

ನಗರ ಪಾಲಿಕೆಗಳು ಹಾಗೂ ಜಲ ಮಂಡಳಿಯೊಂದಿಗೆ ಸಮನ್ವಯ ಸಭೆಗಳನ್ನು ನಡೆಸಿ ಸಮಸ್ಯೆಗಳನ್ನು ಇತ್ಯರ್ಥಪಡಿಸಬೇಕು. ಜಲ ಮಂಡಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಸಂಬಂಧಿಸಿದ ಅಧಿಕಾರಿಗಳ ಮೂಲಕ ಬಗೆಹರಿಸುವಂತೆ ಸೂಚಿಸಿದರು.

ಬ್ಯಾನರ್ ರಾಜಕೀಯಕ್ಕೆ ಅಧಿಕಾರಿಗಳ ಬಲಿ..!

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿಷೇಧಿತ ಪ್ರದೇಶದಲ್ಲಿ ಹಾಕಲಾಗಿದ್ದ ಬ್ಯಾನರ್ ತೆಗೆಸಿ ಹಾಕಿದ ಮಹಾನಗರ ಪಾಲಿಕೆ ಅಧಿಕಾರಿಯನ್ನು ಅಮಾನತುಗೊಳಿಸಿರುವ ರಾಜ್ಯ ಸರ್ಕಾರದ ಕ್ರಮಕ್ಕೆ ತಡೆ ನೀಡಿರುವ ಹೈಕೋರ್ಟ್, 'ಸರ್ಕಾರದ ಈ ನಡೆ ಸಕ್ಷಮ ಪ್ರಾಧಿಕಾರವೊಂದರ ಅಧಿಕಾರ ದುರುಪಯೋಗಕ್ಕೆ ಹಿಡಿದ ಕೈಗನ್ನಡಿ' ಎಂದು ಚಾಟಿ ಬೀಸಿದೆ.

'ನನ್ನನ್ನು ಅಮಾನತುಗೊಳಿಸಿ ನಗರಾಭಿವೃದ್ಧಿ ಇಲಾಖೆ ಕಾರ್ಯದರ್ಶಿ ಅಕ್ಟೋಬರ್ 9ರಂದು ಹೊರಡಿಸಿರುವ ಆದೇಶವನ್ನು ರದ್ದುಗೊಳಿಸಬೇಕು' ಎಂದು ಕೋರಿ ಬಳ್ಳಾರಿ ಮಹಾನಗರ ಪಾಲಿಕೆಯ ಪರಿಸರ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಮುನಾಫ್ ಪಟೇಲ್ ಖಾದರ್ ಪಟೇಲ್ ರಿಟ್ ಅರ್ಜಿ ಸಲ್ಲಿಸಿದ್ದರು. ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ (ಧಾರವಾಡ) ಈ ಕುರಿತಂತೆ ಮಧ್ಯಂತರ ತಡೆ ಆದೇಶ ನೀಡಿದೆ.

'ಸರ್ಕಾರಿ ಅಧಿಕಾರಿಗಳ ಅಮಾನತು ಆದೇಶಗಳನ್ನು ನಿರ್ದೇಶಿಸುವವರು ರಾಜಕೀಯ ಯಜಮಾನರೇ ಆಗಿರುತ್ತಾರೆ. ಹೀಗಾಗಿ, ಇಂತಹ ಅಮಾನತು ಆದೇಶಗಳ ಹಿಂದೆ ವೈಯಕ್ತಿಕ ಹಿತಾಸಕ್ತಿಗಳು ಅಡಗಿರುತ್ತವೆ. ಈ ಪ್ರಕರಣದಲ್ಲಿ ಅರ್ಜಿದಾರರನ್ನು ಅಮಾನತುಗೊಳಿಸಿರುವುದು



ಮೇಲ್ನೋಟಕ್ಕೆ ದುರುದ್ದೇಶಪೂರಿತ ಮತ್ತು ಅಧಿಕಾರ ದುರುಪಯೋಗದಿಂದ ಕೂಡಿದೆ' ಎಂದು ಅತೃಪ್ತಿ ವ್ಯಕ್ತಪಡಿಸಿದೆ.

'ಪಾಲಿಕೆಯೇ ಕೈಗೊಂಡಿದ್ದ ಠರಾವಿನ ಅನುಸಾರ ಬಳ್ಳಾರಿಯ ಸಂಗಮ ವೃತ್ತದಲ್ಲಿ ಬ್ಯಾನರ್, ಕಟೌಟ್ ಅಥವಾ ಯಾವುದೇ ರೀತಿಯ ಜಾಹೀರಾತು ಪ್ರದರ್ಶಿಸುವುದನ್ನು ಸ್ಪಷ್ಟವಾಗಿ ನಿಷೇಧಿಸಲಾಗಿದೆ ಮತ್ತು ಅಂತಹ ಪ್ರದರ್ಶನಗಳು ಕರ್ನಾಟಕ ಮುಕ್ತ ಸ್ಥಳಗಳ ವಿರೂಪಗೊಳಿಸುವಿಕೆ ತಡೆಗಟ್ಟುವಿಕೆ ಕಾಯ್ದೆ-1981ರ ಉಲ್ಲಂಘನೆಯಾಗುತ್ತದೆ ಎಂದೂ ವಿವರಿಸಲಾಗಿದೆ. ಹೀಗಾಗಿಯೇ, ಅರ್ಜಿದಾರ ಮುನಾಫ್ ಪಟೇಲ್ ನಿಷ್ಪಕ್ಷಪಾತವಾಗಿ ತಮ್ಮ ಅಧಿಕಾರ ಚಲಾಯಿಸಿ ಸಂಗಮ ವೃತ್ತದಲ್ಲಿ ಅಳವಡಿಸಿದ್ದ ಬ್ಯಾನರ್‌ಗಳನ್ನು ತೆಗೆದುಹಾಕಿದ್ದಾರೆ' ಎಂದು ನ್ಯಾಯಪೀಠ ವಿವರಿಸಿದೆ.

'ಅಳವಡಿಸಲಾಗಿದ್ದ ಬ್ಯಾನರ್ ಕಾರ್ಪೊರೇಟರ್ ಒಬ್ಬರ ಪತಿಯದ್ದಾಗಿತ್ತು ಎಂಬ ಕಾರಣಕ್ಕಾಗಿ ಅರ್ಜಿದಾರರಿಗೆ ಅಮಾನತು ಶಿಕ್ಷೆ ವಿಧಿಸಿರುವುದು ಆಘಾತಕಾರಿ. ತಮ್ಮ ಕರ್ತವ್ಯ ನಿರ್ವಹಿಸಿದ ಅರ್ಜಿದಾರರು ರಾಜಕೀಯ ಕಾರಣಗಳಿಗಾಗಿ ಅಮಾನತಿಗೆ ಗುರಿಯಾಗಿದ್ದಾರೆ. ಪಾಲಿಕೆಯ ಠರಾವಿಗೆ ಸಹಿ ಹಾಕಿದ್ದ ಆಯುಕ್ತರೇ ಅರ್ಜಿದಾರರನ್ನು ಅಮಾನತುಗೊಳಿಸಬೇಕು ಎಂದು ಶಿಫಾರಸು ಮಾಡಿದ್ದು, ಇದರ ಅನುಸಾರ ನಗರಾಭಿವೃದ್ಧಿ ಇಲಾಖೆ ಕಾರ್ಯದರ್ಶಿ ಅಮಾನತು ಆದೇಶವನ್ನು ಹೊರಡಿಸಿರುವುದು ಚೋದ್ಯದ ಸಂಗತಿ' ಎಂದು ನ್ಯಾಯಪೀಠ ಕಿಡಿ ಕಾರಿದೆ.

ಪ್ರತಿವಾದಿಗಳಾದ ರಾಜ್ಯ ನಗರಾಭಿವೃದ್ಧಿ ಇಲಾಖೆ, ಬಳ್ಳಾರಿ ಜಿಲ್ಲಾಧಿಕಾರಿ ಹಾಗೂ ಬಳ್ಳಾರಿ ಮಹಾನಗರ ಪಾಲಿಕೆ ಆಯುಕ್ತರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದ್ದು ಆಕ್ಷೇಪಣೆ ಸಲ್ಲಿಸುವಂತೆ ಸೂಚಿಸಿರುವ ನ್ಯಾಯಪೀಠ, ವಿಚಾರಣೆಯನ್ನು ಡಿಸೆಂಬರ್ 2ಕ್ಕೆ ಮುಂದೂಡಿದೆ.

ಎಂಬಿಬಿಎಸ್ ಸೀಟು ಹೆಚ್ಚಳ: ವಿವರ ಕೇಳಿದ ಹೈಕೋರ್ಟ್

ಬೆಂಗಳೂರು: '2025-26ನೇ ಸಾಲಿನ ಶೈಕ್ಷಣಿಕ ವರ್ಷಕ್ಕೆ ವೈದ್ಯಕೀಯ ಸೀಟುಗಳ ಹಂಚಿಕೆಗಾಗಿ ಕೌನ್ಸೆಲಿಂಗ್ ಆರಂಭವಾದ ನಂತರ ಕರ್ನಾಟಕದ ವೈದ್ಯಕೀಯ ಕಾಲೇಜುಗಳಿಗೆ ಹಾಗೂ ಇಡೀ ದೇಶದಲ್ಲಿರುವ ವೈದ್ಯಕೀಯ ಕಾಲೇಜುಗಳಿಗೆ ಎಷ್ಟು ಸಂಖ್ಯೆಯ ಎಂಬಿಬಿಎಸ್ ಸೀಟುಗಳ ಹೆಚ್ಚಳ ಮಾಡಲಾಗಿದೆ ಎಂಬ ಬಗೆಗಿನ ವಿವರಗಳನ್ನು ಒದಗಿಸಿ' ಎಂದು ಹೈಕೋರ್ಟ್, ರಾಷ್ಟ್ರೀಯ ವೈದ್ಯಕೀಯ ಆಯೋಗಕ್ಕೆ (ಎನ್‌ಎಂಸಿ)ಗೆ ನಿರ್ದೇಶಿಸಿದೆ.

ಎಂಬಿಬಿಎಸ್ ಮತ್ತು ಬಿಡಿಎಸ್ ಕೋರ್ಸ್‌ಗಳಲ್ಲಿ ಖಾಲಿ ಇರುವ ಸೀಟುಗಳನ್ನು ಭರ್ತಿ ಮಾಡುವ ಹಿನ್ನೆಲೆಯಲ್ಲಿ, ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಮೂರನೇ ಸುತ್ತಿನ ಕೌನ್ಸೆಲಿಂಗ್ ನಡೆಸುತ್ತಿರುವ ವಿಧಾನವನ್ನು ಪ್ರಶ್ನಿಸಿ ಎಂಬಿಬಿಎಸ್ ಸೀಟು ಆಕಾಂಕ್ಷಿ ವಿದ್ಯಾರ್ಥಿಗಳು ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಜಯಂತ್ ಬ್ಯಾನರ್ಜಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

ಕೆಇಎ 2025ರ ಅಕ್ಟೋಬರ್ 24ರಂದು ಮೂರನೇ ಸುತ್ತಿನ ತಾತ್ಕಾಲಿಕ ಸೀಟು ಹಂಚಿಕೆ ಪಟ್ಟಿಯನ್ನು ಪ್ರಕಟಿಸಿತ್ತು. ಆದರೆ, ನ್ಯಾಯಾಲಯದ ಮಧ್ಯಂತರ ನಿರ್ದೇಶನದ ಮೇರೆಗೆ ಸೀಟು ಹಂಚಿಕೆ ಪ್ರಕ್ರಿಯೆ ಅಕ್ಟೋಬರ್ 26ರಂದು ಆರಂಭವಾಗಿತ್ತು.

'ಕನೇರಿ ಸ್ವಾಮೀಜಿ ಪ್ರವಚನ ಮಾತ್ರ ನೀಡಲಿ'

'ಕನೇರಿ ಸ್ವಾಮೀಜಿ ಮಠಾಧೀಶರಾಗಿದ್ದು ಪ್ರವಚನ ನೀಡಬೇಕೆ ವಿನಃ ತಮ್ಮ ಮಾತುಗಳನ್ನು ರಾಜಕೀಯಗೊಳಿಸಬಾರದು' ಎಂದು ಹೈಕೋರ್ಟ್ ಕಟುವಾದ ಅಭಿಪ್ರಾಯ ವ್ಯಕ್ತಪಡಿಸಿದೆ.

2026ರ ಜನವರಿವರೆಗೆ ಧಾರವಾಡ ಪ್ರವೇಶ ನಿರ್ಬಂಧಿಸಿ ಜಿಲ್ಲಾಧಿಕಾರಿ ಹೊರಡಿಸಿರುವ ಆದೇಶ ಪ್ರಶ್ನಿಸಿ ಕನೇರಿ ಮಠದ ಅದೃಶ್ಯ ಕಾಡಸಿದ್ದೇಶ್ವರ ಸ್ವಾಮೀಜಿ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ (ಧಾರವಾಡ) ಬುಧವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಕಾಡಸಿದ್ದೇಶ್ವರ ಸ್ವಾಮೀಜಿ ಪರ ಹೈಕೋರ್ಟ್ ವಕೀಲ ವೆಂಕಟೇಶ ಪಿ.ದಳವಾಯಿ, 'ಯಾವ ಕಾರಣಕ್ಕಾಗಿ ಕಾಡಸಿದ್ದೇಶ್ವರ ಸ್ವಾಮೀಜಿ ಅವರನ್ನು 2026ರ ಜನವರಿವರೆಗೆ ನಿರ್ಬಂಧಿಸಲಾಗಿದೆಯೋ ಗೊತ್ತಿಲ್ಲ. ಕಾರಣವನ್ನೂ ನೀಡಿಲ್ಲ' ಎಂದರು.

'ಕನೇರಿ ಕಾಡಸಿದ್ದೇಶ್ವರ ಸ್ವಾಮೀಜಿ ಖಂಡಿತವಾಗಿಯೂ ಅವಹೇಳನಕಾರಿ ಪದ ಬಳಸುವುದಿಲ್ಲ. ಆದರೆ ಕೆಲ ಸ್ವಾಮೀಜಿಗಳು ದೇವರೆಂದು ಪೂಜಿಸುವ ಲಕ್ಷ್ಮಿಯನ್ನು ಜೂಲಿ ಲಕ್ಷ್ಮಿ ಎಂದು ಜರೆದಿದ್ದ ಹೇಳಿಕೆಗೆ ಪ್ರತಿಕ್ರಿಯಿಸಿದ್ದಾರಷ್ಟೇ' ಎಂದು ದೂರಿದರು.

ಇದಕ್ಕೆ ರಾಜ್ಯ ಸರ್ಕಾರದ ಪರ ವಕೀಲರು 'ಸ್ವಾಮೀಜಿ ಜನರ ಭಾವನೆಗಳ ಜೊತೆ ಆಟವಾಡಲು ಯತ್ನಿಸುತ್ತಿದ್ದಾರೆ. ಅವರಿಗೆ ಭಾಷೆಯ ಮೇಲೆ ಹಿಡಿತವಿಲ್ಲ. ಮತ್ತೊಂದು ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಸಹಾ ಅವರಿಗೆ ಯಾವುದೇ ಪರಿಹಾರ ನೀಡಿಲ್ಲ. ಈ ಪ್ರಕರಣದಲ್ಲಿ ಪೊಲೀಸ್ ವರಿಷ್ಠಾಧಿಕಾರಿಯ ವರದಿ ಪಡೆದು ಜಿಲ್ಲಾಧಿಕಾರಿ ಆದೇಶ ಹೊರಡಿಸಿದ್ದಾರೆ. ಮುನ್ನೆಚ್ಚರಿಕೆಯ ಭಾಗವಾಗಿ ನಿರ್ಬಂಧ ವಿಧಿಸಲಾಗಿದೆ' ಎಂದು ಸರ್ಕಾರದ ಕ್ರಮವನ್ನು ಸಮರ್ಥಿಸಿದರು.

ವಾದ-ಪ್ರತಿವಾದ ಆಲಿಸಿದ ನ್ಯಾಯಪೀಠ, 'ಎಚ್ಚರಿಕೆಯಿಂದ ಮಾತನಾಡುವಂತೆ ಕಾಡಸಿದ್ದೇಶ್ವರ ಸ್ವಾಮೀಜಿಗೆ ತಿಳಿಸಿ' ಎಂದು ದಳವಾಯಿ ಅವರಿಗೆ ಸೂಚಿಸಿ ಆದೇಶ ಕಾಯ್ದಿರಿಸಿತು.

ನಗರದಲ್ಲಿ ಇಂದು

ಕನ್ನಡ ನಾಡ ಹಬ್ಬ, ಹಂಸ ಸಾಂಸ್ಕೃತಿಕ-ಸಾಮಾಜಿಕ ಸಿಂಚನ: ಉದ್ಘಾಟನೆ: ಟಿ. ನವೀನ್, ಅಧ್ಯಕ್ಷತೆ: ಶ್ರೀನಿವಾಸ್ ಜಿ. ಕಪ್ಪಣ್ಣ, ಅತಿಥಿಗಳು: ಶ್ರೀಧರ್, ಪ್ರೇಮ್, ಎಸ್. ರಾಮಕೃಷ್ಣ ಅಡಿಗ, ಎಸ್. ಬಾಲರಾಜ್, ಆಯೋಜನೆ: ಹಂಸಜ್ಯೋತಿ ಟ್ರಸ್ಟ್, ಸ್ಥಳ: ಕಿದ್ವಾಯಿ ಸ್ಮಾರಕ ಗಂಥಿ ಆಸ್ಪತ್ರೆ, ಬೆಳಿಗ್ಗೆ 9

ಮಕ್ಕಳ ವಚನ ಮೇಳ: ಆಯೋಜನೆ: ವಚನ ಜ್ಯೋತಿ ಬಳಗ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಬೆಳಿಗ್ಗೆ 9.30

ಜಿಲ್ಲಾಮಟ್ಟದ ಸಾಂಸ್ಕೃತಿಕ ಸ್ಪರ್ಧೆಗಳ ಉದ್ಘಾಟನೆ: ಕಿರಣ್ ಎಚ್.ಆರ್., ಉಪಸ್ಥಿತಿ: ವೈ. ರಾಜಾರೆಡ್ಡಿ, ಅತಿಥಿ: ಅರುಣ್ ಎಚ್.ಆರ್., ಅಧ್ಯಕ್ಷತೆ: ಪಾಲಾಕ್ಷ ಟಿ., ಆಯೋಜನೆ: ಆರ್.ಆರ್. ವಿದ್ಯಾಸಂಸ್ಥೆಗಳು, ರಾಜಾರೆಡ್ಡಿ ಬಡಾವಣೆ, ಚಿಕ್ಕಬಾಣಾವರ ರೈಲು ನಿಲ್ದಾಣದ ಹತ್ತಿರ, ಬೆಳಿಗ್ಗೆ 9.30

ಒಐಎಸ್‌ಸಿಎ ಗ್ಲೋಬಲ್ ಸಮಿಟ್: ಉದ್ಘಾಟನೆ: ಎಚ್.ಕೆ. ಪಾಟೀಲ, ಅತಿಥಿಗಳು: ಎಲ್. ರಾಧಾಕೃಷ್ಣನ್, ಸುರೇಶ್ ಹೆಬ್ಳೀಕರ್, ಎಂ.ಎಸ್. ನಟರಾಜ್, ಎನ್. ಕೃಷ್ಣಕುಮಾರ್, ಅಲೋಕ್ ಸಿನ್ಹಾ, ರಜತ್ ಥಾಮಸ್, ಅಧ್ಯಕ್ಷತೆ: ವೂಡೇ ಪಿ. ಕೃಷ್ಣ, ಆಯೋಜನೆ ಮತ್ತು ಸ್ಥಳ: ಶೇಷಾದ್ರಿಪುರಂ ಕಾಲೇಜು, ಶೇಷಾದ್ರಿಪುರ, ಬೆಳಿಗ್ಗೆ 9.30

'ಸಂತವಾಣಿ'- ಚಲನಚಿತ್ರಗಳು, ಪುಸ್ತಕಗಳು, ಉಪನ್ಯಾಸಗಳು, ಸಂಗೀತ, ನೃತ್ಯ, ನಾಟಕ ಮತ್ತು ವಿಚಾರಗೋಷ್ಠಿಗಳು: 'ತಂಜಾವೂರು ಪ್ರಾಂತ್ಯದ ಸಂತರು': ಸುಧಾ ಶೇಷಯ್ಯನ್, 'ಕೇರಳ ಪ್ರಾಂತ್ಯದ ಸಂತರು': ಅಚ್ಯುತಶಂಕರ್, 'ಕ್ರಿಸ್ತನ ಸಂದೇಶ': ಪೀಟರ್ ಮಚಾಡೊ, 'ಇಸ್ಲಾಂ ಧರ್ಮದ ಸಂದೇಶ': ಉಮರ್ ಟೀಕೇ, ಕರ್ನಾಟಕ ಸಂಗೀತ: ಗಾಯನ: ನಿತ್ಯಶ್ರೀ ಮಹಾದೇವನ್, ಆಯೋಜನೆ: ಭಾರತೀಯ ವಿದ್ಯಾಭವನ, ಸ್ಥಳ: ಖಿಂಚಾ ಸಭಾಂಗಣ, ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಬೆಳಿಗ್ಗೆ 10ರಿಂದ

'ಒಂದೆಡೆಗೆ 12ನೇ ವರ್ಷದ ಸಂಭ್ರಮಾಚರಣೆ, ಅಕ್ಕೈ ಪದ್ಮಶಾಲಿ ಅವರ 'ಯಾರು ಸೂಳೆಯರು?' ಪುಸ್ತಕ ಬಿಡುಗಡೆ: ಎಲ್.ಎನ್. ಮುಕುಂದರಾಜ್, ಅಧ್ಯಕ್ಷತೆ: ಎ. ಸೌಮ್ಯ, ಕೆ.ಎಂ. ಗಾಯಿತ್ರಿ, ಪುಸ್ತಕದ ಕುರಿತು: ಕೆ. ಷರೀಫಾ, 'ಹಸಿವು ಕನಸು ಭಾಗ-2' ನಾಟಕ ಪ್ರದರ್ಶನ, ಆಯೋಜನೆ: ಒಂದೆಡೆ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಳಿಗ್ಗೆ 10

ಎಲ್.ಎನ್. ಮುಕುಂದರಾಜ್

ಸಂಗೀತ ಸಮ್ಮೇಳನ: ಬೆಳಿಗ್ಗೆ 10ರಿಂದ 'ದೀಕ್ಷಿತರ ಕೃತಿಗಳಲ್ಲಿ ರಾಗದರ್ಶನ': ರೇವತಿ ಸದಾಶಿವಮ್, 'ಮುತ್ತುಸ್ವಾಮಿ ದೀಕ್ಷಿತರ ಹಿಂದೂಸ್ತಾನಿ ರಾಗದ ಕೃತಿಗಳು': ಎಸ್. ಶಂಕರ್, ಈಶ್ವರ್ ಅಯ್ಯರ್, ಸಂಜೆ 6ರಿಂದ ಸಂಗೀತ ಕಛೇರಿ: ಗಾಯನ: ನಿರಂಜನ್ ದಿಂಡೋಡಿ, ಪಿಟೀಲು: ವೈಭವ್ ರಮಣಿ, ಮೃದಂಗ: ಸುನಲ್ ಸುಬ್ರಹ್ಮಣ್ಯ, ಖಂಜೀರಾ: ಸುನಾದ ಆನೂರು, ಆಯೋಜನೆ ಮತ್ತು ಸ್ಥಳ: ಬೆಂಗಳೂರು ಗಾಯನ ಸಮಾಜ, ಕೆ.ಆರ್. ರಸ್ತೆ

ಕರ್ನಾಟಕ ರಾಜ್ಯೋತ್ಸವ: ಅತಿಥಿಗಳು: ಎಸ್.ಆರ್. ಮೆಹ್ರೋಜ್ ಖಾನ್, ಚಾಂದನಿ ಗರ್ತಿಕೆರೆ, ಅಧ್ಯಕ್ಷತೆ: ಫಾರೂಕ್ ಮೊಹಮ್ಮದ್, ಆಯೋಜನೆ ಮತ್ತು ಸ್ಥಳ: ಅಬ್ಬಾಸ್ ಖಾನ್ ಮಹಿಳಾ ಕಾಲೇಜು, ಕಬ್ಬನ್‌ಪೇಟೆ, ಬೆಳಿಗ್ಗೆ 11.30

72ನೇ ಅಖಿಲ ಭಾರತ ಸಹಕಾರ ಸಪ್ತಾಹದ ಸಮಾರೋಪ ಸಮಾರಂಭ: ಅಧ್ಯಕ್ಷತೆ: ಎಲ್.ಎ. ರವಿಸುಬ್ರಮಣ್ಯ, ಅತಿಥಿಗಳು: ವಿನಾಯಕ್ ಭಟ್, ವಸುಂಧರಾ ಕೆ.ಎಂ., ಜೆ. ಮಂಜುನಾಥ, ಸಂಗಾತಿ ವೆಂಕಟೇಶ್, ಎ. ಪ್ರಕಾಶ್, ಪುಂಡಲೀಕ್ ಎನ್. ಕೇರೂರೆ, ಪ್ರಾಸ್ತಾವಿಕ ನುಡಿ: ಎಂ.ಆರ್. ವೆಂಕಟೇಶ್, ಆಯೋಜನೆ: ಶ್ರೀ ತ್ಯಾಗರಾಜ ಕೋ-ಆಪರೇಟಿವ್ ಬ್ಯಾಂಕ್, ಸ್ಥಳ: ಎಪಿಎಸ್ ಕಾಲೇಜಿನ ಆವರಣ, ಎನ್.ಆರ್. ಕಾಲೊನಿ, ಸಂಜೆ 5

ರಾಹುಲ್ ಗಾಂಧಿ ವಿರುದ್ಧ 272 ಗಣ್ಯರ ಪತ್ರ

ಪ್ರಜಾವಾಣಿ ವಾರ್ತೆ

ನವದೆಹಲಿ: ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಚುನಾವಣಾ ಆಯೋಗ ಮತ್ತು ಪ್ರಜಾಪ್ರಭುತ್ವದ ಇತರ ಸಂಸ್ಥೆಗಳ ವಿರುದ್ಧ ಪ್ರಚೋದನಕಾರಿ ಮತ್ತು ಆಧಾರರಹಿತ ಆರೋಪಗಳನ್ನು ಮಾಡುತ್ತಿರುವುದು ಸರಿಯಲ್ಲ ಎಂದು ದೇಶದ ವಿವಿಧ ಕ್ಷೇತ್ರಗಳ 272 ಗಣ್ಯರ ಗುಂಪು ಬಹಿರಂಗ ಪತ್ರ ಬರೆದಿದೆ.

16 ಮಾಜಿ ನ್ಯಾಯಾಧೀಶರು, 123 ನಿವೃತ್ತ ಅಧಿಕಾರಿಗಳು, 14 ಮಾಜಿ ರಾಯಭಾರಿಗಳು, 133 ನಿವೃತ್ತ ಸಶಸ್ತ್ರ ಪಡೆಗಳ ಅಧಿಕಾರಿಗಳು ಈ ಪತ್ರಕ್ಕೆ ಸಹಿ ಹಾಕಿದ್ದಾರೆ. ರಾಹುಲ್ ಗಾಂಧಿ ಮತ್ತು ಕಾಂಗ್ರೆಸ್ ಪಕ್ಷವನ್ನು ಉದ್ದೇಶಿಸಿ ಈ ಪತ್ರ ಬರೆಯಲಾಗಿದೆ.

ಚುನಾವಣಾ ಆಯೋಗದ ವಿರುದ್ಧ ಮತಕಳವು ಆರೋಪವನ್ನು ಪದೇ ಪದೇ ಮಾಡುತ್ತಿರುವ ರಾಹುಲ್ ಅವರು ಈ ಸಂಬಂಧ ಔಪಚಾರಿಕ ದೂರು ನೀಡುವ ಅಥವಾ ಪ್ರಮಾಣ ಸಲ್ಲಿಸುವ ಗೋಜಿಗೆ ಹೋಗಿಲ್ಲ ಎಂದು ಗುಂಪು ಕಿಡಿಕಾರಿದೆ.

‘ವನ್ಯಜೀವಿ ಪ್ರವಾಸೋದ್ಯಮ’ಕ್ಕೆ ಪೆಟ್ಟು

ಸಫಾರಿ, ಚಾರಣ ಸ್ಥಗಿತ • ಆದಾಯ ಕುಸಿತ, ಕಾರ್ಮಿಕರಿಗೆ ಕೆಲಸ ತಪ್ಪುವ ಭೀತಿ

• ಎಂ.ಮಹೇಶ್

ಮುಖ್ಯಾಂಶಗಳು

- ಹುಲಿ ದಾಳಿ ಕಾರಣದಿಂದ ಕ್ರಮ
- ನ.7ರಿಂದಲೇ ಸಫಾರಿ, ಚಾರಣಕ್ಕೆ ನಿರ್ಬಂಧ
- ಊಟಿಯತ್ತ ಮುಖ ಮಾಡಿರುವ ಪ್ರವಾಸಿಗರು

ಮೈಸೂರು: ಮೈಸೂರು, ಚಾಮರಾಜನಗರ, ಕೊಡಗು ಜಿಲ್ಲೆಗಳಲ್ಲಿ ವ್ಯಾಪಿಸಿರುವ ಬಂಡೀಪುರ ಮತ್ತು ನಾಗರಹೊಳೆ ರಾಷ್ಟ್ರೀಯ ಉದ್ಯಾನದಲ್ಲಿ ಪ್ರವಾಸಿಗರ ಸಫಾರಿ, ಚಾರಣವನ್ನು ಸ್ಥಗಿತಗೊಳಿಸಿರುವ ಪರಿಣಾಮ ‘ವನ್ಯಜೀವಿ ಪ್ರವಾಸೋದ್ಯಮ’ಕ್ಕೆ ಹೊಡೆತ ಬಿದ್ದಿದೆ.

ರೆಸಾರ್ಟ್‌ಗಳು, ಸುತ್ತಮುತ್ತಲಿನ ಹೋಂ ಸ್ಟೇ ಹಾಗೂ ಹೋಟೆಲ್‌ಗಳ ಆದಾಯದ ಮೇಲೆ ಪರಿಣಾಮ ಬೀರಿದೆ. ಉದ್ಯೋಗಿಗಳು ಕೆಲಸ ಕಳೆದುಕೊಳ್ಳುವ ಭೀತಿ ಎದುರಿಸುತ್ತಿದ್ದಾರೆ. ಈ ಕ್ಷೇತ್ರವನ್ನು ಅವಲಂಬಿಸಿರುವವರೂ ನಷ್ಟ ಎದುರಿಸುತ್ತಿದ್ದಾರೆ. ಸಫಾರಿ ಕೇಂದ್ರಗಳು ಬಿಕೋ ಎನ್ನುತ್ತಿವೆ. ವಾರಾಂತ್ಯ ಗಿಜಿಗುಡುತ್ತಿದ್ದ ಸಫಾರಿ ಕೇಂದ್ರಗಳಲ್ಲಿ ಕಲರವ ಇಲ್ಲದಂತಾಗಿದೆ.

ಮೈಸೂರು ಜಿಲ್ಲೆಯ ಸರಗೂರು ತಾಲ್ಲೂಕಿನ ಕಾಡಂಚಿನಲ್ಲಿ ಹುಲಿ ದಾಳಿ ಹೆಚ್ಚಿದ, ಮೂವರ ಸಾವು ಹಿನ್ನಲೆಯಲ್ಲಿ ನಾಗರಹೊಳೆ, ಬಂಡೀಪುರ ವ್ಯಾಪ್ತಿಯಲ್ಲಿ ಸಫಾರಿ ಹಾಗೂ ಚಾರಣವನ್ನು ಅರಣ್ಯ ಸಚಿವ ಈಶ್ವರ ಖಂಡ್ರೆ ಅವರ ಸೂಚನೆಯಂತೆ ನ.7ರಿಂದ ಬಂದ್ ಮಾಡಲಾಗಿದೆ.

ಆದಾಯ ಖೋತಾ: ವನ್ಯಜೀವಿ ಪ್ರವಾಸೋದ್ಯಮದಿಂದ ರಾಜ್ಯ ಸರ್ಕಾರಕ್ಕೆ ನಿತ್ಯ ₹15 ಲಕ್ಷಕ್ಕೂ ಹೆಚ್ಚಿನ ಆದಾಯ ‘ಖೋತಾ’ ಆಗುತ್ತಿದೆ ಎಂದು ಅಂದಾಜಿಸಲಾಗಿದೆ.

ವಿವಿಧೆಡೆಯಿಂದ ಬರುವ ಪ್ರವಾಸಿಗರೆಂದೇ ಸಫಾರಿ ಆರಂಭಿಸಲಾಗಿತ್ತು. ಪ್ರವಾಸಿಗರ ಸಂಖ್ಯೆ ಹೆಚ್ಚಿದಂತೆ ಸಫಾರಿ ಶುಲ್ಕವನ್ನೂ ಹೆಚ್ಚಿಸಲಾಗಿತ್ತು. ಅರಣ್ಯ ವಸತಿ ಮತ್ತು ವಿಹಾರಧಾಮಗಳ ಸಂಸ್ಥೆಯು ಪ್ರವಾಸಿಗರನ್ನು ಸೆಳೆಯಲು ವಿವಿಧ ಪ್ಯಾಕೇಜ್‌ಗಳನ್ನು ರೂಪಿಸಿತ್ತು.

ಎಚ್.ಡಿ. ಕೋಟೆ ತಾಲ್ಲೂಕು ದಮ್ಮನಕಟ್ಟೆ ಸಫಾರಿ ಕೇಂದ್ರ ಸಮೀಪದ ಹೊಸಹೊಳಲು ಗ್ರಾಮದಲ್ಲಿ ಇತ್ತೀಚೆಗೆ ಹುಲಿಯು ಹಸುವನ್ನು ಕೊಂದಿದೆ. ಸಫಾರಿಗೆ ನಿರ್ಬಂಧ ನಂತರವೂ ದಾಳಿ ನಡೆದಿರುವುದು ಅಧಿಕಾರಿಗಳ ತಲೆನೋವಿಗೆ ಕಾರಣವಾಗಿದೆ.

ಚಾಮರಾಜನಗರ ಜಿಲ್ಲೆಯ ಬಂಡೀಪುರದ ಮೇಲುಕಾಮನಹಳ್ಳಿಯಲ್ಲಿರುವ ಸಫಾರಿ ಕೇಂದ್ರ ಬಿಕೋ ಎನ್ನುತ್ತಿದೆ

ಹುಲಿ ದಾಳಿ ಪ್ರಕರಣಗಳು ಹೆಚ್ಚಲು ಸಫಾರಿ ಟ್ರಿಪ್ ಹೆಚ್ಚಳ ಅಥವಾ ರೆಸಾರ್ಟ್‌ಗಳು ಕಾರಣವಲ್ಲ. ಸರ್ಕಾರ ವೈಜ್ಞಾನಿಕವಾಗಿ ಯೋಚಿಸಿ ಕ್ರಮ ವಹಿಸಲಿ

ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಸಂಸದ

ಕಾಡಂಚಿನ ಗ್ರಾಮಗಳಲ್ಲಿ ಜನರ ಪ್ರಾಣ ರಕ್ಷಣೆಗೆ ಆದ್ಯತೆ ನೀಡಿ ಸಫಾರಿ ಮತ್ತು ಚಾರಣ ಬಂದ್ ಮಾಡಲಾಗಿದೆ. ಮುಂದಿನ ಕ್ರಮದ ಬಗ್ಗೆ ಶೀಘ್ರವೇ ಚರ್ಚಿಸುವೆ

ಈಶ್ವರ ಖಂಡ್ರೆ, ಅರಣ್ಯಸಚಿವ

ಕ್ಷೀಣಿಸುತ್ತಿದೆ ಪ್ರವಾಸಿಗರ ಸಂಖ್ಯೆ

ಬಂಡೀಪುರದ ಮೇಲುಕಾಮನ ಹಳ್ಳಿಯಲ್ಲಿರುವ ಸಫಾರಿ ಕೇಂದ್ರದಲ್ಲಿ ನಿತ್ಯ ಸರಾಸರಿ ₹2 ಲಕ್ಷ, ವಾರಾಂತ್ಯದಲ್ಲಿ ₹5 ಲಕ್ಷದವರೆಗೆ ಆದಾಯ ಬರುತ್ತಿತ್ತು. ಜೆಎಲ್‌ಆರ್‌ಗೆ ದಿನಕ್ಕೆ ₹80ಸಾವಿರಕ್ಕೂ ಹೆಚ್ಚಿನ ಆದಾಯವಿತ್ತು.

ಮೈಸೂರು ಜಿಲ್ಲೆಯ ಹುಣಸೂರು ತಾಲ್ಲೂಕಿನ ವೀರನಹೊಸಳ್ಳಿ, ಎಚ್.ಡಿ.ಕೋಟೆ ತಾಲ್ಲೂಕಿನ ದಮ್ಮನಕಟ್ಟೆ ವಲಯದಲ್ಲಿನ ಸಫಾರಿಗೂ ಹೆಚ್ಚು ಜನರು ಬರುತ್ತಿದ್ದರು. ಈಗ ಪ್ರವಾಸಿಗರ ಸಂಖ್ಯೆ ಗಣನೀಯವಾಗಿ ತಗ್ಗಿದೆ’ ಎಂದು ಜೆಎಲ್‌ಆರ್‌ನ ಅಧಿಕಾರಿಯೊಬ್ಬರು ಪ್ರತಿಕ್ರಿಯಿಸಿದರು.

26ಕ್ಕೆ ಬೆಂಗಳೂರು ಚಲೋ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಲವಂತದ ಭೂಸ್ವಾಧೀನ ಕ್ರಮ ಕೈಬಿಡುವುದು, ವಿದ್ಯುತ್ ಖಾಸಗೀಕರಣ, ನೂತನ ಕಾರ್ಮಿಕ ಕಾನೂನುಗಳನ್ನು ರದ್ದುಪಡಿಸುವುದು ಸೇರಿ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಇದೇ 26ರಂದು ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಬೆಂಗಳೂರು ಚಲೋ ಹಮ್ಮಿಕೊಳ್ಳಲಾಗಿದೆ ಎಂದು ಸಂಯುಕ್ತ ಹೋರಾಟ-ಕರ್ನಾಟಕ ತಿಳಿಸಿದೆ.

ಬುಧವಾರ ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಯುಕ್ತ ಹೋರಾಟ-ಕರ್ನಾಟಕದ ಮುಖಂಡರಾದ ಬಡಗಲಪುರ ನಾಗೇಂದ್ರ, ಎಸ್. ವರಲಕ್ಷ್ಮಿ, ಯಶವಂತ ಟಿ., ಕೆ.ವಿ.ಭಟ್, ನೂರ್ ಶ್ರೀಧರ್, ಸುಷ್ಮಾ, ‘ಅಸಂಘಟಿತ ಕಾರ್ಮಿಕರ ಕುಂದು ಕೊರತೆಗಳನ್ನು ಪರಿಹರಿಸಲು ರಾಜ್ಯ ಸರ್ಕಾರ ಎಲ್ಲ ಜಿಲ್ಲೆ, ತಾಲ್ಲೂಕು ಹಾಗೂ ಮಹಾನಗರ ಪಾಲಿಕೆ ಮಟ್ಟಗಳಲ್ಲಿ ಕಾರ್ಮಿಕರ ಸೌಲಭ್ಯ ಕೇಂದ್ರಗಳನ್ನು ಸ್ಥಾಪಿಸಬೇಕು. ಗುತ್ತಿಗೆ ಆಧಾರಿತ ನೇಮಕಾತಿಯನ್ನು ರದ್ದುಪಡಿಸಿ, ತಿಂಗಳಿಗೆ ಕನಿಷ್ಠ ₹36 ಸಾವಿರ ವೇತನ ನಿಗದಿಪಡಿಸಬೇಕು’ ಎಂದು ಆಗ್ರಹಿಸಿದರು.

‘ದುಡಿಮೆಯ ಅವಧಿಯನ್ನು 8ರಿಂದ 12 ಗಂಟೆಗೆ ಹೆಚ್ಚಿಸುವ ತೀರ್ಮಾನವನ್ನು ರದ್ದುಗೊಳಿಸಬೇಕು. ಹೆಚ್ಚುವರಿ ಕೆಲಸಕ್ಕೆ ಎರಡು ಪಟ್ಟು ವೇತನ ನೀಡಬೇಕು. ಸರ್ಕಾರಿ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಹಂತ-ಹಂತವಾಗಿ ಭರ್ತಿ ಮಾಡಬೇಕು. ಉದ್ಯೋಗ ಸೃಷ್ಟಿಸುವ ಸಮಗ್ರ ಕಾರ್ಯಯೋಜನೆ ರೂಪಿಸಲು ಉದ್ಯೋಗ ಖಾತ್ರಿ ಆಯೋಗವನ್ನು ರಚಿಸಬೇಕು’ ಎಂದು ಒತ್ತಾಯಿಸಿದರು.

‘ಪರಿಶಿಷ್ಟ ಜಾತಿ ಉಪ ಯೋಜನೆ (ಎಸ್‌ಸಿಎಸ್‌ಪಿ) ಮತ್ತು ಪರಿಶಿಷ್ಟ ಪಂಗಡಗಳ ಉಪ ಯೋಜನೆಯ (ಟಿಎಸ್‌ಪಿ) ಅನುದಾನದ ವಿತರಣೆ, ವಿನಿಯೋಗ, ಸಾಧಕ-ಬಾಧಕಗಳ ಕುರಿತು ಸಮಗ್ರವಾಗಿ ಚರ್ಚಿಸಿ, ಮೌಲ್ಯಮಾಪನ ಮಾಡಲು ಅವಲೋಕನ ಸಭೆ ಕರೆಯಬೇಕು. ಸಮಾಜದಲ್ಲಿ ಲಿಂಗ ಸಂವೇದನೆಯನ್ನು ಹೆಚ್ಚಿಸಲು ಸಮಗ್ರ ಕ್ರಿಯಾ ಯೋಜನೆ ರೂಪಿಸಬೇಕು’ ಎಂದರು.

‘ಕೇಂದ್ರ ಸರ್ಕಾರ ಜಾರಿಗೊಳಿಸಲು ಉದ್ದೇಶಿಸಿರುವ ರಾಷ್ಟ್ರೀಯ ಕೃಷಿ ನೀತಿಯನ್ನು ರಾಜ್ಯ ಸರ್ಕಾರ ತಿರಸ್ಕರಿಸಬೇಕು. ರಾಜ್ಯದಲ್ಲಿಯೂ ಎಸ್‌ಐಆರ್‌ಗೆ ಪ್ರತಿರೋಧ ವ್ಯಕ್ತಪಡಿಸ ಬೇಕು’ ಎಂದು ಹೇಳಿದರು.

ಉ.ಕ ಸಮಸ್ಯೆಗಳ ಚರ್ಚೆಗೆ ಆದ್ಯತೆ

ಬೆಳಗಾವಿಯಲ್ಲಿ ಡಿ.8ರಿಂದ ವಿಧಾನಮಂಡಲದ ಚಳಿಗಾಲದ ಅಧಿವೇಶನ

ಪ್ರಜಾವಾಣಿ ವಾರ್ತೆ

ಬೆಳಗಾವಿ: ‘ಇಲ್ಲಿ ಡಿ.8ರಿಂದ 19ರವರೆಗೆ ನಡೆಯುವ ವಿಧಾನಮಂಡಲ ಚಳಿಗಾಲದ ಅಧಿವೇಶನದಲ್ಲಿ, ವಾರದಲ್ಲಿ ಎರಡು ದಿನ ಉತ್ತರ ಕರ್ನಾಟಕದ ವಿಷಯಗಳ ಚರ್ಚೆಗೆ ಅವಕಾಶ ನೀಡಲಾಗುವುದು’ ಎಂದು ವಿಧಾನಸಭೆ ಅಧ್ಯಕ್ಷ ಯು.ಟಿ.ಖಾದರ್ ಹೇಳಿದರು.

ಸುವರ್ಣ ವಿಧಾನಸೌಧದಲ್ಲಿ ಬುಧವಾರ ಅಧಿವೇಶನದ ಸಿದ್ಧತೆ ಪರಿಶೀಲಿಸಿದ ಅವರು, ‘ಈ ಭಾಗದ ಜಿಲ್ಲೆಗಳ ಶಾಸಕರು ಸಮಸ್ಯೆಗಳ ಕುರಿತು ಧ್ವನಿ ಎತ್ತಿ, ಸರ್ಕಾರದಿಂದ ಉತ್ತರ ಪಡೆಯಲು ಪ್ರಯತ್ನಿಸಬೇಕು. ಇದು ಅವರ ಜವಾಬ್ದಾರಿಯೂ ಹೌದು’ ಎಂದು ಹೇಳಿದರು.

‘ಅಚ್ಚುಕಟ್ಟಾಗಿ ಅಧಿವೇಶನ ನಡೆಸಲು ಸಿದ್ಧತೆ ಆಗಿದೆ. ನಿತ್ಯ 500 ವಿದ್ಯಾರ್ಥಿಗಳಿಗೆ ಕಲಾಪ ವೀಕ್ಷಣೆಗೆ ಅವಕಾಶ ಇರುತ್ತದೆ. ಕಲಾಪ ವೀಕ್ಷಣೆ ಅವಧಿಯನ್ನು 20 ನಿಮಿಷಕ್ಕೆ ಹೆಚ್ಚಿಸಲಾಗಿದೆ. ವೀಕ್ಷಣೆಗೆ ಬರುವ ವಿದ್ಯಾರ್ಥಿಗಳ ಭೇಟಿ ಕುರಿತು ವಾರ ಮುಂಚೆಯೇ ತಿಳಿಸಬೇಕು’ ಎಂದು ಅವರು ತಿಳಿಸಿದರು.

‘ಸಂಸದೀಯ ವ್ಯವಸ್ಥೆ ಕುರಿತು ಅರಿವು ಮೂಡಿಸಲು ವಿವಿಧ ವಿ.ವಿಗಳ ಆಯ್ದ 30 ವಿದ್ಯಾರ್ಥಿಗಳಿಗೆ ಇಡೀ ದಿನ ಕಲಾಪ ವೀಕ್ಷಣೆಗೆ ಅವಕಾಶ ಕಲ್ಪಿಸಲಿದ್ದೇವೆ. ಕಾರ್ಮಿಕರು, ಕ್ರೀಡಾಪಟುಗಳು, ಪೌರ ಕಾರ್ಮಿಕರು, ಮಹಿಳೆಯರು, ಲಿಂಗತ್ವ ಅಲ್ಪಸಂಖ್ಯಾತರು ಸೇರಿ ವಿವಿಧ ವರ್ಗದವರಿಗೂ ವಿಶೇಷ ವ್ಯವಸ್ಥೆ ಮಾಡಲಾಗುತ್ತದೆ’ ಎಂದು ಮಾಹಿತಿ ನೀಡಿದರು.

ಉತ್ತರ ಕರ್ನಾಟಕ ಪ್ರತ್ಯೇಕ ರಾಜ್ಯ ಬೇಡಿಕೆ ವಿಷಯ ಪ್ರಸ್ತಾಪಿಸುವುದಾಗಿ ಶಾಸಕ ಭರಮಗೌಡ (ರಾಜು) ಕಾಗೆ ಹೇಳಿಕೆ ಕುರಿತು ‘ಅದು ತಪ್ಪು. ಅಂಥ ಬೇಡಿಕೆಗಳನ್ನು ಮಂಡಿಸಬಾರದು. ಮಂಡಿಸಿದರೆ ಈ ವಿಷಯವನ್ನು ಕಲಾಪ ಸಲಹಾ ಸಮಿತಿ (ಬಿಎಸಿ) ನಿರ್ಧರಿಸುತ್ತದೆ’ ಎಂದರು.

ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಕೂಡ ಇದ್ದರು.

ಸುವರ್ಣ ವಿಧಾನಸೌಧದ ಸ್ವಚ್ಛತಾ ಕಾರ್ಯ ನಡೆದಿದೆ ಪ್ರಜಾವಾಣಿ ಚಿತ್ರ

ಮುಂಚಿತವಾಗಿಯೇ ಚರ್ಚಿಸಿ ಈ ಸಲವೂ ಪ್ರತಿಭಟನೆ ಸಂಖ್ಯೆ ತಗ್ಗಿಸಲಾಗುವುದು. ಪ್ರತಿಭಟನೆ ಸ್ಥಳಗಳಿಗೆ ಸಚಿವರು ಹೋಗಿ ಅಹವಾಲು ಆಲಿಸುವ ವ್ಯವಸ್ಥೆ ಮಾಡಲಾಗುವುದು

ಬಸವರಾಜ ಹೊರಟ್ಟಿ, ಸಭಾಪತಿ, ವಿಧಾನ ಪರಿಷತ್ತು

ರೈತರ ಸಮಸ್ಯೆ ಪ್ರಸ್ತಾಪ: ಬೆಲ್ಲದ

ಹುಬ್ಬಳ್ಳಿ: ‘ಚಳಿಗಾಲದ ಅಧಿವೇಶನದಲ್ಲಿ ರೈತರ ಸಮಸ್ಯೆಗಳನ್ನು ಪ್ರಮುಖವಾಗಿ ಪ್ರಸ್ತಾಪಿಸುತ್ತೇವೆ’ ಎಂದು ವಿಧಾನಸಭೆ ವಿರೋಧಪಕ್ಷ ಉಪನಾಯಕ ಅರವಿಂದ ಬೆಲ್ಲದ ಹೇಳಿದರು.

‘ಬೆಳೆಹಾನಿ ಪರಿಹಾರ, ಆರಂಭವಾಗದ ಮೆಕ್ಕೆಜೋಳ ಖರೀದಿ ಕೇಂದ್ರ ಸೇರಿ ಹಲವು ಸಮಸ್ಯೆಗಳಿವೆ. ರೈತರ ಬೇಡಿಕೆಗಳಿಗೆ ರಾಜ್ಯ ಸರ್ಕಾರವು ಸ್ಪಂದಿಸುತ್ತಿಲ್ಲ’ ಎಂದು ಹೇಳಿದರು.

‘ರಾಜ್ಯ ಸರ್ಕಾರದಿಂದ ಯಾವುದೇ ಅಭಿವೃದ್ಧಿ ಕಾರ್ಯ ನಡೆದಿಲ್ಲ. ಹೀಗಾಗಿ ಹುಬ್ಬಳ್ಳಿ-ಧಾರವಾಡದಲ್ಲಿ ಕೆಲ ಕಾಮಗಾರಿಗಳು ಅರ್ಧಕ್ಕೆ ಸ್ಥಗಿತಗೊಂಡಿದ್ದರೆ, ಇನ್ನೂ ಕೆಲವು ಆಮೆಗತಿಯಲ್ಲಿ ಸಾಗಿವೆ’ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಅರವಿಂದ ಬೆಲ್ಲದ

‘ವಿ.ವಿ.ಗಳು ಮಠೀಯವಾಗಬಾರದು’

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ‘ವಿಶ್ವವಿದ್ಯಾಲಯಗಳು ಮುಕ್ತ ವಿಚಾರದ ನೆಪದಲ್ಲಿ ಮಠೀಯವಾಗಬಾರದು’ ಎಂದು ಸಾಹಿತಿ ಬರಗೂರು ರಾಮಚಂದ್ರಪ್ಪ ಅವರು ಅಭಿಪ್ರಾಯಪಟ್ಟರು.

ಇಲ್ಲಿನ ಶಂಕರಘಟ್ಟದ ಕುವೆಂಪು ವಿಶ್ವವಿದ್ಯಾಲಯದಲ್ಲಿ ಬುಧವಾರ ನಡೆದ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮ ದಲ್ಲಿ ಅವರು ಮಾತನಾಡಿದರು.

‘ಯಾವುದೇ ವಿಶ್ವ ವಿದ್ಯಾಲಯ ವಿರಲಿ. ಮುಕ್ತವಾಗಿ ಬೇರೆ ಬೇರೆ ವಿಚಾರಗಳನ್ನು ಪ್ರಸ್ತಾಪಿಸಿದರೂ ಅಂತಿಮವಾಗಿ ಅದು ಮಠೀಯವಾಗದಂತೆ ನೋಡಿಕೊಳ್ಳಬೇಕು. ಅಂತಹ ವಾತಾವರಣ ನಿರ್ಮಾಣ ಮಾಡಬೇಕು. ಇದು ನಮ್ಮೆಲ್ಲರ ಸಾಮಾಜಿಕ ಜವಾಬ್ದಾರಿ’ ಎಂದು ಹೇಳಿದರು.

‘ಒಂದು ವಿಚಾರದ ಬಗ್ಗೆ ನಿರ್ದಿಷ್ಟ ನಿಲುವು ಇರಬೇಕು. ಯು.ಆರ್.ಅನಂತಮೂರ್ತಿ ಅವರೂ ಇದನ್ನೇ ಹೇಳಿದ್ದರು. ಬೇರೆಯವರ ವಿಚಾರ ಕೇಳಬಾರದು ಎಂದಲ್ಲ. ಅದನ್ನು ಕೇಳುವಾಗ ಮಕ್ಕಳ ಮೇಲೆ ಏನು ಪರಿಣಾಮ ಬೀರಬಹುದು ಎಂಬುದನ್ನು ಯೋಚಿಸಿ ಕಾರ್ಯಕ್ರಮ ಗಳನ್ನು ಆಯೋಜಿಸಬೇಕು’ ಎಂದು ಕುಲಪತಿ ಶರತ್ ಅನಂತಮೂರ್ತಿ ಅವರಿಗೆ ಸಲಹೆ ನೀಡಿದರು.

‘ಸುಂದರವಾದ ಸುಳ್ಳನ್ನು ಜನರು ಬೇಗ ನಂಬಿ ಬಿಡುತ್ತಾರೆ. ಸುಳ್ಳಿಗೆ ಸಾಕ್ಷ್ಯ ಬೇಕಿಲ್ಲ. ಸತ್ಯಕ್ಕೆ ಸಾಕ್ಷ್ಯ ಕೇಳುವ ಕಾಲ ಇದು. ಹಾಗಾಗಿ ವಿಚಾರಗಳನ್ನು ಅರ್ಥಮಾಡಿಕೊಳ್ಳುವುದರಲ್ಲಿ ಮುಕ್ತವಾಗಿರೋಣ. ಅದನ್ನು ಪ್ರತಿಪಾದಿಸುವಲ್ಲಿ ನಮಗೊಂದು ನಿರ್ದಿಷ್ಟತೆ ಇರಬೇಕು’ ಎಂದರು.

ವಿಶ್ವವಿದ್ಯಾಲಯದಲ್ಲಿ ಮಂಗಳವಾರ ‘ಭಗವದ್ಗೀತೆ ಮತ್ತು ಅಪರಾಧ ನಿಯಂತ್ರಣ’ ಕುರಿತು ನಡೆದಿದ್ದ ವಿಚಾರ ಸಂಕಿರಣ ವಿವಾದದ ಸ್ವರೂಪ ಪಡೆದಿತ್ತು. ಇದನ್ನು ವಿರೋಧಿಸಿ ದಲಿತ ಸಂಘಟನೆಗಳು ಪ್ರತಿಭಟಿಸಿದ್ದವು. ಈ ಕುರಿತು ಪರೋಕ್ಷವಾಗಿ ಬರಗೂರು ಮಾತನಾಡಿದರು.

ಬರಗೂರು ರಾಮಚಂದ್ರಪ್ಪ

ಐಎಎಸ್ ಅಧಿಕಾರಿ ವರ್ಗಾವಣೆ

ಬೆಂಗಳೂರು: ಹುದ್ದೆ ನಿರೀಕ್ಷೆಯಲ್ಲಿದ್ದ ಐಎಎಸ್ ಅಧಿಕಾರಿ ಎಂ.ಬಿ.ರಾಜೇಶ ಗೌಡ ಅವರನ್ನು ಕರ್ನಾಟಕ ಮಾಹಿತಿ ಆಯೋಗದ ಕಾರ್ಯದರ್ಶಿ ಹುದ್ದೆಗೆ ವರ್ಗಾವಣೆ ಮಾಡಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಆದೇಶಿಸಿದೆ.

ಸತ್ಯಸಾಯಿ ಬಾಬಾ ಜನ್ಮ ಶತಮಾನೋತ್ಸವದಲ್ಲಿ ಪ್ರಧಾನಿ ಮೋದಿ

ಸುಕನ್ಯಾ: ₹3.25 ಲಕ್ಷ ಕೋಟಿ ಜಮೆ

ಪುಟ್ಟಪರ್ತಿ (ಆಂಧ್ರ ಪ್ರದೇಶ) (ಪಿಟಿಐ): ಸುಕನ್ಯಾ ಸಮೃದ್ಧಿ ಯೋಜನೆಯಡಿ ಇದುವರೆಗೆ ನಾಲ್ಕು ಕೋಟಿಗೂ ಅಧಿಕ ಖಾತೆಗಳನ್ನು ತೆರೆಯಲಾಗಿದ್ದು, ₹3.25 ಲಕ್ಷ ಕೋಟಿಗೂ ಅಧಿಕ ಹಣ ಅದಕ್ಕೆ ಜಮೆಯಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಬುಧವಾರ ಹೇಳಿದರು.

ಪುಟ್ಟಪರ್ತಿಯಲ್ಲಿ ನಡೆದ ಶ್ರೀ ಸತ್ಯಸಾಯಿ ಬಾಬಾ ಅವರ ಜನ್ಮ ಶತಮಾನೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ಬಾಬಾ ಅವರ ಸೇವೆ ಮತ್ತು ಬೋಧನೆಗಳು ಪ್ರಪಂಚದ ಲಕ್ಷಾಂತರ ಭಕ್ತರಿಗೆ ಮಾರ್ಗದರ್ಶನ ನೀಡುತ್ತದೆ’ ಎಂದು ಹೇಳಿದರು.

‘ಭಗವಾನ್ ಸತ್ಯಸಾಯಿಬಾಬಾ ಬದುಕು ‘ವಸುಧೈವ ಕುಟುಂಬಕಂ’ ಅನ್ನು ಪ್ರತಿಬಿಂಬಿಸುತ್ತದೆ. ಗುಜರಾತ್ ಭೂಕಂಪ ಸಂದರ್ಭದಲ್ಲಿ ಸತ್ಯಸಾಯಿ ದಳದ ಸದಸ್ಯರ ಸೇವೆಯನ್ನು ಈಗಲೂ ಸ್ಮರಿಸಿಕೊಳ್ಳುತ್ತೇನೆ’ ಎಂದು ಹೇಳಿದರು. 20 ಸಾವಿರ ಬಾಲಕಿಯರಿಗೆ ಸುಕನ್ಯಾ ಸಮೃದ್ಧಿ ಯೋಜನೆಯ ಸೌಲಭ್ಯ ದೊರಕುವಂತೆ ಮಾಡಿದ ಸತ್ಯಸಾಯಿ ಟ್ರಸ್ಟ್ ಅನ್ನು ಶ್ಲಾಘಿಸಿದ ಮೋದಿ ಅವರು, ಯೋಜನೆಯ ಪ್ರಮಾಣಪತ್ರಗಳನ್ನು ವಿತರಿಸಿದರು.

‘ಸಾಯಿ ರಾಂ’ ಮಂತ್ರದೊಂದಿಗೆ ಪ್ರಧಾನಿ ಮೋದಿ ಅವರನ್ನು ಭವ್ಯವಾಗಿ ಸ್ವಾಗತಿಸಲಾಯಿತು. ಬಳಿಕ ಪ್ರಶಾಂತಿ ನಿಲಯಂನಲ್ಲಿನ ಸಾಯಿ ಕುಲ್ವಂತ್ ಸಭಾಂಗಣದಲ್ಲಿ ಪ್ರಾರ್ಥನೆ ಸಲ್ಲಿಸಿದ ಅವರು, ಓಂಕಾರ ಸಭಾಂಗಣದಲ್ಲಿ ಸತ್ಯಸಾಯಿ ಬಾಬಾ ಅವರ ದರ್ಶನ ಪಡೆದರು.

ಶ್ರೀ ಸತ್ಯಸಾಯಿ ಸೆಂಟ್ರಲ್ ಟ್ರಸ್ಟ್ ಆಯೋಜಿಸಿದ್ದ ‘ಗೌದಾನ್’ ಕಾರ್ಯಕ್ರಮದಲ್ಲಿ ಮೋದಿ ಅವರು ರೈತರಿಗೆ ಗೋವುಗಳನ್ನು ವಿತರಿಸಿದರು. ಸತ್ಯಸಾಯಿ ಬಾಬಾ ಜನ್ಮಶತಮಾನೋತ್ಸವ ಸ್ಮರಣಾರ್ಥವಾಗಿ ₹100ರ ನಾಣ್ಯ ಮತ್ತು ನಾಲ್ಕು ಅಂಚೆ ಚೀಟಿಗಳನ್ನು ಬಿಡುಗಡೆಗೊಳಿಸಿದರು.

ಕಾರ್ಯಕ್ರಮದಲ್ಲಿ ಆಂಧ್ರಪ್ರದೇಶದ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು, ಉಪಮುಖ್ಯಮಂತ್ರಿ ಪವನ್ ಕಲ್ಯಾಣ್, ಮಾಜಿ ಕ್ರಿಕೆಟಿಗ ಸಚಿನ್ ತೆಂಡೂಲ್ಕರ್, ಕೇಂದ್ರ ಸಚಿವರು ಸೇರಿದಂತೆ ಹಲವರು ಭಾಗಿಯಾಗಿದ್ದರು.

ಪುಟ್ಟಪರ್ತಿಯಲ್ಲಿ ವಿದ್ಯಾರ್ಥಿನಿಯೊಬ್ಬರಿಗೆ ಪ್ರಧಾನಿ ನರೇಂದ್ರ ಮೋದಿ ಸುಕನ್ಯಾ ಸಮೃದ್ಧಿ ಕಾರ್ಡ್ ವಿತರಿಸಿದರು ಪಿಟಿಐ ಚಿತ್ರ

ಮೋದಿ ಪಾದ ಮುಟ್ಟಿ ನಮಸ್ಕರಿಸಿದ ಐಶ್ವರ್ಯ

ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದ ನಟಿ, ಮಾಜಿ ವಿಶ್ವಸುಂದರಿ ಐಶ್ವರ್ಯ ರೈ ಬಚ್ಚನ್ ಅವರು ಪ್ರಧಾನಿ ಮೋದಿ ಅವರ ಪಾದಮುಟ್ಟಿ ನಮಸ್ಕರಿಸಿದರು.

ಪ್ರಧಾನಿ ಮೋದಿ ಅವರನ್ನು ಉಲ್ಲೇಖಿಸಿ ಮಾತನಾಡಿದ ಐಶ್ವರ್ಯ, ‘ತಮ್ಮ ಉಪಸ್ಥಿತಿಯು ಶತಮಾನ ಸಂಭ್ರಮಕ್ಕೆ ಘನತೆ, ಸ್ಫೂರ್ತಿಯನ್ನು ನೀಡಿದೆ. ಸೇವೆಯೇ ನಿಜವಾದ ನಾಯಕತ್ವ ಮತ್ತು ಮಾನವನ ಸೇವೆಯು ದೇವರ ಸೇವೆ ಇದ್ದಂತೆ ಎಂಬ ಸಾಯಿಬಾಬಾ ಅವರ ಸಂದೇಶವನ್ನು ನೆನಪಿಸುತ್ತದೆ’ ಎಂದರು.

‘ಸಾವಯವ ಕೃಷಿಯಲ್ಲಿ ಜಾಗತಿಕ ಕೇಂದ್ರ’

ಕೊಯಮತ್ತೂರು (ಪಿಟಿಐ): ಭಾರತವು ಸಾವಯವ ಕೃಷಿಯಲ್ಲಿ ಜಾಗತಿಕ ಕೇಂದ್ರವಾಗುವ ಹಾದಿಯಲ್ಲಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಬುಧವಾರ ಹೇಳಿದರು. ದಕ್ಷಿಣ ಭಾರತ ಸಾವಯವ ಕೃಷಿ ಶೃಂಗ-2025 ಅನ್ನು ಉದ್ಘಾಟಿಸಿ ಮಾತನಾಡಿದ ಅವರು, ‘ಕೃಷಿಯು ಆಧುನಿಕ ಅವಕಾಶವನ್ನು ನೀಡುತ್ತದೆ ಮತ್ತು ಗ್ರಾಮೀಣ ಆರ್ಥಿಕತೆಯನ್ನು ಬೆಳೆಸುತ್ತದೆ ಎಂಬುವುದನ್ನು ಯುವಕರು ಕಂಡುಕೊಂಡಿದ್ದಾರೆ’ ಎಂದು ಹೇಳಿದರು. ಇದೇ ವೇಳೆ, ಪಿ.ಎಂ ಕಿಸಾನ್ ಯೋಜನೆಯ 21ನೇ ಕಂತನ್ನು ಪ್ರಧಾನಿ ಮೋದಿ ಬಿಡುಗಡೆಗೊಳಿಸಿದರು.

ಒಳ ಮೀಸಲಾತಿ: ಕಾಯ್ದೆ ಅನುಷ್ಠಾನಕ್ಕೆ ವಿಘ್ನ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ವಿಚಾರಣೆ
- ಕಾನೂನಾತ್ಮಕ ಅಂಶಗಳ ಪರಿಹಾರಕ್ಕೆ ಹೈಕೋರ್ಟ್ ಸೂಚನೆ

ಬೆಂಗಳೂರು: ‘ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೀಸಲಾತಿ ಪ್ರಮಾಣವನ್ನು ಹಿಗ್ಗಿಸಿ ಒಟ್ಟು ಮೀಸಲು ಪ್ರಮಾಣವನ್ನು ಶೇಕಡ 50ರಿಂದ 56ಕ್ಕೆ ಹೆಚ್ಚಿಸಿದ್ದ ಕಾಯ್ದೆ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಮುಂದಿನ ವಿಚಾರಣೆ ವರೆಗೂ ಯಾವುದೇ ಕ್ರಮ ಕೈಗೊಳ್ಳಬಾರದು’ ಎಂದು ಹೈಕೋರ್ಟ್, ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿದೆ.

ಈ ಸಂಬಂಧ ಡಾ.ಅಂಬೇಡ್ಕರ್ ಪರಿಶಿಷ್ಟ ಜಾತಿಗಳ ಒಕ್ಕೂಟದ ರಾಜ್ಯ ಘಟಕದ ಅಧ್ಯಕ್ಷ ಮಹೇಂದ್ರ ಕುಮಾರ್ ಮಿತ್ರ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿ ಈ ಕುರಿತಂತೆ ಆದೇಶಿಸಿತು.

ವಿಚಾರಣೆ ವೇಳೆ ಸರ್ಕಾರದ ಪರವಾಗಿ ಹಾಜರಾಗಿದ್ದ ಹೆಚ್ಚುವರಿ ಅಡ್ವೊಕೇಟ್ ಜನರಲ್ ರೂಬೆನ್ ಜೇಕಬ್, ‘ಇದೇ ಪ್ರಕರಣಕ್ಕೆ ಸಂಬಂಧಿಸಿದಂತೆ ಹೈಕೋರ್ಟ್‌ನ ಮತ್ತೊಂದು ಪೀಠ, ನೇಮಕಾತಿ ಪ್ರಕ್ರಿಯೆಯಗಳನ್ನು ನಡೆಸಬಹುದು. ಆದರೆ, ನೇಮಕಾತಿ ಆದೇಶಗಳನ್ನು ನೀಡಬಾರದು ಎಂದು ಆದೇಶಿಸಿದೆ. ಹೀಗಾಗಿ, ಅದೇ ಆದೇಶವನ್ನು ಈ ಅರ್ಜಿಯಲ್ಲಿಯೂ ಮುಂದುವರಿಸಬೇಕು. ಕಳೆದ ಒಂದು ವರ್ಷದಿಂದ ನೇಮಕಾತಿ ನಡೆದಿಲ್ಲ. ಈಗಷ್ಟೇ ನೇಮಕಾತಿ ಪ್ರಕ್ರಿಯೆ ಪ್ರಾರಂಭವಾಗಿದೆ. ಕಾಯ್ದೆ ಅನುಷ್ಠಾನಕ್ಕೆ ತಡೆ ನೀಡಿದರೆ ಮತ್ತಷ್ಟು ವಿಳಂಬವಾಗಲಿದೆ’ ಎಂದು ನ್ಯಾಯಪೀಠಕ್ಕೆ ಅರುಹಿದರು.

‘ರಾಜ್ಯದಲ್ಲಿ ಮೀಸಲಾತಿ ಹೆಚ್ಚಳ ಮಾಡುವ ಸಂಬಂಧ ನಿವೃತ್ತ ನ್ಯಾಯಮೂರ್ತಿ ಎಚ್.ಎನ್.ನಾಗಮೋಹನ್ ದಾಸ್ ಆಯೋಗವನ್ನು ರಚನೆ ಮಾಡಲಾಗಿತ್ತು. ಈ ಆಯೋಗವು, ಮೀಸಲಾತಿ ಹೆಚ್ಚಳಕ್ಕೆ ಸಂಬಂಧಿಸಿದಂತೆ ಎಲ್ಲ ರೀತಿಯ ದತ್ತಾಂಶ ಸಂಗ್ರಹಿಸಿ ಹಲವು ಶಿಫಾರಸುಗಳನ್ನು ಮಾಡಿದೆ. ಇದರ ಆಧಾರದಲ್ಲಿ ಮೀಸಲಾತಿ ಪ್ರಮಾಣ ಹೆಚ್ಚಿಸಿ ಕಾಯ್ದೆ ರೂಪಿಸಲಾಗಿದೆ’ ಎಂದರು.

ಇದಕ್ಕೆ ಅಸಮಾಧಾನ ವ್ಯಕ್ತಪಡಿಸಿದ ನ್ಯಾಯಪೀಠ, ‘ಇಷ್ಟು ದಿನ ಸರ್ಕಾರ ಏನು ಮಾಡುತ್ತಿತ್ತು. ಇನ್ನೂ ಆರು ತಿಂಗಳವರೆಗೆ ನೇಮಕಾತಿ ಮಾಡದಿದ್ದರೆ ಏನೂ ಆಗುವುದಿಲ್ಲ. ಅರ್ಜಿಯಲ್ಲಿ ಎತ್ತಿರುವ ಕಾನೂನಾತ್ಮಕ ಅಂಶಗಳು ಬಗೆಹರಿಯಲಿ’ ಎಂಬ ಅಭಿಪ್ರಾಯ ವ್ಯಕ್ತಪಡಿಸಿ ವಿಚಾರಣೆಯನ್ನು ಮುಂದೂಡಿತು.

ರೇವಣ್ಣ ಮೇಲಿನ ಒಂದು ಆರೋಪ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮನೆಕೆಲಸದ ಮಹಿಳೆಯ ಘನತೆಗೆ ಚ್ಯುತಿ ಉಂಟು ಮಾಡಿದ ಆರೋಪಕ್ಕೆ ಸಂಬಂಧಿಸಿದಂತೆ ಜೆಡಿಎಸ್ ಶಾಸಕ ಎಚ್.ಡಿ.ರೇವಣ್ಣ ವಿರುದ್ಧ ಅಪರಾಧ ಪರಿಗಣಿಸಿ ವಿಚಾರಣೆ ಕೈಗೆತ್ತಿಕೊಂಡಿದ್ದನ್ನು ಹೈಕೋರ್ಟ್ ರದ್ದುಗೊಳಿಸಿದೆ. ಆದರೆ, ‘ಅವರ ವಿರುದ್ಧದ ಲೈಂಗಿಕ ದೌರ್ಜನ್ಯ ಆರೋಪವನ್ನು ಪರಿಗಣಿಸಿ ನ್ಯಾಯಿಕ ವಿಚಾರಣೆ ನಡೆಸಿ’ ಎಂದು ಪ್ರಕರಣವನ್ನು ವಿಚಾರಣಾ ನ್ಯಾಯಾಲಯಕ್ಕೆ ಹಿಂದಿರುಗಿಸಿದೆ.

‘ನನ್ನ ವಿರುದ್ಧ ಹಾಸನ ಜಿಲ್ಲೆ ಹೊಳೆನರಸೀಪುರ ಠಾಣೆಯಲ್ಲಿ ದಾಖಲಾಗಿರುವ ಕ್ರಿಮಿನಲ್ ಪ್ರಕರಣ ರದ್ದುಪಡಿಸ ಬೇಕು’ ಎಂದು ಕೋರಿ ಎಚ್.ಡಿ.ರೇವಣ್ಣ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿ ಕಾಯ್ದಿರಿಸಿದ್ದ ಆದೇಶವನ್ನು ನ್ಯಾಯಮೂರ್ತಿ ಎಂ.ಐ.ಅರುಣ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಬುಧವಾರ ಪ್ರಕಟಿಸಿತು.

ಅರ್ಜಿಯನ್ನು ಭಾಗಶಃ ಪುರಸ್ಕರಿಸಿರುವ ನ್ಯಾಯಪೀಠ, ‘ದೂರಿನಲ್ಲಿನ ಆರೋಪಗಳು ಭಾರತೀಯ ದಂಡ ಸಂಹಿತೆ-1860ರ (ಐಪಿಸಿ) ಕಲಂ 354ಎ ಅಡಿ ಬರುತ್ತವೆ. ಆದರೆ, ಇಲ್ಲಿ 354 ಅನ್ವಯ ಆಗುವುದಿಲ್ಲ. ಸಂತ್ರಸ್ತೆಯ ಘನತೆಗೆ ಹಾನಿ ಮಾಡುವ ಉದ್ದೇಶವನ್ನು ಇದು ತೋರುವುದಿಲ್ಲ. ಆದರೆ, ಲೈಂಗಿಕ ದೌರ್ಜನ್ಯ ವಾಗುತ್ತದೆ. ಅಗತ್ಯವಿದ್ದರೆ ಈ ಅಭಿಪ್ರಾಯವನ್ನು ಪ್ರಶ್ನಿಸಬಹುದು’ಎಂದು ಪ್ರಾಸಿಕ್ಯೂಷನ್ ಪರ ಹಾಜರಿದ್ದ ರಾಜ್ಯ ಹೆಚ್ಚುವರಿ ಪ್ರಾಸಿಕ್ಯೂಟರ್ ಬಿ.ಎನ್.ಜಗದೀಶ್ ಅವರಿಗೆ ಸೂಚಿಸಿತು.

‘ಶಾಸಕರು-ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆಯ ವಿಶೇಷ ಮ್ಯಾಜಿಸ್ಟ್ರೇಟ್ ನ್ಯಾಯಾಲಯವು ರೇವಣ್ಣ ವಿರುದ್ಧ ಐಪಿಸಿ ಸೆಕ್ಷನ್ 354ರ (ಮಹಿಳೆಯ ಘನತೆಗೆ ಚ್ಯುತಿ) ಅಡಿ ಸಂಜ್ಞೇಯ ಅಪರಾಧ ಪರಿಗಣಿಸಿರುವುದನ್ನು ರದ್ದುಗೊಳಿಸಿತು.

‘ದೂರು ದಾಖಲು ಮಾಡುವಲ್ಲಿನ ವಿಳಂಬವನ್ನು ಮೀರಿ ಐಪಿಸಿ ಸೆಕ್ಷನ್ 354ಎ (ಲೈಂಗಿಕ ದೌರ್ಜನ್ಯ) ಅಡಿ ಸೂಕ್ತ ಆದೇಶ ಹೊರಡಿಸುವುದು ಉಚಿತವೋ ಹೇಗೆ ಎಂಬುದನ್ನು ನಿರ್ಣಯಿಸಿ’ ಎಂದು ಪ್ರಕರಣವನ್ನು ವಿಚಾರಣಾ ನ್ಯಾಯಾಲಯಕ್ಕೆ ಮರಳಿಸಿದೆ.

ದಿನೇಶ್ ಕುಮಾರ್ ವಿರುದ್ಧ ಪ್ರಾಸಿಕ್ಯೂಷನ್ ದೂರು ದಾಖಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ನಿವೇಶನಗಳನ್ನು ಅಕ್ರಮವಾಗಿ ಹಂಚಿಕೆ ಮಾಡಿದ ಪ್ರಕರಣದಲ್ಲಿ, ಮುಡಾದ ಆಯುಕ್ತ ರಾಗಿದ್ದ ಜಿ.ಟಿ.ದಿನೇಶ್ ಕುಮಾರ್ ವಿರುದ್ಧ ಜಾರಿ ನಿರ್ದೇಶನಾಲಯವು ಪ್ರಾಸಿಕ್ಯೂಷನ್ ದೂರು ದಾಖಲಿಸಿದೆ.

ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದಲ್ಲಿ ದೂರು ದಾಖಲಿಸಿರುವ ಜಾರಿ ನಿರ್ದೇಶನಾಲಯವು (ಇ.ಡಿ), ‘ದಿನೇಶ್ ಕುಮಾರ್ ಅವರು ತಮ್ಮ ಅಧಿಕಾರವನ್ನು ದುರುಪಯೋಗ ಮಾಡಿಕೊಂಡು, ಅಕ್ರಮವಾಗಿ ನೂರಾರು ನಿವೇಶನಗಳನ್ನು ಹಂಚಿಕೆ ಮಾಡಿದ್ದಾರೆ’ ಎಂದು ವಿವರಿಸಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿ ಪಾರ್ವತಿಯವರು ಕಳೆದುಕೊಂಡ ಭೂಮಿಗೆ ಪರಿಹಾರಾತ್ಮಕವಾಗಿ 14 ನಿವೇಶನಗಳನ್ನು ಹಂಚಿಕೆ ಮಾಡಿದ್ದ ಪ್ರಕರಣದ ತನಿಖೆ ಆರಂಭಿಸಿದ್ದ ಇ.ಡಿಯು, 1,000ಕ್ಕೂ ಹೆಚ್ಚು ನಿವೇಶನಗಳನ್ನು ಅಕ್ರಮವಾಗಿ ಹಂಚಿಕೆ ಮಾಡಿರುವುದನ್ನು ಪತ್ತೆ ಮಾಡಿತ್ತು.

ದಿನೇಶ್ ಅವರ ಸುಪರ್ದಿಯಲ್ಲೇ ಈ ಅಕ್ರಮಗಳೆಲ್ಲವೂ ನಡೆದಿವೆ. ನಿವೇಶನ ಹಂಚಿಕೆ ಮಾಡಿದ್ದಕ್ಕೆ ಪ್ರತಿಯಾಗಿ ದಿನೇಶ್ ಅವರು ಬಂಗಲೆ, ಕೃಷಿ ಜಮೀನು, ವಾಣಿಜ್ಯ ಸಂಕೀರ್ಣ, ಐಷಾರಾಮಿ ಕಾರುಗಳು ಮತ್ತು ಹಣವನ್ನು ಉಡುಗೊರೆಯಾಗಿ ಪಡೆದಿದ್ದರು. ಆ ಹಣದಿಂದ ಮತ್ತಷ್ಟು ಆಸ್ತಿಗಳನ್ನು ಖರೀದಿಸಿದ್ದರು ಎಂದು ಹೇಳಿದೆ.

ಸಮರ್ಪಕವಾಗಿ ನಿರ್ವಹಣೆ ಮಾಡದೇ ಇದ್ದಿದ್ದನ್ನು ಒಪ್ಪಿಕೊಂಡ ಟಿಡಿಬಿ ಮುಖ್ಯಸ್ಥ

ಜನದಟ್ಟಣೆ: ಕೋರ್ಟ್ ತರಾಟೆ

ಕೊಚ್ಚಿ (ಪಿಟಿಐ): ಶಬರಿಮಲೆ ದೇವಸ್ಥಾನದಲ್ಲಿ ಜನದಟ್ಟಣೆ ಉಂಟಾಗಿದ್ದರ ಕುರಿತು ಕೇರಳ ಹೈಕೋರ್ಟ್ ಬುಧವಾರ ದೇವಾಲಯದ ಅಧಿಕಾರಿಗಳನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡಿದೆ.



‘ಅಧಿಕಾರಿಗಳ ಮಧ್ಯೆ ಸಮನ್ವಯ ಇಲ್ಲದ್ದಿದ್ದರಿಂದಲೇ ಇಂಥ ಘಟನೆ ಸಂಭವಿಸಿದೆ’ ಎಂದು ಕೋರ್ಟ್ ಹೇಳಿದೆ.

‘ಈ ಹಿಂದಿನ ಮಾರ್ಗಸೂಚಿಗಳನ್ನು ಏಕೆ ಪಾಲನೆ ಮಾಡಿಲ್ಲ. ಜನದಟ್ಟಣೆಯನ್ನು ನಿಭಾಯಿಸಲು ಏಕೆ ಮುಂಚಿತವಾಗಿ ತಯಾರಿ ನಡೆಸಿಕೊಂಡಿಲ್ಲ’ ಎಂದು ನ್ಯಾಯಾಲಯವು ತಿರುವಾಂಕೂರು ದೇವಸ್ವಂ ಮಂಡಳಿಯನ್ನು (ಟಿಡಿಬಿ) ಪ್ರಶ್ನಿಸಿತು.

‘ಆರು ತಿಂಗಳ ಮೊದಲೇ ಎಲ್ಲ ಸಿದ್ಧತೆಗಳು ಮುಕ್ತಾಯಗೊಳ್ಳಬೇಕಿತ್ತು’ ಎಂದು ನ್ಯಾಯಾಲಯ ಹೇಳಿತು.

ಇದಕ್ಕೆ, ‘ಹೌದು, ಆರು ತಿಂಗಳ ಹಿಂದೆಯೇ ಸಿದ್ಧತೆಗಳನ್ನು ಮಾಡಿಕೊಳ್ಳಬೇಕಿತ್ತು’ ಎಂದು ಮಂಡಳಿಯ ಮುಖ್ಯಸ್ಥ ಕೆ. ಜಯರಾಮ್ ಅವರು ಹೇಳಿದರು.

‘ಒಂದೇ ಸಮಯದಲ್ಲಿ ಎಲ್ಲ ಭಕ್ತರನ್ನು ಒಮ್ಮೆಗೆ ದೇವಸ್ಥಾನದ ಒಳಗೆ ಬಿಟ್ಟಿದ್ದು ಏಕೆ? ಭಕ್ತರನ್ನು ಗುಂಪು ಗುಂಪಾಗಿ ಕಳುಹಿಸಬೇಕಿತ್ತು. ಇದನ್ನು ಮಾಡುವುದು ಬಿಟ್ಟು ಭಕ್ತರನ್ನು ಮುಂದೆ ದೂಡಲಾಯಿತು. ಇದರಿಂದಲೇ ಸಮಸ್ಯೆಯಾಗುತ್ತದೆ’ ಎಂದು ಅಭಿಪ್ರಾಯಪಟ್ಟಿತು.

ಮಲಯಾಳಂ ತಿಂಗಳು ವೃಶ್ಚಿಕ ಮಾಸದ ಮಂಡಲ ಕಾಲದ ಪೂಜೆಗಾಗಿ ಶಬರಿಮಲೆ ದೇವಸ್ಥಾನಕ್ಕೆ ಭಕ್ತರ ದಂಡು ಹರಿದುಬರುತ್ತಿದ್ದು, ಬುಧವಾರ ಭಾರಿ ದಟ್ಟಣೆ ಕಂಡುಬಂತು – ಪಿಟಿಐ ಚಿತ್ರ

‘ಉದ್ದೇಶಪೂರ್ವಕ’

ಶಬರಿಮಲೆ ಯಾತ್ರೆಯಲ್ಲಿ ಉಂಟಾದ ಜನದಟ್ಟಣೆ ಕುರಿತು ಸರ್ಕಾರದ ವಿರುದ್ಧ ಯುಡಿಎಫ್ ತೀವ್ರ ಆಕ್ರೋಶ ವ್ಯಕ್ತಪಡಿಸಿದೆ. ‘ಉದ್ದೇಶಪೂರ್ವಕ ವಾಗಿ ಜನದಟ್ಟಣೆಯನ್ನು ಸೂಕ್ತ ರೀತಿಯಲ್ಲಿ ನಿರ್ವಹಿಸಿಲ್ಲ’ ಎಂದು ದೂರಿದೆ.

ವಿಧಾನಸಭೆ ವಿರೋಧ ಪಕ್ಷದ ನಾಯಲ ವಿ.ಡಿ. ಸತೀಶನ್ ಪ್ರಕ್ರಿಯಿಸಿ, ‘ಅಯ್ಯಪ್ಪ ದೇವರ ಕುರಿತು ನಕಲಿ ಭಕ್ತಿ ಪ್ರದರ್ಶಿಸಲು ಸರ್ಕಾರವು ‘ಗ್ಲೋಬಲ್ ಅಯ್ಯಪ್ಪ ಸಂಗಮಮ್’ ಕಾರ್ಯಕ್ರಮವನ್ನು ಆಯೋಜಿಸಿತ್ತು. ದೇವಸ್ಥಾನದ ಚಿನ್ನವನ್ನು ಕದ್ದಿತು. ಈಗ ಉದ್ದೇಶಪೂರ್ವಕವಾಗಿ ಯಾತ್ರೆಯನ್ನು ಅವ್ಯಸ್ಥೆಯ ಗೂಡಾಗಿಸಲು ಹೊರಟಿದೆ’ ಎಂದರು.

‘ರಾಜ್ಯದ ಯಾತ್ರಿಗಳಿಗೆ ಭದ್ರತೆ ಕೊಡಿ’

ಬೆಂಗಳೂರು: ಶಬರಿಮಲೆಯಲ್ಲಿ ಅಯ್ಯಪ್ಪನ ದರ್ಶನ ಪಡೆಯುವಲ್ಲಿ ನೂಕುನುಗ್ಗಲು ಉಂಟಾಗುತ್ತಿರುವ ಬಗ್ಗೆ ಮಾಧ್ಯಮಗಳಲ್ಲಿ ವರದಿಯಾದ ಬೆನ್ನಲ್ಲೇ, ‘ಕರ್ನಾಟಕದಿಂದ ಬರುವ ಮಾಲಾಧಾರಿಗಳ ಸುರಕ್ಷತೆಗೆ ಅಗತ್ಯ ಕ್ರಮ ತೆಗೆದುಕೊಳ್ಳಿ’ ಎಂದು ಕೋರಿ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರು ಕೇರಳ ಸರ್ಕಾರಕ್ಕೆ ಪತ್ರ ಬರೆದಿದ್ದಾರೆ.

ಕೇರಳ ಸರ್ಕಾರದ ಮುಖ್ಯ ಕಾರ್ಯದರ್ಶಿ ಎ.ಜಯತಿಲಕ್ ಅವರಿಗೆ ಬುಧವಾರ ಪತ್ರ ಬರೆದಿರುವ ಶಾಲಿನಿ ರಜನೀಶ್, ‘ರಾಜ್ಯದ ಮಾಲಾಧಾರಿಗಳು ಬಳಸುವ ಮಾರ್ಗಗಳಲ್ಲಿ ಸೂಕ್ತ ಸಾರಿಗೆ ವ್ಯವಸ್ಥೆ ಮಾಡಿಕೊಡಿ. ಯಾತ್ರಾರ್ಥಿಗಳ ಸಂಪರ್ಕಕ್ಕೆ ನೆರವಾಗುವಂತೆ ಕರ್ನಾಟಕದ ಅಧಿಕಾರಿಗಳೊಂದಿಗೆ ವ್ಯವಹರಿಸಲು ಕೇರಳ ಸರ್ಕಾರದ ಕಡೆಯಿಂದ ಅಧಿಕಾರಿಯನ್ನು ನೇಮಿಸಿ’ ಎಂದಿದ್ದಾರೆ.

ಗುಜರಾತ್ ಎಟಿಎಸ್‌ನಿಂದ ‘ವೈದ್ಯ’ ಸೆರೆ

ಪ್ರಜಾವಾಣಿ ವಾರ್ತೆ

ಅಹಮದಾಬಾದ್: ದಕ್ಷಿಣ ಭಾರತವನ್ನು ದೇಶದಿಂದ ಪ್ರತ್ಯೇಕಿಸುವ ಸಲುವಾಗಿ ‘ರಿಸಿನ್ ಭಯೋತ್ಪಾದಕ ದಾಳಿ’ಗೆ ಸಂಚು ರೂಪಿಸಿದ್ದ ಆರೋಪದಡಿ, ಹೈದರಾಬಾದ್ ನಿವಾಸಿ ಅಹ್ಮದ್ ಮೊಹಿಯುದ್ದೀನ್ ಸೈಯದ್ ಎಂಬಾತನನ್ನು ಗುಜರಾತ್ ಎಟಿಎಸ್ ಪೊಲೀಸರು ಬಂಧಿಸಿದ್ದಾರೆ.

ರಿಸಿನ್(ಹರಳೆಣ್ಣೆ ಬೀಜಗಳಿಂದ ತೆಗೆದ ವಿಷಕಾರಿ ವಸ್ತು) ಹಾಗೂ ಅಸಿಟೋನ್ ಮಿಶ್ರಣ ಮಾಡಿ ವಿಷಕಾರಿ ಪದಾರ್ಥ ತಯಾರಿಸಿ, ಅದನ್ನು ಬಳಸಿ ‘ನಾಸ್ತಿಕ’ರನ್ನು ಹತ್ಯೆ ಮಾಡಲು ಅಹ್ಮದ್ ಮೊಹಿಯುದ್ದೀನ್ ಸೈಯದ್ ಸಂಚು ರೂಪಿಸಿದ್ದ ಎಂದು ಗುಜರಾತ್ ಪೊಲೀಸರು ದಾಖಲಿಸಿರುವ ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

ಚೀನಾದಲ್ಲಿ ವೈದ್ಯಕೀಯ ಪದವಿ ಪಡೆದಿದ್ದರೂ, ಭಾರತೀಯ ವೈದ್ಯಕೀಯ ಪರಿಷತ್ತು(ಎಂಸಿಐ) ನಡೆಸುವ ಪರೀಕ್ಷೆಯನ್ನು ಅಹ್ಮದ್ ತೇರ್ಗಡೆಯಾಗಿರಲಿಲ್ಲ ಎಂದೂ ಉಲ್ಲೇಖಿಸಲಾಗಿದೆ.

ವಿದೇಶದಲ್ಲಿ ವೈದ್ಯ ಪದವಿ ಪಡೆದವರು ಭಾರತದಲ್ಲಿ ವೈದ್ಯಕೀಯ ವೃತ್ತಿ ಕೈಗೊಳ್ಳಲು ಎಂಸಿಐ ಪರೀಕ್ಷೆಯಲ್ಲಿ ಉತ್ತೀರ್ಣರಾಗುವುದು ಕಡ್ಡಾಯ.

‘ದಕ್ಷಿಣ ಭಾರತವನ್ನು ಭಾರತದ ಉಳಿದ ಪ್ರದೇಶದಿಂದ ಬೇರ್ಪಡಿಸಬೇಕು. ಇದಕ್ಕಾಗಿ ತನಗೆ ಹಣ ಹಾಗೂ ಶಸ್ತ್ರಾಸ್ತ್ರಗಳ ಅಗತ್ಯ ಇದೆ ಎಂಬುದಾಗಿ ಐಎಸ್‌ಕೆಪಿ(ಇಸ್ಲಾಮಿಕ್ ಸ್ಟೇಟ್ ಖೋರಾಸನ್ ಪ್ರಾವಿನ್ಸ್) ನಾಯಕ, ಅಫ್ಗಾನಿಸ್ತಾನದ ಅಬು ಖದೀಜಾಗೆ ಅಹ್ಮದ್ ಹೇಳಿದ್ದ’ ಎಂದು ವಿವರಿಸಲಾಗಿದೆ.

ಚಾಟ್ ಜಿಪಿಟಿ, ಗೂಗಲ್ ನೆರವು

‘ರಿಸಿನ್ ವಿಷ ಮಿಶ್ರಣ ತಯಾರು ಮಾಡುವುದಕ್ಕಾಗಿ ಖದೀಜಾ ಸೂಚನೆಯಂತೆ ಅಹ್ಮದ್ ಹರಳೆಣ್ಣೆ ಬೀಜಗಳನ್ನು ಖರೀದಿಸಿ, ಅವುಗಳಿಂದ ವಿಷಕಾರಿ ಪದಾರ್ಥ ಹೊರತೆಗೆದು, ಅಸಿಟೋನ್‌ನೊಂದಿಗೆ ಮಿಶ್ರಣ ಮಾಡಿದ್ದ. ಗೂಗಲ್ ಹಾಗೂ ಚಾಟ್‌ಜಿಪಿಟಿ ಬಳಸಿ ಈ ಮಿಶ್ರಣ ತಯಾರಿಸುವ ವಿಧಾನ ಕಲಿತಿದ್ದ’ ಎಂದು ಎಟಿಎಸ್ ಹೇಳಿದೆ.

ಹಣಕಾಸು

ಹಣವು ಮರದಲ್ಲಿ ಬೆಳೆಯುವುದಿಲ್ಲ. ಅದು ಬುದ್ಧಿವಂತರ ಆಲೋಚನೆಯಲ್ಲಿ ಬೆಳೆಯುತ್ತದೆ
ಮತ್ಸೋನಾ ಧ್ಲಿವಾಯೊ, ಲೇಖಕ

ದುಡ್ಡಿನಂಥಾ ಮಾತು

ಡಿಮ್ಯಾಟ್ ರೂಪದಲ್ಲಿಲ್ಲ ಎಂ.ಎಫ್ ಹೇಗೆ ಇದರ ವರ್ಗಾವಣೆ?

• ಪ್ರಕಾಶ ಹೆಗಡೆ ಹುಳಗೋಳ

'ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿ' (ಸೆಬಿ) ನಿರ್ದೇಶನದ ಅನ್ವಯ, ಡಿಮ್ಯಾಟ್ ರೂಪದಲ್ಲಿ ಇಲ್ಲದ ಮ್ಯೂಚುವಲ್ ಫಂಡ್ (ಎಂ.ಎಫ್) ಯೂನಿಟ್‌ಗಳನ್ನು ಆನ್‌ಲೈನ್ ಮೂಲಕವೇ ಇನ್ನೊಬ್ಬರ ಹೆಸರಿಗೆ ವರ್ಗಾವಣೆ ಮಾಡುವ ಅವಕಾಶ ಇದೆ. ಈ ಸೌಲಭ್ಯವು ಎಕ್ಸ್‌ಚೇಂಜ್ ಟ್ರೇಡೆಡ್ ಫಂಡ್‌ಗಳನ್ನು (ಇಟಿಎಫ್) ಹೊರತುಪಡಿಸಿ ಇತರ ಎಲ್ಲ ಮ್ಯೂಚುವಲ್ ಫಂಡ್‌ಗಳಿಗೆ ಅನ್ವಯಿಸುತ್ತದೆ. ಈ ಮಹತ್ವದ ವ್ಯವಸ್ಥೆಯು ಈಚೆಗಷ್ಟೇ ಜಾರಿಗೆ ಬಂದಿದೆ. ಇದು ಹೂಡಿಕೆದಾರರಿಗೆ ಬಹಳ ಅನುಕೂಲ ಕಲ್ಪಿಸುವುದರ ಜೊತೆಗೆ ಸುರಕ್ಷಿತವೂ ಆಗಿದೆ.

ಈ ವ್ಯವಸ್ಥೆಯು ಜಾರಿಗೆ ಬರುವ ಮೊದಲು, ಡಿಮ್ಯಾಟ್ ರೂಪದಲ್ಲಿ ಇಲ್ಲದ ಮ್ಯೂಚುವಲ್ ಫಂಡ್ ಯೂನಿಟ್‌ಗಳನ್ನು ಒಬ್ಬರ ಹೆಸರಿನಿಂದ ಇನ್ನೊಬ್ಬರ ಹೆಸರಿಗೆ ವರ್ಗಾವಣೆ ಮಾಡುವುದು ತೀರಾ ಜಟಿಲವಾದ ಕೆಲಸವಾಗಿತ್ತು. ಹೂಡಿಕೆದಾರರು ತಮ್ಮ ಎಂ.ಎಫ್. ಯೂನಿಟ್‌ಗಳನ್ನು ಬೇರೊಬ್ಬರ ಹೆಸರಿಗೆ ವರ್ಗಾಯಿಸಲು ಬಯಸಿದರೆ, ಅವರು ಮೊದಲು ಆ ಯೂನಿಟ್‌ಗಳನ್ನು ಡಿಮ್ಯಾಟ್ ಖಾತೆಗೆ ಪರಿವರ್ತಿಸಬೇಕಾಗಿತ್ತು. ಈ ಪ್ರಕ್ರಿಯೆಯನ್ನು 'ಡಿಮೆಟೀರಿಯಲೈಸೇಷನ್' ಎಂದು ಕರೆಯಲಾಗುತ್ತದೆ. ಈ ಪ್ರಕ್ರಿಯೆಯು ಸವಾಲಿನಿಂದ ಕೂಡಿತ್ತು.

ಆದರೆ, ಹೊಸ ವ್ಯವಸ್ಥೆಯು ಈ ಪ್ರಕ್ರಿಯೆಯನ್ನು ಸರಳಗೊಳಿಸಿದೆ. ಹೊಸ ವ್ಯವಸ್ಥೆಯ ಅಡಿಯಲ್ಲಿ ಯೂನಿಟ್‌ಗಳ ವರ್ಗಾವಣೆ ಹೇಗೆ ಎಂಬುದನ್ನು ತಿಳಿಯೋಣ.

ಯಾವುದಕ್ಕೆ ಅನ್ವಯ?

- ಇಟಿಎಫ್ ಹೊರತುಪಡಿಸಿ ಎಲ್ಲ ಮ್ಯೂಚುವಲ್ ಫಂಡ್ ಯೋಜನೆಗಳಿಗೆ ಈ ಆನ್‌ಲೈನ್ ವರ್ಗಾವಣೆ ಸೌಲಭ್ಯ ಲಭ್ಯ.
- ಯೂನಿಟ್‌ಗಳ ಭಾಗಶಃ ವರ್ಗಾವಣೆಗೂ ಅವಕಾಶ ಇದೆ. ಹೀಗೆ ಭಾಗಶಃ ವರ್ಗಾವಣೆ ಆದ ನಂತರದಲ್ಲಿ ಉಳಿಯುವ ಯೂನಿಟ್‌ಗಳು ಕನಿಷ್ಠ ಮಿತಿಗಿಂತ ಕಡಿಮೆ ಆಗಿದ್ದರೆ ಅವು ಸ್ವಯಂಚಾಲಿತವಾಗಿ ರಿಡೀಮ್ ಆಗುತ್ತವೆ.

ಏನು ಬೇಕು?

ವರ್ಗಾವಣೆ ಮಾಡಲು ಬಯಸುವವರು (Transferor) ಈ ಅಗತ್ಯಗಳನ್ನು ಪೂರೈಸಬೇಕು

- ಅವರು ಸರಿಯಾದ ಬಗೆಯಲ್ಲಿ ಕೆವೈಸಿ ದಾಖಲೆಗಳನ್ನು ಸಲ್ಲಿಸಿರಬೇಕು.
- ಅವರ ಎಂ.ಎಫ್. ಯೂನಿಟ್‌ಗಳು ಯಾವುದೇ ಲಾಕ್–ಇನ್ ಅವಧಿಯನ್ನು ಪೂರ್ಣಗೊಳಿಸಿರಬೇಕು, ಇತರ ಯಾವುದೇ ಅಡಮಾನಗಳಿಂದ ಮುಕ್ತವಾಗಿರಬೇಕು.

ವರ್ಗಾವಣೆ ಪಡೆಯುವವರಿಗೆ (Transferee) ಇವು ಅಗತ್ಯ

- ಮಾನ್ಯವಾದ ಫೋಲಿಯೊ ಹೊಂದಿರಬೇಕು ಅಥವಾ ಶೂನ್ಯ-ಬ್ಯಾಲೆನ್ಸ್ ಫೋಲಿಯೊ ಹೊಂದಿರಬೇಕು.
- ಅವರು ಕೆವೈಸಿ ದಾಖಲೆಗಳನ್ನು ಸರಿಯಾಗಿ ಸಲ್ಲಿಸಿರಬೇಕು. ಪ್ಯಾನ್ ಸಂಖ್ಯೆ, ಬ್ಯಾಂಕ್ ಖಾತೆ ವಿವರ, ಇ-ಮೇಲ್ ವಿಳಾಸ ಮತ್ತು ಮೊಬೈಲ್ ಸಂಖ್ಯೆ ಒದಗಿಸಬೇಕು.

ವರ್ಗಾವಣೆಯ ವಿಧಾನ ಹೇಗೆ?

- ಆನ್‌ಲೈನ್ ಮೂಲಕ ಮಾತ್ರ ಸಿಗುವ ಸೌಲಭ್ಯ
- ಈ ಸೌಲಭ್ಯವು ಕೇವಲ ಆರ್‌ಟಿಎ ಮತ್ತು 'ಎಂಎಫ್ ಸೆಂಟ್ರಲ್' ಪೋರ್ಟಲ್‌ಗಳ ಮೂಲಕ ಲಭ್ಯ.
- ಭೌತಿಕವಾಗಿ, ಷೇರುಪೇಟೆ ಮೂಲಕ ಅಥವಾ ಮೂರನೇ ವ್ಯಕ್ತಿ ನಿರ್ವಹಿಸುವ ವೇದಿಕೆಗಳ ಮೂಲಕ ಸಲ್ಲಿಸಿದ ವರ್ಗಾವಣೆ ವಿನಂತಿಗಳನ್ನು ಪರಿಗಣಿಸಲಾಗುವುದಿಲ್ಲ.

ಆನ್‌ಲೈನ್ ಸೌಲಭ್ಯದ ಪ್ರಯೋಜನಗಳು

- ನಕಲಿ ವರ್ಗಾವಣೆಗಳನ್ನು ತಡೆಯಲು ಮ್ಯೂಚುವಲ್ ಫಂಡ್ ಯೂನಿಟ್‌ಗಳನ್ನು ತಕ್ಷಣವೇ ತಡೆಹಿಡಿಯಬಹುದು.
- ವರ್ಗಾವಣೆ ಮಾಡುವವರು ಮತ್ತು ವರ್ಗಾವಣೆ ಪಡೆಯುವವರ ಫೋಲಿಯೊಗಳು ಸರಿಯಾಗಿ ಇವೆಯೇ ಎಂಬುದನ್ನು ಪರಿಶೀಲಿಸಲು ಆಗುತ್ತದೆ.
- ಮುದ್ರಾಂಕ ಶುಲ್ಕ (stamp duty) ಲೆಕ್ಕಾಚಾರ ಮತ್ತು ಆನ್‌ಲೈನ್ ಮೂಲಕ ಅದರ ಸಂಗ್ರಹ ಸ್ವಯಂಚಾಲಿತವಾಗಿ ನಡೆಯುತ್ತದೆ.

ಮುದ್ರಾಂಕ ಶುಲ್ಕ ಪಾವತಿ ಜವಾಬ್ದಾರಿ: ಮ್ಯೂಚುವಲ್ ಫಂಡ್ ಯೂನಿಟ್‌ಗಳನ್ನು ವರ್ಗಾವಣೆ ಮಾಡುವವರು ಈ ಶುಲ್ಕವನ್ನು ಭರಿಸಬೇಕು.

- **ಲೆಕ್ಕಾಚಾರದ ಆಧಾರ:** ವರ್ಗಾವಣೆ ವಿನಂತಿಯ ಸಮಯದಲ್ಲಿ ಲಭ್ಯವಿರುವ ಕೊನೆಯ ಎನ್‌ಎವಿ (ನೆಟ್ ಅಸೆಟ್ ವ್ಯಾಲ್ಯೂ) ಆಧಾರದ ಮೇಲೆ ಮುದ್ರಾಂಕ ಶುಲ್ಕವನ್ನು ಲೆಕ್ಕಹಾಕಲಾಗುತ್ತದೆ.

ಕಾರ್ಯವಿಧಾನ ಹೇಗೆ?

- **ಪ್ರಾರಂಭ:** ವರ್ಗಾವಣೆ ಮಾಡುವವರು ಆರ್‌ಟಿಎ/ಎಂಎಫ್ ಸೆಂಟ್ರಲ್ ಪೋರ್ಟಲ್‌ಗೆ ಲಾಗ್–ಇನ್ ಮಾಡಿ, ವರ್ಗಾಯಿಸಬೇಕಾದ ಫೋಲಿಯೋ ಮತ್ತು ಯೂನಿಟ್‌ಗಳನ್ನು ಆಯ್ಕೆ ಮಾಡುತ್ತಾರೆ.
- **ದೃಢೀಕರಣ:** ಕೆವೈಸಿ ಸರಿಯಾಗಿದೆಯೇ, ಮ್ಯೂಚುವಲ್ ಫಂಡ್ ಯೂನಿಟ್‌ಗಳು ಯಾವುದೇ ವ್ಯಾಜ್ಯಗಳಿಗೆ ಒಳಪಟ್ಟಿವೆಯೇ, ವರ್ಗಾವಣೆ ಹಾಗೂ ಸ್ವೀಕಾರಕ್ಕೆ ಎರಡೂ ಕಡೆಯವರು ಅರ್ಹರೇ ಎಂಬ ಪರಿಶೀಲನೆಗಳು ನಡೆಯುತ್ತವೆ.
- **ಅನುಮೋದನೆ:** ಎರಡು ಹಂತಗಳ ಒಟಿಪಿ ದೃಢೀಕರಣವು ಸುರಕ್ಷಿತ ವರ್ಗಾವಣೆಯನ್ನು ಖಚಿತಪಡಿಸುತ್ತದೆ.
- **ಮುದ್ರಾಂಕ ಶುಲ್ಕ ಪಾವತಿ:** ವರ್ಗಾವಣೆ ಪ್ರಕ್ರಿಯೆಯ ಮೊದಲು, ವರ್ಗಾವಣೆ ಮಾಡುವವರು ಮುದ್ರಾಂಕ ಶುಲ್ಕವನ್ನು ಆನ್‌ಲೈನ್ ಮೂಲಕ ಪಾವತಿಸುತ್ತಾರೆ.
- **ಅನುಷ್ಠಾನ:** ಆರ್‌ಟಿಎ ಈ ವರ್ಗಾವಣೆಯನ್ನು ಎರಡು ಕೆಲಸದ ದಿನಗಳೊಳಗೆ ಜಾರಿಗೆ ತಂದು, ಎರಡೂ ಕಡೆಯವರಿಗೆ ನವೀಕರಿಸಿದ ಫೋಲಿಯೊ ವಿವರಗಳನ್ನು (ಎಸ್‌ಒಎ) ನೀಡುತ್ತವೆ ಮತ್ತು ತೆರಿಗೆ ಉದ್ದೇಶಗಳಿಗಾಗಿ ವಹಿವಾಟನ್ನು ವರದಿ ಮಾಡುತ್ತವೆ.
- ವರ್ಗಾವಣೆ ನಂತರದ 10 ದಿನಗಳವರೆಗೆ ವರ್ಗಾಯಿಸಿದ ಯೂನಿಟ್‌ಗಳನ್ನು ನಗದೀಕರಿಸಿಕೊಳ್ಳುವುದಕ್ಕೆ ನಿರ್ಬಂಧವಿದೆ, ಇದರಿಂದ ವಂಚನೆಯ ಅಪಾಯ ತಗ್ಗಿಸಬಹುದು.
- ರೆಕಾರ್ಡ್ ದಿನಾಂಕದಂದು (record date) ಮಾಡಿದ ವರ್ಗಾವಣೆ ವಿನಂತಿಗಳಿಗೆ ಸಂಬಂಧಿಸಿದ ಡಿವಿಡೆಂಡ್ ಪಾವತಿಗಳು ಹಾಗೂ ಮರುಹೂಡಿಕೆಗಳು ವರ್ಗಾವಣೆ ಮಾಡುವವರಿಗೆ ಸೇರುತ್ತವೆ.

ಸೆಬಿ ಜಾರಿಗೆ ತಂದಿರುವ ಈ ಹೊಸ ಮಾರ್ಗಸೂಚಿಗಳು ಹಿಂದೆ ಜಾರಿಯಲ್ಲಿದ್ದ ಪ್ರಕ್ರಿಯೆಗಳಿಗೆ ಸಂಬಂಧಿಸಿದ ಅಪಾಯಗಳನ್ನು ಕಡಿಮೆ ಮಾಡಿವೆ. ಯಾವುದೇ ಕಾಗದಪತ್ರದ, ಕಚೇರಿ ಓಡಾಟದ ಅವಶ್ಯಕತೆ ಇಲ್ಲದೆ ವರ್ಗಾವಣೆಯ ಪ್ರಕ್ರಿಯೆಯನ್ನು ಸರಳೀಕರಿಸಲಾಗಿದೆ.

ಲೇಖಕ ಚಾರ್ಟರ್ಡ್ ಅಕೌಂಟೆಂಟ್

ಷೇರುಪೇಟೆಯಲ್ಲಿ ಮಕ್ಕಳೂ ವಹಿವಾಟು ನಡೆಸಬಹುದೇ?

ಮಾಹಿತಿ ಕಣಜ

ಮಕ್ಕಳು ಚಿಕ್ಕ ವಯಸ್ಸಿನಿಂದಲೇ ಆರ್ಥಿಕವಾಗಿ ಸಾಕ್ಷರರಾಗಲಿ ಎಂದು ಪೋಷಕರು ಬಯಸುವುದಿದೆ. ಪಾಲಕರು ತಮ್ಮ ಮಕ್ಕಳಿಗೆ 18 ವರ್ಷ ವಯಸ್ಸಾಗುವ ಮೊದಲೇ ಅವರ ಹೆಸರಿನಲ್ಲಿ ಡಿ–ಮ್ಯಾಟ್ ಖಾತೆ ತೆರೆದು, ಅವರಿಗೆ ಹೂಡಿಕೆಗಳ ಜಗತ್ತನ್ನು ತೋರಿಸಿಕೊಡಲು ಅವಕಾಶ ಇದೆ.

ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯ (ಸೆಬಿ) ನಿಯಮಗಳ ಪ್ರಕಾರ, ದೇಶದ ಷೇರುಪೇಟೆಗಳಲ್ಲಿ 18 ವರ್ಷ ವಯಸ್ಸಿನೊಳಗಿನ ಮಕ್ಕಳು ಪಾಲ್ಗೊಳ್ಳಲು ಅವಕಾಶ ಇದೆ. ಮಕ್ಕಳ ಪಾಲಕರು ಅಥವಾ ಪೋಷಕರು ಡಿ–ಮ್ಯಾಟ್ ಖಾತೆ ಹೊಂದಿರಬೇಕು. ಅವರು ತಮ್ಮ ಮಕ್ಕಳ ಹೆಸರಿನಲ್ಲಿ ಡಿ–ಮ್ಯಾಟ್ ಖಾತೆಯನ್ನು ತೆರೆದು ವಹಿವಾಟು ನಡೆಸಬಹುದು. ಆದರೆ, ಈ ಖಾತೆ ಮೂಲಕ ಈಕ್ವಿಟಿ ಮತ್ತು ಮ್ಯೂಚುವಲ್ ಫಂಡ್‌ಗಳಲ್ಲಿ ಮಾತ್ರ ಹೂಡಿಕೆ ಮಾಡಬಹುದಾಗಿದೆ. ಐಪಿಒ ಹೂಡಿಕೆಗೂ ಅವಕಾಶವಿದೆ. ಇಂಟ್ರಾಡೇ, ಎಫ್‌ಆ್ಯಂಡ್‌ಒ ವಹಿವಾಟುಗಳಲ್ಲಿ ತೊಡಗಲು ಅವಕಾಶ ಇಲ್ಲ.

ಡಿ–ಮ್ಯಾಟ್ ಖಾತೆ ತೆರೆಯಲು ಮಕ್ಕಳ ಜನ್ಮ ದಿನಾಂಕಕ್ಕೆ ಸಂಬಂಧಿಸಿದ ದಾಖಲೆ, ಬ್ಯಾಂಕ್ ಖಾತೆ, ಪ್ಯಾನ್ ಕಾರ್ಡ್ ಅಗತ್ಯ. ಪೋಷಕರು ಸಹ ಪ್ಯಾನ್‌ಕಾರ್ಡ್, ಗುರುತಿನ ಚೀಟಿ, ಬ್ಯಾಂಕ್ ಖಾತೆ ಹೊಂದಿರಬೇಕು.

ಈ ಖಾತೆ ಹೊಂದಿರುವ ಮಕ್ಕಳ ಖಾತೆಗೆ ಉಡುಗೊರೆ (ಗಿಫ್ಟ್) ರೂಪದಲ್ಲಿ ಷೇರುಗಳನ್ನು ನೀಡಬಹುದಾಗಿದೆ. ಇತ್ತೀಚೆಗೆ ಇನ್ಫೊಸಿಸ್ ಸಂಸ್ಥಾಪಕ ಎನ್.ಆರ್. ನಾರಾಯಣಮೂರ್ತಿ ಅವರು ತಮ್ಮ ಮೊಮ್ಮಗನ ಹೆಸರಿಗೆ ಷೇರುಗಳನ್ನು ಉಡುಗೊರೆಯಾಗಿ ನೀಡಿದ್ದನ್ನು ಇಲ್ಲಿ ಸ್ಮರಿಸಬಹುದು. ಅಲ್ಲದೆ, ಕುಟುಂಬದ ಸದಸ್ಯರ ನಡುವೆ ಷೇರುಗಳ ವರ್ಗಾವಣೆಗೆ ಕೂಡ ಅವಕಾಶ ಇದೆ.

ಈ ಖಾತೆಗಳು ಮಕ್ಕಳ ಹೆಸರಿನಲ್ಲಿ ಇದ್ದರೂ, ಅದರ ನಿರ್ವಹಣೆ ಪಾಲಕರದ್ದಾಗಿರುತ್ತದೆ. ಒಂದು ವೇಳೆ ಮಕ್ಕಳ ತಂದೆ–ತಾಯಿ ಇಲ್ಲದಿದ್ದಲ್ಲಿ, ನ್ಯಾಯಾಲಯ ನೇಮಕ ಮಾಡಿರುವ ಪೋಷಕರು ಖಾತೆ ತೆರೆದು ವಹಿವಾಟು ನಡೆಸಬಹುದು.

ಮಕ್ಕಳು, 18 ವರ್ಷ ವಯಸ್ಸಿಗೆ ಬರುವವರೆಗೂ ಪೋಷಕರು/ಪಾಲಕರು ಈ ಖಾತೆಯನ್ನು ನಿರ್ವಹಣೆ ಮಾಡುತ್ತಾ ಇರುತ್ತಾರೆ. ಬಳಿಕ, ಈ ಖಾತೆ ನಿಷ್ಕ್ರಿಯವಾಗುತ್ತದೆ. ಅದಾದ ಬಳಿಕ, ಕೆವೈಸಿ (ನಿಮ್ಮ ಗ್ರಾಹಕರನ್ನು ತಿಳಿಯಿರಿ) ಪ್ರಕ್ರಿಯೆಯ ಮೂಲಕ ಮಕ್ಕಳ ಖಾತೆಯನ್ನು (ಮೈನರ್ ಖಾತೆ) ವಯಸ್ಕರ ಖಾತೆಯನ್ನಾಗಿ ಪರಿವರ್ತಿಸಿಕೊಂಡು, ವಹಿವಾಟು ನಡೆಸಬಹುದಾಗಿದೆ.

ಖಾತೆ ಏಕೆ ಬೇಕು: ಸಣ್ಣ ವಯಸ್ಸಿನಲ್ಲೇ ಈ ರೀತಿ ಡಿ–ಮ್ಯಾಟ್ ಖಾತೆ ತೆರದು ಹೂಡಿಕೆ ಮಾಡುವುದಿರಂದ ಹೂಡಿಕೆಗಳ ದೀರ್ಘಾವಧಿಯ ಪ್ರಯೋಜನ ಪಡೆಯಲು ಅವಕಾಶ ಸಿಗುತ್ತದೆ. ಜೊತೆಗೆ ಮಕ್ಕಳಲ್ಲಿ ಆರ್ಥಿಕ ಸಾಕ್ಷರತೆ ಬೆಳೆಯಲು ಸಹಾಯ ಆಗುತ್ತದೆ.

ಈ ವಹಿವಾಟಿನಿಂದ ಪಡೆದ ಗಳಿಕೆಗೆ ಮಕ್ಕಳು ಆದಾಯ ತೆರಿಗೆ ವಿವರವನ್ನು ಪ್ರತ್ಯೇಕವಾಗಿ ಸಲ್ಲಿಸಬೇಕಾಗಿಲ್ಲ. ಪಾಲಕರು ಅಥವಾ ಪೋಷಕರು ಇದರ ನಿರ್ವಹಣೆ ಮಾಡುತ್ತಿರುವುದರಿಂದ ಅವರ ಹೆಸರಿನಲ್ಲಿ ತೆರಿಗೆ ವಿವರ ಸಲ್ಲಿಸಬೇಕಾಗುತ್ತದೆ.

ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್

ಕೇಂದ್ರ ಸರ್ಕಾರದ ನವರತ್ನ ಕಂಪನಿಗಳ ಪೈಕಿ ಒಂದಾಗಿರುವ ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್‌ನ (ಬಿಇಎಲ್) ಷೇರುಮೌಲ್ಯವು ₹504ಕ್ಕೆ ತಲುಪಬಹುದು ಎಂದು ಬ್ರೋಕರೇಜ್ ಕಂಪನಿಯಾದ ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್ ಹೇಳಿದೆ.

ಪ್ರಸಕ್ತ ಹಣಕಾಸು ವರ್ಷದ ಎರಡನೆಯ ತ್ರೈಮಾಸಿಕದಲ್ಲಿ ಬಿಇಎಲ್ ಕಂಪನಿಯ ವರಮಾನವು ಶೇಕಡ 26ರಷ್ಟು ಹೆಚ್ಚಳವಾಗಿದೆ. ಕಂಪನಿಯ ಲಾಭದ ಪ್ರಮಾಣವು ಶೇ 18ರಷ್ಟು ಹೆಚ್ಚಾಗಿದ್ದು, ಇದು ನಿರೀಕ್ಷೆಗಿಂತ ಜಾಸ್ತಿ ಎಂದು ಬ್ರೋಕರೇಜ್ ಕಂಪನಿಯು ಹೇಳಿದೆ.

ಕಂಪನಿಯ ಕೈಯಲ್ಲಿ ₹74,453 ಕೋಟಿ ಮೌಲ್ಯದ ಕಾರ್ಯಾದೇಶಗಳು ಇವೆ. ಇದು ಮುಂದಿನ ಮೂರು ವರ್ಷಗಳವರೆಗೆ ಕಂಪನಿಯ ವರಮಾನವು ಚೆನ್ನಾಗಿ ಇರಲಿದೆ ಎಂಬ ಸೂಚನೆ ನೀಡುತ್ತಿದೆ. ಕಂಪನಿಯ ವರಮಾನದ ಸಂಯುಕ್ತ ವಾರ್ಷಿಕ ಬೆಳವಣಿಗೆ ದರವು (ಸಿಎಜಿಆರ್) 2026–27ನೇ ಹಣಕಾಸು ವರ್ಷದವರೆಗೆ ಶೇ 21ರಷ್ಟು ಇರಲಿದೆ ಎಂದು ಜಿಯೋಜಿತ್ ಅಂದಾಜು ಮಾಡಿದೆ.

ವರಮಾನ, ಲಾಭದ ಪ್ರಮಾಣದ ವಿಚಾರದಲ್ಲಿ ಬಿಇಎಲ್ ನಿರೀಕ್ಷೆಗೂ ಮೀರಿದ ಸಾಧನೆ ತೋರುತ್ತಿದೆ. ಕಂಪನಿಯ ಕಾರ್ಯಾದೇಶವು ಉತ್ತಮವಾಗಿರುವುದು, ಹೊಸ ಕಾರ್ಯಾದೇಶಗಳು ಸಿಗುತ್ತಿರುವುದು, ರಕ್ಷಣೆಗೆ ಸಂಬಂಧಿಸಿದ ಹೊಸ ಯೋಜನೆಗಳಲ್ಲಿ ಕಂಪನಿಯ ಪಾತ್ರ ಕಾಣುತ್ತಿರುವುದು ದೀರ್ಘಾವಧಿಯ ಬೆಳವಣಿಗೆಗೆ ಒತ್ತಾಸೆಯಾಗಿವೆ ಎಂದು ಹೇಳಿದೆ. ಬುಧವಾರದ ವಹಿವಾಟಿನ ಅಂತ್ಯಕ್ಕೆ ಬಿಇಎಲ್ ಷೇರಿನ ₹423.25 ಆಗಿತ್ತು.

ಬ್ರೋಕರೇಜ್ ಮಾತು

ಮ್ಯಾಕ್ಸ್ ಹೆಲ್ತ್‌ಕೇರ್

ಆರೋಗ್ಯ ಸೇವಾ ವಲಯದ ಮ್ಯಾಕ್ಸ್ ಹೆಲ್ತ್‌ಕೇರ್ ಕಂಪನಿಯ ಷೇರಿನ ಬೆಲೆ ₹1,360 ಆಗಲಿದೆ ಎಂದು ಬ್ರೋಕರೇಜ್ ಸಂಸ್ಥೆ ಮೋತಿಲಾಲ್ ಓಸ್ವಾಲ್ ಫೈನಾನ್ಶಿಯಲ್ ಸರ್ವಿಸಸ್ ಹೇಳಿದೆ. ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಕಂಪನಿಯ ಒಟ್ಟಾರೆ ಕಾರ್ಯಾಚರಣೆ ಸದೃಢವಾಗಿದ್ದು, ವರಮಾನದಲ್ಲಿ ಶೇ 20ರಷ್ಟು ಹೆಚ್ಚಳವಾಗಿದೆ. ಮುಂದಿನ ನಾಲ್ಕರಿಂದ ಐದು ವರ್ಷದಲ್ಲಿ ಆಸ್ಪತ್ರೆಯ ಹಾಸಿಗೆಗಳ ಸಾಮರ್ಥ್ಯವನ್ನು ದುಪ್ಪಟ್ಟು ಮಾಡುವ ಗುರಿ ಹೊಂದಿದೆ. 2024-25ರಿಂದ 2027–28ರವರೆಗೆ ಕಂಪನಿಯ ವರಮಾನದ ಸಂಯುಕ್ತ ವಾರ್ಷಿಕ ಬೆಳವಣಿಗೆ ದರವು (ಸಿಎಜಿಆರ್) ಶೇ 14ರಷ್ಟಾಗುವ ನಿರೀಕ್ಷೆ ಇದೆ ಎಂದು ಹೇಳಿದೆ.

ಬುಧವಾರದ ವಹಿವಾಟಿನ ಅಂತ್ಯಕ್ಕೆ ಮ್ಯಾಕ್ಸ್ ಹೆಲ್ತ್‌ಕೇರ್ ಕಂಪನಿಯ ಷೇರಿನ ಬೆಲೆ ₹1,164.70 ಇತ್ತು.

(ಬ್ರೋಕರೇಜ್ ಕಂಪನಿಗಳು ನೀಡುವ ವಿವರ, ಮಾಹಿತಿಗೆ ಪತ್ರಿಕೆ ಹೊಣೆಯಲ್ಲ)

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ — ಇಂಗ್ಲಿಷ್

ಎಸ್ಸೆಸ್ಸೆಲ್ಸಿ ದ್ವಿತೀಯ ಭಾಷೆ ಇಂಗ್ಲಿಷ್ ವ್ಯಾಕರಣ ಮಾದರಿ ಪ್ರಶ್ನೋತ್ತರಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಮಾಹಿತಿ: ಶಂಕರನಾರಾಯಣ ರಾವ್, ನಿವೃತ್ತ ಇಂಗ್ಲಿಷ್ ಅಧ್ಯಾಪಕ

Second Language ENGLISH

Prose The Concert

5. What arrangement would you make if Pandit Ravi Shankar and Allah Rakha were coming toyour house?
[You may include in your answer such arrangements. one example is given. Think of others and write them in the bubbles].

Note: Answer need not be the same for all.



Ans: *(.....Contd.)*



6) Do you like the ending of the story? Why? If you don't, how would you like to end it?
Ans:

Text	New ending
Student X may answer in this way. No, I don't like the ending because life went out of Anant after meeting the great wizards.	I would like to end in this way After meeting Ustad Allah Rakha and Pandit Ravi Shankar and enjoying their performance he lived for some more years.

7. Suppose you are Smita and invite Pandit Ravi Shankar (PRS) to your home. Imagine the conversation that follows and write it. Some clues are given.

You (Smita): Good evening sir, May I have a word with you, please?
PRS: Well
You: My brother .... is a big fan of yours
PRS: I'm glad .... here?
You: No, he can't ....cancer.
PRS: I'm sorry .... How can I help you?
You: Would .... with me to see him
PRS : (looking at others) What do you say?
You: Please, I beg you all to come and play for him
Mustached man: Are you joking? Do you know .... to? Don't bother .... silly talk.
PRS: Sh! {Silencing him) .... what shall we do Ustad?
Allah Rakha : (after some thought) Don't weep. Don't worry, child We'll be .... tomorrow.

Ans:-You (Smita): Good evening sir, May I have a word with you, please?
PRS: Well
You: My brother Anant is a big fan of yours
PRS: I'm glad to see him, has he come here?
You: No, he can't Sir. He is bed-ridden from cancer.
PRS: I'm sorry to hear this. How can I help you?
You: Would you come with me to see him
PRS : (looking at others) What do you say?
You: Please, I beg you all to come and play for him
Mustached man: Are you joking? Do you know whom you are talking to? Don't bother him with your silly talk.
PRS: Sh! {Silencing him) Be quiet what shall we do Ustad?
Allah Rakha : (after some thought) Don't weep. Don't worry, child We'll be performing tomorrow.

8.In the course of the story, who do you consider to be more worried, Smita or Anant? Have a discussion with the partner / in-group / in the class.
Ans: In the course of the story, Smita worried more.

9. Some incidents in the story are given in a jumbled order. Rearrange them as they occur in the story.
a) Smita bit her lip in self-reproach.
b) A large mustached man gave a long boring speech.
c) Smita read the newspaper and got excited.
d) Pandit Ravi Shankar and Ustad Allah Rakha started playing in the boy's house.
e) Smita was lost in her thoughts in the park
f) Mother said, "This is not the last time they are going to play"
g) Anant said. "It's the chance of a lifetime'.
Ans: c g a f e b d

10.(a) Identify the paragraphs in which the incidents stated above occur.
Ans:a- is in paragraph 5
b -is in paragraph 11
c -is in paragraph 1
d -is in paragraph 16
e -is in paragraph 8
f -is in paragraph 6
g- is in paragraph 4

b) Read each paragraph again and summarise them in your own words.
Ans: Smita read the news paper and git excited. Anant said. It's the chat we of a lifetime. Smita bit her lip in self reproach. Mother said. This is not the last time they are going to play. Suna was lost in her thoughts in the park. A large moustached man gave a long boring speech. Pandit Ravi Shankar and Ustad Alish Rakha started playing in the boy's house

ಪಿಯುಸಿ ಪರೀಕ್ಷೆ ದಿಕ್ಸೂಚಿ — Biology

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

MOLECULAR BASIS OF INHERITANCE

11. Write a note on autosomal disorders.
Ans:- (......Contd)

Individuals with Klinefelter's syndrome have long legs, sparse body hair, small prostate gland, small testes, azospermia, reduced mental intelligence and enlarged breasts in more than 50% of the cases. A barr body is present in the nuclei. Incidence of leg ulcers, osteoporosis and breast carcinoma are common.



Tall stature with feminised character (A)
Short stature and under developed feminine character (B)

A. Klinefelter's syndrome
B. Turner's syndrome

(c) Supermales - The individuals have more than one Y-chromosome (44 + XYY). They are exceptionally tall. Intelligence is subnormal. They produce excess testosterone. Criminal tendencies may occur in many.

(d) Superfemales - They have more than two X–chromosomes (44+ XXX/XXXX). Nuclei possess two or more barr bodies. Mental development is less than normal. Development of sex characters is normal. Fertility may or may not be affected.

12. Differences Between Autosomal and Sex-linked Disorders.

Autosomal Disorders	*Sex-linked Disorders*
The disorder is due to a defective allele present over an autosomal chromosome.	The disorder is due to defective allele present over a sex chromosome.
The alleles producing the disorder are equally distributed to both male and female individuals.	The alleles situated on X-chromosome show criss cross inheritance while Y–linked alleles directly pass to the male offspring.
Both male and female individuals are equally affected.	Being hemizygous, males are more prone to sex-liked disorder.

13. Match the following:-

Column - A
a) Xeroderma pigmentosum
b) Bar eye of Drosophila melanogaster
c) AB blood group
d) Double fertilization
e) Mitosis

Column - B
1) Skin cancer, X – linked
2) Micro tubules, Congression
3) Co-dominance, universal recipient
4) Dominant Mutation, crossing over
5) Zygote & endosperm and Diploid and triploid cells

Ans:- (a) - (1); (b) - (4); (c) – (3); (d) – (2)

14. Fill the gaps of the following paragraph choosing words from the bracket below - (first, second, meiosis, mitosis, 1:1, 1:2, gametes, male, female, 50%, 100%).

In human beings male has XY and female has XX chromosome complement. The sex chromosomes segregate during the (i) ...... division of (ii) .... The X-chromosome constitutes (iii) .... % of produced sperms and (iv) .... % of eggs. If randomly mated, the ratio of sex expression is(v)......... The sex of the offspring is determined by (vi) .... of (vii) ....

Ans:-
In human beings, the male has XY and the female has XX chromosome complement. The sex chromosomes segregate during the (i) **meiosis** division of (ii) **gametes**. The X-chromosome constitutes (iii) **50%** of produced sperms and (iv) **100%** of eggs. If randomly mated, the ratio of sex expression is (v) **1:1**. The sex of the offspring is determined by (vi) **male** of (vii) **gametes.**

15. Colour blindness is a sex-linked disease. It is due to X-chromosome. Normal parents have three normal daughters and one colour blind son. What is the reason for it? Ten possible reasons are given. Find out which are correct.
(i) It is an autosomal linked inheritance.
(ii) It is a sex-linked inheritance.
(iii) Father is a carrier.
(iv) Mother is a carrier
(v) Son acquired character from mother.
(vi) Son acquired character from father.
(vii) Daughter is heterozygous for colour blindness.
(viii) Daughter is homozygous for colour blindness.
(ix) Daughter is heterozygous and homozygous for normal vision.
(x) In future the family may have normal sons.

Ans:- (ii) It is a sex-linked inheritance.
(iv) Mother is a carrier *(Contd.....)*

‘ಮಾತುಕತೆಯಿಂದ ಸಮಸ್ಯೆಗೆ ಪರಿಹಾರ’

ರಾಯರ–ಉತ್ತರಾದಿ ಮಠದ ಶ್ರೀಗಳ ಭೇಟಿ
• ವಿವಾದಕ್ಕೆ ತೆರೆ ಎಳೆಯುವ ಉದ್ದೇಶ

ಪ್ರಜಾವಾಣಿ ವಾರ್ತೆ

ಗಂಗಾವತಿ (ಕೊಪ್ಪಳ ಜಿಲ್ಲೆ): ಆನೆಗೊಂದಿಯಲ್ಲಿ ಇರುವ ಯತಿಗಳ ನವ ವೃಂದಾವನ ಜಾಗದ ವಿವಾದವನ್ನು ಮಾತುಕತೆ ಮೂಲಕ ಬಗೆಹರಿಸಿಕೊಳ್ಳುವ ಕುರಿತು ಮಂತ್ರಾಲಯ ರಾಘವೇಂದ್ರ ಸ್ವಾಮಿಗಳ ಮಠದ ಪೀಠಾಧಿಪತಿ ಸುಬುಧೇಂದ್ರತೀರ್ಥರು ಮತ್ತು ಉತ್ತರಾದಿ ಮಠದ ಪೀಠಾಧಿಪತಿ ಸತ್ಯಾತ್ಮತೀರ್ಥ ಶ್ರೀಗಳು ಒಲವು ವ್ಯಕ್ತಪಡಿಸಿದ್ದಾರೆ.

ತುಂಗಭದ್ರಾ ನದಿ ಮಧ್ಯದಲ್ಲಿರುವ ನವವೃಂದಾವನದಲ್ಲಿ ಪದ್ಮನಾಥ ತೀರ್ಥರ ಆರಾಧನೆ ಆಚರಣೆಗೆ ಮೊದಲ ಒಂದೂವರೆ ದಿನ ರಾಯರ ಮಠ, ನಂತರದ ಒಂದೂವರೆ ದಿನ ಉತ್ತರಾದಿ ಮಠದವರಿಗೆ ನ್ಯಾಯಾಲಯ ಅನುಮತಿ ನೀಡಿತ್ತು.

ಮಂಗಳವಾರದಿಂದ ಮೊದಲ ಒಂದೂವರೆ ದಿನ ರಾಯರ ಮಠದವರು ಆರಾಧನೆ ಆಚರಣೆ ಮಾಡುವಾಗ ಬುಧವಾರ ಸ್ಥಳಕ್ಕೆ ಬಂದ ಸತ್ಯಾತ್ಮತೀರ್ಥರಿಗೆ ಸುಬುಧೇಂದ್ರತೀರ್ಥ ಶ್ರೀಗಳು ಸ್ವಾಗತ ಕೋರಿದರು. ಬಳಿಕ ಇಬ್ಬರೂ ಪದ್ಮನಾಭ ತೀರ್ಥರ ವೃಂದಾವನಕ್ಕೆ ತೆರಳಿ ಮಹಾಮಂಗಳಾರತಿ ನೆರವೇರಿಸಿದರು. ಭಕ್ತರು ಆಗ ಹರ್ಷೋದ್ಗಾರ ವ್ಯಕ್ತಪಡಿಸಿದರು.

ಬಳಿಕ ಮಾತನಾಡಿದ ಸುಬುಧೇಂದ್ರ ತೀರ್ಥರು, ‘ಹಲವು ವರ್ಷಗಳಿಂದ ಉಭಯ ಮಠಗಳ ನಡುವೆ ಇರುವ ವಿವಾದಕ್ಕೆ ತೆರೆ ಎಳೆಯುವ ಉದ್ದೇಶಕ್ಕೆ ಭೇಟಿ ಆಗಿದ್ದೇವೆ’ ಎಂದರು.

ಉತ್ತರಾದಿಮಠದ ಸತ್ಯಾತ್ಮತೀರ್ಥ ಶ್ರೀಪಾದಂಗಳವರು (ಎಡ), ರಾಘವೇಂದ್ರ ಸ್ವಾಮಿ ಮಠದ ಪೀಠಾಧಿಪತಿ ಸುಬುಧೇಂದ್ರತೀರ್ಥರು ಮುಖಾಮುಖಿಯಾದರು.

‘ಈ ಹಿಂದೆ ಚೆನ್ನೈ, ಬೆಂಗಳೂರಿನಲ್ಲಿ ಮಾತುಕತೆ ನಡೆಸಿದ್ದೆವು. ಪ್ರಸ್ತುತ ನಾವು ಯಾವುದೇ ನಿರ್ಧಾರ ಕೈಗೊಳ್ಳುವುದಿಲ್ಲ. ಆದರೆ, ಪರಸ್ಪರ ಮಾತುಕತೆ ನಡೆಸಿ ಒಪ್ಪಂದ ಮಾಡಿಕೊಂಡು ಅದನ್ನು ನ್ಯಾಯಾಲಯದ ಗಮನಕ್ಕೆ ತರುತ್ತೇವೆ’ ಎಂದರು.

ಉತ್ತರಾದಿ ಮಠದ ಶ್ರೀಗಳು ಮಾತನಾಡಿ, ‘ಉಭಯ ಮಠಗಳ ನಡುವಿನ ವಿವಾದಗಳಿಗೆ ಹಲವು ವರ್ಷಗಳ ಇತಿಹಾಸವಿದೆ. ಪರಿಹರಿಸಿಕೊಳ್ಳಲು ಸಮಯ ಬೇಕಾಗುತ್ತದೆ’ ಎಂದರು.

> **ಆದಷ್ಟು ಬೇಗನೆ ಒಂದು ಒಳ್ಳೆಯ ನಿರ್ಧಾರಕ್ಕೆ ಬರಲಾಗುವುದು. ಸನಾತನ ಧರ್ಮದ ರಕ್ಷಣೆಗೆ ನಾವೆಲ್ಲರೂ ಒಂದಾಗುವ ಅಗತ್ಯವಿದೆ**
> **ಸತ್ಯಾತ್ಮತೀರ್ಥ ಶ್ರೀಪಾದರು,** ಪೀಠಾಧಿಪತಿ, ಉತ್ತರಾದಿ ಮಠ

> **ಉತ್ತರಾದಿಮಠದ ಶ್ರೀಗಳ ಜೊತೆ ವ್ಯಕ್ತಿ ದ್ವೇಷ, ವಿವಾದಗಳು ಇಲ್ಲ. ಕೆಲ ವಿಚಾರಕ್ಕೆ ಭಿನ್ನ ಅಭಿಪ್ರಾಯಗಳಿವೆ. ಭಕ್ತರು ಗೊಂದಲ ಸೃಷ್ಟಿಸಬಾರದು**
> **ಸುಬುಧೇಂದ್ರತೀರ್ಥರು,** ಪೀಠಾಧಿಪತಿ, ರಾಯರಮಠ

ಹಸುಗೂಸು ಸಾವು: ಪ್ರಕರಣ ದಾಖಲು

ಹಾವೇರಿ: ಸರ್ಕಾರಿ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆಯ ಶೌಚಾಲಯ ಬಳಿ ಗರ್ಭಿಣಿಗೆ ದಿಢೀರ್ ಹೆರಿಗೆಯಾಗಿ ನೆಲದ ಮೇಲೆ ಬಿದ್ದು ಶಿಶು ಮೃತಪಟ್ಟ ಘಟನೆ ಸಂಬಂಧ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗವು ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡಿದೆ.

ಘಟನೆ ಬಗ್ಗೆ ‘ಪ್ರಜಾವಾಣಿ’ ಪತ್ರಿಕೆಯಲ್ಲಿ ‘ನೆಲಕ್ಕೆ ಬಿದ್ದು ಹಸುಗೂಸು ಸಾವು’ ವರದಿ ಪ್ರಕಟಗೊಂಡಿತ್ತು. ‘ಈ ಬಗ್ಗೆ ತನಿಖೆ ನಡೆಸಿ 3 ದಿನದೊಳಗೆ ವರದಿ ಸಲ್ಲಿಸಿ’ ಎಂದು ಹಾವೇರಿ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗೆ ಸೂಚಿಸಿದೆ.

ಸಾವಿಗೆ ಸರ್ಕಾರವೇ ಹೊಣೆ: ‘ಜಿಲ್ಲಾ ಆಸ್ಪತ್ರೆ ಕಾರಿಡಾರ್‌ನಲ್ಲಿ ಶಿಶು ಅಸುನೀಗಿರುವುದು ಹೃದಯವಿದ್ರಾವಕ ಘಟನೆ. ಇದು ರಾಜ್ಯ ಸರ್ಕಾರದ ಬೇಜವಾಬ್ದಾರಿಗೆ ನಿದರ್ಶನ. ಈ ಸಾವಿಗೆ ಸರ್ಕಾರವೇ ಹೊಣೆ’ ಎಂದು ಸಂಸದ ಬಸವರಾಜ ಬೊಮ್ಮಾಯಿ ಟೀಕಿಸಿದ್ದಾರೆ.

ಮಂತ್ರಾಲಯ: ₹5.41 ಕೋಟಿ ಸಂಗ್ರಹ

ರಾಯಚೂರು: ಮಂತ್ರಾಲಯದ ರಾಘವೇಂದ್ರ ಸ್ವಾಮಿಗಳ ಮಠದ ಹುಂಡಿ ಎಣಿಕೆ ಕಾರ್ಯ ಬುಧವಾರ ನಡೆದಿದ್ದು, ₹5.41 ಕೋಟಿ ಕಾಣಿಕೆ ಸಂಗ್ರಹವಾಗಿದೆ.

ಅ.15ರಿಂದ ನ.17ರವರೆಗಿನ 34 ದಿನಗಳಲ್ಲಿ ₹5,26,89,128 ಮೊತ್ತದ ನೋಟುಗಳು, ₹14,58,100 ಮೊತ್ತದ ನಾಣ್ಯಗಳು ಸೇರಿ ₹5,41,47,228 ನಗದು, 80 ಗ್ರಾಂ ಚಿನ್ನ, 1,610 ಗ್ರಾಂ ಬೆಳ್ಳಿ ಸಂಗ್ರಹವಾಗಿವೆ ಎಂದು ವ್ಯವಸ್ಥಾಪಕರು ತಿಳಿಸಿದರು.

ಬೆಂಗಳೂರು ಕೇಂದ್ರ ನಗರ ಪಾಲಿಕೆ
ಅಧೀಕ್ಷಕ ಅಭಿಯಂತರರ ಕಚೇರಿ, ವಲಯ–1, ಬೆಂ.ಕೇ.ನ.ಪಾ. 18ನೇ ಮಹಡಿ, ಪಿಯು ಕಟ್ಟಡ, ಬೆಂಗಳೂರು – 560001.
ನಂ.: ಸೂಎ/ಬೆಕೇನಪಾ/ವ–1/ಪಿಆರ್/01/2025–26 ನಾಂಕ : 19.11.2025
ಟೆಂಡರ್ ಅಧಿಸೂಚನೆಯ ರದ್ಧತಿ
(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)
"ಬೆಂಗಳೂರು ಕೇಂದ್ರ ನಗರ ಪಾಲಿಕೆ, ವಲಯ–1 ರ ವಿವಿಧ ರಸ್ತೆಗಳಿಗೆ ಪಾರ್ಕಿಂಗ್ ಶುಲ್ಕ ಸಂಗ್ರಹ" ಕ್ಕಾಗಿ ಸದರಿ ಕಚೇರಿಯಿಂದ ಆಹ್ವಾನಿಸಲಾಗಿದ್ದ ಟೆಂಡರ್ ಅಧಿಸೂಚನೆ ಸಂಖ್ಯೆ SE/BCCC/Z-1/TEND/01/2025-26 ದಿನಾಂಕ: 18.11.2025 ರ ಟೆಂಡರ್ ಅನ್ನು ತಾಂತ್ರಿಕ ಕಾರಣಗಳಿಂದ ರದ್ದುಗೊಂಡಿದೆ ಎಂದು ಈ ಮೂಲಕ ತಿಳಿಸಲಾಗಿರುತ್ತದೆ.
ಸಹಿ/– ಅಧೀಕ್ಷಕ ಅಭಿಯಂತರರು–ವಲಯ–1, ಬೆಂ.ಕೇ.ನ.ಪಾ

ಬೆಂಗಳೂರು ಕೇಂದ್ರ ನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ, ಗಾಂಧಿನಗರ ವಿಭಾಗ, 2ನೇ ಮಹಡಿ, ಬೃ.ಬೆಂ.ಮ.ಪಾಲಿಕೆ ಸಂಕೀರ್ಣ, ಧನವಂತ್ರಿ ರಸ್ತೆ, ಬೆಂಗಳೂರು–560 009.
ಸಂಖ್ಯೆ: ಕಾಪಾಅ/ಗಾಂಧಿನಗರ/ಟೆಂಡರ್/ಕೆಪಿಪಿ/006/2025–26 ದಿನಾಂಕ: 18–11–2025
ತಿದ್ದುಪಡಿ–1
ವಿಷಯ: ಟೆಂಡರ್ ಮುಂದೂಡುವ ಬಗ್ಗೆ.
ಉಲ್ಲೇಖ: 1. ಟೆಂಡರ್ ನೋಟಿಫಿಕೇಷನ್ ಸಂಖ್ಯೆ: ಕಾಪಾಅ/ಗಾಂಧಿನಗರ/ಕೆಪಿಪಿ/006/2025–26 ದಿನಾಂಕ: 05–11–2025.
ತಾಂತ್ರಿಕ ಕಾರಣಗಳಿಂದ ಮೇಲ್ಕಂಡ ಟೆಂಡರನ್ನು ಮುಂದೂಡಲಾಗಿದೆ. (1) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ 29–11–2025ರ ಸಂಜೆ 4:00 ಗಂಟೆಯವರೆಗೆ. (2) ಟೆಂಡರ್‌ಗಳನ್ನು ದಿನಾಂಕ: 01–12–2025ರ ಮಧ್ಯಾಹ್ನ 12:30 ಗಂಟೆಗೆ ತೆರೆಯಲಾಗುವುದು. ಉಳಿದ ನಿಬಂಧನೆಗಳಲ್ಲಿ ಯಾವುದೇ ಬದಲಾವಣೆಗಳಿರುವುದಿಲ್ಲ.
ಸಹಿ/– ಕಾರ್ಯಪಾಲಕ ಅಭಿಯಂತರರು, ಗಾಂಧಿನಗರ ವಿಭಾಗ

ದಾವಣಗೆರೆ ವಿಶ್ವವಿದ್ಯಾನಿಲಯ
ದಾವಣಗೆರೆ ವಿಶ್ವವಿದ್ಯಾನಿಲಯ ಕಾರ್ಯಾಲಯ,
ಶಿವಗಂಗೋತ್ರಿ, ದಾವಣಗೆರೆ 577007. ದೂರವಾಣಿ: 08192–208029
ಸಂಖ್ಯೆ: ದಾವಿವಿ/ಕು.ಸ:ಆಶಾ–1:2025–26 ದಿನಾಂಕ: 18.11.2025
ಇ–ಹರಾಜು ಪ್ರಕಟಣೆ
ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ– ಹೆಚ್ಚುವರಿ ಹಣವನ್ನು ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಮಾತ್ರ ನಿಶ್ಚಿತ ಠೇವಣಿಗಳಲ್ಲಿ ಇ–ಹರಾಜು ಮೂಲಕ ಹೂಡಿಕೆ ಮಾಡಲು ಉದ್ದೇಶಿಸುವ ಸಲುವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ (ಕೆ.ಟಿ.ಪಿ.ಪಿ) ಅಧಿನಿಯಮ 1999 ನಿಯಮಗಳು 2000ರ ಪ್ರಕಾರ E-Potral ಮೂಲಕ ಆಹ್ವಾನಿಸಲಾಗಿದೆ. ಇ–ಹರಾಜಿನಲ್ಲಿ ಭಾಗವಹಿಸಲು ಕೊನೆಯ ದಿನಾಂಕ: 25.11.2025 ರಂದು ಸಂಜೆ 05:00 ಗಂಟೆವರೆಗೆ ಸಲ್ಲಿಸಬಹುದಾಗಿದೆ.
Auction Notice Number. Du/2025-26/AUCTION3
Title: e-Auction for Investment of Surplus Funds In Short Term Bank Fixed Deposits
ಹೆಚ್ಚಿನ ಮಾಹಿತಿಗಾಗಿ ಕಚೇರಿ ವೇಳೆಯಲ್ಲಿ ಕಚೇರಿಯನ್ನು ಸಂಪರ್ಕಿಸಲು ಅಥವಾ website:http://kppp.karnataka.gov.in ನಲ್ಲಿ ವಿವರಗಳನ್ನು ಪಡೆಯಬಹುದಾಗಿದೆ.
ಸಹಿ/– ಕುಲಸಚಿವರು, ದಾವಿವಿ, ಶಿವಗಂಗೋತ್ರಿ, ದಾವಣಗೆರೆ
RO No. 000: DIPR/DVG/KSMCA/2025-26

ಕರ್ನಾಟಕ ಸರ್ಕಾರ
(ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ,
ಐ.ಎಫ್.ಟಿ.ಸಂಖ್ಯೆ: 23/2025–26 ದಿನಾಂಕ: 18.11.2025
ಹಾಸನ ಸಣ್ಣ ನೀರಾವರಿ ವಿಭಾಗ ವ್ಯಾಪ್ತಿಯ ಕಾಮಗಾರಿಗಳಿಗೆ ಕೆಡಬ್ಲ್ಯೂ–1&4 ರ ಪ್ರಕಾರ ಅರ್ಹ ಗುತ್ತಿಗೆದಾರರಿಂದ ಐಟಂ ರೇಟ್ ದರದಲ್ಲಿ ಕೆ.ಪಿ.ಪಿ.ಪೋರ್ಟಲ್ https://kppp.karnataka.gov.in ನಲ್ಲಿಚಿಕ್ಕಮಗಳೂರು ಜಿಲ್ಲೆಯ ಕಾಮಗಾರಿಗಳಿಗೆ ಒಂದು ಮತ್ತು ಎರಡು ಲಕೋಟೆ ಪದ್ಧತಿಯಲ್ಲಿ ಅಲ್ಪಾವಧಿ ಟೆಂಡರ್ ಕರೆಯಲಾಗಿದೆ. ಗರಿಷ್ಠ ಟೆಂಡರ್ ಮೊತ್ತ ರೂ.161.22 ಲಕ್ಷಗಳು ಮತ್ತು ಕನಿಷ್ಠ ಟೆಂಡರ್ ಮೊತ್ತ ರೂ.3.20 ಲಕ್ಷಗಳು. ಟೆಂಡರ್ ಸಲ್ಲಿಸುವ ಕಡೆಯ ದಿ: 27–11–2025 ಸಮಯ 17.00 ಗಂಟೆಯವರೆಗೆ. ಹೆಚ್ಚಿನ ವಿವರಗಳಿಗಾಗಿ ಕೆಪಿಪಿ–ಪೋರ್ಟಲ್ ಹಾಗೂ ಕಛೇರಿ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದು.
ಸಹಿ/–ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಹಾಸನ.
ವಾಸಾಸಂಇ/ಹಿಸನಿ/ಹಾಸನ/783/ಕೆಎಸ್ಎಂಸಿಎ/2025–26

ಮೈಸೂರು ಸಕ್ಕರೆ ಕಂಪನಿ ನಿಯಮಿತ, ಮಂಡ್ಯ
(ಕರ್ನಾಟಕ ಸರ್ಕಾರ ಸ್ವಾಮ್ಯಕ್ಕೆ ಒಳಪಟ್ಟಿದೆ)
ಸಕ್ಕರೆ ನಗರ ಮಂಡ್ಯ–571402
ಸಂಖ್ಯೆ: ಎಂ.ಎಸ್.ಕೋ./ಎಮ್.ಎಮ್/78/2025–26 ದಿನಾಂಕ: 19.11.2025
ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ
ಮೈಸೂರು ಸಕ್ಕರೆ ಕಂಪನಿ ನಿಯಮಿತ ಮಂಡ್ಯ ಇದರ ಈ ಕೆಳಕಂಡ ಕೆಲಸ/ ಸಾಮಗ್ರಿ/ ಮಾನವ ಸಂಪನ್ಮೂಲ ಒದಗಿಸಲು, ಕಂಟ್ರಾಕ್ಟರ್/ಏಜೆನ್ಸಿದಾರರಿಂದಲು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಅಲ್ಪಾವಧಿ ಇ–ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಸಂಖ್ಯೆ:MSCO/2025-26/SE0012
ಕ್ರ.ಸಂ.:1. ಸಾಮಾಗ್ರಿಗಳ ವಿವರ: 5000 ಟಿಸಿಡಿ ಸಾಮರ್ಥ್ಯದ ಸಕ್ಕರೆ ಘಟಕ ಮತ್ತು 30 ಮೆ.ವ್ಯಾ. ಸಹ ವಿದ್ಯುತ್ ಘಟಕಕ್ಕೆ ಹೊರಗುತ್ತಿಗೆ ಆಧಾರದ ಮೇಲೆ ಮಾನವ ಸಂಪನ್ಮೂಲ ಒದಗಿಸಿ 2026–27 ಹಾಗೂ 2027–28 ನೇ ಹಂಗಾಮಿನ ದುರಸ್ಥಿ ನಿರ್ವಹಣೆ ಮತ್ತು ಚಾಲನೆ ಹಾಗೂ ನಿರ್ವಹಣೆ ಮಾಡಲು (Turn Key Job) ಪರಿಮಾಣ: 01 ಕೆಲಸ ಇ.ಎಂ.ಡಿ ಹಣ: ರೂ.15,00,000.00 ಇ–ಪ್ರೊಕ್ಯೂರ್‌ಮೆಂಟ್ ಟೆಂಡರನ್ನು www.kppp.karnataka.gov.in ಮುಖಾಂತರ ತುಂಬುವುದು. 1) ಟೆಂಡರನ್ನು ತುಂಬಲು ಕೊನೆಯ ದಿ: 08.12.2025 ಸಂಜೆ:4–00 ರ ವರೆಗೆ 2) ತಾಂತ್ರಿಕ ಬಿಡ್‌ನ್ನು ತೆರೆಯುವ ದಿ: 10.12.2025. 3) ವಾಣಿಜ್ಯ ಬಿಡ್ ತೆರೆಯುವ ದಿನಾಂಕ: 11.12.2025.
ಟೆಂಡರನ್ನು ಸ್ವೀಕರಿಸುವ / ತಿರಸ್ಕರಿಸುವ ಹಕ್ಕನ್ನು ವ್ಯವಸ್ಥಾಪಕ ನಿರ್ದೇಶಕರು ಹೊಂದಿರುತ್ತಾರೆ. ವ್ಯವಸ್ಥಾಪಕ ನಿರ್ದೇಶಕರ ತೀರ್ಮಾನವೇ ಅಂತಿಮವಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಸೆಲ್ 080–25501216/25501227 ಅಥವಾ 9964390489 ರವರನ್ನು ಸಂಪರ್ಕಿಸುವುದು.
ಸಹಿ/– ಪ್ರಧಾನ ವ್ಯವಸ್ಥಾಪಕರು
DIPR/ADMDY/582/2025-26

ಬೆಂಗಳೂರು ಕೇಂದ್ರ ನಗರ ಪಾಲಿಕೆ–ವಲಯ–2
ಕಾರ್ಯಪಾಲಕ ಅಭಿಯಂತರವರ ಕಛೇರಿ, ಚಾಮರಾಜಪೇಟೆ ವಿಭಾಗ, ನಂಜಾಂಬ ಅಗ್ರಹಾರ, 2ನೇ ಮೇನ್, ಟಿ.ಆರ್. ಮಿಲ್ ರೋಡ್, ಚಾಮರಾಜಪೇಟೆ, ಬೆಂಗಳೂರು–560018.
ನಂ.: ಕಾಪಾ/ಸಿಆರ್‌ಪಿ/ಪಿಆರ್/408/2025–26 ದಿನಾಂಕ : 19.11.2025
ತಿದ್ದುಪಡಿ
(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)
ಉಲ್ಲೇಖ :– 1) ಟೆಂಡರ್ ಅಧಿಸೂಚನೆ ಸಂಖ್ಯೆ : EE/CMP/TEND/E-Proc/10/2025-26, dated: 06/11/2025.
ಮೇಲಿನ ಟೆಂಡರ್ ಅಧಿಸೂಚನೆಗಳ ಸಂಖ್ಯೆ: EE/CMP/TEND/E-Proc/10/2025-26, ದಿನಾಂಕ: 06.11.2025 ರಂದು ಅನುಕ್ರಮ ಸಂಖ್ಯೆ 2 (ಕಾಮಗಾರಿಯ ವಿವರ : ಚಾಮರಾಜಪೇಟೆ ವಿಭಾಗದ arterial and sub-arterial ರಸ್ತೆಗಳ ಉದ್ದಕ್ಕೂ ಸಂಚಾರ ಜಂಕ್ಷನ್‌ಗಳ ಸುಧಾರಣೆ) ಆಡಳಿತಾತ್ಮಕ ಕಾರಣಗಳಿಂದ ರದ್ದುಗೊಳಿಸಲಾಗಿದೆ ಮತ್ತು ಕಾರ್ಯಕ್ರಮದ ಮುಂದಿನ ಕ್ಯಾಲೆಂಡರ್ ಅನ್ನು ಪ್ರಕಟಿಸಲಾಗುವುದು/ ತಿಳಿಸಲಾಗುವುದು. ಉಳಿದ ಎಲ್ಲಾ ನಿಯಮಗಳು ಮತ್ತು ಷರತ್ತುಗಳು ಬದಲಾವಣೆಯಾಗಿರುವುದಿಲ್ಲ.
ಸಹಿ/– ಕಾರ್ಯಪಾಲಕ ಅಭಿಯಂತರರು, ಚಾಮರಾಜಪೇಟೆ ವಿಭಾಗ, ಬೆಂ.ಕೇ.ನ.ಪಾ

ಕರ್ನಾಟಕ ಸರ್ಕಾರ
(ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ)
ಕರ್ನಾಟಕ ಜಲಸಾರಿಗೆ ಮಂಡಳಿ
ಕಾರ್ಯನಿರ್ವಾಹಕ ಇಂಜಿನೀಯರರ ಕಚೇರಿ, ಬಂದರು ವಿಭಾಗ, ಬೈತಖೋಲ್, ಕಾರವಾರ, ಉತ್ತರ ಕನ್ನಡ ಜಿಲ್ಲೆ–581302
ದೂ: 08382-229672 ಇ–ಮೇಲ್: eepdkwr4@gmail.com
ನಂ:ಕಾನಿಇಂ/ಬಂವಿಕಾ/ಟೆಂಡರ್/2025–26/753 ದಿನಾಂಕ: 17–11–2025
ಟೆಂಡರ್ ಪ್ರಕಟಣೆ
ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ “PREPARATION OF DPR FOR THE SHORE PROTECTION WORKS IN UTTARA KANNADA DISTRICT AS RECOMMENDED BY SHORELINE MANAGEMENT PLAN KARNATAKA PREPARED BY NCSCM CHENNAI (ಟೆಂಡರ್ ಮೊತ್ತ ರೂ.101.70 ಲಕ್ಷ)” ಕಾಮಗಾರಿಯನ್ನು ಕೈಗೊಳ್ಳಲು ಟೆಂಡರ್ ಕರೆಯಲಾಗಿದ್ದು www.kppp.karnataka.gov.in ನಲ್ಲಿ ಹೆಚ್ಚಿನ ಮಾಹಿತಿ ಪಡೆದು ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಪಾಲ್ಗೊಳ್ಳಬಹುದಾಗಿದೆ. ಸದರಿ ಟೆಂಡರಿನ ಅವಧಿ ವಿಸ್ತರಣೆಯ ಮಾಹಿತಿಯನ್ನು ವೆಬ್‌ಸೈಟ್‌ನಿಂದ ಪಡೆಯತಕ್ಕದ್ದು. ಟೆಂಡರ್ ಬಗ್ಗೆ ಆಕ್ಷೇಪಣೆ ಮತ್ತು ಸ್ಪಷ್ಟೀಕರಣಕ್ಕೆ ಕೊನೆಯ ದಿ: 29–11–2025 ರಂದು 16.00 ಗಂಟೆಯವರೆಗೆ ಮತ್ತು ಟೆಂಡರ್ ಪಡೆಯುವ ದಿನಾಂಕ ಮತ್ತು ವೇಳೆ ದಿ: 02–12–2025 ರಂದು 17.00 ಗಂಟೆಯವರೆಗೆ ಹಾಗೂ ಟೆಂಡರ್ ಮುಂದೂಡಿಕೆಯ ಕುರಿತು ಪ್ರತ್ಯೇಕವಾಗಿ ದಿನಪತ್ರಿಕೆಗಳಲ್ಲಿ ಪ್ರಕಟಣೆ ಮಾಡಲಾಗುವುದಿಲ್ಲ.
ಸಹಿ/– ಕಾರ್ಯನಿರ್ವಾಹಕ ಇಂಜಿನಿಯರ್, ಬಂದರು ವಿಭಾಗ, ಕಾರವಾರ (ಉ.ಕ)
DIPR/ADK/KSMCA/728/25-26 Dt.18.11.2025

ಗಣಿ ಮತ್ತು ಭೂವಿಜ್ಞಾನ ಇಲಾಖೆ
ನಂ.49, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು–01.
ಇ–ಮೇಲ್ : dir-mines@karnataka.gov.in
No. DMG/MLS/Auction/2025-26 Dated: 19.11.2025
ಟೆಂಡರ್ ಆಹ್ವಾನ ಪ್ರಕಟಣೆ
ಗಣಿ ಮತ್ತು ಭೂ ವಿಜ್ಞಾನ ಇಲಾಖೆಯು ಎಂಎಸ್‌ಟಿಸಿ ಪೋರ್ಟಲ್ ಮೂಲಕ ವಿವಿಧ ಪ್ರಕರಣಗಳ ಅಡಿಯಲ್ಲಿ ವಶಪಡಿಸಿಕೊಳ್ಳಲಾದ ಸ್ಟಾಕ್ ಯಾರ್ಡ್ ಗಳಲ್ಲಿರುವ ಹಳೆಯ ಕಬ್ಬಿಣದ ಅದಿರಿನ ರಾಶಿಗಳ ಹಾಗೂ ಸ್ಪಾಂಜ್ ಐರನ್ ಕಾರ್ಖಾನೆಗಳಲ್ಲಿರುವ ಜಪ್ತಿಯಾದ ಕಬ್ಬಿಣದ ಅದಿರಿನ ಮಡಿಗಳ ಹರಾಜಿಗೆ ಟೆಂಡರ್ ಆಹ್ವಾನಿಸಿದೆ.
ಎಲೆಕ್ಟ್ರಾನಿಕ್ ಹರಾಜಿನಲ್ಲಿ ಭಾಗವಹಿಸಲು ಅರ್ಹತಾ ಮಾನದಂಡ, ನಿಯಮ ಹಾಗೂ ನಿಬಂಧನೆಗಳು, ದಿನಾಂಕ ಮತ್ತು ಸಮಯಗಳನ್ನು ಟೆಂಡರ್ ದಾಖಲಾತಿಯಲ್ಲಿ ಒದಗಿಸಲಾಗಿದೆ. ಪ್ರತ್ಯೇಕ ಲಾಟ್ ಪ್ರಕಾರವಾಗಿ ಹರಾಜು ಪ್ರಕಟಣೆಗಳನ್ನು ಎಂಎಸ್‌ಟಿಸಿ ಪೋರ್ಟಲ್ ನಲ್ಲಿ ಪ್ರಕಟಿಸಲಾಗಿದೆ. ಇ–ಹರಾಜು ಪ್ರಕ್ರಿಯೆಯ ಪ್ರತ್ಯೇಕ ಲಾಟ್‌ಗಳ ಬಗ್ಗೆ ಟೆಂಡರ್ ದಾಖಲಾತಿಗಳು, ಪ್ರಕಟಣೆಗಳು, ಅಪ್ಡೇಟ್ ಗಳು ಹಾಗೂ ಇತರೆ ವಿವರಗಳು ಎಂಎಸ್‌ಟಿಸಿ ಲಿಮಿಟೆಡ್ ವೆಬ್‌ಸೈಟ್‌ನಲ್ಲಿ ಎಲೆಕ್ಟ್ರಾನಿಕ್ ರೂಪದಲ್ಲಿ ಲಭ್ಯವಿರುವುದು. https://www.mstcecommerce.com/auctionhome/aucsearch/search.jsp
ಹಳೆಯ ಸಂಗ್ರಹಣೆಯ ಕಬ್ಬಿಣದ ಅದಿರಿನ ಪ್ರತಿ ಲಾಟ್‌ನ ಹರಾಜು “ಎಲ್ಲಿದಿಯೋ ಅಲ್ಲಿ, ಹೇಗಿದೆಯೋ ಹಾಗೆ ಮತ್ತು ದೂರು ರಹಿತ ಆಧಾರದಲ್ಲಿ” ಇರುತ್ತದೆ. ಆಸಕ್ತಿಯುಳ್ಳ ಬಿಡ್‌ದಾರರು ಭಾಗವಹಿಸುವ ಮುನ್ನ ಕಬ್ಬಿಣ/ಮ್ಯಾಂಗನೀಸ್ ಅದಿರಿನ ಪ್ರಮಾಣ ಮತ್ತು ಗುಣಮಟ್ಟವನ್ನು ಖಚಿತಪಡಿಸಿಕೊಳ್ಳಬೇಕು. ಬಿಡ್ ದೃಢೀಕರಿಸಿದ ನಂತರ ಉದ್ಭವಿಸುವ ಯಾವುದೇ ವಿವಾದಕ್ಕೆ ಇಲಾಖೆಯು ಜವಬ್ದಾರಿಯಾಗುವುದಿಲ್ಲ.
ಆಸಕ್ತಿಯುಳ್ಳ ಬಿಡ್ ದಾರರು ಎಂಎಸ್‌ಟಿಸಿ ವೆಬ್‌ಸೈಟ್‌ಗೆ ಭೇಟಿ ನೀಡುವುದು.
ಸಹಿ/– ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ
ವಾ.ಸಾ.ಸಂ.ಇ/ವಾಪ್ರ/3922/ಆಕಾರ್/2025–26

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರರ ಕಚೇರಿ, ಕನೀನಿನಿ, ಘ.ಬ.ದಂ.ಕಾ.ನಿ ವಿಭಾಗ–4, ಚಿಕ್ಕೋಡಿ. ದೂರವಾಣಿ ಸಂಖ್ಯೆ: 08338–272485
ಸಂಖ್ಯೆ:ಕನೀನಿನಿ/ಜಿಆರ್‌ಬಿಸಿ ವಿ–4/ಪಿಬಿ–1/ದರವಿಚಾರಣೆ/2025–26/2033 ದಿನಾಂಕ: 18–11–2025
ದರ ವಿಚಾರಣಾ ಅಧಿಸೂಚನೆ (ಅಂದಾಜು ಪತ್ರಿಕೆ ತಯಾರಿಸಲು)
ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ, ಬೆಂಗಳೂರು ಇವರ ಪರವಾಗಿ ಈ ಕೆಳಗೆ ಸಹಿ ಮಾಡಿದವರ ಕಚೇರಿಯಿಂದ **ಮಹಾಲಕ್ಷ್ಮಿ ಏತ ನೀರಾವರಿ ಯೋಜನೆಯ ಹಂತ–2 ಕ್ಕೆ ಸಂಬಂಧಿಸಿದಂತೆ ವಿವರವಾದ ಅಂದಾಜು ಪತ್ರಿಕೆಯನ್ನು ತಯಾರಿಸಲು** ಈ ಕೆಳಗೆ ಕಾಣಿಸಿದ ಐಟಂಗಳಿಗೆ **ದರ ವಿಚಾರಣೆಯನ್ನು** ಆಹ್ವಾನಿಸಲಾಗಿದ್ದು, ಜಿ.ಎಸ್.ಟಿ ನೋಂದಣಿ ಹೊಂದಿದ ಅರ್ಹ ತಯಾರಕರು/ ವಿತರಕರು/ ಗುತ್ತಿಗೆದಾರರು ಸೀಲ್ ಮಾಡಲಾದ ಕವರ್‌ಗಳಲ್ಲಿ ತಮ್ಮ **ದರ ವಿಚಾರಣೆ (Rate Quotation)** ಗಳನ್ನು (ಜಿ.ಎಸ್.ಟಿ ಹೊರತುಪಡಿಸಿ) ಜಿ.ಎಸ್.ಟಿ ನೋಂದಣಿ ಪ್ರಮಾಣ ಪತ್ರದ ಪ್ರತಿಯೊಂದಿಗೆ ಈ ಕೆಳಗೆ ಸಹಿ ಮಾಡಿದವರ ಕಚೇರಿಗೆ ಸಲ್ಲಿಸಬಹುದಾಗಿದೆ.

Sl.No.	Item Description
I	**Pumping Machinery & Electrical**
1	Supplying and fixing, assembling, erecting and commissioning of Butterfly valve actuator DOL panel board with push button starter and all other accessories including wiring for specified number of valves etc. complete with all leads and lifts. (Unit Rate in Nos)
2	Providing erecting and commissioning MS Dismantling joint as per requirement and department's approved drawing and specifications including machining and rubber rings and suitable for 25 kg/cm2 working pressure with required flanges of suitable size with nut bolts etc. complete The Joint should have through long bolts so that during normal working pressure there should be no sliding movement of sliding flanges L.O.F (Length over flange) should not be less than 75% of dia (Unit Rate - No.s)
3	Supply of 12500 KVA, 110/6.6 kV ONAN, Copper wound Oil Cooled Power 3 Transformer with OLTC and RTCC panel as per IS Code (Unit Rate in No.s)
II	**Civil Works**
4	DID/F BUTTERFLY VALVES AS PER IS: 13095 **WITH MANUAL GEAR** OPTD, FLANGES DRILL TO IS: 1538/BS 4504 of specified diameter with all fixtures including cost of all materials, machinery, labour etc., including associated MS Stub and flanges, complete with all leads and lifts, **for 1500 mm dia PN 10 Butterfly valve** (Unit Rate in No.s)
5	Ductile Iron Single chamber Triple Function **Tamper Proof Air Valve** as per AWWA C-512 with Body & Cover of Ductile iron/S G. iron, SS Float and Gasket of EPDM with Liquid Epoxy Coating both inside & outside PN-1.0 with isolation valve, Flange drilling as per IS. 1538, Flat Faced WITH COMP FLANGES, BOLTS, NUTS & GASKET ETC, **For TP Air Valves of 250mm dia** (Unit Rate in No.s)
6	Supplying and Fixing Mild Steel (MS) fabricated expansion joint confirming to IS 2062 E250BR etc. Complete **for 1500 mm dia PN 10 Butterfly valve** (Unit Rate in No.s)
7	Providing and installation of Class Sn8 Double Wall Corrugated HDPE Specials outer wall corrugated and inner wall smooth piping system in accordance with IS 16098 part 2 and conveying to work site and lowering into trenches, laying true to line and level and perfect linking at joints with the help of two “O” rings and a coupler of suitable size, including loading and unloading at both destination and cutting of pipes where ever necessary including jointing with all labour, all lead and lift including encasing the Specials around to a depth of not less than 15 cm with screened soft soil available from the excavated soil. The testing commissioning including necessary hydraulic test to the required pressure as per ISS shall be done the contractor shall have to make his own arrangement for procuring water for testing etc complete. (Unit Rate - Each)
	400 ID TEE - fitting of Air valves on 400 mm and above pipes
	355 ID TEE - fitting of Air valves on 355 mm pipes
	315 ID TEE - fitting of Air valves on 315 mm pipes
	280 ID TEE - fitting of Air valves on 280 mm pipes
	250 ID TEE - fitting of Air valves on 250 mm pipes
	225 ID TEE - fitting of Air valves on 225 mm pipes
	200 ID TEE - fitting of Air valves on 200 mm pipes
	180 ID TEE - fitting of Air valves on 180 mm pipes
	160 ID TEE - fitting of Air valves on 160 mm pipes

ಟಿಪ್ಪಣಿ: ಮೇಲಿನ ಐಟಂಗಳಿಗೆ ಸಲ್ಲಿಸಬೇಕಾದ ದರಗಳು ಜಿಎಸ್‌ಟಿಯಿಂದ ಪ್ರತ್ಯೇಕವಾಗಿರಬೇಕು (Excluding GST).
ದರ ವಿಚಾರಣೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: 26–11–2025 ರಂದು ಮಧ್ಯಾಹ್ನ 2.00 ಗಂಟೆಯವರೆಗೆ. ಹೆಚ್ಚಿನ ಮಾಹಿತಿಗಾಗಿ ಈ ಕೆಳಗೆ ಸಹಿ ಮಾಡಿದವರ ಕಚೇರಿಯಲ್ಲಿ (ದೂರವಾಣಿ ಸಂಖ್ಯೆ: 08338–272485) ಅಥವಾ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರು, ಕನೀನಿನಿ, ಡಿಪಿ ಉಪ ವಿಭಾಗ ನಿಪ್ಪಾಣಿ ಕಚೇರಿಯಲ್ಲಿ, ಕಚೇರಿ ಸಮಯದಲ್ಲಿ ಸಂಪರ್ಕಿಸಬಹುದು.
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಕನೀನಿನಿ, ಘಬದಂಕಾನಿ ವಿಭಾಗ–4, ಚಿಕ್ಕೋಡಿ.
ವಾಸಾಸಂಇ/ಬೆಳಗಾವಿ/1349/ಅಡ್ವರ್ಟೋರ್/2025–26

ಬೆಂಗಳೂರು ಕೇಂದ್ರ ನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ, ಚಾಮರಾಜಪೇಟೆ ವಿಭಾಗ, 2ನೇ ಮುಖ್ಯ, ಟಿ.ಆರ್. ಮಿಲ್ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 18
ಸಂಖ್ಯೆ:ಕಾಪಾಅ/ಚಾಪೇ/ಟೆಂಡರ್/ಇ–ಪ್ರೊಕ್/11/2025–26 ದಿನಾಂಕ:19.11.2025
ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)
ದ್ವಿಲಕೋಟೆ ಪದ್ಧತಿ (ಸ್ಟ್ಯಾಂಡರ್ಡ್ ಟೆಂಡರ್ ದಾಖಲೆ ಕೆಡಬ್ಲ್ಯೂ–4)
(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)
ಕಾರ್ಯಪಾಲಕ ಅಭಿಯಂತರರು, ಚಾಮರಾಜಪೇಟೆ ವಿಭಾಗ, ಬೆ.ಕೇ.ನ. ಪಾಲಿಕೆ ವಲಯ–2, ಇವರು ಆಯುಕ್ತರು, ಬೆ.ಕೇ.ನ. ಪಾಲಿಕೆ, ಬೆಂಗಳೂರು ಕೆಪಿಡಬ್ಲ್ಯೂಡಿ/ಬೃ.ಬೆಂ.ಮ.ಪಾಲಿಕೆ ಇವರ ಪರವಾಗಿ ಅರ್ಹ ಗುತ್ತಿಗೆದಾರರಿಂದ ಕೆ.ಪಿ.ಡಬ್ಲ್ಯೂ.ಡಿ/ಸಿ.ಪಿ.ಡಬ್ಲ್ಯೂ.ಡಿ/ರೈಲ್ವೇಸ್/ಎಂ.ಇ.ಎಸ್/ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ 1ನೇ ದರ್ಜೆಯಲ್ಲಿ ನೋಂದಾಯಿಸಿಕೊಂಡಿರುವ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು
1	ಚಾಮರಾಜಪೇಟೆ ವಿಭಾಗದಲ್ಲಿ ಹಾನಿಗೊಳಗಾದ ಚರಂಡಿ ಮತ್ತು ಪಾದಚಾರಿ ಮಾರ್ಗಗಳ ಪುನಶ್ಚೇತನ ಒಳಗೊಂಡಂತೆ ಪ್ರಧಾನ ಮತ್ತು ಉಪಪ್ರಧಾನ ರಸ್ತೆಗಳಲ್ಲಿ ಹದಗೆಟ್ಟ ಸ್ಟ್ರೆಚಸ್‌ಗಳಿಗೆ ರೀಸರ್ಫೇಸಿಂಗ್ ಮಾಡುವುದು. **ಅಂದಾಜು ಮೊತ್ತ (ಜಿಎಸ್‌ಟಿ ಒಳಗೊಂಡಂತೆ) ₹.2000.00 ಲಕ್ಷಗಳು, ಇಎಂಡಿ ಮೊತ್ತ: ₹.16.50 ಲಕ್ಷಗಳು (ರೂ. 1.00 ಲಕ್ಷ ಆನ್‌ಲೈನ್ ಮತ್ತು ಉಳಿದ ಮೊತ್ತ ಬಿಜಿ/ಎಫ್‌ಡಿಆರ್ ಮೂಲಕ)**

ಟೆಂಡರ್ ವೇಳಾಪಟ್ಟಿ: (1) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್‌ನಲ್ಲಿ ದಿನಾಂಕ 24–11–2025ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಬಿಡ್ ಪೂರ್ವಭಾವಿ ಸಭೆಯನ್ನು ದಿನಾಂಕ 28–11–2025ರ ಬೆಳಗ್ಗೆ 11:00 ಗಂಟೆಗೆ ಮುಖ್ಯ ಅಭಿಯಂತರರ ಕಚೇರಿ, (ಕೇಂದ್ರ, ವಲಯ–2) ಅನೆಕ್ಸರ್–3 ಜಿಬಿಎ ಮುಖ್ಯ ಕಚೇರಿ, ಬೆಂಗಳೂರು ಇಲ್ಲಿ ನಡೆಸಲಾಗುವುದು. (3) ತಾಂತ್ರಿಕ ಬಿಡ್‌ಗಳನ್ನು ದಿನಾಂಕ: 03–12–2025ರ ಸಂಜೆ 5:00 ಗಂಟೆಗೆ ತೆರೆಯಲಾಗುವುದು. (4) ತಾಂತ್ರಿಕ ಬಿಡ್ ಅನುಮೋದನೆಯ ನಂತರ ಆರ್ಥಿಕ ಬಿಡ್ ತೆರೆಯಲಾಗುತ್ತದೆ. (ಸಾಧ್ಯವಾದಲ್ಲಿ)
ಸಹಿ/– ಕಾರ್ಯಪಾಲಕ ಅಭಿಯಂತರರು, ಚಾಮರಾಜಪೇಟೆ ವಿಭಾಗ

ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ
ಕಲ್ಯಾಣ ಸುರಕ್ಷಾ ಭವನ, ಐಟಿಐ ಕಾಲೇಜು ಆವರಣ, ಡೈರಿ ಸರ್ಕಲ್, ಬನ್ನೇರುಘಟ್ಟ ರಸ್ತೆ, ಬೆಂಗಳೂರು–560 029. ಕರ್ನಾಟಕ
ಫೋನ್: 080–29753354/56, ಇ–ಮೇಲ್: karbuildworkerswelfare@gmail.com
ಸಂಖ್ಯೆ: KBOCWWB/E-Auction/FD-10/CR-04/2025-26 ದಿನಾಂಕ:19–11–2025
ಇ–ಆಕ್ಷನ್ ಪ್ರಕಟಣೆ
ವಿಷಯ: ಮಂಡಳಿಯ ಹೆಚ್ಚುವರಿ ಸುಂಕದ ಮೊತ್ತವನ್ನು 1 ವರ್ಷದ ಅವಧಿಗೆ ನಿಶ್ಚಿತ ಠೇವಣಿ/Non- Callable ನಲ್ಲಿ ತೊಡಗಿಸಲು ಇ–ಟೆಂಡರ್ ಮೂಲಕ ಬಡ್ಡಿ ದರಗಳನ್ನು ಆಹ್ವಾನಿಸುವ ಬಗ್ಗೆ.
ಮಂಡಳಿಯ ಉಳಿತಾಯ ಖಾತೆಯಲ್ಲಿ ಉಳಿದಿರುವ ಮೊತ್ತ ರೂ. 400.00 ಕೋಟಿಯಿಂದ ರೂ. 500.00 ಕೋಟಿ (ರೂಪಾಯಿ ನಾಲ್ಕು ನೂರು ಕೋಟಿಯಿಂದ ಐದು ನೂರು ಕೋಟಿ ಮಾತ್ರ) ಒಂದು ವರ್ಷದ ಅವಧಿಗೆ ನಿಶ್ಚಿತ ಠೇವಣಿ / Non-Callable ನಲ್ಲಿ ತೊಡಗಿಸಲು ಇ–ಆಕ್ಷನ್ ಬಿಡ್ಡಿಂಗ್ ವ್ಯವಸ್ಥೆ ಮಾದರಿಯಲ್ಲಿ KPPP ಪೋರ್ಟಲ್, ಕರ್ನಾಟಕ ಸರ್ಕಾರ ಇದರಲ್ಲಿ ಅರ್ಹ ರಾಷ್ಟ್ರೀಕೃತ ಬ್ಯಾಂಕ್‌ಗಳ ಪ್ರಾದೇಶಿಕ / ವಲಯ / ಮುಖ್ಯ ಕಛೇರಿಗಳಿಂದ ಸ್ಪರ್ಧಾತ್ಮಕ ಬಡ್ಡಿದರವನ್ನು ಆಹ್ವಾನಿಸಲಾಗಿದೆ.
ಸದರಿ ಇ–ಆಕ್ಷನ್ ಅನ್ನು ವಿದ್ಯುನ್ಮಾನ ಮೂಲಕವಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ (https://kppp.karnataka.gov.in/) ಸಲ್ಲಿಸುವುದು. ದಾಖಲಾತಿಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: **27.11.2025 ಸಂಜೆ 4.00 ರೊಳಗಾಗಿ** ಹೆಚ್ಚಿನ ವಿವರಗಳಿಗಾಗಿ ಮಂಡಳಿಯ ಉಪ ನಿಯಂತ್ರಕರು, ಫೋನ್: 080–29753350/54/56, ಫೋನ್: 9164759606 ರವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.
ಸಹಿ/– ಜಂಟಿ ಕಾರ್ಯದರ್ಶಿ, ಕ.ಕ.ಇ.ನಿ.ಕಾ.ಕ.ಮಂಡಳಿ
ವಾಸಾಸಂಇ/ವಾಪ್ರ/3918/ಜೆಎ/2025–26

ಬೆಂಗಳೂರು ದಕ್ಷಿಣ ನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರವರ ಕಚೇರಿ, ಕೂಡ್ಲು ವಿಭಾಗ, ಬೇಗೂರು ಮುಖ್ಯ ರಸ್ತೆ, ಬೊಮ್ಮನಹಳ್ಳಿ, ಬೆಂಗಳೂರು–560068.
ಸಂಖ್ಯೆ: ಬೆಂದನಪಾ/ಕಾಪಾಅ/ಕೂವಿ/ಟೆಂಡರ್–01/2025–26 ದಿನಾಂಕ: 19–11–2025
ಟೆಂಡರ್‌ಗಾಗಿ ಆಹ್ವಾನ ಪ್ರಕಟಣೆ (ಐಎಫ್‌ಟಿ)
ಅಲ್ಪಾವಧಿ ಟೆಂಡರ್ ಪ್ರಕಟಣೆ
ದ್ವಿ–ಲಕೋಟೆ ಪದ್ಧತಿ (ಜಿಓಕೆ ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ)
ಕಾರ್ಯಪಾಲಕ ಅಭಿಯಂತರರು, ಕೂಡ್ಲು ವಿಭಾಗ, ದಕ್ಷಿಣ ವಲಯ–2, ಬಿಎಸ್‌ಸಿಸಿ ಬೆಂಗಳೂರು ಇವರು ಆಯುಕ್ತರು, ಬಿಎಸ್‌ಸಿಸಿ ಇವರ ಪರವಾಗಿ ಈ ಕೆಳಕಂಡ ಕಾಮಗಾರಿಗಾಗಿ ಬಿಬಿಎಂಪಿ ಅಥವಾ ಸಿಪಿಡಬ್ಲ್ಯೂಡಿ/ಕೆಪಿಡಬ್ಲ್ಯೂಡಿ/ರೈಲ್ವೇಸ್/ಎಂಇಎಸ್/ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೊಂದಾಯಿತಗೊಂಡ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು
1	ವಿಶೇಷ ಇನ್ಫ್ರಾ ಯೋಜನೆಗಳಿಗೆ ಬಂಡವಾಳ ಬೆಂಬಲದಡಿ (ಸಿಎಸ್‌ಎಸ್‌ಐಪಿ) ಶೋಲ್ಡರ್ ರಚನೆ, ಬದಿ ಚರಂಡಿ, ಸರಿಯಾದ ಕ್ಯಾಂಬರ್ ಜೊತೆಗೆ ರೀಸರ್ಫೇಸಿಂಗ್ ಮಾಡುವುದರೊಂದಿಗೆ ಹಾಲಿಯಿರುವ ಡಾಂಬರು ರಸ್ತೆಯ ಸುಧಾರಣೆಗಳು ಹಾಗೂ ಆಯ್ದ ಮುಖ್ಯ, ಉಪ ಮುಖ್ಯ ಮತ್ತು ಇತರೆ ಪ್ರಮುಖ ರಸ್ತೆಗಳ ಸುಧಾರಣೆ (ಸರ್ಕಾರದ ಬಿಎಸ್‌ಸಿಸಿ **ಕ್ರ.ಸಂ. 74, 77ರಂತೆ** ಒಟ್ಟು 2 ಕಾಮಗಾರಿಗಳನ್ನು ಒಳಗೊಂಡಿರುತ್ತದೆ.) **ಪ್ಯಾಕೇಜ್ ನಂ. ಸಿಎಸ್‌ಎಸ್‌ಐಪಿ ಎಂಡಿಪಿ–01.**
	ಟೆಂಡರ್‌ಗಿಟ್ಟ ಮೊತ್ತ : **ರೂ. 935.70 ಲಕ್ಷಗಳು.** ಇಎಂಡಿ: **ರೂ. 14,03,550/–** (ರೂ. 1.00 ಲಕ್ಷವನ್ನು ಇ–ಪೋರ್ಟಲ್ ಮೂಲಕ ವರ್ಗಾಯಿಸಬೇಕು ಮತ್ತು ಉಳಿಕೆ ಮೊತ್ತವನ್ನು ಬಿಜಿ/ಡಿಡಿ/ಎಫ್‌ಡಿಆರ್ ಮೂಲಕ ಸಲ್ಲಿಸಬೇಕು).
2	ವಿಶೇಷ ಇನ್ಫ್ರಾ ಯೋಜನೆಗಳಿಗೆ ಬಂಡವಾಳ ಬೆಂಬಲದಡಿ (ಸಿಎಸ್‌ಎಸ್‌ಐಪಿ) ಶೋಲ್ಡರ್ ರಚನೆ, ಬದಿ ಚರಂಡಿ, ಸರಿಯಾದ ಕ್ಯಾಂಬರ್ ಜೊತೆಗೆ ರೀಸರ್ಫೇಸಿಂಗ್ ಮಾಡುವುದರೊಂದಿಗೆ ಹಾಲಿಯಿರುವ ಡಾಂಬರು ರಸ್ತೆಯ ಸುಧಾರಣೆಗಳು ಹಾಗೂ ಆಯ್ದ ಮುಖ್ಯ, ಉಪ ಮುಖ್ಯ ಮತ್ತು ಇತರೆ ಪ್ರಮುಖ ರಸ್ತೆಗಳ ಸುಧಾರಣೆ (ಸರ್ಕಾರದ ಬಿಎಸ್‌ಸಿಸಿ **ಕ್ರ.ಸಂ. 75, 76ರಂತೆ** ಒಟ್ಟು 2 ಕಾಮಗಾರಿಗಳನ್ನು ಒಳಗೊಂಡಿರುತ್ತದೆ.) **ಪ್ಯಾಕೇಜ್ ನಂ. ಸಿಎಸ್‌ಎಸ್‌ಐಪಿ ಎಂಡಿಪಿ–02.**
	ಟೆಂಡರ್‌ಗಿಟ್ಟ ಮೊತ್ತ : **ರೂ. 983.80 ಲಕ್ಷಗಳು.** ಇಎಂಡಿ: **ರೂ. 14,75,700/–** (ರೂ. 1.00 ಲಕ್ಷವನ್ನು ಇ–ಪೋರ್ಟಲ್ ಮೂಲಕ ವರ್ಗಾಯಿಸಬೇಕು ಮತ್ತು ಉಳಿಕೆ ಮೊತ್ತವನ್ನು ಬಿಜಿ/ಡಿಡಿ/ಎಫ್‌ಡಿಆರ್ ಮೂಲಕ ಸಲ್ಲಿಸಬೇಕು).
3	ವಿಶೇಷ ಇನ್ಫ್ರಾ ಯೋಜನೆಗಳಿಗೆ ಬಂಡವಾಳ ಬೆಂಬಲದಡಿ (ಸಿಎಸ್‌ಎಸ್‌ಐಪಿ) ಶೋಲ್ಡರ್ ರಚನೆ, ಬದಿ ಚರಂಡಿ, ಸರಿಯಾದ ಕ್ಯಾಂಬರ್ ಜೊತೆಗೆ ರೀಸರ್ಫೇಸಿಂಗ್ ಮಾಡುವುದರೊಂದಿಗೆ ಹಾಲಿಯಿರುವ ಡಾಂಬರು ರಸ್ತೆಯ ಸುಧಾರಣೆಗಳು ಹಾಗೂ ಆಯ್ದ ಮುಖ್ಯ, ಉಪ ಮುಖ್ಯ ಮತ್ತು ಇತರೆ ಪ್ರಮುಖ ರಸ್ತೆಗಳ ಸುಧಾರಣೆ (ಸರ್ಕಾರದ ಬಿಎಸ್‌ಸಿಸಿ **ಕ್ರ.ಸಂ. 34, 50, 49, 78ರಂತೆ** ಒಟ್ಟು 4 ಕಾಮಗಾರಿಗಳನ್ನು ಒಳಗೊಂಡಿರುತ್ತದೆ.) **ಪ್ಯಾಕೇಜ್ ನಂ. ಸಿಎಸ್‌ಎಸ್‌ಐಪಿ ಬಿಹೆಚ್–03.**
	ಟೆಂಡರ್‌ಗಿಟ್ಟ ಮೊತ್ತ : **ರೂ. 799.10 ಲಕ್ಷಗಳು.** ಇಎಂಡಿ: **ರೂ. 11,98,650/–** (ರೂ. 1.00 ಲಕ್ಷವನ್ನು ಇ–ಪೋರ್ಟಲ್ ಮೂಲಕ ವರ್ಗಾಯಿಸಬೇಕು ಮತ್ತು ಉಳಿಕೆ ಮೊತ್ತವನ್ನು ಬಿಜಿ/ಡಿಡಿ/ಎಫ್‌ಡಿಆರ್ ಮೂಲಕ ಸಲ್ಲಿಸಬೇಕು).

ಕಾಮಗಾರಿ ಪೂರ್ಣಗೊಳಿಸಲು ಕಾಲಾವಧಿ: **180 ದಿನಗಳು (ಪ್ರತಿ ಕಾಮಗಾರಿಗೆ).**
ಟೆಂಡರ್ ದಿನಾಂಕಗಳು : (1) ಟೆಂಡರ್ ದಾಖಲೆಗಳನ್ನು ಕೆಪಿಪಿ ಪೋರ್ಟಲ್ https://kppp.karnataka.gov.inನಿಂದ **ದಿನಾಂಕ: 24.11.2025** ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಪೂರ್ವ–ಬಿಡ್ ಸಭೆಯ ದಿನಾಂಕ: **26.11.2025ರಂದು ಬೆಳಿಗ್ಗೆ 11.00 ಗಂಟೆಗೆ – ಕಾರ್ಯಪಾಲಕ ಅಭಿಯಂತರರು, ಕೂಡ್ಲು ವಿಭಾಗ, ಬೇಗೂರು ಮುಖ್ಯರಸ್ತೆ, ಬೊಮ್ಮನಹಳ್ಳಿ, ಬೆಂಗಳೂರು–68** ಇವರ ಕಚೇರಿಯಲ್ಲಿ. (3) ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **06.12.2025ರ ಸಂಜೆ 4.00 ಗಂಟೆಯವರೆಗೆ.** (4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **08.12.2025ರಂದು ಸಂಜೆ 4.30 ಗಂಟೆಯ ನಂತರ, ಕಾರ್ಯಪಾಲಕ ಅಭಿಯಂತರರು, ಬೊಮ್ಮನಹಳ್ಳಿ ವಿಭಾಗ ಇವರ ಕಚೇರಿಯಲ್ಲಿ.** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ಕೆಪಿಪಿ ಪೋರ್ಟಲ್ https://kppp.karnataka.gov.in ನಲ್ಲಿ ಪಡೆದುಕೊಳ್ಳಬಹುದಾಗಿದೆ.
ಸಹಿ/– ಕಾರ್ಯಪಾಲಕ ಅಭಿಯಂತರರು, ಕೂಡ್ಲು ವಿಭಾಗ, ಬೃದನಪಾ

ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)
"ಸಂಪರ್ಕ ಸೌಧ", ಸರ್ವೆ ನಂ.8, ಡಾ॥ ರಾಜ್ ಕುಮಾರ್ ರಸ್ತೆ, ರಾಜಾಜಿನಗರ 1ನೇ ಹಂತ, ಬೆಂಗಳೂರು–560010. ಫೋನ್ ನಂ.: 080–22024000.
ಇ–ಮೇಲ್: cekrdcl@gmail.com, ವೆಬ್‌ಸೈಟ್: http://www.krdcl.in
ಸಂಖ್ಯೆ: ಕೆಆರ್‌ಡಿಸಿಎಲ್/ಐಎಫ್‌ಬಿ/2025–26/16 ದಿನಾಂಕ: 18–11–2025
ಅಲ್ಪಾವಧಿಯ ಆಹ್ವಾನ ಬಿಡ್‌ಗಳಿಗೆ
(ಕೆಪಿಪಿ ಪೋರ್ಟಲ್ ಮೂಲಕ)
ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತವು [ಕೆಆರ್‌ಡಿಸಿಎಲ್] **“ಬೆಂಗಳೂರಿನ ಸುತ್ತಮುತ್ತಲಿನ ರಸ್ತೆಗಳಲ್ಲಿ (ಪ್ಯಾಕೇಜ್–3ಬಿ) ಅಡಿಯಲ್ಲಿ "ಬನ್ನೇರುಘಟ್ಟದಿಂದ ಎಸ್‌ಹೆಚ್–87 ರ ಬೆಸ್ತಮನಹಳ್ಳಿಗೆ ಎಸ್‌ಹೆಚ್–35 ಜಿಗಣಿ, ಹಾರಗದ್ದೆ ಮತ್ತು ಇಂಡಲ್ವಾಡಿ (ಕಿ.ಮೀ 0+000 ರಿಂದ 22+980) ರಸ್ತೆ ಅಭಿವೃದ್ಧಿಗಾಗಿ ಇಪಿಸಿ ಒಪ್ಪಂದದಡಿಯಲ್ಲಿ ಬಸ್ ಶೆಲ್ಟರ್‌ಗಳ ನಿರ್ಮಾಣ ಕಾಮಗಾರಿ" – 3ನೇ ಕರೆ”.** ಎರಡು ಹಂತದ ಟೆಂಡರ್ ವಿಧಾನದ ಮೇಲೆ ಐಟಂ ದರ ಟೆಂಡರ್ ಆಧಾರದ ಮೇಲೆ ಬಸ್ ಶೆಲ್ಟರ್‌ಗಳ ನಿರ್ಮಾಣವನ್ನು ಕೈಗೆತ್ತಿಕೊಳ್ಳಲು ಪ್ರಸ್ತಾಪಿಸಲಾಗಿದೆ. ಒಟ್ಟು ಬಸ್ ಶೆಲ್ಟರ್‌ಗಳ ಸಂಖ್ಯೆ: **15.** ಟೆಂಡರಿಗಿಟ್ಟಿರುವ ಮೊತ್ತ: **ರೂ.88.27 ಲಕ್ಷಗಳು.** ಇಎಂಡಿ ಮೊತ್ತ **ರೂ.0.89 ಲಕ್ಷ ಕೆಪಿಪಿಪಿ ಮೂಲಕ.** ಕಾಮಗಾರಿ ಪೂರ್ಣಗೊಳ್ಳುವ ಕಾಲಾವಧಿ (ಮಳೆಗಾಲ ಸೇರಿದಂತೆ): **3 (ಮೂರು) ತಿಂಗಳು.**
(1) ಆಸಕ್ತ ಬಿಡ್ದಾರರು ಬಿಡ್ಡಿಂಗ್ ದಾಖಲೆಗಳನ್ನು ಪ್ರವೇಶಿಸಬಹುದು ಮತ್ತು ಕೆಪಿಪಿ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಅಪ್‌ಲೋಡ್ ಮಾಡಬಹುದು ಮತ್ತು ದಾಖಲೆಗಳನ್ನು ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಬಹುದು: https://kppp.karnataka.gov.in (2) ತಾಂತ್ರಿಕ ಬಿಡ್‌ಗಳು, ಇ ಎಂಡಿ ಮತ್ತು ಹಣಕಾಸು ಬಿಡ್‌ಗಳನ್ನು ಬಿಡ್ಡಿಂಗ್ ದಾಖಲೆಗಳಲ್ಲಿನ ಸೂಚನೆಗಳ ಪ್ರಕಾರ ಸಲ್ಲಿಸಬೇಕು. (3) ವಿವಿಧ ಚಟುವಟಿಕೆಗಳಿಗೆ ದಿನಾಂಕಗಳ ವೇಳಾಪಟ್ಟಿ ಈ ಕೆಳಗಿನಂತಿದೆ: (i) ಬೆಂಗಳೂರಿನ ಕೆಆರ್‌ಡಿಸಿಎಲ್ ಮುಖ್ಯ ಕಚೇರಿಯಲ್ಲಿ **ದಿನಾಂಕ: 24–11–2025 ರಂದು ಮಧ್ಯಾಹ್ನ 3.00 ಗಂಟೆಗೆ** ಪೂರ್ವ–ಬಿಡ್ ಸಭೆ ನಡೆಯಲಿದ್ದು, ಈ ಸಮಯದೊಳಗೆ ಪೂರ್ವ–ಬಿಡ್ ವಿಚಾರಣೆಗಳನ್ನು ಸಲ್ಲಿಸಬೇಕು. (ii) ತಾಂತ್ರಿಕ ಮತ್ತು ಹಣಕಾಸು ಬಿಡ್‌ಗಳನ್ನು ಸಲ್ಲಿಸಲು ಕೊನೆಯ **ದಿನಾಂಕ: 27–11–2025 ರಂದು ಸಂಜೆ 5.00 ಗಂಟೆಯವರೆಗೆ. (iii)** ತಾಂತ್ರಿಕ ಬಿಡ್‌ಗಳನ್ನು ತೆರೆಯುವ ಸಮಯ ಮತ್ತು **ದಿನಾಂಕ 29–11–2025 ರಂದು ಬೆಳಿಗ್ಗೆ 11.30 ಗಂಟೆಗೆ ಕೆಆರ್‌ಡಿಸಿಎಲ್ ಮುಖ್ಯ ಕಚೇರಿಯಲ್ಲಿ.**
ಗಮನಿಸಿ: ಇನ್ನು ಮುಂದೆ ಪ್ರಕಟಣೆಯಲ್ಲಿನ ಯಾವುದೇ ಬದಲಾವಣೆಗಳನ್ನು ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಆದರೆ ಮುಂದಿನಬದಲಾವಣೆಗಳನ್ನು ಕೇವಲ ಕೆಪಿಪಿ ಪೋರ್ಟಲ್ / ಕರನಿನಿ ವೆಬ್‌ಸೈಟ್ http://www.krdcl.in ನಲ್ಲಿ ಮಾತ್ರ ಅಪಡೇಟ್ ಮಾಡಲಾಗುವುದು.
ಸಹಿ/– ಮುಖ್ಯ ಅಭಿಯಂತರರು, ಕರಅನಿನಿ, ಬೆಂಗಳೂರು
DIPR/CP/3900/AAA/2025-26

ಕರ್ನಾಟಕ ಸರಕಾರ (ಜಿಲ್ಲಾ ಪಂಚಾಯತ್, ಗದಗ)
ಕಾರ್ಯನಿರ್ವಾಹಕ ಇಂಜಿನೀಯರ, ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಗದಗ.
ನಂ:ಪಂ.ರಾಜ್.ಇಂ.ವಿ/ಗದಗ/ಪಿಬಿ.3/ಟೆಂಡರ/2025–26/2650 ದಿನಾಂಕ : 18–11–2025
ಕೆಪಿಪಿ ಪೋರ್ಟಲ್ ಟೆಂಡರ ಪ್ರಕಟಣೆ
Standard Bid Document KG-2 & KW-1, 2
ಕರ್ನಾಟಕ ಸಾರ್ವಜನಿಕ ಪಾರದರ್ಶಕತೆ ಆಕ್ಟ್–2000 ನಿಯಮದಂತೆ Standard Bid Document KG-2 & KW-1, 2 ರ ನಿಯಮಗಳನ್ವಯ ಅರ್ಹ ಗುತ್ತೇದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ 11 ಕಾಮಗಾರಿಗಳ ಟೆಂಡರನ್ನು ಆಹ್ವಾನಿಸಲಾಗಿದೆ. ಲೆಕ್ಕ ಶೀರ್ಷಿಕೆ : 2025–26 ನೇ ಸಾಲಿನ MGNREGA ಒಗ್ಗೂಡುವಿಕೆ ಯೋಜನೆ, 2024–25 ನೇ ಸಾಲಿನ ಮಳೆ ಪರಿಹಾರ ಕಾರ್ಯಕ್ರಮದ 5054 ಯೋಜನೆ, 2024–25 ನೇ ಸಾಲಿನ (I.C.D.S)& ಮಹಾತ್ಮಾಗಾಂಧಿ ರಾಷ್ಟೀಯ ಉದ್ಯೋಗ ಖಾತ್ರಿ ಯೋಜನೆ(ಒಗ್ಗೂಡಿಸುವಿಕೆ), 2025–26 ನೇ ಸಾಲಿನ ಜಿಲ್ಲಾ ಪಂಚಾಯತ್ (2210–00–101–0–36–140) ಆಯುಷ್ಯ ಇಲಾಖೆ ಕಟ್ಟಡಗಳ ನಿರ್ವಹಣೆ ಕ್ರೀಯಾ ಯೋಜನೆಯಡಿ, ಟೆಂಡರನ್ನು ಆಹ್ವಾನಿಸಲಾಗಿದೆ. ಪಿ.ಡಬ್ಲ್ಯು.ಡಿ. ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್, (https://kppp.karnataka.gov.in) ಮುಖಾಂತರ ಭಾಗವಹಿಸಬಹುದು. ಕಾಮಗಾರಿಗಳ ವರ್ಕ ಇಂಡೆಂಟ್ ಸಂಖ್ಯೆ ಈ ಕೆಳಗಿನಂತೆ ಇರುತ್ತವೆ.
Indent Nos : 1) WORK_INDENT : 12082, 12080, 12078, 12202, 12203, 12204, 12205, 19917, 19525, 12793/CALL-4, 14114/CALL-3,
ಟೆಂಡರಿಗಿಟ್ಟ ಕನಿಷ್ಠ ಮೊತ್ತ ರೂ. **5.64** ಲಕ್ಷ ಮತ್ತು ಗರಿಷ್ಠ ಮೊತ್ತ ರೂ. **40.46** ಲಕ್ಷಗಳು ಟೆಂಡರ ಅರ್ಜಿಯ ಬೆಲೆ ಹಾಗೂ ಇ.ಎಂ.ಡಿ ಮೊತ್ತದ ವಿವರ : ಅರ್ಜಿ ಬೆಲೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಇ.ಎಂ.ಡಿ. ಸಂಬಂಧಪಟ್ಟ ವರ್ಕ ಇಂಡೆಂಟ್‌ನಲ್ಲಿ ನೋಡಬಹುದಾಗಿದೆ.
ಇ–ಪ್ರೋಕ್ಯೂರಮೆಂಟ ಮುಖಾಂತರ ಅರ್ಜಿ ಹಾಗೂ ಶೆಡ್ಯೂಲ್–ಬಿ ಯನ್ನು ವೆಬ್‌ಸೈಟಿನಲ್ಲಿ ಭರ್ತಿ ಮಾಡಿ ಸಲ್ಲಿಸುವ ದಿನಾಂಕ : **20–11–2025** ರಿಂದ **05–12–2025** ರಂದು 16.00 ಗಂಟೆಯವರೆಗೆ. ಟೆಂಡರ ತೆರೆಯುವ ದಿನಾಂಕ : **06–12–2025** ರಂದು 16.30 ಗಂಟೆಗೆ ತೆರೆಯಲಾಗುವುದು. ಟೆಂಡರನ್ನು ಅನಾವರಣಗೊಳಿಸಿದ ದಿನಾಂಕದಿಂದ ಭಾಗವಹಿಸಿದ ಗುತ್ತಿಗೆದಾರರಲ್ಲಿ ಆರ್ಥಿಕ ಬಿಡ್‌ದಲ್ಲಿ ಅರ್ಹ ಗುತ್ತಿಗೆದಾರರು ಈ ಕಾರ್ಯಾಲಯಕ್ಕೆ ಹಾಜರಾಗಿ ವ್ಯತ್ಯಾಸದ ಮೊತ್ತ ಹಾಗೂ ಪಿ.ಎಸ್.ಡಿ. ಮೊತ್ತವನ್ನು ಎಫ್.ಡಿ.ಆರ್ ರೂಪದಲ್ಲಿ 20 ದಿನಗಳ ಒಳಗಾಗಿ (ಷರತ್ತು ಕ್ರ.ಸಂ :13 ರಂತೆ) ಭರಣಾ ಮಾಡಬೇಕು. ಇ–ಪದ್ಧತಿ ಇರುವುದರಿಂದ ಕಾಗದ ರಹಿತವಾಗಿದ್ದು ಯಾವುದೇ ಪತ್ರ ವ್ಯವಹಾರಕ್ಕೆ ಅವಕಾಶ ಇರುವುದಿಲ್ಲ. ಹೆಚ್ಚಿನ ಮಾಹಿತಿಯನ್ನು ಈ ಕಚೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದು.
ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು, ಪಂ.ರಾಜ್. ಇಂಜಿನೀಯರಿಂಗ್ ವಿಭಾಗ, ಗದಗ
ವಾಸಾಸಂಇ/ಗದಗ/ಕೆಎಸ್ಎಂಸಿಎ/392/2025–26

ಮೀಸಲಾತಿ ಶೇ 75ಕ್ಕೆ ಏರಿಸಲು ಚಿಂತನೆ

‘ಎಲ್.ಜಿ. ಹಾವನೂರು ವರದಿಯ ಸುವರ್ಣ ಮಹೋತ್ಸವ’ ಕಾರ್ಯಕ್ರಮದಲ್ಲಿ ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮೀಸಲಾತಿ ಶೇಕಡ 50 ಮೀರಬಾರದು ಎಂದು ಇಂದಿರಾ ಸಾಹ್ನಿ ಪ್ರಕರಣದಲ್ಲಿ ಸುಪ್ರೀಂಕೋರ್ಟ್ ಹೇಳಿದೆ. ಕೇಂದ್ರ ಸರ್ಕಾರವು ಈ ಮಿತಿಯನ್ನು ದಾಟಿ ಶೇ 10ರಷ್ಟು ಮೀಸಲಾತಿಯನ್ನು ಆರ್ಥಿಕವಾಗಿ ದುರ್ಬಲವಾಗಿರುವ ವರ್ಗಕ್ಕೆ ನೀಡಿದೆ. ಎಲ್ಲ ಸಮುದಾಯಗಳಿಗೆ ಅವರ ಜನಸಂಖ್ಯೆಗೆ ಅನುಗುಣವಾಗಿ ಸೌಲಭ್ಯ ಸಿಗುವಂತಾಗಲು ಮೀಸಲಾತಿ ಪ್ರಮಾಣವನ್ನು ಶೇ 70–75ರಷ್ಟಕ್ಕೆ ಹೆಚ್ಚಿಸಬೇಕು ಎಂದುಕೊಂಡಿದ್ದೇನೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಕರ್ನಾಟಕ ರಾಜ್ಯ ಹಿಂದುಳಿದ ಜಾತಿಗಳ ಒಕ್ಕೂಟ ನಗರದಲ್ಲಿ ಬುಧವಾರ ಆಯೋಜಿಸಿದ್ದ ‘ಎಲ್.ಜಿ. ಹಾವನೂರು ವರದಿಯ ಸುವರ್ಣ ಮಹೋತ್ಸವ’ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

‘ಜಾತಿವಾರು ಸಮೀಕ್ಷೆ ಏನಾಯಿತು ಎಂದು ರಾಹುಲ್ ಗಾಂಧಿ ಇತ್ತೀಚೆಗೆ ನನ್ನನ್ನು ಪ್ರಶ್ನಿಸಿದ್ದರು. ಈ ತಿಂಗಳ ಒಳಗೆ ಸಮೀಕ್ಷೆ ಪೂರ್ಣಗೊಳ್ಳಲಿದೆ ಎಂದು ಹೇಳಿದ್ದೇನೆ. ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆಯ ವರದಿಯನ್ನು ಮಧುಸೂದನ್ ನಾಯ್ಕ್ ಆಯೋಗ ಸಲ್ಲಿಸಿದರೆ ಅದನ್ನು ಅಂಗೀಕರಿಸಿ ಜಾರಿ ಮಾಡಿಯೇ ಮಾಡ್ತೇವೆ’ ಎಂದು ತಿಳಿಸಿದರು.

‘ರಾಹುಲ್ ಗಾಂಧಿಯ ಒತ್ತಾಯದ ಮೇರೆಗೆ ಈ ಬಾರಿ ಕೇಂದ್ರ ಸರ್ಕಾರವು ಜನಗಣತಿಯೊಂದಿಗೆ ಜಾತಿ ಗಣತಿಯನ್ನೂ ಸೇರಿಸಿದೆ. ಆದರೆ, ಅದರಲ್ಲಿ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಸ್ಥಿತಿಗತಿಯ ಗಣತಿ ಇಲ್ಲ’ ಎಂದು ಟೀಕಿಸಿದರು.

‘ಹಳ್ಳಿಯಲ್ಲಿ ಬೇಡ ಸಮುದಾಯದಲ್ಲಿ ಜನಿಸಿದ ಹಾವನೂರು ಅವರು ವಿದ್ಯಾರ್ಥಿಯಾಗಿದ್ದಾಗಲೇ ಪ್ರತಿಭಟನಾ ಗುಣವನ್ನು ಹೊಂದಿದ್ದರು. ಹಂತ ಹಂತವಾಗಿ ಬೆಳೆದು ತಮ್ಮ ಸಾಮರ್ಥ್ಯ ತೋರಿಸಿದ್ದರು. ಬೇಡ ಸಮುದಾಯದ ಮೊದಲ ವಕೀಲರು ಅವರು. ಪ್ರತಿಭೆ ಯಾರ ಸ್ವತ್ತೂ ಅಲ್ಲ. ಅವಕಾಶ ಸಿಕ್ಕಾಗ ಹೊರಗೆ ಬರುತ್ತದೆ. ಅದಕ್ಕೆ ಹಿಂದಿನ ಜನ್ಮ ಕರ್ಮ ಅಥವಾ ಹಣೆಬರಹ ಕಾರಣವಲ್ಲ’ ಎಂದರು. ವಕೀಲ ರವಿವರ್ಮಕುಮಾರ್ ಮಾತನಾಡಿ, ‘ಎಲ್.ಜಿ. ಹಾವನೂರು ಅವರ ಹೆಸರನ್ನು ಕಾನೂನು ವಿಶ್ವವಿದ್ಯಾಲಯಕ್ಕೆ ಇಡಬೇಕು. ಪ್ರತಿ ಜಿಲ್ಲೆಯಲ್ಲಿ ಹಾವನೂರು ಹೆಸರಲ್ಲಿ ಭವನ ನಿರ್ಮಿಸಬೇಕು’ ಎಂದು ಆಗ್ರಹಿಸಿದರು.

ಕರ್ನಾಟಕ ರಾಜ್ಯ ಹಿಂದುಳಿದ ಜಾತಿಗಳ ಒಕ್ಕೂಟದ ಅಧ್ಯಕ್ಷ ಕೆ.ಎಂ. ರಾಮಚಂದ್ರಪ್ಪ ಮಾತನಾಡಿ, ‘ಕಾಂತರಾಜು ಆಯೋಗದ ವರದಿಯನ್ನು ಜಾರಿಮಾಡಲು ಮುಖ್ಯಮಂತ್ರಿ ಸಿದ್ದರಾಮಯ್ಯ ತಯಾರಿದ್ದರೂ ಪ್ರಬಲ ಜಾತಿಯವರ ಕುತಂತ್ರದಿಂದ ಜಾರಿಯಾಗಿಲ್ಲ. ಈಗ ನಡೆಸುತ್ತಿರುವ ಸಮೀಕ್ಷೆಯನ್ನೂ ಪ್ರಬಲ ಜಾತಿಯ ಜನರು ವಿರೋಧಿಸುತ್ತಿದ್ದಾರೆ’ ಎಂದರು.

ಹಿಂದುಳಿದ ವರ್ಗಗಳ ಸಚಿವ ಶಿವರಾಜ ಎಸ್. ತಂಗಡಗಿ ಮಾತನಾಡಿ, ‘ಹಿಂದುಳಿದ ವರ್ಗಗಳಿಗೆ ಶಕ್ತಿ ತುಂಬಿದ್ದ ಹಾವನೂರು ಅವರ ಪ್ರತಿಮೆಯನ್ನು ದೇವರಾಜ ಅರಸು ಭವನದಲ್ಲಿ ಸ್ಥಾಪಿಸಲಾಗಿದೆ’ ಎಂದರು.

ಬೆಂಗಳೂರಿನಲ್ಲಿ ಬುಧವಾರ ಕರ್ನಾಟಕ ರಾಜ್ಯ ಹಿಂದುಳಿದ ಜಾತಿಗಳ ಒಕ್ಕೂಟ ಮತ್ತು ಕರ್ನಾಟಕ ಶೋಷಿತ ಸಮುದಾಯಗಳ ಮಹಾ ಒಕ್ಕೂಟ ಜಂಟಿಯಾಗಿ ಆಯೋಜಿಸಿದ್ದ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಪ್ರಥಮ ಅಧ್ಯಕ್ಷರಾದ ಎಲ್.ಜಿ. ಹಾವನೂರ ವರದಿ ಸಲ್ಲಿಕೆಯ ಸುವರ್ಣ ಮಹೋತ್ಸವದಲ್ಲಿ ಸಭಿಕರು ಪ್ರತಿಜ್ಞಾ ವಿಧಿ ಸ್ವೀಕರಿಸಿದರು ಪ್ರಜಾವಾಣಿ ಚಿತ್ರ

ಸಾಯುವವರು ಹಿಂದುಳಿದವರು: ಸಿದ್ದರಾಮಯ್ಯ

‘ದಕ್ಷಿಣ ಕನ್ನಡದಲ್ಲಿ ಕೋಮುಗಲಭೆಗಳಲ್ಲಿ ಸಾಯುವವರು ಹಿಂದುಳಿದ ವರ್ಗದವರು ಮತ್ತು ಅಲ್ಪಸಂಖ್ಯಾತರು. ಬಿಜೆಪಿ ಆರ್‌ಎಸ್‌ಎಸ್ ನಮ್ಮ ಶತ್ರು ಎಂದು ಗೊತ್ತಿದ್ದರೂ ಮತ್ತದೇ ಸಿದ್ಧಾಂತಕ್ಕೆ ಬಲಿಯಾಗುತ್ತಿದ್ದಾರೆ’ ಎಂದು ಸಿದ್ದರಾಮಯ್ಯ ಬೇಸರ ವ್ಯಕ್ತಪಡಿಸಿದರು.

‘ತಮ್ಮ ಸಮುದಾಯದ ಏಳಿಗೆ ಬಯಸದ ಬಿಜೆಪಿ, ಆರ್‌ಎಸ್‌ಎಸ್, ಎಬಿವಿಪಿಯನ್ನು ಹಿಂದುಳಿದವರು, ದಲಿತರು ಸೇರುತ್ತಿದ್ದಾರೆ. ಇನ್ನು ಕೆಲವರು ಸ್ವಾರ್ಥಕ್ಕಾಗಿ ಬಿಜೆಪಿ ಆರ್‌ಎಸ್‌ಎಸ್ ಸೇರಿ ಮೂಲ ಆರ್‌ಎಸ್‌ಎಸ್‌ನವರಿಗಿಂತಲೂ ಅಪಾಯಕಾರಿಯಾಗಿ ಮಾತನಾಡುತ್ತಾರೆ. ತಾವೇ ಹೆಡಗೇವಾರ್ ಎಂಬಂತೆ ಆಡುತ್ತಾರೆ’ ಎಂದು ವ್ಯಂಗ್ಯವಾಡಿದರು. ಶೂದ್ರರಿಗೆ ಮನುಸ್ಮೃತಿ ಯಾವ ಸ್ಥಾನವನ್ನು ನೀಡಿದೆ ಎಂಬುದನ್ನು ಅರ್ಥ ಮಾಡಿಸಲು ಸಿದ್ದರಾಮಯ್ಯ ಅವರು ಮನುಸ್ಮೃತಿಯ ಅಧ್ಯಾಯ 2, ಅಧ್ಯಾಯ 8ರ ಕೆಲವು ಸಾಲುಗಳನ್ನು ಓದಿದರು.

‘ಹಾವನೂರರಿಗೂ ಪಂಕ್ತಿಭೇದ’

‘ವಸತಿನಿಲಯದಲ್ಲಿದ್ದುಕೊಂಡು ಪದವಿ ಓದುತ್ತಿದ್ದ ಎಲ್.ಜಿ. ಹಾವನೂರು ಅವರಿಗೂ ಪಂಕ್ತಿಭೇದದ ಬಿಸಿ ತಟ್ಟಿತ್ತು’ ಎಂದು ರವಿವರ್ಮ ಕುಮಾರ್ ಹೇಳಿದರು.

‘ವಸತಿನಿಲಯದಲ್ಲಿ ಬ್ರಾಹ್ಮಣರು ಮತ್ತು ಲಿಂಗಾಯತರು ಊಟ ಮಾಡಿ ಹೋದ ಮೇಲಷ್ಟೇ ಬೇಡ ಸಮುದಾಯದ ಹಾವನೂರು ಸಹಿತ ಉಳಿದವರು ಊಟ ಮಾಡಬೇಕಿತ್ತು. ಒಂದು ದಿನ ಹಸಿವಾಯಿತು ಎಂದು ಬೇಗನೇ ಊಟ ಮಾಡಲು ಮುಂದಾದಾಗ ವಾರ್ಡನ್ ನಿರಾಕರಿಸಿದರು. ಆದರೂ ಅಡುಗೆ ಭಟ್ಟರಿಗೆ ಹೇಳಿ ಊಟ ಬಡಿಸಿಕೊಂಡು ಮಾಡಿದ್ದರು. ಇದು ಗೊತ್ತಾಗಿ ಪ್ರಬಲ ಜಾತಿಯ ವಿದ್ಯಾರ್ಥಿಗಳೆಲ್ಲ ಬಂದಿದ್ದರು. ಪೈಲ್ವಾನ್ ಆಗಿದ್ದ ಹಾವನೂರು ಅವರನ್ನು ಮುಟ್ಟಲು ಧೈರ್ಯ ಸಾಲದೇ ಅಡುಗೆ ಭಟ್ಟರಿಗೆ ಹೊಡೆಯ-ತೊಡಗಿದ್ದರು. ಆಗ ಹಾವನೂರು ಅವರು ಅಡುಗೆ ಭಟ್ಟರ ಸಹಾಯಕ್ಕೆ ಬಂದು ಆ ವಿದ್ಯಾರ್ಥಿಗಳನ್ನೇ ಹೊಡೆದು ಓಡಿಸಿದ್ದರು. ಪರಿಣಾಮವಾಗಿ ವಸತಿನಿಲಯದಿಂದಲೂ, ಕಾಲೇಜಿನಿಂದಲೂ ಹಾವನೂರು ಅವರನ್ನು ಡಿಬಾರ್ ಮಾಡಲಾಯಿತು’ ಎಂದು ವಿವರಿಸಿದರು.

ಚಿಟಿಕೆ ಸುದ್ದಿ

ಬಿಜೆಪಿಯಿಂದ ‘ಭೀಮ ನಡೆ’

ಬೆಂಗಳೂರು: ‘ಸಂವಿಧಾನದ ಆಶಯಗಳನ್ನು ಜನರಿಗೆ ಮುಟ್ಟಿಸಲು, ಬಿಜೆಪಿ ವತಿಯಿಂದ ನವೆಂಬರ್ 26ರಿಂದ ಡಿಸೆಂಬರ್ 6ರವರೆಗೆ ಭೀಮ ನಡೆ ಕಾರ್ಯಕ್ರಮ ನಡೆಸುತ್ತೇವೆ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಹೇಳಿದರು.

ಆರ್. ಅಶೋಕ

ಪಕ್ಷದ ನಾಯಕರ ಜತೆಗೆ ಬುಧವಾರ ಸಭೆ ನಡೆಸಿದ ಬಳಿಕ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು.

‘ರಾಜ್ಯದಾದ್ಯಂತ ಈ ಕಾರ್ಯಕ್ರಮವು ನಡೆಯಲಿದೆ. ಸಂವಿಧಾನದ ಆಶಯ ಮತ್ತು ಕಾಂಗ್ರೆಸ್ ಪಕ್ಷವು ಬಾಬಾಸಾಹೇಬ್ ಅಂಬೇಡ್ಕರ್ ಅವರಿಗೆ ಬಗೆದ ದ್ರೋಹದ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಲಾಗುವುದು’ ಎಂದರು.

‘ಕಾಂಗ್ರೆಸ್ ಪಕ್ಷವು ಅಂಬೇಡ್ಕರ್ ಅವರನ್ನು ಲೋಕಸಭಾ ಚುನಾವಣೆಯಲ್ಲಿ ಸೋಲಿಸಿತ್ತು. ಅವರಿಗೆ ಭಾರತ ರತ್ನ ಕೊಡಲಿಲ್ಲ. ಅವರು ಮೃತರಾದಾಗ ಸಮಾಧಿಗೆ ಸ್ಥಳವನ್ನೇ ನೀಡಲಿಲ್ಲ. ಈ ವಿಚಾರಗಳನ್ನು ರಾಜ್ಯದ ಎಲ್ಲ ನಾಗರಿಕರಿಗೂ ತಲುಪಿಸುತ್ತೇವೆ’ ಎಂದು ಹೇಳಿದರು.

‘ಸರ್ಕಾರ ಅಸ್ಥಿರವಾದರೆ ಲಾಭಕ್ಕೆ ಯತ್ನ’

ಹಾಸನ: ‘ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರ ಅಸ್ಥಿರವಾದರೆ ನಾವು ಲಾಭ ಪಡೆಯಲಿದ್ದೇವೆ. ಮುಂದೆ ಯಾವುದೇ ಬೆಳವಣಿಗೆ ನಡೆದರೂ ಅಚ್ಚರಿ ಇಲ್ಲ’ ಎಂದು ಜೆಡಿಎಸ್ ಶಾಸಕ ಎ.ಮಂಜು ಹೇಳಿದರು.

‘ಪ್ರಾದೇಶಿಕ ಪಕ್ಷವಾಗಿ ಜೆಡಿಎಸ್ ಗಟ್ಟಿಯಾಗಿದೆ. ಪ್ರಾದೇಶಿಕ ಪಕ್ಷವಾಗಿ ಕಾರ್ಯಕರ್ತರ ಬಲ ಹೊಂದಿದೆ. ಮುಂದೆಯೂ ಜೆಡಿಎಸ್‌ನಿಂದಲೇ ಸ್ಪರ್ಧಿಸುವೆ’ ಎಂದರು.

‘ಗ್ಯಾರಂಟಿ ಯೋಜನೆಗಳಿಗೆ ಸರ್ಕಾರ ಭಾರಿ ಹಣ ವ್ಯಯಿಸು ತ್ತಿದ್ದು, ಅಭಿವೃದ್ಧಿ ಕಾರ್ಯಗಳು ಕುಂಠಿತವಾಗಿವೆ. ಕನಿಷ್ಠ ರಸ್ತೆ ಗುಂಡಿ ಮುಚ್ಚಲೂ ಆಗುತ್ತಿಲ್ಲ’ ಎಂದರು.

ಮೇಕೆದಾಟು: ಪರಿಷ್ಕೃತ ಡಿಪಿಆರ್

ಬೆಂಗಳೂರು: ಮೇಕೆದಾಟು ಯೋಜನೆಯ ವಿಸ್ತೃತ ಯೋಜನಾ ವರದಿಯನ್ನು(ಡಿಪಿಆರ್) 2018–19ರಲ್ಲಿ ಸಿದ್ಧಪಡಿಸಿದ್ದು, 2025-26ರ ದರ ಪಟ್ಟಿಯನ್ನು ಆಧರಿಸಿ ಪರಿಷ್ಕೃತ ಡಿಪಿಆರ್ ಸಲ್ಲಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ ಎಂದು ಜಲಸಂಪನ್ಮೂಲ ಇಲಾಖೆ ಹೇಳಿದೆ.

ಹಿಂದೆ ಸಿದ್ಧಪಡಿಸಿದ್ದ ಡಿಪಿಆರ್ ಅನ್ನು 2019ರ ಜನವರಿಯಲ್ಲಿ ಕೇಂದ್ರ ಜಲ ಆಯೋಗಕ್ಕೆ (ಸಿಡಬ್ಲ್ಯುಸಿ) ಸಲ್ಲಿಸಲಾಗಿತ್ತು. ಆಡಳಿತಾತ್ಮಕ ಮತ್ತು ಕಾನೂನು ನಿರ್ಬಂಧಗಳಿಂದಾಗಿ ಸಿಡಬ್ಲ್ಯುಸಿ ಅದನ್ನು ಪರಿಶೀಲನೆಗೆ ತೆಗೆದುಕೊಂಡಿರಲಿಲ್ಲ. ಈಗ ಸುಪ್ರೀಂ ಕೋರ್ಟ್ ತೀರ್ಪು ನೀಡಿದೆ. ಹೀಗಾಗಿ, ಪ್ರಸ್ತಾವವನ್ನು ಮುಂದುವರಿಸಲು ಹಾದಿ ಸುಗಮವಾಗಿದೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ತಾಂತ್ರಿಕ ಸಲಹೆಗಾರ ಕೆ.ಜೈಪ್ರಕಾಶ್ ಮಾಹಿತಿ ನೀಡಿದ್ದಾರೆ.

ಹಿಂದೆ ಸಿದ್ಧಪಡಿಸಿದ್ದ ಡಿಪಿಆರ್ ಸಿಡಬ್ಲ್ಯುಸಿಯಲ್ಲಿಯೇ ಇದೆ. ಯಾವುದೇ ಪರಿಶೀಲನೆಗೆ ಒಳಪಡದ ಕಾರಣ, ಪ್ರಸ್ತುತ ಚಾಲ್ತಿ ದರಗಳನ್ನು ಪರಿಗಣಿಸಿ ಪರಿಷ್ಕೃತ ಡಿಪಿಆರ್ ಸಿದ್ದಪಡಿಸಲಾಗುತ್ತದೆ ಎಂದಿದ್ದಾರೆ.

ಸುದ್ದಿ 2 ನಿಮಿಷ

‘ಕುರುಬರ ಅಭಿವೃದ್ಧಿಗೆ ಸಿದ್ದರಾಮಯ್ಯ ಕೊಡುಗೆ ಏನು’

ಬೆಂಗಳೂರು: ‘ಸಿದ್ದರಾಮಯ್ಯ ಅವರು ಕುರುಬ ಸಮಾಜದ ಅಭಿವೃದ್ಧಿಗೆ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಏನು ಕೊಡುಗೆ ನೀಡಿದ್ದಾರೆ. ಅದರ ಪಟ್ಟಿ ನೀಡಲು ಸಾಧ್ಯವೇ? ಎರಡನೇ ಬಾರಿಗೆ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡರೂ ಕುರುಬರ ಅಭಿವೃದ್ಧಿ ಮಂಡಳಿಯನ್ನು ಏಕೆ ಸ್ಥಾಪಿಸಿಲ್ಲ’ ಎಂದು ವಿಧಾನ ಪರಿಷತ್‌ನ ಬಿಜೆಪಿ ಸದಸ್ಯ ಎಚ್. ವಿಶ್ವನಾಥ್ ಪ್ರಶ್ನಿಸಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ನಾನು ರಾಜಕಾರಣಕ್ಕೆ ಬರದೇ ಹೋಗಿದ್ದರೆ ಕುರುಬರ ಸಂಘವನ್ನು ಉಳಿಸಲು ಸಾಧ್ಯವಾಗುತ್ತಿರಲಿಲ್ಲ. ಕಾಗಿನೆಲೆ ಕನಕಗುರು ಪೀಠವೂ ಸ್ಥಾಪನೆಯಾಗುತ್ತಿರಲಿಲ್ಲ. ಇವೆಲ್ಲವನ್ನೂ ನಾನೇ ಮಾಡಿದ್ದು ಎಂಬ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಹೇಳಿಕೆ ಸರಿಯಲ್ಲ’ ಎಂದರು.

‘ಪುಟ್ಟಸ್ವಾಮಿ ಎಂಬ ಪದಾಧಿಕಾರಿಯೊಬ್ಬ ಕುರುಬರ ಸಂಘವನ್ನು ₹3 ಕೋಟಿಗೆ ಅಡಮಾನವಿಟ್ಟಿದ್ದ, ಅದನ್ನು ನಾನು ಬಿಡಿಸಿದೆ ಎಂದು ಸಿದ್ದರಾಮಯ್ಯ ಅವರು ಸುಳ್ಳು ಹೇಳಿಕೆ ನೀಡಿದ್ದಾರೆ. ಆ ಸಂದರ್ಭದಲ್ಲಿ ನಿಮ್ಮ ಆರ್ಥಿಕ ಪರಿಸ್ಥಿತಿ ಹೇಗಿತ್ತು ಎನ್ನುವುದನ್ನು ವಿಮರ್ಶೆ ಮಾಡಿಕೊಳ್ಳಬೇಕು’ ಎಂದು ಹೇಳಿದರು.



‘ಸಮುದಾಯದ ಮುಖಂಡರು ಕನಕ ಗುರುಪೀಠವನ್ನು ಸ್ಥಾಪಿಸುವ ಕುರಿತು ಸಭೆಗೆ ಆಹ್ವಾನಿಸಿದಾಗ ಅದಕ್ಕೆ ಸಿದ್ದರಾಮಯ್ಯ ಅವರು ವಿರೋಧ ವ್ಯಕ್ತಪಡಿಸಿದ್ದರು. ನಾನು ಸಮಾಜವಾದಿ ಹಿನ್ನೆಲೆಯಿಂದ ಬಂದವನು. ಲೋಹಿಯಾ ಚಿಂತನೆಗಳನ್ನು ಅಳವಡಿಸಿಕೊಂಡವನು, ಕುರುಬರಿಗೆ ಮಠ ಯಾಕೆ ಬೇಕು? ನಮ್ಮವರನ್ನು ಮಡಿವಂತಿಕೆಗೆ ಏಕೆ ದೂಡುತ್ತೀರಿ ಎಂದು ಹೇಳಿದ್ದವರು ನೀವೇ ಅಲ್ಲವೇ’ ಎಂದು ಪ್ರಶ್ನಿಸಿದರು.

‘ಔಷಧ ಪೂರೈಕೆಯಲ್ಲಿ ಅಕ್ರಮ’

ಬೆಂಗಳೂರು: ‘ಚಿಕ್ಕಮಗಳೂರು ಜಿಲ್ಲಾಸ್ಪತ್ರೆಗೆ ಔಷಧ ಪೂರೈಕೆ ಟೆಂಡರ್ ನೀಡುವಲ್ಲಿ ಭಾರಿ ಅಕ್ರಮ ನಡೆದಿದೆ’ ಎಂದು ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಆರೋಪಿಸಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಈಗಾಗಲೇ ಹಲವು ಏಜೆನ್ಸಿಗಳು ಕಡಿಮೆ ದರಕ್ಕೆ ಪೂರೈಕೆ ಮಾಡುತ್ತಿರುವ ಔಷಧಗಳನ್ನೇ ಹಲವು ಪಟ್ಟು ಹೆಚ್ಚು ದರಕ್ಕೆ ಪೂರೈಸಲು ಗುತ್ತಿಗೆ ನೀಡಲಾಗಿದೆ’ ಎಂದರು.

‘ಜಿಲ್ಲಾಸ್ಪತ್ರೆಗೆ ಈಗ ಮೋಕ್ಷಿ ಫ್ಲಾಕ್ಸಾಕ್ಸಿನ್ ಎಂಬ ಕಣ್ಣಿನ ದ್ರಾವಣವನ್ನು ಪ್ರತಿ ಬಾಟಲ್‌ಗೆ ₹10.75ರಂತೆ ಪೂರೈಕೆ ಮಾಡಲಾಗುತ್ತಿದೆ. ಅದೇ ದ್ರಾವಣವನ್ನು ಪ್ರತಿ ಬಾಟಲ್‌ಗೆ ₹116ರಂತೆ ಪೂರೈಕೆ ಮಾಡಲು ಹೊಸದಾಗಿ ಗುತ್ತಿಗೆ ನೀಡಲಾಗಿದೆ. ₹4ಕ್ಕೆ ಪೂರೈಕೆ ಮಾಡುತ್ತಿರುವ ಕ್ಯಾಲ್ಸಿಯಂ ಕಾರ್ಬೋನೇಟ್ ಮತ್ತು ವಿಟಮಿನ್ ಡಿ3 ಮಾತ್ರೆಗಳನ್ನು ₹35.64ಕ್ಕೆ ಪೂರೈಸಲು ಗುತ್ತಿಗೆ ನೀಡಲಾಗಿದೆ’ ಎಂದು ವಿವರಿಸಿದರು.

‘ಈ ಆಸ್ಪತ್ರೆಯು ಈ ಹಿಂದೆ ಆರೋಗ್ಯ ಇಲಾಖೆಯ ಸುಪರ್ದಿಯಲ್ಲಿ ಇತ್ತು. ಈಗ ವೈದ್ಯಕೀಯ ಶಿಕ್ಷಣ ಇಲಾಖೆಯು ನಿರ್ವಹಣೆ ಮಾಡುತ್ತಿದೆ. ಈ ಬದಲಾವಣೆಯ ನಂತರವೇ ಹಲವು ಸಮಸ್ಯೆ ಎದುರಾಗಿದೆ. ಆಳುವವರ ಸಹಕಾರದೊಂದಿಗೇ ಔಷಧ ಖರೀದಿಯಲ್ಲಿ ಅಕ್ರಮ ನಡೆದಿದೆ’ ಎಂದರು. ವಿಧಾನ ಪರಿಷತ್ ಸದಸ್ಯ ಕೇಶವ ಪ್ರಸಾದ್, ಬಿಜೆಪಿ ರಾಜ್ಯ ವಕ್ತಾರ ಎಚ್.ವೆಂಕಟೇಶ್ ದೊಡ್ಡೇರಿ ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

‘ಯಕ್ಷಗಾನ ಕಲೆಗೆ ಅಪಮಾನ’

ಪ್ರಜಾವಾಣಿ ವಾರ್ತೆ

> **ಬಿಳಿಮಲೆ ಅವರ ಹೇಳಿಕೆ ಸತ್ಯಕ್ಕೆ ದೂರವಾದುದು ಹಾಗೂ ಅಸೂಕ್ಷ್ಮತೆಯಿಂದ ಕೂಡಿದೆ. ಈ ಅತಿರೇಕದ ಹೇಳಿಕೆ ಖಂಡನೀಯ**
> **ಪ್ರಭಾಕರ ಜೋಶಿ,** ಯಕ್ಷಗಾನ ವಿದ್ವಾಂಸ

> **ಬಿಳಿಮಲೆ ಪ್ರತಿಪಾದಿಸಿರುವುದು ಕನ್ನಡದ ಕಲಾಪ್ರಕಾರಕ್ಕೆ ಮಾಡಿದ ಅಪಮಾನವಾಗಿದ್ದು, ಅವರನ್ನು ಹುದ್ದೆಯಿಂದ ವಜಾಗೊಳಿಸಬೇಕು**
> **ವಿ. ಸುನಿಲ್ ಕುಮಾರ್,** ಶಾಸಕ

ಪುತ್ತೂರು/ ಮಂಗಳೂರು: ‘ಯಕ್ಷಗಾನ ಕಲಾವಿದರಲ್ಲಿ ಬಹುತೇಕರು ಸಲಿಂಗ ಕಾಮಿಗಳು. ಸ್ತ್ರೀವೇಷಧಾರಿಗಳಿಗೆ ಸಲಿಂಗಕಾಮಕ್ಕೆ ಒತ್ತಡ ಹಾಕಲಾಗುತ್ತದೆ ಎಂಬ ಹೇಳಿಕೆ ಮೂಲಕ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಅವರು ಯಕ್ಷಗಾನ ಕಲಾವಿದರಿಗೆ ಅಪಮಾನಿಸಿದ್ದಾರೆ’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು.



ಬಿ.ವೈ. ವಿಜಯೇಂದ್ರ

ಪುತ್ತೂರಿನಲ್ಲಿ ಸುದ್ದಿಗಾರರ ಜೊತೆ ಬುಧವಾರ ಮಾತನಾಡಿದ ಅವರು, ‘ಇದು ಯಕ್ಷಗಾನ ಕಲೆಗೆ ಮಾಡಿದ ಅಪಮಾನ ಮಾತ್ರವಲ್ಲ, ಕರಾವಳಿಗೆ ಹಾಗೂ ಸಮಸ್ತ ಹಿಂದೂ ಧರ್ಮಕ್ಕೆ ತೋರಿದ ಅಗೌರವ. ಕಾಂಗ್ರೆಸ್ ಪಕ್ಷದ ಮನಸ್ಥಿತಿಯನ್ನು ಇದು ಬಹಿರಂಗಗೊಳಿಸಿದೆ’ ಎಂದು ಟೀಕಿಸಿದರು.

‘ಕರಾವಳಿಯ ಕಲೆ, ಸಂಸ್ಕೃತಿ ಬಗ್ಗೆ ಕಿಂಚಿತ್ತಾದರೂ ಗೌರವ ಇದ್ದರೆ ಹೀಗೆ ಹೇಳುತ್ತಿರಲಿಲ್ಲ. ಬಿಳಿಮಲೆ ಅವರನ್ನು ಪ್ರಾಧಿಕಾರದ ಅಧ್ಯಕ್ಷ ಸ್ಥಾನದಿಂದ ಸರ್ಕಾರ ಕೂಡಲೇ ಕಿತ್ತೊಗೆಯಬೇಕು. ಈ ಕುರಿತು ಪಕ್ಷಾತೀತವಾಗಿ ಹೋರಾಟ ಮಾಡಬೇಕಾದ ಅಗತ್ಯ ಇದೆ’ ಎಂದರು.

ಅವಹೇಳನಕಾರಿ ಹೇಳಿಕೆ: ಕಲಾವಿದರ ಕುರಿತು ಸಾರ್ವಜನಿಕವಾಗಿ ಅವಹೇಳನಕಾರಿ ಹೇಳಿಕೆ ಮೂಲಕ ಬಿಳಿಮಲೆ ಅವರು ತಮ್ಮ ಸ್ಥಾನಕ್ಕೆ ಚ್ಯುತಿಯನ್ನುಂಟು ಮಾಡಿದ್ದಾರೆ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಸದಸ್ಯ ಪ್ರದೀಪ ಕುಮಾರ್ ಕಲ್ಕೂರ ಹೇಳಿದ್ದಾರೆ.

ಕಳಕಳಿಯ ಮಾತಷ್ಟೆ: ಬಿಳಿಮಲೆ

ಬೆಂಗಳೂರು: ‘ಯಕ್ಷಗಾನ ಕಲಾವಿದರ ಬದುಕಿನ ಮೇಲಿನ ಕಳಕಳಿಯಿಂದ ಈ ಮಾತು ಹೇಳಿದ್ದೇ ಹೊರತು, ಅವರನ್ನು ಅವಮಾನಿಸುವ ಉದ್ದೇಶ ನನಗಿಲ್ಲ’ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಅವರು ಹೇಳಿದರು.

ಪುರುಷೋತ್ತಮ ಬಿಳಿಮಲೆ

‘ಯಕ್ಷಗಾನ ಕಲಾವಿದರ ಸ್ಥಿತಿಯ ಬಗ್ಗೆ ನಾನು ಆಡಿದ ಮಾತಿಗೆ ಬದ್ಧನಾಗಿದ್ದೇನೆ. ಯಕ್ಷಗಾನ ಕ್ಷೇತ್ರದ ಪರಿಣಿತರು ಈ ಬಗ್ಗೆ ಪ್ರಶ್ನಿಸಿದರೆ, ಉತ್ತರಿಸಲು ನಾನು ಸಿದ್ಧನಿದ್ದೇನೆ. ಆದರೆ ನಿನ್ನೆಯಿಂದ ಹಲವು ಕಲಾವಿದರು ನನಗೆ ಕರೆ ಮಾಡಿ, ‘ನೀವು ಹೇಳಿದ್ದು ಸತ್ಯ’ ಎಂದು ನನ್ನ ಮಾತನ್ನು ಸ್ವಾಗತಿಸಿದ್ದಾರೆ’ ಎಂದು ‘ಪ್ರಜಾವಾಣಿ’ಗೆ ತಿಳಿಸಿದರು.

ಬಿಳಿಮಲೆ ಏನು ಹೇಳಿದ್ದರು?: ‘ಯಕ್ಷಗಾನದ ಒಳಗೆ ಎಷ್ಟೋ ಬಾರಿ ಹೋಮೊಸೆಕ್ಸ್ (ಸಲಿಂಗಕಾಮ) ಬೆಳೆತದೆ’ ಎಂದು ಮೈಸೂರಿನಲ್ಲಿ ಮಂಗಳವಾರ ನಡೆದ ಕಾರ್ಯಕ್ರಮವೊಂದರಲ್ಲಿ ಬಿಳಿಮಲೆ ಹೇಳಿದ್ದರು.

‘ಯಕ್ಷಗಾನದ ಮೇಳದ ಸಲುವಾಗಿ ಆರು ತಿಂಗಳ ಕಾಲ ಮನೆಯಿಂದ ದೂರ ಇರುವ ಕಲಾವಿದರ ಕಾಮ ಹೆಂಗಿರುತ್ತದೆ? ಯಕ್ಷಗಾನದ ಒಳಗಡೆ ಅದು ಅನಿವಾರ್ಯ ಮತ್ತು ಸ್ತ್ರೀ ವೇಷಧಾರಿಗಳಿಗೆ ಹೆಚ್ಚು ಒತ್ತಡವಿರುತ್ತದೆ’ ಎಂದಿದ್ದರು.

ಹೇಳಿಕೆ ತಪ್ಪು: ಶಿವರಾಮ ಶೆಟ್ಟಿ

ಉಡುಪಿ: ‘ಪ್ರೊ. ಪುರುಷೋತ್ತಮ ಬಿಳಿಮಲೆ ಅವರು ಯಕ್ಷಗಾನ ಕಲಾವಿದರ ಬಗ್ಗೆ ಯಾವ ಉದ್ದೇಶ ಇಟ್ಟುಕೊಂಡು ಹೇಳಿಕೆ ನೀಡಿದ್ದಾರೋ ಗೊತ್ತಿಲ್ಲ. ಅವರು ಆ ರೀತಿ ಹೇಳಿದ್ದು ತಪ್ಪು’ ಎಂದು ಯಕ್ಷಗಾನ ಅಕಾಡೆಮಿಯ ಅಧ್ಯಕ್ಷ ತಲ್ಲೂರು ಶಿವರಾಮ ಶೆಟ್ಟಿ ಪ್ರತಿಕ್ರಿಯಿಸಿದರು.

ತಲ್ಲೂರು ಶಿವರಾಮ ಶೆಟ್ಟಿ

ಸುದ್ದಿಗಾರರ ಜೊತೆ ಬುಧವಾರ ಮಾತನಾಡಿದ ಅವರು, ‘ಪ್ರಪಂಚದಲ್ಲಿ ಸರಿ– ತಪ್ಪು , ಯಕ್ಷಗಾನದಲ್ಲೂ ಒಳ್ಳೆಯವರೂ ಇದ್ದಾರೆ, ಕೆಟ್ಟವರೂ ಇದ್ದಾರೆ. ಪುರುಷೋತ್ತಮ ಬಿಳಿಮಲೆಯಂತಹ ಮೇಧಾವಿ ಇಂತಹ ಹೇಳಿಕೆ ನೀಡಬಾರದಿತ್ತು’ ಎಂದರು.

ಕೃಷ್ಣಮೃಗಗಳ ಆರೋಗ್ಯ ಸ್ಥಿರ

ಪ್ರಜಾವಾಣಿ ವಾರ್ತೆ

ಬೆಳಗಾವಿ: ‘ರಾಣಿ ಚನ್ನಮ್ಮ ಕಿರು ಮೃಗಾಲಯದಲ್ಲಿ ಸೋಂಕು ಪೀಡಿತ ಏಳು ಕೃಷ್ಣಮೃಗಗಳ ಆರೋಗ್ಯ ಸ್ಥಿರವಾಗಿದ್ದು, ನಾಲ್ಕು ದಿನಗಳಿಂದ ತೀವ್ರ ನಿಗಾ ಇಡಲಾಗಿದೆ’ ಎಂದು ಮೃಗಾಲಯದ ಅಧಿಕಾರಿಗಳು ಮಂಗಳವಾರ ತಿಳಿಸಿದರು.

‘ಗಳಲೆ ರೋಗದಿಂದ 31 ಕೃಷ್ಣಮೃಗಗಳು ಮೃತಪಟ್ಟಿವೆ. ಬೆಂಗಳೂರಿನಿಂದ ಬಂದಿರುವ ಡಾ. ಪ್ರಯಾಗ್ ನೇತೃತ್ವದ ತಂಡ ಇನ್ನೂ ಆರು ದಿನ ಚಿಕಿತ್ಸೆ ನೀಡಲಿದೆ’ ಎಂದು ಎಂದು ಮೃಗಾಲಯದ ವಲಯ ಅರಣ್ಯಾಧಿಕಾರಿ ಪವನ್ ಕುರನಿಂಗ ‘ಪ್ರಜಾವಾಣಿ’ಗೆ ತಿಳಿಸಿದರು.

> **ಗಳಲೆ ರೋಗದಿಂದ ಕೃಷ್ಣಮೃಗಗಳು ಸಾವನ್ನಪ್ಪಿವೆ. ಪ್ರಾಣಿಗಳಲ್ಲಿ ಯಾವುದೇ ಲಕ್ಷಣ ಗೋಚರಿಸದ ಕಾರಣ ಹೆಚ್ಚು ಸಾವು ಸಂಭವಿಸಿದೆ. ಮೃಗಾಲಯದ ಸಿಬ್ಬಂದಿ ಲೋಪ ಕಂಡುಬಂದಿಲ್ಲ**
> **ಎನ್.ಇ.ಕ್ರಾಂತಿ,** ಡಿಸಿಎಫ್, ಬೆಳಗಾವಿ

₹7.11 ಕೋಟಿ ‘ಹಗಲು’ ದರೋಡೆ

ಒಂದನೇ ಪುಟದಿಂದ...

ಮೇಲ್ಸೇತುವೆಯಲ್ಲಿ ಸಿ.ಸಿ.ಟಿ.ವಿ. ಕ್ಯಾಮೆರಾಗಳು ಇಲ್ಲ. ಆರೋಪಿಗಳು ಸಾಕಷ್ಟು ಪೂರ್ವ ತಯಾರಿ ನಡೆಸಿ ಮೇಲ್ಸೇತುವೆಗೆ ವಾಹನ ಕೊಂಡೊಯ್ದು ಕೃತ್ಯ ಎಸಗಿದ್ದಾರೆ ಎಂದು ಪೊಲೀಸ್ ಮೂಲಗಳು ಹೇಳಿವೆ. ಜೆ.ಪಿ. ನಗರದ ಎಚ್‌ಡಿಎಫ್‌ಸಿ ಬ್ಯಾಂಕ್ ಕರೆನ್ಸಿ ಚೆಸ್ಟ್‌ನಲ್ಲಿ ಹಣ ಡ್ರಾ ಮಾಡಿಕೊಂಡು ಟ್ರಂಕ್‌ಗಳಲ್ಲಿ ತುಂಬಿಕೊಂಡು ಎಟಿಎಂಗೆ ತುಂಬಲು ಹೋಗುತ್ತಿರುವಾಗ ದರೋಡೆ ನಡೆಸಲಾಗಿದೆ ಎಂದು ಸಿಎಂಎಸ್ ಇನ್ಫೊಸಿಸ್ಟಮ್‌ನ (ಎಚ್‌ಬಿಆರ್ ಲೇಔಟ್ ಶಾಖೆ) ವ್ಯವಸ್ಥಾಪಕ ವಿನೋದ್ ಚಂದ್ರಾಧರ್ ಅವರು ದೂರು ನೀಡಿದ್ದಾರೆ.

ಸಿಎಂಎಸ್ ಸಿಬ್ಬಂದಿಯ ಮೇಲೆ ಸಂಶಯ?: ಹಣ ತುಂಬಿದ್ದ ವಾಹನದಲ್ಲಿ ಚಾಲಕ, ಇಬ್ಬರು ಭದ್ರತಾ ಸಿಬ್ಬಂದಿ ಹಾಗೂ ಎಟಿಎಂಗೆ ಹಣ ತುಂಬುವ ವ್ಯಕ್ತಿಯಿದ್ದರು. ನಾಲ್ವರ ಪೈಕಿ ಒಬ್ಬ ಸಿಬ್ಬಂದಿ ದರೋಡೆಕೋರರಿಗೆ ಮಾಹಿತಿ ನೀಡಿರುವುದು ಗೊತ್ತಾಗಿದೆ. ಚಾಲಕನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ. ಕೃತ್ಯ ನಡೆದ ಸ್ಥಳವನ್ನು ಶ್ವಾನ ದಳ ಹಾಗೂ ಬೆರಳಚ್ಚು ತಜ್ಞರು ಪರಿಶೀಲನೆ ನಡೆಸಿದ್ದಾರೆ.

ಕೃತ್ಯ ನಡೆದ ತಕ್ಷಣವೇ ನಾಕಾಬಂದಿ ಹಾಕಲಾಗಿತ್ತು. ನಗರದ ಗಡಿಪ್ರದೇಶಗಳಲ್ಲಿ ಕರ್ತವ್ಯದಲ್ಲಿದ್ದ ಸಿಬ್ಬಂದಿಗೂ ಮಾಹಿತಿ ನೀಡಲಾಗಿತ್ತು. ಆದರೆ, ದರೋಡೆಕೋರರು ಮೊದಲೇ ಮಾರ್ಗವನ್ನು ನಿಗದಿಮಾಡಿಕೊಂಡು ಪರಾರಿ ಆಗಿದ್ದಾರೆ ಎಂದು ಗೊತ್ತಾಗಿದೆ.

ನಗರ ಪೊಲೀಸ್ ಕಮಿಷನರ್ ಸೀಮಾಂತ್‌ಕುಮಾರ್ ಸಿಂಗ್ ಅವರು ಸಿದ್ದಾಪುರ ಠಾಣೆಗೆ ಭೇಟಿ ನೀಡಿ ಮಾಹಿತಿ ಪಡೆದುಕೊಂಡರು. ಜನವರಿಯಲ್ಲಿ ಬೀದರ್‌ನಲ್ಲಿ ಇದೇ ಮಾದರಿಯಲ್ಲಿ ದರೋಡೆ ನಡೆದಿತ್ತು.

ಸಿಎಂಎಸ್ ಏಜೆನ್ಸಿಯ ನಾಲ್ವರ ವಿಚಾರಣೆ

‘ಸಿಎಂಎಸ್ ಏಜೆನ್ಸಿಯ ವಾಹನದ ಚಾಲಕ ಬಿನೋದ್ ಕುಮಾರ್, ಭದ್ರತಾ ಸಿಬ್ಬಂದಿ ರಾಜಣ್ಣ ಹಾಗೂ ತಮ್ಮಯ್ಯ, ಎಟಿಎಂಗೆ ಹಣ ತುಂಬುವ ಸಿಬ್ಬಂದಿ ಅಫ್ತಾಬ್ ಇದ್ದರು. ಅವರನ್ನು ವಶಕ್ಕೆ ಪಡೆದುಕೊಳ್ಳಲಾಗಿದೆ. ನಾಲ್ವರ ಹೇಳಿಕೆ ದಾಖಲು ಮಾಡಿಕೊಳ್ಳಲಾಗಿದೆ. ಇವರ ಹೇಳಿಕೆಯಲ್ಲಿ ಕೆಲವು ಗೊಂದಲಗಳಿವೆ. ಶೀಘ್ರದಲ್ಲೇ ಆರೋಪಿಗಳನ್ನು ಬಂಧಿಸುತ್ತೇವೆ’ ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ. ಜಯನಗರ, ಜೆ.ಪಿ. ನಗರ, ಸಿದ್ದಾಪುರ, ಸುದ್ದಗುಂಟೆಪಾಳ್ಯ ಠಾಣೆಯ ಪೊಲೀಸರ ನೇತೃತ್ವದಲ್ಲಿ ತನಿಖೆ ಚುರುಕುಗೊಂಡಿದೆ.

ದರೋಡೆಕೋರರು ಸಾಗಿರುವ ಮಾರ್ಗ

ಕೃತ್ಯ ಎಸಗಿದ ಬಳಿಕ ದರೋಡೆಕೋರರು ಹೊಸಕೋಟೆ ಕಡೆ ತೆರಳಿರುವ ಮಾಹಿತಿ ಸಿಕ್ಕಿದೆ. ಡೇರಿ ವೃತ್ತ, ಕೋರಮಂಗಲ, ದೊಮ್ಮಲೂರು, ಮಾರತ್‌ಹಳ್ಳಿ, ವೈಟ್ ಫೀಲ್ಡ್ ಮಾರ್ಗವಾಗಿ ಹೊಸಕೋಟೆ ಕಡೆ ತೆರಳಿರುವ ಮಾಹಿತಿ ಲಭ್ಯವಾಗಿದೆ. ದರೋಡೆಕೋರರಿದ್ದ ಕಾರು ಸಾಗುತ್ತಿರುವುದು ಟೋಲ್‌ನ ಸಿ.ಸಿ.ಟಿ.ವಿ. ಕ್ಯಾಮೆರಾದಲ್ಲಿ ಸೆರೆಯಾಗಿದೆ.

ಹಣ ತುಂಬಿದ್ದ ಸಿಎಂಎಸ್ ಏಜೆನ್ಸಿ ವಾಹನ

ದರೋಡೆಕೋರರು ಬಳಸಿದ್ದ ಇನೊವಾ ಕಾರು

> **ಚಾಲಕ ಸರಿಯಾದ ಮಾಹಿತಿ ನೀಡುತ್ತಿಲ್ಲ. ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ. ಇಬ್ಬರು ಡಿಸಿಪಿಗಳ ನೇತೃತ್ವದಲ್ಲಿ ತನಿಖೆ ನಡೆಯುತ್ತಿದೆ**
> **ಸೀಮಾಂತ್‌ಕುಮಾರ್ ಸಿಂಗ್,** ಬೆಂಗಳೂರು ನಗರ ಪೊಲೀಸ್ ಕಮಿಷನರ್

> **ಆರೋಪಿಗಳ ಸುಳಿವು ಸಿಕ್ಕಿದೆ. ಶೀಘ್ರದಲ್ಲೇ ಬಂಧಿಸುತ್ತೇವೆ. ಎಟಿಎಂಗಳಿಗೆ ಹಣ ಹಾಕುವ ಮಾಹಿತಿಯನ್ನು ಆರೋಪಿಗಳಿಗೆ ನೀಡಿರುವುದು ಗೊತ್ತಾಗಿದೆ**
> **ಜಿ.ಪರಮೇಶ್ವರ,** ಗೃಹ ಸಚಿವ

ವಾಸಯೋಗ್ಯ ರಾಜ್ಯವಾಗಿಸಲು ಜನರೆಲ್ಲರೂ ಪರಿಸರ ಕಾಳಜಿ ಬೆಳೆಸಿಕೊಳ್ಳಬೇಕು: ಸಿ.ಎಂ

4 ಜಿಲ್ಲೆಗಳಲ್ಲಿ ಮಾಲಿನ್ಯ ಮಟ್ಟ ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬೆಂಗಳೂರು, ಹುಬ್ಬಳ್ಳಿ–ಧಾರವಾಡ, ದಾವಣಗೆರೆ ಮತ್ತು ಕಲಬುರಗಿ ಜಿಲ್ಲೆಗಳು ನಿಗದಿತ ಮಟ್ಟಕ್ಕಿಂತ ಹೆಚ್ಚಿನ ಮಾಲಿನ್ಯ ಹೊಂದಿರುವುದು ಆತಂಕಕಾರಿ. ನಮ್ಮ ರಾಜ್ಯವನ್ನು ವಾಸಯೋಗ್ಯವಾಗಿಸಲು ಜನರೆಲ್ಲರೂ ಪರಿಸರ ಬಗ್ಗೆ ಕಾಳಜಿ ಬೆಳೆಸಿಕೊಳ್ಳಬೇಕು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಸುವರ್ಣ ಮಹೋತ್ಸವ ಸಮಾರಂಭದಲ್ಲಿ ರಾಜ್ಯಮಟ್ಟದ ‘ಇಂದಿರಾ ಪ್ರಿಯದರ್ಶಿನಿ ಪರಿಸರ ಪ್ರಶಸ್ತಿ’ ಪ್ರದಾನ ಮಾಡಿ ಅವರು ಮಾತನಾಡಿದರು.

‘131 ನಗರಗಳು ಹೆಚ್ಚು ಮಾಲಿನ್ಯ ಹೊಂದಿವೆ ಎಂದು ಕೇಂದ್ರ ಸರ್ಕಾರ ಹೇಳಿದೆ. ಇವುಗಳಲ್ಲಿ ರಾಜ್ಯದ ನಾಲ್ಕು ಜಿಲ್ಲೆಗಳಿವೆ. ಬೆಂಗಳೂರಿನಲ್ಲಿ ವಾಸ ಮಾಡಲು ಸಾಧ್ಯವಾಗದಂತಹ ಪರಿಸ್ಥಿತಿ ನಿರ್ಮಾಣವಾಗುವ ಸಾಧ್ಯತೆ ಇದೆ. ಅದನ್ನು ತಡೆಗಟ್ಟಲು, ಎಲ್ಲರೂ ಈಗಿನಿಂದಲೇ ಪರಿಸರದ ಬಗ್ಗೆ ಪ್ರೀತಿ ಬೆಳೆಸಿಕೊಳ್ಳಬೇಕು. ಸಾಲುಮರದ ತಿಮ್ಮಕ್ಕ ಅವರು ಮರ ಗಿಡಗಳನ್ನು ತಮ್ಮ ಮಕ್ಕಳಂತೆ ಬೆಳೆಸಿದ್ದರು. ಈ ಭಾವನೆ ಎಲ್ಲರಲ್ಲೂ ಮೂಡಬೇಕು’ ಎಂದರು.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ‘ನಮ್ಮ ಕಾಲದಲ್ಲಿ ಬಾವಿ ಹಾಗೂ ಹೊಳೆಯಿಂದ ನೀರನ್ನು ತರುತ್ತಿದ್ದೆವು. ಈಗ ಒಂದು ಲೀಟರ್ ಬಾಟಲಿ ನೀರಿಗೆ ₹30-₹40 ಆಗಿದೆ. ಪರಿಶುದ್ಧ ನೀರು ಇಲ್ಲವಾದರೆ ನಾವು ಇರಲು ಸಾಧ್ಯವಿಲ್ಲ’ ಎಂದು ಹೇಳಿದರು.

50 ವಾರ್ಡ್ ಪ್ಲಾಸ್ಟಿಕ್ ಮುಕ್ತ: ಬೆಂಗಳೂರಿನಲ್ಲಿ ಈ ವರ್ಷ 50 ವಾರ್ಡ್‌ಗಳನ್ನು ಏಕ ಬಳಕೆ ಪ್ಲಾಸ್ಟಿಕ್ ಮುಕ್ತ ಮಾಡಲು ಪಣತೊಡಬೇಕು ಎಂದು ಅರಣ್ಯ ಸಚಿವ ಈಶ್ವರ ಬಿ. ಖಂಡ್ರೆ ಹೇಳಿದರು.

‘ಮಾಲಿನ್ಯ ನಿಯಂತ್ರಣ ಮಂಡಳಿ ಸಿಬ್ಬಂದಿ ಯಾವುದೇ ಒತ್ತಡಕ್ಕೆ ಒಳಗಾಗದೆ, ನಿಯಮ–ಕಾಯ್ದೆಗಳನ್ನು ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸಬೇಕು. ಮಾಲಿನ್ಯ ಮುಕ್ತ ರಾಜ್ಯವನ್ನಾಗಿ ಮಾಡಿ, ನಂಬರ್ 1 ಮಂಡಳಿ ಆಗಬೇಕು’ ಎಂದರು.

ಸಚಿವರಾದ ದಿನೇಶ್ ಗುಂಡೂರಾವ್, ಎನ್. ಚಲುವರಾಯಸ್ವಾಮಿ, ಡಾ. ಎಂ.ಸಿ. ಸುಧಾಕರ್, ಶಾಸಕರಾದ ಡಾ. ಸಿ.ಎನ್. ಅಶ್ವಥ್ ನಾರಾಯಣ, ಎ.ಎಸ್. ಪೊನ್ನಣ್ಣ, ವಿಧಾನ ಪರಿಷತ್ ಸದಸ್ಯರಾದ ದಿನೇಶ್ ಗೂಳಿಗೌಡ, ನಸೀರ್ ಅಹಮದ್ ಉಪಸ್ಥಿತರಿದ್ದರು.

ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಸುವರ್ಣ ಮಹೋತ್ಸವದಲ್ಲಿ ದಾವಣಗೆರೆ ಜಿಲ್ಲಾಧಿಕಾರಿ ಜಿ. ಗಂಗಾಧರಸ್ವಾಮಿ, ಬೆಳಗಾವಿಯ ಉಕ್ಕಡದ ಮಜದೂರು ನವ ನಿರ್ಮಾಣ ಸಂಘಟನೆಯ ಶಿವಾಜಿ ಕಾಗಣೀಕರ, ಮಂಗಳೂರಿನ ಪ್ರೊ. ಜಿ.ಶ್ರೀನಿಕೇತನ್, ಬೆಂಗಳೂರಿನ ಗಣೇಶ್ ಶಂಕರ್ ಮತ್ತು ‘ಪ್ರಜಾವಾಣಿ’ಯ ಹಿರಿಯ ವರದಿಗಾರ ಆರ್. ಮಂಜುನಾಥ್ ಅವರಿಗೆ ಸಿದ್ದರಾಮಯ್ಯ ಅವರು ರಾಜ್ಯಮಟ್ಟದ ‘ಇಂದಿರಾ ಪ್ರಿಯದರ್ಶಿನಿ ಪರಿಸರ’ ಪ್ರಶಸ್ತಿ ಪ್ರದಾನ ಮಾಡಿದರು. ಡಿ.ಕೆ. ಶಿವಕುಮಾರ್, ಈಶ್ವರ ಖಂಡ್ರೆ, ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷ ಪಿ.ಎಂ. ನರೇಂದ್ರ ಸ್ವಾಮಿ ಪಾಲ್ಗೊಂಡಿದ್ದರು.

2030ರ ವೇಳೆಗೆ ಬೆಂಗಳೂರು ಪ್ಲಾಸ್ಟಿಕ್ ಮುಕ್ತ

‘ಬೆಂಗಳೂರು ನಗರ ಒಂದರಲ್ಲೇ 900 ಟನ್ ಪ್ಲಾಸ್ಟಿಕ್ ನಿತ್ಯವೂ ಉತ್ಪಾದನೆಯಾಗುತ್ತದೆ. ಇದನ್ನು ಜನ ಅರ್ಥಮಾಡಿಕೊಂಡು, ಪರಿಸರದ ಬಗ್ಗೆ ಜನರಲ್ಲಿ ಜಾಗೃತಿ ಮೂಡಿ, ಸರ್ಕಾರದ ಜೊತೆ ಕೈಜೋಡಿಸಿದರೆ 2030ರ ಹೊತ್ತಿಗೆ ಬೆಂಗಳೂರನ್ನು ಪ್ಲಾಸ್ಟಿಕ್ ಮುಕ್ತ ನಗರವಾಗಿಸಲು ಸಾಧ್ಯ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

‘ಜಲ ಮಾಲಿನ್ಯ: ಕ್ರಮ ಅಗತ್ಯ’

‘ರಾಜ್ಯ ಬಹುತೇಕ ಜಿಲ್ಲೆಗಳಲ್ಲಿ ತ್ಯಾಜ್ಯ ನೀರು ಸಂಸ್ಕರಣೆ ಘಟಕಗಳು ಸರಿಯಾಗಿ ಕೆಲಸ ಮಾಡದೆ ಕೊಳಚೆ ನೀರು ನದಿ ಸೇರುತ್ತಿದೆ. ಇದನ್ನು ತಡೆಯಲು ಕ್ರಮ ಕೈಗೊಳ್ಳುವಂತೆ ಎಲ್ಲಾ ಜಿಲ್ಲಾಡಳಿತ ಮತ್ತು ಸ್ಥಳೀಯ ಸಂಸ್ಥೆಗಳಿಗೆ ಸೂಚನೆ ನೀಡಬೇಕು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪಿ.ಎಂ. ನರೇಂದ್ರಸ್ವಾಮಿ ಮನವಿ ಮಾಡಿದರು.

‘ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತ್ಯಾಜ್ಯದಿಂದ ರಸ್ತೆ ನಿರ್ಮಿಸಲಾಗಿದೆ. ದಾವಣಗೆರೆ ಜಿಲ್ಲೆಯಲ್ಲಿ ಗೃಹ ಬಳಕೆಯ ಪ್ಲಾಸ್ಟಿಕ್ ತ್ಯಾಜ್ಯ ಸಂಗ್ರಹಿಸಿ, ಸಂಸ್ಕರಿಸಲಾಗುತ್ತಿದೆ. ಇದೇ ರೀತಿ ಎಲ್ಲ ಜಿಲ್ಲಾಡಳಿತಗಳೂ ಕ್ರಮ ಕೈಗೊಳ್ಳಲು ಆದೇಶಿಸಬೇಕು’ ಎಂದರು. ‘ಇತ್ತೀಚೆಗೆ ನಿಧನರಾದ ಸಾಲು ಮರದ ತಿಮ್ಮಕ್ಕನ ಹೆಸರಿನಲ್ಲಿ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಲ್ಲಿ ದತ್ತಿ ನಿಧಿ ಸ್ಥಾಪಿಸಿ ಪರಿಸರ ಸಂರಕ್ಷಣೆಯ ಸಾಧಕರಿಗೆ ಪ್ರತಿವರ್ಷ ಪ್ರಶಸ್ತಿ ನೀಡಬೇಕು’ ಎಂಬ ನರೇಂದ್ರ ಸ್ವಾಮಿ ಅವರ ಮನವಿಗೆ ಸಿದ್ದರಾಮಯ್ಯ ವೇದಿಕೆಯಲ್ಲೇ ಅನುಮೋದನೆ ನೀಡಿದರು.

‘ಕೈ’ ಅಧ್ಯಕ್ಷಗಿರಿ ‘ತ್ಯಾಗ’: ಡಿಕೆಶಿ ಸುಳಿವು

ಒಂದನೇ ಪುಟದಿಂದ...

‘ಆಗಲೇ ಅಧ್ಯಕ್ಷ ಸ್ಥಾನ ಬಿಡಲು ಸಿದ್ಧವಾಗಿದ್ದೆ. ಹೈಕಮಾಂಡ್ ನಾಯಕರಾದ ರಾಹುಲ್ ಗಾಂಧಿ, ಮಲ್ಲಿಕಾರ್ಜುನ ಖರ್ಗೆ ಅವರ ಸೂಚನೆಯಂತೆ ಮುಂದುವರಿದೆ. ಬರುವ ಮಾರ್ಚ್‌ಗೆ ಆರು ವರ್ಷ ತುಂಬುತ್ತದೆ. ಇತರರಿಗೂ ಅವಕಾಶ ನೀಡಬೇಕಿದೆ’ ಎಂದರು.

ಇಂತಹ ಅನಿರೀಕ್ಷಿತ ಹೇಳಿಕೆಯಿಂದ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಕಾರ್ಯಕರ್ತರು ಗೊಂದಲಕ್ಕೆ ಒಳಗಾದರು. ಕೆಲವರು ಆಕ್ಷೇಪ ವ್ಯಕ್ತಪಡಿಸಿದರು. ಅವರನ್ನೆಲ್ಲಾ ಸಮಾಧಾನಪಡಿಸಿದ ಶಿವಕುಮಾರ್, ‘ನಾನು ಈ ಸ್ಥಾನದಲ್ಲಿ ಇರುತ್ತೇನೋ, ಇರುವುದಿಲ್ಲವೋ ಎಂಬುದು ಮುಖ್ಯವಲ್ಲ. ಸ್ಥಾನ ತೊರೆದರೂ, ನಾಯಕತ್ವ, ಪಕ್ಷದ ಮುಂಚೂಣಿಯಲ್ಲಿದ್ದು ಕೆಲಸ ಮಾಡುತ್ತೇನೆ. ನಾನು ಎಲ್ಲಿದ್ದೇನೆ, ಏನಾಗಿದ್ದೇನೆ ಎನ್ನುವುದು ಮುಖ್ಯವಲ್ಲ. ನನ್ನ ಅವಧಿಯಲ್ಲಿ ಮಾಡಿದ ಒಳ್ಳೆಯ ಕೆಲಸಗಳು ಶಾಶ್ವತವಾಗಿರುತ್ತವೆ. ಈ ಅವಧಿಯಲ್ಲಿ ನೂರು ಕಾಂಗ್ರೆಸ್ ಕಚೇರಿ ನಿರ್ಮಿಸಬೇಕು ಎಂಬುದು ನನ್ನ ಬಯಕೆ. ಪಕ್ಷದ ಅಧ್ಯಕ್ಷನಾಗಿ ಒಂದು ಮಾದರಿಯನ್ನು ರೂಪಿಸಿದ್ದೇನೆ. ಗಾಂಧಿ ಕುಟುಂಬ ಹಾಗೂ ಎಐಸಿಸಿ ಅಧ್ಯಕ್ಷರು ಬಯಸುವವರೆಗೂ ಕೆಲಸ ಮಾಡುತ್ತಲೇ ಇರುತ್ತೇನೆ’ ಎಂದು ಹೇಳಿದರು.

ರಾಜ್ಯದಲ್ಲಿ ವಿಧಾನಸಭಾ ಚುನಾವಣೆ ಬಳಿಕ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರ್ಕಾರದಲ್ಲಿ ಶಿವಕುಮಾರ್ ಉಪ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ್ದರು. ಕೆಪಿಸಿಸಿ ಸಾರಥ್ಯವನ್ನು ಬೇರೆಯವರಿಗೆ ನೀಡಬೇಕು ಎಂಬ ಬೇಡಿಕೆಯನ್ನು ಹಲವರು ಹೈಕಮಾಂಡ್ ಮುಂದಿಟ್ಟಿದ್ದರು. 2024ರ ಲೋಕಸಭಾ ಚುನಾವಣೆಯ ನಂತರ ಬೇರೆಯವರಿಗೆ ಅವಕಾಶ ನೀಡುವುದಾಗಿ ಹೈಕಮಾಂಡ್ ನಾಯಕರು ಹೇಳಿದ್ದರು.

ಲೋಕಸಭೆ ಚುನಾವಣೆ ಬಳಿಕವೂ ಶಿವಕುಮಾರ್ ಮುಂದುವರಿದರು. ಆ ತರುವಾಯ, ಶಿವಕುಮಾರ್ ಅವರು ಸ್ಥಾನ ತ್ಯಜಿಸಿ, ಬೇರೆಯವರಿಗೆ ಅವಕಾಶ ಕೊಡಲಿ ಎಂಬ ಬೇಡಿಕೆಯನ್ನು ಹಲವರು ಬಹಿರಂಗವಾಗಿಯೇ ಮಂಡಿಸಿದ್ದರು.

‘ಒಬ್ಬರ ಕೆಲಸ, ಮತ್ತೊಬ್ಬರಿಗೆ ಲಾಭ’

ಮಾಜಿ ಪ್ರಧಾನಿ ಇಂದಿರಾಗಾಂಧಿಯವರ ಮಾತುಗಳನ್ನು ‘ನುಡಿ ಮುತ್ತುಗಳು’ ಎಂಬ ಶೀರ್ಷಿಕೆಯಡಿ ಸೋನಿಯಾಗಾಂಧಿ ಸಂಗ್ರಹಿಸಿದ್ದಾರೆ. ಈ ಪುಸ್ತಕದ ಕನ್ನಡ ಅನುವಾದ ಕೃತಿಯನ್ನು ಬಿಡುಗಡೆ ಮಾಡಿದ ಶಿವಕುಮಾರ್, ಅದರಲ್ಲಿರುವ ಮಾತುಗಳನ್ನು ಉಲ್ಲೇಖಿಸಿದರು.

ಅವು ಹೀಗಿವೆ:

- ಒಬ್ಬ ಕೆಲಸ ಮಾಡುವವನು, ಮತ್ತೊಬ್ಬ ಅದರ ಲಾಭ ಪಡೆದುಕೊಳ್ಳುವವನು
- ಗೌರವ ಎನ್ನುವುದು ಕೇಳಿ ಪಡೆಯುವಂತಹುದಲ್ಲ, ಗಳಿಸುವಂತಹದ್ದು
- ಎದುರಾಳಿ ನಿನ್ನನ್ನು ನಿಯಂತ್ರಿಸುವ ಮುನ್ನ, ನೀನು ನಿನ್ನನ್ನು ನಿಯಂತ್ರಿಸು
- ಆತ್ಮವಿಶ್ವಾಸ ಮುಖ್ಯ, ಎಲ್ಲಿ ಶ್ರಮ ಇದೆಯೋ, ಅಲ್ಲಿ ಖಂಡಿತ ಫಲವಿದೆ

‘ಎಲ್ಲೂ ಓಡಿ ಹೋಗುವುದಿಲ್ಲ’

‘ರಾಜ್ಯದಲ್ಲಿ ಕಾಂಗ್ರೆಸ್ ಬೇರುಗಳು ಗಟ್ಟಿಯಾಗಿವೆ. ಖಂಡಿತವಾಗಿಯೂ ಕರ್ನಾಟಕದಲ್ಲಿ ಪಕ್ಷ ಅಧಿಕಾರವನ್ನು ಉಳಿಸಿಕೊಳ್ಳುತ್ತದೆ. ಪಕ್ಷದ ಕಾರ್ಯಕರ್ತರೂ ಆತ್ಮವಿಶ್ವಾಸ ಕಳೆದುಕೊಳ್ಳಬಾರದು. ನಾನು ಎಲ್ಲೂ ಓಡಿಹೋಗುವುದಿಲ್ಲ’ ಎಂದು ಶಿವಕುಮಾರ್ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ‘ರಾಜ್ಯದಲ್ಲಿ ಮತ್ತೆ ಕಾಂಗ್ರೆಸ್ ಪಕ್ಷ ಮತ್ತೆ ಅಧಿಕಾರಕ್ಕೆ ಬಂದೇ ಬರುತ್ತದೆ. ಪಕ್ಷ ಏನು ಹೇಳುತ್ತದೆಯೋ ಅದನ್ನು ಪಾಲಿಸುತ್ತೇನೆ’ ಎಂದರು.

ಕಾರ್ಯಕ್ರಮ ಮುಗಿದು ಭವನದಿಂದ ಹೊರಬರುತ್ತಿದ್ದಂತೆ ಕಾಂಗ್ರೆಸ್ ಕಾರ್ಯಕರ್ತರು ಮುಂದಿನ ಮುಖ್ಯಮಂತ್ರಿ ‘ಡಿ.ಕೆ. ಶಿವಕುಮಾರ್’ ಎಂಬ ಘೋಷಣೆ ಕೂಗಿದರು. ಜೈಕಾರ ಹಾಕಿದರು.

ಚಟಕೆ ಸುದ್ದಿ

ಉತ್ತರ ಪ್ರದೇಶ ಮದರಸಾಗಳ ಮಾಹಿತಿ ಸಂಗ್ರಹ

ಲಖನೌ (ಪಿಟಿಐ): ದೆಹಲಿ ಸ್ಫೋಟದ ಬೆನ್ನಲ್ಲೇ, ಉತ್ತರ ಪ್ರದೇಶದ ಭಯೋತ್ಪಾದಕ ನಿಗ್ರಹ ದಳವು (ಎಟಿಎಸ್) ರಾಜ್ಯದ ಎಂಟು ಜಿಲ್ಲೆಗಳ ಮದರಸಾಗಳ ಶಿಕ್ಷಕರು ಮತ್ತು ಅಲ್ಲಿನ ವಿದ್ಯಾರ್ಥಿಗಳ ಸಂಪೂರ್ಣ ಮಾಹಿತಿ ಕಲೆ ಹಾಕಲು ಮುಂದಾಗಿದೆ.

ಈ ಬಗ್ಗೆ ಅಲ್ಪಸಂಖ್ಯಾತ ಕಲ್ಯಾಣ ಅಧಿಕಾರಿಗಳಿಗೆ ಪತ್ರ ಬರೆದಿರುವ ಎಟಿಎಸ್, ಮದರಸಾಗಳ ಶಿಕ್ಷಕರು, ಸಿಬ್ಬಂದಿ, ವಿದ್ಯಾರ್ಥಿಗಳ ವಿಳಾಸ, ಮೊಬೈಲ್ ಸಂಖ್ಯೆ ಮತ್ತಿತರ ವಿವರ ಸಂಗ್ರಹಿಸುವಂತೆ ಸೂಚಿಸಿದೆ.

ವಂಚನೆ: ಲಾಲೂ ಪ್ರಸಾದ್ ಆಪ್ತ ಸೆರೆ

ನವದೆಹಲಿ (ಪಿಟಿಐ): ಆರ್‌ಜೆಡಿ ಮುಖ್ಯಸ್ಥ ಲಾಲೂ ಪ್ರಸಾದ್ ಅವರ ಕುಟುಂಬದ ಆಪ್ತ ಉದ್ಯಮಿ ಅಮಿತ್ ಕತ್ಯಾಲ್ ಎಂಬವರನ್ನು ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ಬಂಧಿಸಿದ್ದಾರೆ.

ಗುರುಗ್ರಾಮದಲ್ಲಿ ಮನೆ ಖರೀದಿದಾರರಿಗೆ ವಂಚನೆ ಎಸಗಿದ ಕುರಿತ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಇವರನ್ನು ಸೋಮವಾರ ಬಂಧಿಸಿದ್ದಾರೆ.

ಗುರುಗ್ರಾಮದ ವಿಶೇಷ ನ್ಯಾಯಾಲಯವು ಅಮಿತ್ ಅವರನ್ನು ಆರು ದಿನ ಇ.ಡಿ ವಶಕ್ಕೆ ನೀಡಿ ಆದೇಶಿಸಿದೆ.

‘ತೀರ್ಪು: ಸಂಸತ್ ರದ್ದು ಮಾಡುವಂತಿಲ್ಲ’

ನ್ಯಾಯಮಂಡಳಿಗಳ ಸುಧಾರಣಾ ಕಾಯ್ದೆಯ ಕೆಲ ಅವಕಾಶ ರದ್ದು



> ಕಾಯ್ದೆಯೊಂದರಲ್ಲಿನ ದೋಷವನ್ನು ಗುರುತಿಸಿದಾಗ ಅದನ್ನು ಸರಿಪಡಿಸುವ ಕೆಲಸವನ್ನು ಸಂಸತ್ ಮಾಡಬೇಕು. ಈ ಪ್ರಕ್ರಿಯೆ ನ್ಯಾಯಾಲಯದ ತರ್ಕಕ್ಕೆ ಅನುಗುಣವಾಗಿರಬೇಕು
> **ಬಿ.ಆರ್.ಗವಾಯಿ**, ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ

ನವದೆಹಲಿ(ಪಿಟಿಐ): ನ್ಯಾಯಮಂಡಳಿಗಳ ಸುಧಾರಣಾ ಕಾಯ್ದೆ–2021ರಲ್ಲಿನ ಪ್ರಮುಖ ಅವಕಾಶಗಳನ್ನು ಸುಪ್ರೀಂ ಕೋರ್ಟ್ ಬುಧವಾರ ರದ್ದುಪಡಿಸಿದೆ.

‘ಕೆಲ ಸಣ್ಣ ಬದಲಾವಣೆಗಳೊಂದಿಗೆ ಹೊಸ ಕಾಯ್ದೆ ರಚಿಸಿ, ನ್ಯಾಯಾಲಯ ನೀಡಿರುವ ತೀರ್ಪುಗಳನ್ನು ಸಂಸತ್ ರದ್ದುಗೊಳಿಸಲು ಸಾಧ್ಯವಿಲ್ಲ’ ಎಂದು ಕಟುವಾಗಿ ಹೇಳಿದೆ.

ನ್ಯಾಯಮಂಡಳಿಗಳ ಅಧ್ಯಕ್ಷರು ಹಾಗೂ ಸದಸ್ಯರ ನೇಮಕಾತಿ, ಅಧಿಕಾರಾವಧಿ, ಸೇವಾ ನಿಯಮಗಳಿಗೆ ಸಂಬಂಧಿಸಿ ಹೊರಡಿಸಲಾಗಿದ್ದ ಸುಗ್ರೀವಾಜ್ಞೆಯಲ್ಲಿನ ಅವಕಾಶಗಳನ್ನೇ ಕಾಯ್ದೆಯಲ್ಲಿ ಅಳವಡಿಸಿರುವುದಕ್ಕೆ ಕೇಂದ್ರ ಸರ್ಕಾರದ ವಿರುದ್ಧ ಸುಪ್ರೀಂ ಕೋರ್ಟ್ ಕಟುಟೀಕೆ ಮಾಡಿದ್ದು, ಅವಕಾಶಗಳನ್ನು ರದ್ದು ಮಾಡಿದೆ. ಇದು, ಕೇಂದ್ರ ಸರ್ಕಾರಕ್ಕಾದ ದೊಡ್ಡ ಹಿನ್ನಡೆ ಎಂದೇ ವಿಶ್ಲೇಷಿಸಲಾಗುತ್ತಿದೆ.

ಮುಖ್ಯ ನ್ಯಾಯಮೂರ್ತಿ ಬಿ.ಆರ್.ಗವಾಯಿ ಹಾಗೂ ನ್ಯಾಯಮೂರ್ತಿ ಕೆ.ವಿನೋದ ಚಂದ್ರನ್ ಅವರು ಇದ್ದ ನ್ಯಾಯಪೀಠವು ಈ ಕುರಿತು 137 ಪುಟಗಳ ತೀರ್ಪು ನೀಡಿದೆ.

‘ನ್ಯಾಯಮಂಡಳಿಗಳಿಗೆ ಅಧ್ಯಕ್ಷರು ಹಾಗೂ ಸದಸ್ಯರ ನೇಮಕಾತಿಗೆ ಸಂಬಂಧಿಸಿ ಸರಣಿ ತೀರ್ಪುಗಳನ್ನು ನೀಡಿ, ಅರ್ಜಿಗಳನ್ನು ಇತ್ಯರ್ಥಪಡಿಸಿ ನಿರ್ದೇಶನಗಳನ್ನು ನೀಡಲಾಗಿದೆ. ಆದರೆ, ನ್ಯಾಯಾಲಯದ ನಿರ್ದೇಶನಗಳನ್ನು ಕೇಂದ್ರ ಸರ್ಕಾರ ಪದೇಪದೇ ತಿರಸ್ಕರಿಸುತ್ತಿದೆ. ಇಂಥ ನಡೆಯನ್ನು ಒಪ್ಪಲು ಸಾಧ್ಯ ಇಲ್ಲ’ ಎಂದು ಪೀಠ ಹೇಳಿದೆ.

‘ನ್ಯಾಯಮಂಡಳಿಗಳು ಸ್ವತಂತ್ರವಾಗಿ ಕಾರ್ಯನಿರ್ವಹಿಸಬೇಕು. ಈ ಸಂಬಂಧ ನ್ಯಾಯಾಲಯ ನೀಡಿರುವ ಸೂಚನೆಗಳನ್ನು ಅನುಷ್ಠಾನಗೊಳಿಸುವ ಬದಲು ಕೇಂದ್ರ ಸರ್ಕಾರವು ಹೊಸ ಕಾಯ್ದೆ ರೂಪಿಸಲು ಅಥವಾ ರದ್ದು ಮಾಡಲಾದ ಅವಕಾಶಗಳನ್ನೇ ಪುನಃ ಕಾಯ್ದೆಯಲ್ಲಿ ಸೇರಿಸುವ ಮೂಲಕ ಪುನಃ ಸಾಂವಿಧಾನಿಕ ಚರ್ಚೆಗಳಿಗೆ ದಾರಿ ಮಾಡಿಕೊಡುತ್ತಿರುವುದು ದುರದೃಷ್ಟಕರ’ ಎಂದೂ ಹೇಳಿದೆ.

ನ್ಯಾಯಮಂಡಳಿಗಳ ಸುಧಾರಣಾ ಕಾಯ್ದೆ ಪ್ರಶ್ನಿಸಿ ಮದ್ರಾಸ್ ವಕೀಲರ ಸಂಘ ಸಲ್ಲಿಸಿದ್ದ ಮೇಲ್ಮನವಿಯನ್ನು ಪೀಠ ಪುರಸ್ಕರಿಸಿದೆ. ನ್ಯಾಯಮಂಡಳಿಗಳಿಗೆ ನೇಮಕವಾಗುವವರಿಗೆ ಕನಿಷ್ಠ 50 ವರ್ಷ ಆಗಿರಬೇಕು ಎಂಬುದು ಸೇರಿ ಕಾಯ್ದೆಯಲ್ಲಿನ ಹಲವಾರು ವಿವಾದಾತ್ಮಕ ಅವಕಾಶಗಳನ್ನು ಪೀಠವು ರದ್ದು ಮಾಡಿದೆ.

‘ಸುಪ್ರೀಂ’ ಸೂಚನೆಗಳು

- ಈ ತೀರ್ಪು ಪ್ರಕಟವಾದ ದಿನದಿಂದ ನಾಲ್ಕು ತಿಂಗಳ ಒಳಗಾಗಿ ಕೇಂದ್ರ ಸರ್ಕಾರವು ರಾಷ್ಟ್ರೀಯ ನ್ಯಾಯಮಂಡಳಿಗಳ ಆಯೋಗ ರಚಿಸಬೇಕು
- ಈ ಆಯೋಗವು ಸುಪ್ರೀಂ ಕೋರ್ಟ್‌ನ ಹಿಂದಿನ ನಿರ್ದೇಶನಗಳಂತೆ ಕಾರ್ಯ ನಿರ್ವಹಿಸಬೇಕು. ಮುಖ್ಯವಾಗಿ ಸ್ವತಂತ್ರವಾಗಿ ಕಾರ್ಯ ನಿರ್ವಹಿಸಬೇಕು
- ನ್ಯಾಯಮಂಡಳಿಗಳ ಸುಧಾರಣಾ ಕಾಯ್ದೆ–2021 ಜಾರಿಗೆ ಬರುವುದಕ್ಕೂ ಮುನ್ನ ನೇಮಕಗೊಂಡಿದ್ದರೆ ಹಾಗೂ ಕಾಯ್ದೆ ಅನುಷ್ಠಾನಗೊಂಡ ನಂತರ ನೇಮಕಾತಿ ಕುರಿತು ಅಧಿಸೂಚನೆ ಪ್ರಕಟಿಸಿದ್ದಲ್ಲಿ, ಅಂತಹ ನೇಮಕಾತಿಗಳನ್ನು ಮುಂದುವರಿಸಬೇಕು

‘ಬಡ್ತಿ ಹೊಂದಿದ ನ್ಯಾಯಾಧೀಶರಿಗೆ ಕೋಟಾ ಸಾಧ್ಯ ಇಲ್ಲ’

ಬಡ್ತಿ ಹೊಂದಿರುವ ನ್ಯಾಯಾಧೀಶರಿಗೆ ಉನ್ನತ ನ್ಯಾಯಾಂಗ ಸೇವೆಯಲ್ಲಿ (ಎಚ್‌ಜೆಎಸ್) ಕೋಟಾ ಸೌಲಭ್ಯ ನೀಡುವುದಕ್ಕೆ ಸುಪ್ರೀಂ ಕೋರ್ಟ್ ಬುಧವಾರ ನಿರಾಕರಿಸಿದೆ.

‘ದೇಶವನ್ನು ಬಾಧಿಸುವಂತಹ ಅಸಮಾನತೆಯಿಂದ ಕೂಡಿದ ಪ್ರಾತಿನಿಧ್ಯವೇನೂ ಸದ್ಯ ಇಲ್ಲ’ ಎಂದು ಮುಖ್ಯನ್ಯಾಯಮೂರ್ತಿ ಬಿ.ಆರ್. ಗವಾಯಿ ನೇತೃತ್ವದ ಐವರು ಸದಸ್ಯರ ಸಂವಿಧಾನ ಪೀಠ ಹೇಳಿದೆ.

ನ್ಯಾಯಮೂರ್ತಿಗಳಾದ ಸೂರ್ಯಕಾಂತ್, ವಿಕ್ರಮನಾಥ್, ಕೆ.ವಿನೋದಚಂದ್ರನ್ ಹಾಗೂ ಜಾಯ್‌ಮಾಲ್ಯ ಬಾಗ್ಚಿ ಅವರೂ ಈ ಪೀಠದಲ್ಲಿ ಇದ್ದಾರೆ.

‘ಉನ್ನತ ನ್ಯಾಯಾಂಗ ಸೇವೆಯ ಹುದ್ದೆಗಳಿಗೆ ನೇಮಕಾತಿ ಕುರಿತಂತೆ ಕೇವಲ ಅತೃಪ್ತಿ, ಅಸಮಾಧಾನ ಇದೆ ಎಂಬ ಕಾರಣಕ್ಕೆ ಒಂದೇ ವೃಂದಕ್ಕೆ ಸೇರಿದ ಉದ್ಯೋಗಿಗಳಿಗೆ ಅನ್ವಯವಾಗುವಂತೆ ಕೃತಕ ವರ್ಗೀಕರಣ ಮಾಡಲು ಆಗುವುದಿಲ್ಲ’ ಎಂದು ಪೀಠ ಹೇಳಿದೆ.

‘ಉನ್ನತ ನ್ಯಾಯಾಂಗ ಸೇವೆ ವ್ಯಾಪ್ತಿಯ ಆಯ್ಕೆ ಶ್ರೇಣಿ ಹಾಗೂ ಮುಂದಿನ ಹಂತದ ವೇತನ ಶ್ರೇಣಿ (ಸೂಪರ್ ಟೈಮ್ ಸ್ಕೇಲ್ ಮಾದರಿಯಲ್ಲಿ) ನಿಗದಿ ಮಾಡುವಾಗ ಅರ್ಹತೆ ಮತ್ತು ಜ್ಯೇಷ್ಠತೆಯನ್ನು ಪರಿಗಣಿಸಲಾಗುತ್ತದೆಯೇ ವಿನಃ ಸೇವಾವಧಿ ಅಥವಾ ಕೆಳ ಹಂತದ ನ್ಯಾಯಾಲಯಗಳಲ್ಲಿ ಮಾಡಿದ ಸಾಧನೆಯನ್ನಲ್ಲ’ ಎಂದಿದೆ.

ಬಡ್ತಿ ಹಾಗೂ ಜ್ಯೇಷ್ಠತೆ ವಿಚಾರಕ್ಕೆ ಸಂಬಂಧಿಸಿ ಅಖಿಲ ಭಾರತ ನ್ಯಾಯಾಧೀಶರ ಸಂಘವು (ಎಐಜೆಎ) 1989ರಲ್ಲಿ ಮೇಲ್ಮನವಿ ಸಲ್ಲಿಸಿತ್ತು.

ಕೆಳ ಹಂತದ ನ್ಯಾಯಾಂಗ ಅಧಿಕಾರಿಗಳಿಗೆ ಬಡ್ತಿಯಲ್ಲಿ ಆಗುತ್ತಿರುವ ತಾರತಮ್ಯ ಕುರಿತ ಈ ಅರ್ಜಿಗಳನ್ನು ಐವರು ಸದಸ್ಯರ ಸಂವಿಧಾನ ಪೀಠಕ್ಕೆ ವರ್ಗಾಯಿಸಿ ಸುಪ್ರೀಂ ಕೋರ್ಟ್ ಅಕ್ಟೋಬರ್ 7ರಂದು ಆದೇಶಿಸಿತ್ತು.

ತಾಯಿ, ಮಲತಂದೆ ವಿರುದ್ಧ ಪ್ರಕರಣ

ಬಾಲಕನ ಹೇಳಿಕೆಗಳನ್ನು ಆಧರಿಸಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಆರೋಪಗಳ ಸತ್ಯಾಸತ್ಯತೆ ಪರಿಶೀಲಿಸಲಾಗುತ್ತಿದೆ ಎಂದ ಪೊಲೀಸರು ತಿಳಿಸಿದ್ದಾರೆ

ಐಎಸ್ ಸೇರುವಂತೆ ಬಾಲಕನ ಮೇಲೆ ಒತ್ತಡ ಆರೋಪ

ತಿರುವನಂತಪುರ: 15 ವರ್ಷದ ಬಾಲಕನಿಗೆ ಐಎಸ್ ಸೇರುವಂತೆ ಉಪದೇಶಿಸಿ, ಒತ್ತಡ ಹೇರುತ್ತಿದ್ದ ಆರೋಪದಡಿ ಬಾಲಕನ ತಾಯಿ ಹಾಗೂ ಮಲತಂದೆ ವಿರುದ್ಧ ತಿರುವನಂತಪುರದಲ್ಲಿ ಪ್ರಕರಣ ದಾಖಲಾಗಿದೆ.

ಬಾಲಕನ ತಾಯಿ ಹಾಗೂ ಮಲತಂದೆ ಸದ್ಯ ಬ್ರಿಟನ್‌ನಲ್ಲಿ ವಾಸವಾಗಿದ್ದಾರೆ ಎನ್ನಲಾಗಿದೆ. ಅವರ ವಿರುದ್ಧ ತಿರುವನಂತಪುರ ಸಮೀಪದ ವೆಂಜಾರಮೂಡು ಪೊಲೀಸರು ಕಾನೂನುಬಾಹಿರ ಚಟುವಟಿಕೆಗಳ ತಡೆ ಕಾಯ್ದೆ (ಯುಎಪಿಎ) ಅಡಿ ನವೆಂಬರ್ 14ರಂದು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಕೇಂದ್ರೀಯ ಗುಪ್ತಚರ ಸಂಸ್ಥೆಗಳು ಈ ಪ್ರಕರಣ ಕುರಿತಂತೆ ಕೇರಳ ಪೊಲೀಸರಿಂದ ಮಾಹಿತಿ ಕಲೆ ಹಾಕಿವೆ ಎಂದೂ ತಿಳಿದುಬಂದಿದೆ.

ಪ್ರಕರಣವೇನು?: ಬಾಲಕನ ತಾಯಿ ತಿರುವನಂತಪುರದವರು. ಪತ್ತನಂತಿಟ್ಟ ಜಿಲ್ಲೆ ವ್ಯಕ್ತಿಯೊಂದಿಗೆ ವಿವಾಹದ ಬಳಿಕ ದಂಪತಿಯು ಮಗನೊಂದಿಗೆ ಬ್ರಿಟನ್‌ಗೆ ತೆರಳಿದ್ದರು.

‘ಬಳಿಕ, ಮಹಿಳೆಯು ಇಸ್ಲಾಂ ಧರ್ಮಕ್ಕೆ ಮತಾಂತರಗೊಂಡರು. ತಮ್ಮ ಕುಟುಂಬದ ಸ್ನೇಹಿತನನ್ನೇ ವರಿಸಿದರು. ನಂತರ ಮೊದಲ ಪತಿಯಿಂದ ದೂರವಾದರು. ಬಾಲಕ ತನ್ನ ತಾಯಿ ಹಾಗೂ ಮಲತಂದೆಯೊಂದಿಗೆ ಬ್ರಿಟನ್‌ನಲ್ಲಿಯೇ ವಾಸಿಸುತ್ತಿದ್ದ’ ಎಂದು ಪೊಲೀಸರು ಹೇಳಿದ್ದಾರೆ.

‘ಮಲತಂದೆಯು ಬಾಲಕನಿಗೆ ಕಳೆದೆರಡು ವರ್ಷಗಳಿಂದ ಇಸ್ಲಾಂ ಉಗ್ರವಾದ ಕುರಿತ ವಿಡಿಯೊಗಳನ್ನು ತೋರಿಸುತ್ತಿದ್ದರು. ಐಎಸ್ ಸೇರುವಂತೆ ಉಪದೇಶ ಮಾಡುತ್ತಿದ್ದರು ಹಾಗೂ ತಾಯಿ ಇದಕ್ಕೆ ಬೆಂಬಲ ನೀಡುತ್ತಿದ್ದರು’.

‘ಕೇರಳಕ್ಕೆ ಮರಳಿದ ಬಾಲಕನನ್ನು ಧಾರ್ಮಿಕ ಅಧ್ಯಯನ ಕೇಂದ್ರವೊಂದಕ್ಕೆ ಸೇರಿಸಲಾಯಿತು. ಬಾಲಕನ ಅಸಹಜ ನಡವಳಿಕೆ ಗಮನಿಸಿದ ಕೇಂದ್ರದ ಸಿಬ್ಬಂದಿ, ಈ ಕುರಿತು ಬಾಲಕನ ಸಂಬಂಧಿಕರಿಗೆ ಮಾಹಿತಿ ನೀಡಿದ್ದಾರೆ. ನಂತರ ಅವರು ಪೊಲೀಸರಿಗೆ ದೂರು ನೀಡಿದರು’ ಎಂದು ತಿಳಿಸಿದ್ದಾರೆ.

‘ಸಿದ್ದಿಕಿ ದೇಶ ತೊರೆಯುವ ಸಾಧ್ಯತೆ’

ಅಲ್ ಫಲಾಹ್ ಗ್ರೂಪ್ ವಿರುದ್ಧ ಪಿಎಂಎಲ್‌ಎ ಅಡಿ ತನಿಖೆ

ನವದೆಹಲಿ(ಪಿಟಿಐ): ‘ಅಲ್ ಫಲಾಹ್ ಸಮೂಹದ ಅಧ್ಯಕ್ಷ ಜಾವದ್ ಅಹ್ಮದ್ ಸಿದ್ದಿಕಿ ಹಣವಂತ ಮಾತ್ರವಲ್ಲ, ಪ್ರಭಾವಿ ವ್ಯಕ್ತಿಯೂ ಹೌದು. ಅವರ ಕುಟುಂಬದ ಹತ್ತಿರದ ಸಂಬಂಧಿಗಳು ಕೊಲ್ಲಿ ರಾಷ್ಟ್ರಗಳಲ್ಲಿ ನೆಲಸಿದ್ದಾರೆ. ಈ ಕಾರಣಗಳಿಂದಾಗಿ ತನಿಖೆಯಿಂದ ತಪ್ಪಿಸಿಕೊಳ್ಳಲು ಅವರು ದೇಶ ತೊರೆಯುವ ಸಾಧ್ಯತೆ ಹೆಚ್ಚು’ ಎಂದು ಜಾರಿ ನಿರ್ದೇಶನಾಲಯ (ಇ.ಡಿ) ಬುಧವಾರ ಹೇಳಿದೆ.

ಇಲ್ಲಿನ ಸಾಕೇತ್ ಕೋರ್ಟ್ ನ್ಯಾಯಾಧೀಶರ ಮುಂದೆ ಸಿದ್ದಿಕಿ ಅವರನ್ನು ಹಾಜರುಪಡಿಸಿ ಕಸ್ಟಡಿಗೆ ಕೋರಿದ ವೇಳೆ, ಜಾರಿ ನಿರ್ದೇಶನಾಲಯ ಈ ಹೇಳಿಕೆ ನೀಡಿದೆ.

‘ಅಲ್ ಫಲಾಹ್ ಟ್ರಸ್ಟ್ ನಡೆಸುವ ಶಿಕ್ಷಣ ಸಂಸ್ಥೆಗಳ ವಿದ್ಯಾರ್ಥಿಗಳು ಹಾಗೂ ಅವರ ಪಾಲಕರಿಂದ ‘ಅಕ್ರಮ’ವಾಗಿ ಕನಿಷ್ಠ ₹415 ಕೋಟಿಯನ್ನು ಸಿದ್ದಿಕಿ ಸಂಗ್ರಹಿಸಿದ್ದಾರೆ. ಸಂಸ್ಥೆಗೆ ಮಾನ್ಯತೆ ಪಡೆಯುವ ಕಾರಣ ನೀಡಿ ಈ ದೊಡ್ಡ ಮೊತ್ತ ಸಂಗ್ರಹಿಸಲಾಗಿದೆ’ ಎಂದೂ ಇ.ಡಿ ತಿಳಿಸಿದೆ.

‘ಸಿದ್ದಿಕಿ ವಿರುದ್ಧ ಗಂಭೀರವಾದ ಆರೋಪಗಳಿವೆ. ಹಣದ ಅಕ್ರಮ ವರ್ಗಾವಣೆ ತಡೆ ಕಾಯ್ದೆ(ಪಿಎಂಎಲ್‌ಎ) ಅಡಿ ಅವರನ್ನು ಬಂಧಿಸಲಾಗಿದೆ. ಒಂದು ವೇಳೆ ಅವರನ್ನು ಬಂಧಿಸದಿದ್ದಲ್ಲಿ ಅವರು ವಿಚಾರಣೆಗೆ ಹಾಜರಾಗದೇ ಇರುವ ಇಲ್ಲವೇ ತಲೆಮರೆಸಿಕೊಳ್ಳುವ ಸಾಧ್ಯತೆ ಇದೆ’ ಎಂದು ನ್ಯಾಯಾಲಯಕ್ಕೆ ತಿಳಿಸಿದೆ.

‘ಅವರು ಸ್ವತ್ತುಗಳನ್ನು ಸ್ಥಳಾಂತರಿಸಬಹುದು ಹಾಗೂ ತನಿಖೆಗೆ ಅಡ್ಡಿಪಡಿಸಬಹುದು ಇಲ್ಲವೆ ತನಿಖೆ ವಿಳಂಬವಾಗುವಂತೆ ಮಾಡಬಹುದು’ ಎಂದು ವಾದಿಸಿದೆ.

ದೆಹಲಿಯ ಕೆಂಪು ಕೋಟೆ ಬಳಿ ಕಾರು ಸ್ಫೋಟ ಕುರಿತು ತನಿಖೆ ನಡೆಯುತ್ತಿದ್ದು, ಈ ಪ್ರಕರಣದ ಆರೋಪಿಗಳು ಅಲ್ ಫಲಾಹ್ ವಿಶ್ವವಿದ್ಯಾಲಯದಲ್ಲಿ ಉದ್ಯೋಗದಲ್ಲಿದ್ದರು. ಹೀಗಾಗಿ, ಅಲ್ ಫಲಾಹ್ ಸಮೂಹವು ಈಗ ತನಿಖೆಯ ಕೇಂದ್ರಬಿಂದುವಾಗಿದೆ.

13 ದಿನ ಇ.ಡಿ ಕಸ್ಟಡಿಗೆ

ಅಲ್ ಫಲಾಹ್ ಸಮೂಹದ ಅಧ್ಯಕ್ಷ ಜಾವದ್ ಅಹ್ಮದ್ ಸಿದ್ದಿಕಿ ಅವರನ್ನು ಇಲ್ಲಿನ ನ್ಯಾಯಾಲಯ 13 ದಿನ ಜಾರಿ ನಿರ್ದೇಶನಾಲಯದ (ಇ.ಡಿ) ಕಸ್ಟಡಿಗೆ ನೀಡಿ ಬುಧವಾರ ಆದೇಶಿಸಿದೆ.

ಇಲ್ಲಿನ ಸಾಕೇತ್ ಕೋರ್ಟ್‌ನ ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶರಾದ ಶೀತಲ್ ಚೌಧರಿ ಪ್ರಧಾನ್ ಅವರ ನಿವಾಸದಲ್ಲಿ ಇ.ಡಿ ಅಧಿಕಾರಿಗಳು ಅವರನ್ನು ಹಾಜರುಪಡಿಸಿದರು.

‘ಸಿದ್ದಿಕಿ ವಿರುದ್ಧ ಗಂಭೀರ ಆರೋಪಗಳು ಇರುವ ಕಾರಣ, ವಿಚಾರಣೆಗೆ ಒಳಪಡಿಸಬೇಕಿದೆ. ಹೀಗಾಗಿ ಅವರನ್ನು 14 ದಿನ ಕಸ್ಟಡಿಗೆ ನೀಡಬೇಕು’ ಎಂದು ಇ.ಡಿ ಕೋರಿತು. ಇದಕ್ಕೆ ಆಕ್ಷೇಪಿಸಿದ ಸಿದ್ದಿಕಿ ಪರ ವಕೀಲರು, ‘ಈ ಪ್ರಕರಣದಲ್ಲಿ ನನ್ನ ಕಕ್ಷಿದಾರನ ವಿರುದ್ಧ ತಪ್ಪಾಗಿ ಆರೋಪ ಹೊರಿಸಲಾಗಿದೆ’ ಎಂದು ನ್ಯಾಯಾಧೀಶರಿಗೆ ತಿಳಿಸಿದರು.

‘ಗಂಭೀರ ಆರೋಪಗಳ ಕಾರಣ, ಹಣ ಅಕ್ರಮ ವರ್ಗಾವಣೆ ಕಾಯ್ದೆಯ ಅವಕಾಶಗಳಡಿ ಸಿದ್ದಿಕಿ ಅವರನ್ನು ಬಂಧಿಸಲಾಗಿದೆ. ತನಿಖೆ ಕೂಡ ಇನ್ನೂ ಆರಂಭಿಕ ಹಂತದಲ್ಲಿದೆ’ ಎಂದು ಅಭಿಪ್ರಾಯಪಟ್ಟ ನ್ಯಾಯಾಧೀಶರು, ಅವರನ್ನು 13 ದಿನ ಇ.ಡಿ ವಶಕ್ಕೆ ನೀಡಿ ಆದೇಶಿಸಿದರು.

ಜಾರಿ ನಿರ್ದೇಶನಾಲಯದ ವಾದ

- ಅಲ್ ಫಲಾಹ್ ಟ್ರಸ್ಟ್ ಅಡಿಯ ವಿಶ್ವವಿದ್ಯಾಲಯ ಹಾಗೂ ಇತರ ಸಂಸ್ಥೆಗಳಲ್ಲಿ ಪ್ರವೇಶ ಪಡೆಯುವ ವಿದ್ಯಾರ್ಥಿಗಳಿಗೆ ಸಂಬಂಧಿಸಿದ ರಜಿಸ್ಟರ್‌ಗಳು, ಶುಲ್ಕದ ಲೆಡ್ಜರ್‌ಗಳು, ಲೆಕ್ಕಪತ್ರ ಹಾಗೂ ಐಟಿ ಸಿಸ್ಟಮ್‌ಗಳನ್ನು ನಿರ್ವಹಣೆ ಮಾಡುವ ಸಿಬ್ಬಂದಿ ಮೇಲೆ ಸಿದ್ದಿಕಿ ಹಿಡಿತ ಹೊಂದಿದ್ದಾರೆ. ಹೀಗಾಗಿ ಈ ದಾಖಲೆಗಳನ್ನು ಅವರು ನಾಶಪಡಿಸಬಹುದು ಇಲ್ಲವೇ ತಿದ್ದಬಹುದು
- 1990ರ ಬಳಿಕ ಅಲ್ ಫಲಾಹ್ ಸಮೂಹ ಭಾರಿ ಬೆಳವಣಿಗೆ ಕಂಡಿದೆ. ಈ ಭಾಗದಲ್ಲಿ ದೊಡ್ಡ ಶೈಕ್ಷಣಿಕ ಸಂಸ್ಥೆಯಾಗಿ ಬೆಳೆದು ನಿಂತಿದೆ. ಸಮೂಹದ ವಿವಿಧ ಸಂಸ್ಥೆಗಳ ಹಣಕಾಸು ವ್ಯವಹಾರದಲ್ಲಿ ಭಾರಿ ವ್ಯತ್ಯಾಸಗಳು ಕಂಡುಬಂದಿವೆ
- ಐಟಿ ರಿಟರ್ನ್ಸ್‌ನಲ್ಲಿ ಉಲ್ಲೇಖಿಸದ ಹಣಕಾಸು ವ್ಯವಹಾರಗಳನ್ನು ಹಾಗೂ ಅಕ್ರಮವಾಗಿ ಸಂಗ್ರಹಿಸಿದ ಹಣ ಪತ್ತೆ ಮಾಡುವುದಕ್ಕೆ ಸಿದ್ದಿಕಿ ಅವರನ್ನು ಕಸ್ಟಡಿಗೆ ಪಡೆದು ವಿಚಾರಣೆಗೆ ಒಳಪಡಿಸುವ ಅಗತ್ಯ ಇದೆ. ಪಿಎಂಎಲ್ ಕಾಯ್ದೆಯಡಿ, ಅಕ್ರಮ ಸ್ವತ್ತುಗಳು/ನಗದುವನ್ನು ಸಕಾಲದಲ್ಲಿ ಮುಟ್ಟುಗೋಲು ಹಾಕಿಕೊಳ್ಳುವುದಕ್ಕೂ ಅವರನ್ನು ವಿಚಾರಣೆಗೆ ಒಳಪಡಿಸುವುದು ಅಗತ್ಯ

ಬಿಹಾರ: ಇಂದು ನಿತೀಶ್ ಪ್ರಮಾಣ

ಒಂದನೇ ಪುಟದಿಂದ...

ಎಲ್‌ಜೆಪಿ (ಆರ್) ಅಧ್ಯಕ್ಷರೂ ಆಗಿರುವ ಕೇಂದ್ರ ಸಚಿವ ಚಿರಾಗ್ ಪಾಸ್ವಾನ್ ಅವರು ಎರಡನೇ ಉಪ ಮುಖ್ಯಮಂತ್ರಿ ಸ್ಥಾನ ಅಲಂಕರಿಸಬಹುದು ಎಂಬ ಮಾತುಗಳೂ ಕೇಳಿಬರುತ್ತಿವೆ. ಗುರುವಾರ ನಡೆಯಲಿರುವ ಪ್ರಮಾಣ ವಚನ ಕಾರ್ಯಕ್ರಮದಲ್ಲಿ ಭಾಗವಹಿಸಲು ಗೃಹ ಸಚಿವ ಅಮಿತ್ ಶಾ ಪಟ್ನಾಕ್ಕೆ ಬಂದ ಬಳಿಕವಷ್ಟೇ ಈ ಕುತೂಹಲಕ್ಕೆ ತೆರೆಬೀಳಲಿದೆ ಎಂದು ಎನ್‌ಡಿಎ ಮೂಲಗಳು ತಿಳಿಸಿವೆ.

‘ಎರಡೂ ಆಯ್ಕೆಗಳು ಮುಕ್ತವಾಗಿವೆ. ಎರಡೂ ಉಪ ಮುಖ್ಯಮಂತ್ರಿ ಸ್ಥಾನಗಳನ್ನು ನಮ್ಮ ಬಳಿಯೇ ಇಟ್ಟುಕೊಳ್ಳುವ ಅಥವಾ ಒಂದನ್ನು ಮಿತ್ರಪಕ್ಷದ ಕೇಂದ್ರ ಸಚಿವರಿಗೆ ನೀಡುವ ಆಯ್ಕೆಗಳು ನಮ್ಮ ಮುಂದಿವೆ’ ಎಂದು ಬಿಜೆಪಿ ಮೂಲಗಳು ಹೇಳಿವೆ.

‘ಚಿರಾಗ್ ಪಾಸ್ವಾನ್ ಅವರು ತಮ್ಮ ಸಹೋದರಿಯ ಪತಿ, ಸಂಸದ ಅರುಣ್ ಭಾರತಿ ಅವರನ್ನು ಡಿಸಿಎಂ ಸ್ಥಾನಕ್ಕೆ ಪ್ರಸ್ತಾಪಿಸಿದ್ದರು. ಆದರೆ, ಅದಕ್ಕೆ ಮೈತ್ರಿಯಲ್ಲಿ ಸಮ್ಮತಿ ದೊರೆಯಲಿಲ್ಲ. ಹೀಗಾಗಿ ಎಲ್‌ಜೆಪಿ (ಆರ್) ಪಕ್ಷದಿಂದ ಡಿಸಿಎಂ ಆಕಾಂಕ್ಷಿಗಳ ಪಟ್ಟಿಯಲ್ಲಿ ಚಿರಾಗ್ ಹೆಸರು ಬಲವಾಗಿ ಕೇಳಿಬರುತ್ತಿದೆ’ ಎಂದು ಮೂಲಗಳು ಮಾಹಿತಿ ನೀಡಿವೆ.

ಸಚಿವರಾಗುವ ಸಂಭವನೀಯರು: ಹೊಸ ಸರ್ಕಾರದಲ್ಲಿ ಬಿಜೆಪಿಯ ಸಾಮ್ರಾಟ್ ಚೌಧರಿ, ವಿಜಯ್ ಸಿನ್ಹಾ, ನಿತೀಶ್ ಮಿಶ್ರಾ, ನಿತಿನ್ ನವೀನ್, ಜೆಡಿಯು ಪಕ್ಷದ ವಿಜಯ್ ಚೌಧರಿ, ಬಿಜೇಂದ್ರ ಯಾದವ್, ಅಶೋಕ್ ಚೌಧರಿ, ಶ್ರವಣ ಕುಮಾರ್, ಎಲ್‌ಎಜೆಪಿ (ಆರ್) ವತಿಯಿಂದ ರಾಜು ತಿವಾರಿ, ಎಚ್‌ಎಎಂ ಪಕ್ಷದ ಸಂತೋಷ್ ಕುಮಾರ್ ಸುಮನ್, ಆರ್‌ಎಲ್‌ಎಂ ಪಕ್ಷದ ಸ್ನೇಹಲತಾ ಕುಶ್ವಾಹ ಅವರು ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸುವ ಸಾಧ್ಯತೆಗಳಿವೆ.

ಪಟ್ನಾದ ಐತಿಹಾಸಿಕ ಗಾಂಧಿ ಮೈದಾನದಲ್ಲಿ ಗುರುವಾರ ಪ್ರಮಾಣ ವಚನ ಸ್ವೀಕಾರ ಸಮಾರಂಭ ನಡೆಯಲಿದ್ದು, ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ, ಕೇಂದ್ರ ಸಚಿವರು ಹಾಗೂ ಬಿಜೆಪಿ ಆಡಳಿತವಿರುವ ರಾಜ್ಯಗಳ ಮುಖ್ಯಮಂತ್ರಿಗಳು ಭಾಗವಹಿಸಲಿದ್ದಾರೆ.

ಸ್ಪೀಕರ್ ಹುದ್ದೆ ಮೇಲೆ ಕಣ್ಣು

ವಿಧಾನಸಭೆಯ ಸ್ಪೀಕರ್ ಹುದ್ದೆ ತಮ್ಮ ಪಕ್ಷದ ನಾಯಕರಿಗೆ ದೊರೆಯಬೇಕು ಎಂದು ಜೆಡಿಯು ಬೇಡಿಕೆಯಿಟ್ಟಿತ್ತು. ಆದರೆ, ಇದನ್ನು ಬಿಜೆಪಿ ನಯವಾಗಿಯೇ ತಿರಸ್ಕರಿಸಿದೆ. ಈಗಾಗಲೇ ಮುಖ್ಯಮಂತ್ರಿ ಸ್ಥಾನ ಜೆಡಿಯು ಪಾಲಾಗಿರುವುದರಿಂದ ಸ್ಪೀಕರ್ ಹುದ್ದೆ ಬಿಜೆಪಿ ಬಳಿ ಇರಬೇಕು ಎಂಬುದನ್ನು ಬಿಜೆಪಿ ನಾಯಕರು ಜೆಡಿಯು ಮುಖಂಡರಿಗೆ ಮನದಟ್ಟು ಮಾಡಿಕೊಟ್ಟಿದ್ದಾರೆ. ಬಿಜೆಪಿಯ ಹಿರಿಯ ನಾಯಕ ಪ್ರೇಮ್ ಕುಮಾರ್ ಅವರು ಹೊಸ ಸ್ಪೀಕರ್ ಆಗುವ ಸಾಧ್ಯತೆಗಳಿವೆ ಎಂದು ಮೂಲಗಳು ತಿಳಿಸಿವೆ.

ಆತ್ಮಹತ್ಯೆ: ಎಸ್‌ಐಆರ್ ಒತ್ತಡ ಆರೋಪ

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದ ಜಲಪಾಯೀಗುಡಿ ಜಿಲ್ಲೆಯಲ್ಲಿ ಬೂತ್ ಮಟ್ಟದ ಅಧಿಕಾರಿಯಾಗಿ ಕೆಲಸ ಮಾಡುತ್ತಿದ್ದ ಅಂಗನವಾಡಿ ಕಾರ್ಯಕರ್ತೆ ಶಾಂತಿಮುನಿ ಒರಾವ್ (48) ಆತ್ಮಹತ್ಯೆಗೆ ಶರಣಾಗಿದ್ದಾರೆ. ರಾಜ್ಯದಲ್ಲಿ ನಡೆಯುತ್ತಿರುವ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಕೆಲಸದ ಒತ್ತಡದಿಂದಾಗಿ ಆಕೆ ಆತ್ಮಹತ್ಯೆ ಮಾಡಿಕೊಂಡಿದ್ದಾರೆಂದು ಕುಟುಂಬಸ್ಥರು ಆರೋಪಿಸಿದ್ದಾರೆ.

ಈ ವಿಚಾರವಾಗಿ ಚುನಾವಣಾ ಆಯೋಗದ ವಿರುದ್ಧ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಕಿಡಿಕಾರಿದ್ದು, ತಕ್ಷಣವೇ ಎಸ್‌ಐಆರ್ ಪ್ರಕ್ರಿಯೆ ನಿಲ್ಲಿಸುವಂತೆ ಆಗ್ರಹಿಸಿದ್ದಾರೆ.

ತಮ್ಮ ಮನೆಯ ಬಳಿ ಇದ್ದ ಮರದಲ್ಲಿ ನೇಣುಬಿಗಿದ ಸ್ಥಿತಿಯಲ್ಲಿ ಬುಧವಾರ ಪತ್ತೆಯಾಗಿದ್ದಾರೆ. ಘಟನೆಗೆ ಸಂಬಂಧಿಸಿದಂತೆ ಪ್ರಕರಣ ದಾಖಲಿಸಲಾಗಿದೆ.

ಶಿಕ್ಷಕ ಸಾವು: ರಾಜಸ್ಥಾನದ ಸವಾಯಿ ಮಾಧೋಪುರ ಜಿಲ್ಲೆಯಲ್ಲಿ ಬುಧವಾರ ಬೆಳಿಗ್ಗೆ ಎಸ್‌ಐಆರ್ ಕೆಲಸದಲ್ಲಿ ತೊಡಗಿದ್ದ ಶಿಕ್ಷಕ ಹರಿರಾಮ್ ಅಲಿಯಾಸ್ ಹರಿಓಂ ಬೈರ್ವಾ (34) ಹೃದಯಾಘಾತದಿಂದ ಮೃತಪಟ್ಟಿದ್ದಾರೆ.

ಅಧಿಕಾರಿಗಳು ಅವರ ಮೇಲೆ ಎಸ್‌ಐಆರ್ ಕರ್ತವ್ಯಗಳ ಬಗ್ಗೆ ಅತಿಯಾದ ಒತ್ತಡ ಹೇರಿದ್ದರು ಎಂದು ಹರಿರಾಮ್ ಅವರ ಸಂಬಂಧಿಕರು ಆರೋಪಿಸಿದ್ದಾರೆ. ಇದನ್ನು ತಹಶೀಲ್ದಾರ್ ನಿರಾಕರಿಸಿದ್ದಾರೆ. ಈ ಬಗ್ಗೆ ಯಾವುದೇ ಔಪಚಾರಿಕ ದೂರು ದಾಖಲಾಗಿಲ್ಲ.

ಕರ್ನಾಟಕ ಕೈಗಾರಿಕಾ ಪ್ರದೇಶಗಳು ಅಭಿವೃದ್ಧಿ ಮಂಡಳಿ
(ಕರ್ನಾಟಕ ಸರ್ಕಾರದ ಅಧೀನಕೊಳ್ಳಪಟ್ಟಿದೆ)
#49, ಈಸ್ಟ್ ವಿಂಗ್, 4ನೇ & 5ನೇ ಮಹಡಿ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು – 560 001
ಫೋನ್ ಸಂ: 080–22265383 | website : www.kiadb.in
ಸಂಖ್ಯೆ: ಐಎಡಿಬಿ/ಇಎನ್‌ಜಿಜಿ/ಇಟಿಎನ್‌ಡಿ–ಇಪಿ–21/1364/2025–26 ದಿನಾಂಕ: 19.11.2025

ಟೆಂಡರ್ ಆಹ್ವಾನ ಪ್ರಕಟಣೆ
(ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ)

ಕೆಐಎಡಿಬಿಯು ಈ ಕೆಳಕಂಡ ಕಾಮಗಾರಿಗೆ ಸಾಕಷ್ಟು ಆರ್ಥಿಕ ಸಂಪನ್ಮೂಲ, ಸೂಕ್ತ ನಿರ್ಮಾಣ ಉಪಕರಣಗಳು, ತಾಂತ್ರಿಕ, ಮಾನವಶಕ್ತಿ ಮತ್ತು ಇದೇ ರೀತಿಯ ಕೆಲಸದಲ್ಲಿ ಸಾಕಷ್ಟು ಅನುಭವ ಹೊಂದಿರುವ ಅರ್ಹ ಗುತ್ತಿಗೆದಾರರಿಂದ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಕಾಯ್ದೆ 1999 ಮತ್ತು ನಿಯಮ 2000 ರನ್ವಯ ದ್ವಿ–ಲಕೋಟೆ ಪದ್ಧತಿಯಲ್ಲಿ ಐಟಂ ದರ ಆಧಾರದ ಮೇಲೆ ವಿದ್ಯುನ್ಮಾನ ಪೋರ್ಟಲ್ ಮೂಲಕ ಟೆಂಡರನ್ನು ಆಹ್ವಾನಿಸಲಾಗಿದೆ.

ಕಾಮಗಾರಿಗಳ ಹೆಸರು: (1) ಧಾರವಾಡ ತಾಲ್ಲೂಕು ಮತ್ತು ಜಿಲ್ಲೆ ಇಟ್ಟಿಗಟ್ಟಿ ಕೈಗಾರಿಕಾ ಪ್ರದೇಶ ಸೆಕ್ಟರ್–1 ರಲ್ಲಿ 30ಮೀ, 24ಮೀ ಮತ್ತು 12ಮೀ ಅಗಲದ ರಸ್ತೆಗಳ ರಚನೆ, ಫ್ಲೆಕ್ಸಿಬಲ್ ಪೇವ್‌ಮೆಂಟ್, ಆರ್‌ಸಿಸಿ ಬದಿ ಚರಂಡಿಗಳು, ಆರ್‌ಸಿಸಿ ಯುಟಿಲಿಟಿ ಡಕ್ಟ್ಸ್, ಹೆಚ್‌ಡಿಪಿಇ ನೀರು ಸರಬರಾಜು ಕೊಳವೆಮಾರ್ಗ ಇತ್ಯಾದಿಗಳ ನಿರ್ಮಾಣ ಒಳಗೊಂಡಂತೆ ಕೈಗಾರಿಕೆ ಬಡಾವಣೆಯನ್ನು ರಚನೆ ಮಾಡುವ ಕಾಮಗಾರಿ. (2) ಧಾರವಾಡ ತಾಲ್ಲೂಕು ಮತ್ತು ಜಿಲ್ಲೆ ಇಟ್ಟಿಗಟ್ಟಿ ಕೈಗಾರಿಕಾ ಪ್ರದೇಶ ಸೆಕ್ಟರ್–2 ರಲ್ಲಿ 30ಮೀ ಅಗಲದ ರಸ್ತೆಗಳ ರಚನೆ, ಫ್ಲೆಕ್ಸಿಬಲ್ ಪೇವ್‌ಮೆಂಟ್, ಆರ್‌ಸಿಸಿ ಬದಿ ಚರಂಡಿಗಳು, ಆರ್‌ಸಿಸಿ ಬಾಕ್ಸ್ ಕಲ್ವರ್ಟ್ಸ್, ಆರ್‌ಸಿಸಿ ಯುಟಿಲಿಟಿ ಡಕ್ಟ್ಸ್, ಹೆಚ್‌ಡಿಪಿಇ ನೀರು ಸರಬರಾಜು ಕೊಳವೆಮಾರ್ಗ ಇತ್ಯಾದಿಗಳ ನಿರ್ಮಾಣ ಒಳಗೊಂಡಂತೆ ಕೈಗಾರಿಕೆ ಬಡಾವಣೆಯನ್ನು ರಚನೆ ಮಾಡುವ ಕಾಮಗಾರಿ.

ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ https://kppp.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.
ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 18.12.2025ರ ಸಂಜೆ 4:30 ಗಂಟೆಯವರೆಗೆ.
ಸಹಿ/–
ಮುಖ್ಯ ಅಭಿಯಂತರರು–2,
ಕೆ.ಐ.ಎ.ಡಿ.ಬಿ, ಬೆಂಗಳೂರು
ಡಿಐಪಿಆರ್/ಸಿಪಿ/3913/ಸಿಎಲ್/2025–26

THE RAICHUR & KOPPAL DISTRICT CENTRAL CO OPERATIVE BANK LTD., RAICHUR
Ref: RKDCC/HO/MANVI-KAVITAL/ Date :19/11/2025
e-Procurement Tender Notice
The Raichur and Koppal District Central Co-Operative Bank Ltd., Raichur invites e-Tender reference no: RDCCB/2025-26/BD/WORK_INDENT7“TENDER FOR PROPOSED INTERIOR DESIGN OF BRANCH BUILDING FOR RKDCC BANK IN PLOT No.11-4-390 SITUATED AT MANVI AND KAVITAL DIST- RAICHUR ” Tender Schedule and details can be obtained from KPPPortal https://kppp.karnataka.gov.in
Sd/- **(M B Pujar)** Chief Executive Officer
R K D C C BANK Ltd., Raichur.

ಸರ್ಕಾರದ ಉಪ ಕಾರ್ಯದರ್ಶಿ(ಆಡಳಿತ), ಹಾಗೂ ನೇಮಕಾತಿ ಪ್ರಾಧಿಕಾರಿಯವರ ಕಛೇರಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ
#424, 4 ನೇ ಮಹಡಿ, ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಬೇಡ್ಕರ್ ವೀಧಿ, ಬೆಂಗಳೂರು. ದೂ.080–22032391
ಸಂಖ್ಯೆ : ಡಿಪಿಎಆರ್ 03 ಎಸಿಇ 2024 ದಿನಾಂಕ : 11.11.2025

ತಿಳುವಳಿಕೆ ಪತ್ರ

ಶ್ರೀ ವಿ ನರೇಶ್ ಕುಮಾರ್, ಕಛೇರಿ ಪರಿಚಾರಕ, ಕರ್ನಾಟಕ ಸರ್ಕಾರ ಸಚಿವಾಲಯ ಆದ ನಿಮ್ಮ ವಿರುದ್ಧದ ಅನಧಿಕೃತ ಗೈರುಹಾಜರಾತಿ ಆರೋಪಕ್ಕೆ ಸಂಬಂಧಿಸಿದಂತೆ ಕರ್ನಾಟಕ ನಾಗರಿಕ ಸೇವಾ(ವ.ನಿ.ಮೇ) ನಿಯಮಗಳು 1957ರ ನಿಯಮ–11ರಡಿ ಇಲಾಖಾ ವಿಚಾರಣೆಯನ್ನು ನಡೆಸಲಾಗಿದ್ದು, ಆರೋಪವು ಇಲಾಖಾ ವಿಚಾರಣೆಯಲ್ಲಿ ನಿಸ್ಸಂದೇಹವಾಗಿ ಸಾಬೀತಾಗಿರುವ ಹಿನ್ನೆಲೆಯಲ್ಲಿ ಸರ್ಕಾರದ ನಡವಳಿಗಳ ದಿನಾಂಕ.30.09.2025 ರಲ್ಲಿ ಸರ್ಕಾರಿ ಸೇವೆಯಿಂದ ವಜಾ ಮಾಡುವ ದಂಡನೆಯನ್ನು ವಿಧಿಸಲಾಗಿರುತ್ತದೆ ಹಾಗೂ ಇವರನ್ನು ಕಛೇರಿ ಪರಿಚಾರಕ ಹುದ್ದೆಯ ಕಾರ್ಯಭಾರದಿಂದ ಬಿಡುಗಡೆಗೊಳಿಸಲಾಗಿದೆ. ಸದರಿ ಸರ್ಕಾರದ ಆದೇಶದ ಪ್ರತಿಯನ್ನು, "ತುರ್ತು ಅಂಚೆ" ಮೂಲಕ ಜಾರಿ ಮಾಡಲು ಪ್ರಯತ್ನಿಸಿದರೂ ಸದರಿ ಅಂಚೆಯು ಸ್ವೀಕೃತವಾಗದೇ ಹಿಂತಿರುಗಿರುತ್ತದೆ. ಆದ್ದರಿಂದ ಮೂರು ದಿನಗಳೊಳಗೆ ಮೇಲ್ಕಂಡ ಕಛೇರಿಗೆ ಹಾಜರಾಗಿ ಸದರಿ ಸರ್ಕಾರದ ಆದೇಶದ ಪ್ರತಿಯನ್ನು ಸ್ವೀಕರಿಸುವಂತೆ ನಿಮಗೆ ಈ ಮೂಲಕ ಸೂಚಿಸಲಾಗಿದೆ.
ಸಹಿ/– (ಕೆ.ಎನ್.ಮೂರ್ತಿ)
ಸರ್ಕಾರದ ಉಪ ಕಾರ್ಯದರ್ಶಿ(ಆಡಳಿತ),
ಹಾಗೂ ನೇಮಕಾತಿ ಪ್ರಾಧಿಕಾರಿ ಸಿಬ್ಬಂದಿ ಮತ್ತು
DIPR/CP/3551/Zen/2025-26 ಆಡಳಿತ ಸುಧಾರಣಾ ಇಲಾಖೆ ಕರ್ನಾಟಕ ಸರ್ಕಾರ ಸಚಿವಾಲಯ

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ
ಟೆಂಡರ್‌ಗಾಗಿ ಆಹ್ವಾನ (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)
ಬೆಂಗಳೂರು ಜಲಮಂಡಳಿಯು, ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.
ಮುಖ್ಯ ಅಭಿಯಂತರರ ಕಛೇರಿ (ದಕ್ಷಿಣ), 7ನೇ ಮಹಡಿ, ಕಾವೇರಿ ಭವನ, ಕೆ. ಜಿ. ರಸ್ತೆ, ಬೆಂಗಳೂರು–09

ಕ್ರ. ಸಂ.	ವಿಭಾಗ	ಐಎಫ್‌ಟಿ ಸಂಖ್ಯೆ	ಟೆಂಡರ್‌ಗೆ ಇಟ್ಟ ಮೊತ್ತ / ಇಎಂಡಿ ಮೊತ್ತ	ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ & ಸಮಯ	ಟೆಂಡರ್ ತೆರೆಯುವ ದಿನಾಂಕ & ಸಮಯ
1.	ದಕ್ಷಿಣ–2	ಬೆಂಜಮಂ/ಕಾನಿಅ(ದ–2)/ ಪಿಬಿ/1662/2025–26 ದಿನಾಂಕ: 13–11–2025	ರೂ.6,63,849/- / ರೂ.16,600/-	26-11-2025 ಸಂಜೆ 4.00 ಗಂಟೆಯವರೆಗೆ	28-11-2025 ಸಂಜೆ 4.30 ಗಂಟೆಯ ನಂತರ
2.		ಬೆಂಜಮಂ/ಕಾನಿಅ(ದ–2)/ ಪಿಬಿ/1664/2025–26 ದಿನಾಂಕ: 13–11–2025	ರೂ.15,22,392/- / ರೂ.38,100/-		
3.		ಬೆಂಜಮಂ/ಕಾನಿಅ(ದ–2)/ ಪಿಬಿ/1666/2025–26 ದಿನಾಂಕ: 13–11–2025	ರೂ.28,18,000/- / ರೂ.56,400/-	26-11-2025 ಸಂಜೆ 4.00 ಗಂಟೆಯವರೆಗೆ	28-11-2025 ಸಂಜೆ 3.00 ಗಂಟೆಯ ನಂತರ

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ದಕ್ಷಿಣ–2)
ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತು ಮಾಹಿತಿಗಳನ್ನು https://kppp.karnataka.gov.in ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಸಹಿದಾರರ ಕಛೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.
DIPR/CP/AAPL/RO3912/25-26

ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಿಗಮ ಕಾರ್ಯಾಲಯ, ಖರೀದಿ ಶಾಖೆ, ಚಾವಿಸನಿನಿ, ಮೈಸೂರು–570017, ದೂ: 9448994705
ಇ–ಮೇಲ್ ಐಡಿ: gmpurc@cescmysore.org, ವೆಬ್‌ಸೈಟ್: www.cescmysore.org
ಚಾವಿಸನಿನಿ/ಪ್ರವ್ಯ/ಉಪ್ರವ್ಯ(ಖ)/ಸ.ಪ್ರ.ವ್ಯ(ಖ–1)/2025–26/26452 ದಿನಾಂಕ: 19.11.2025

ಅಲ್ಪಾವಧಿ ಟೆಂಡರ್ ಪ್ರಕಟಣೆ (ವಿದ್ಯುನ್ಮಾನ ಸಂಗ್ರಹಣಾ ವೇದಿಕೆ)

ಚಾ.ವಿ.ಸ.ನಿ.ನಿ ವತಿಯಿಂದ ಅರ್ಹ ಗುತ್ತಿಗೆದಾರರಿಂದ **ಕೊತ್ತತ್ತಿ ಉಪವಿಭಾಗ ವ್ಯಾಪ್ತಿಯಲ್ಲಿ ಐಪಿ ಫೀಡರ್‌ಗಳ ವಿತರಣಾ ನಷ್ಟ ಮತ್ತು HT-LT Ratios ಗಳನ್ನು ಕಡಿಮೆ ಮಾಡಲು ಕಾಮಗಾರಿಗಳನ್ನು ಪೂರ್ಣಗುತ್ತಿಗೆ ಆಧಾರದ** ಕೈಗೊಳ್ಳಲು ಈ ಕೆಳಕಂಡ ಕಾಮಗಾರಿಗಳಿಗೆ ಅಲ್ಪಾವಧಿ ಟೆಂಡರ್‌ನ್ನು ಆಹ್ವಾನಿಸಿದೆ.

Sl No.	O & M Section	11kV Feeder Name	Enquiry No / Date
1	ತಗ್ಗಳ್ಳಿ	F-12 ಮಂಗಳ ಐಪಿ	C2-6422 /1911.2025
2	ತಗ್ಗಳ್ಳಿ	F-04 ಚೀರ್ನಳ್ಳಿ ಐಪಿ	C2-6423 /19.11.2025
3	ಕೊತ್ತತ್ತಿ	F-09 ಬೇವಿನಹಳ್ಳಿ ಐಪಿ	C2-6424 /19.11.2025
4	ಕೊತ್ತತ್ತಿ	F-05 ಊರಮಾರಕಸಲಗೆರೆ ಐಪಿ	C2-6425 /19.11.2025
		Tatal	

ಟೆಂಡರ್‌ನಲ್ಲಿ ಭಾಗವಹಿಸುವ ಬಗ್ಗೆ ಹೆಚ್ಚಿನ ವಿವರಗಳನ್ನು ವೆಬ್‌ಸೈಟ್ https://kppp.karnataka.gov.in ನಲ್ಲಿ ದಿನಾಂಕ: 24.11.2025 ರ ನಂತರ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಹೆಲ್ಪ್‌ಲೈನ್ + 91– 8046010000, +91–8068948777 ಅಥವಾ ಇ–ಮೇಲ್ ವಿಳಾಸ support@eprochelpdesk.com ವ್ಯವಹರಿಸಲು ಕೋರಲಾಗಿದೆ.
ವಿದ್ಯುತ್ ಸಂಬಂಧಿಸಿದ ದೂರುಗಳಿಗೆ ಕರೆ ಮಾಡಿ: 1912
ಸಹಿ/–
ಪ್ರಧಾನ ವ್ಯವಸ್ಥಾಪಕರು(ಖರೀದಿ) ಚಾವಿಸನಿನಿ, ಮೈಸೂರು
ವಾಸಾಸಂಇ/ಮೈಸೂರು/1247/ಎಸ್‌ಎಸ್‌ಸಿ/2025–26

ಕರ್ನಾಟಕ ಸರ್ಕಾರ
ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ
ಆಯುಕ್ತರ ಕಾರ್ಯಾಲಯ, 4ನೇ ಮಹಡಿ ಶ್ರೀ ಮಿಂಟೋ ಆಂಜನೇಯ ಭವನ, ಆಲೂರು ವೆಂಕಟರಾವ್ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560 018. ದೂ : 080–26709689/26706775,
ಫ್ಯಾಕ್ಸ್ : 080–26700801, Email : endowmentcommissioner@gmail.com
ಸಂಖ್ಯೆ:HRICE:ADM0ADM1/832/2023 ದಿನಾಂಕ : 19.11.2025

ಪ್ರಕಟಣೆ

ಧಾರ್ಮಿಕ ದತ್ತಿ ಆಯುಕ್ತರ ನಡವಳಿ ಆದೇಶ ಸಂಖ್ಯೆ : HRICE:ADM0ADM1/832/2023, ದಿನಾಂಕ : 27/10/2023 ರ ಆದೇಶದಂತೆ, 2024–2025ನೇ ಸಾಲಿಗೆ ಸಂಬಂಧಿಸಿದಂತೆ ಧಾರ್ಮಿಕ ದತ್ತಿ ಇಲಾಖಾ ವ್ಯಾಪ್ತಿಯಲ್ಲಿ ಬರುವ ಅಧಿಸೂಚಿತ ಸಂಸ್ಥೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅರ್ಚಕರು / ನೌಕರರ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಈ ಕೆಳಕಂಡಂತೆ ಪ್ರೋತ್ಸಾಹ ಧನವನ್ನು ಪಾವತಿಸಲಾಗುತ್ತಿದೆ.

ಕ್ರ ಸಂ	ಶೈಕ್ಷಣಿಕ ಹಂತ	ಪ್ರೋತ್ಸಾಹ ಧನ
1	ಪದವಿ ಪೂರ್ವ ಶಿಕ್ಷಣ (ಪಿ.ಯು.ಸಿ)	ರೂ.5,000/–
2	ಐ.ಟಿ.ಐ/ಜೆ.ಒ.ಸಿ/ಡಿಪ್ಲೊಮಾ	ರೂ.5,000/–
3	ಪದವಿ ಶಿಕ್ಷಣ	ರೂ.7,000/–
4	ಸ್ನಾತಕೋತ್ತರ ಪದವಿ ಶಿಕ್ಷಣ	ರೂ.15,000/–
5	ಇತರೆ ವೈದ್ಯಕೀಯ ಕೋರ್ಸುಗಳು (ಆಯುವೇದಿಕ್, ಹೋಮಿಯೋಪತಿ ಮತ್ತು ಯುನಾನಿ)	ರೂ.25,000/–
6	ತಾಂತ್ರಿಕ ಶಿಕ್ಷಣ (ಇಂಜಿನಿಯರಿಂಗ್)	ರೂ.25,000/–
7	ವೈದ್ಯಕೀಯ / ಡೆಂಡಲ್ ಶಿಕ್ಷಣ	ರೂ.50,000/–
8	ವಿದೇಶ ವ್ಯಾಸಂಗ	ರೂ.1,00,000/–

ಧಾರ್ಮಿಕ ದತ್ತಿ ಇಲಾಖಾ ವ್ಯಾಪ್ತಿಯಲ್ಲಿ ಬರುವ ಅಧಿಸೂಚಿತ ಸಂಸ್ಥೆಗಳ ಅರ್ಚಕರು/ನೌಕರರ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಪ್ರೋತ್ಸಾಹ ಧನ ಪಡೆಯುವುದಕ್ಕೆ ಅರ್ಜಿ ಸಲ್ಲಿಸಲು **ದಿನಾಂಕ : 31/12/2025** ಕೊನೆಯ ದಿನವಾಗಿದ್ದು, ಆಸಕ್ತರು ಅರ್ಜಿ ನಮೂನೆಗಳನ್ನು ಧಾರ್ಮಿಕ ದತ್ತಿ ಆಯುಕ್ತರ ಕಛೇರಿ/ಸಂಬಂಧಪಟ್ಟ ಜಿಲ್ಲೆಗಳ ಜಿಲ್ಲಾಧಿಕಾರಿಗಳ ಕಛೇರಿ/ತಾಲ್ಲೂಕು ತಹಶೀಲ್ದಾರ್ ರವರ ಕಛೇರಿಯಲ್ಲಿ ಪಡೆದು ದೃಢೀಕೃತ ದಾಖಲೆಗಳೊಂದಿಗೆ ಆಯಾಯ ತಾಲ್ಲೂಕು ಕಛೇರಿಯಲ್ಲಿ ನಿಗಧಿಪಡಿಸಲಾಗಿರುವ ದಿನಾಂಕದೊಳಗಾಗಿ ಸಲ್ಲಿಸಲು ತಿಳಿಯಪಡಿಸಿದೆ.
ಸಹಿ/– ಆಯುಕ್ತರು,
ಧಾರ್ಮಿಕ ದತ್ತಿ ಇಲಾಖೆ, ಬೆಂಗಳೂರು
DIPR/CP/3905/2025-26

ಕರ್ನಾಟಕ ಸರ್ಕಾರ
ಲೋಕೋಪಯೋಗಿ ಇಲಾಖೆ
(www.kpwd.gov.in)
ಕಾರ್ಯಪಾಲಕ ಇಂಜಿನಿಯರ್, ನಂ.2, ಕಟ್ಟಡಗಳ ವಿಭಾಗ, 1ನೇ ಮಹಡಿ,
ಲೋ.ಇ. ಪೂರಕ ಕಟ್ಟಡ, ಕೆ.ಆರ್.ವೃತ್ತ, ಬೆಂಗಳೂರು. ದೂ: 080 22220227
E-Portal : https://kppp.karnataka.gov.in/#/portal/portal-home

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 13/2025–26
ದಿನಾಂಕ: 11–11–2025

ಕಾರ್ಯಪಾಲಕ ಇಂಜಿನಿಯರ್, ನಂ2 ಕಟ್ಟಡಗಳ ವಿಭಾಗ, ಬೆಂಗಳೂರು ರವರು ಕರ್ನಾಟಕದ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕತೆ ಸಾರ್ವಜನಿಕ ಸಂಗ್ರಹಣೆ ಅದಿನಿಯಮ–2000ರನ್ವಯ ಕೆಡಬ್ಲ್ಯೂ–1, ಕೆಡಬ್ಲ್ಯೂ–2 & ಕೆಡಬ್ಲ್ಯೂ–3 ನಿಯಮಗಳಂತೆ ಕ್ರಮ ಸಂಖ್ಯೆ 01 ರಿಂದ 42 ನೇ ಕಾಮಗಾರಿಗಳಿಗೆ ಬೆಂಗಳೂರಿನ ವಸತಿಗೃಹಗಳಿಗೆ ಸಂಬಂದಿಸಿದ ಕಾಮಗಾರಿಯನ್ನು ಕರ್ನಾಟಕ ಸರ್ಕಾರದ ಇ–ಪ್ರಕ್ಯೂರ್‌ಮೆಂಟ್ ಪೋರ್‌ಟಲ್ ಮೂಲಕ (https://kppp.karnataka.gov.in/) ಪಿಡಬ್ಲ್ಯೂಡಿಯಲ್ಲಿ ನೋಂದಣಿ ಮಾಡಿರುವ ಅರ್ಹ ಟೆಂಡರ್‌ದಾರರಿಂದ ಎರಡು ಲಕೋಟೆ ಪದ್ದತಿಯಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ.
ಟೆಂಡರ್ ಪ್ರೋಸಸಿಂಗ್ ಬೆಲೆ ಮತ್ತು ಇಎಂಡಿ ವಿವರಗಳನ್ನು ಇ–ಪೋರ್ಟಲ್‌ನಲ್ಲಿ ಪ್ರಕಟಿಸಲಾಗಿದೆ.
1. ಟೆಂಡರ್ ಡಾಕ್ಯುಮೆಂಟ್‌ನ್ನು ಸರ್ಕಾರದ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಿಂದ ಡೌನ್‌ಲೌಡ್ ಮಾಡಿಕೊಳ್ಳಲು ನಿಗದಿಪಡಿಸಿರುವ ದಿನಾಂಕ : 11.11.2025 ರಿಂದ 21.11.2025 ಸಂಜೆ 4.30 ಗಂಟೆಯವರೆಗೆ.
2. ಟೆಂಡರ್‌ಗಳನ್ನು ಆನ್‌ಲೈನ್ ನಲ್ಲಿ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕ : 21.11.2025 ಸಂಜೆ 4.30 ಗಂಟೆಯವರೆಗೆ.
3. ಟೆಂಡರ್‌ಗಳನ್ನು ಇ–ಪೋರ್ಟಲ್‌ನಲ್ಲಿ ದಿನಾಂಕ : 24.11.2025 ರಂದು ಬೆಳಗ್ಗೆ 10.30 ಕ್ಕೆ ತೆರೆಯಲಾಗುವುದು.
ಹೆಚ್ಚಿನ ವಿವರಗಳಿಗೆ ಕರ್ನಾಟಕದ ಸರ್ಕಾರದ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ (https://kppp.karnataka.gov.in/) ಮೂಲಕ ಪಡೆಯಬಹುದಾಗಿದೆ ಹಾಗೂ ಈ ಕಛೇರಿಯ ವೇಳೆಯಲ್ಲಿ ಸಂಪರ್ಕಿಸಬಹುದಾಗಿರುತ್ತದೆ.
ಸಹಿ/–
ಕಾರ್ಯಪಾಲಕ ಅಭಿಯಂತರರು
ನಂ.2ನೇ ಕಟ್ಟಡಗಳ ವಿಭಾಗ, ಬೆಂಗಳೂರು.
DIPR/CP/3908/Zen/2025-26

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ

ಸುಭಾಷಿತ

ಜ್ಞಾನಸೂರ್ಯನಿಗೆ ಅರಿಗಳಿಬ್ಬರು: ಅಜ್ಞಾನ ರಾಹು, ಅಲ್ಪಜ್ಞಾನ ಕೇತು.

–ಕೆ.ಎಸ್. ನಿಸಾರ್ ಅಹಮದ್

ಸಂಪಾದಕೀಯ

ಹಸೀನಾಗೆ ಮರಣದಂಡನೆ ಶಿಕ್ಷೆ ಭಾರತಕ್ಕೆ ರಾಜತಾಂತ್ರಿಕ ಪರೀಕ್ಷೆ

ಬಾಂಗ್ಲಾದೇಶದ ಮಾಜಿ ಪ್ರಧಾನಿ ಶೇಖ್ ಹಸೀನಾ ಅವರಿಗೆ 'ಅಂತರರಾಷ್ಟ್ರೀಯ ಅಪರಾಧ ನ್ಯಾಯಮಂಡಳಿ' (ಐಸಿಟಿ) ವಿಧಿಸಿರುವ ಮರಣದಂಡನೆಯ ಶಿಕ್ಷೆ ನಿರೀಕ್ಷಿತ ಬೆಳವಣಿಗೆಯೇ ಆಗಿದೆ. ವಿಚಾರಣೆ ಆರಂಭಗೊಂಡಾಗಲೇ ಅದು ಗರಿಷ್ಠ ಶಿಕ್ಷೆಯಲ್ಲಿ ಕೊನೆಗೊಳ್ಳುತ್ತದೆನ್ನುವುದು ಸ್ಪಷ್ಟವಾಗಿತ್ತು. 2024ರಲ್ಲಿ ಬಾಂಗ್ಲಾದೇಶದಲ್ಲಿ ನಡೆದ ಮಾರಣಹೋಮದ ನಿರ್ಮಾತೃ ಎಂದು ಹಸೀನಾ ಅವರನ್ನು 'ಐಸಿಟಿ' ಬಣ್ಣಿಸಿದೆ. ಆ ಹಿಂಸಾತ್ಮಕ ವಿದ್ಯಮಾನದಲ್ಲಿ ಅನೇಕ ಸಾವುಗಳು ಸಂಭವಿಸಿದ್ದವು ಹಾಗೂ ಪ್ರತಿಭಟನೆಯ ಚಂಡಮಾರುತಕ್ಕೆ ಸಿಲುಕಿ ಹಸೀನಾ ಅವರು ಪ್ರಧಾನಿ ಸ್ಥಾನದಿಂದ ಪದಚ್ಯುತಗೊಂಡಿದ್ದರು. ದೇಶದಿಂದ ಪಲಾಯನ ಮಾಡುವ ಅನಿವಾರ್ಯತೆಗೆ ಸಿಲುಕಿದ ಅವರು, ಭಾರತದಲ್ಲಿ ಆಶ್ರಯ ಪಡೆದಿದ್ದಾರೆ. ತಮ್ಮ ವಿರುದ್ಧ ಪ್ರಕಟಗೊಂಡಿರುವ ಕಠಿಣ ತೀರ್ಪನ್ನು ತಿರಸ್ಕರಿಸಿರುವ ಹಸೀನಾ, ಚುನಾಯಿತವಲ್ಲದ ಸರ್ಕಾರದಿಂದ ಸ್ಥಾಪನೆಗೊಂಡಿರುವ ನಕಲಿ ನ್ಯಾಯಮಂಡಳಿ ತೀರ್ಪು ನೀಡಿದೆ ಎಂದು ಹೇಳಿದ್ದಾರೆ. ತಮ್ಮ ಮೇಲಿನ ಆರೋಪಗಳನ್ನು ಹೇಗ್‌ನಲ್ಲಿರುವ ಅಂತರರಾಷ್ಟ್ರೀಯ ಅಪರಾಧಗಳ ನ್ಯಾಯಾಲಯದ (ಐಸಿಸಿ) ಮುಂದೆ ತರುವಂತೆ ಬಾಂಗ್ಲಾದ ಮಧ್ಯಂತರ ಆಡಳಿತಕ್ಕೆ ಸವಾಲು ಹಾಕಿದ್ದಾರೆ. ಹಸೀನಾ ಅವರ ಪ್ರತಿನಿಧಿತ್ವದ 'ಅವಾಮಿ ಲೀಗ್' ಪಕ್ಷ, ತನ್ನ ಕಾರ್ಯಕರ್ತರ ಮೇಲೆ ನಡೆದ ಪ್ರತೀಕಾರದ ಹಿಂಸೆಯ ಬಗ್ಗೆ ತನಿಖೆಗಾಗಿ ಒತ್ತಾಯಿಸಿ 'ಐಸಿಸಿ' ಮೊರೆಹೋಗಿದೆ.

ಬಾಂಗ್ಲಾದೇಶ್ ನ್ಯಾಷನಲ್ ಪಾರ್ಟಿ ಸೇರಿದಂತೆ ಹಸೀನಾ ಮತ್ತು ಅವರ ಅವಾಮಿ ಲೀಗ್ ಪಕ್ಷದ ವಿರುದ್ಧ ಸಂಘಟನೆಗೊಂಡಿರುವ ರಾಜಕೀಯ ಪಕ್ಷಗಳು, ಐಸಿಟಿ ತೀರ್ಪನ್ನು ಸ್ವಾಗತಿಸಿವೆ. 'ಐತಿಹಾಸಿಕ ಚಾರಿತ್ರಿಕ ತೀರ್ಪು' ಎಂದು ಮುಹಮ್ಮದ್ ಯೂನಸ್ ನೇತೃತ್ವದ ಮಧ್ಯಂತರ ಸರ್ಕಾರ ಬಣ್ಣಿಸಿದೆ. ಆದರೆ, ಈ ತೀರ್ಪು ಪೂರ್ವಗ್ರಹ ಹಾಗೂ ದ್ವೇಷಭಾವನೆಯಿಂದ ಕೂಡಿದೆ. ಐಸಿಟಿ ಸಾಮಾನ್ಯವಾಗಿ, ಅಂತರರಾಷ್ಟ್ರೀಯ ನ್ಯಾಯಾಧೀಶರು ಹಾಗೂ ಪ್ರಾಸಿಕ್ಯೂಟರ್‌ಗಳನ್ನು ಒಳಗೊಂಡಿರುತ್ತದೆ. ಆದರೆ, ಹಸೀನಾ ಅವರಿಗೆ ಮರಣದಂಡನೆ ವಿಧಿಸಿರುವ ನ್ಯಾಯಮಂಡಳಿಯಲ್ಲಿ ಬಾಂಗ್ಲಾದೇಶದ ನ್ಯಾಯಾಧೀಶರಷ್ಟೇ ಇದ್ದಾರೆ. ಅಲ್ಲದೆ, ಹಸೀನಾ ಅವರ ಪರವಾದ ಏಕೈಕ ವಕೀಲ ಕೂಡ ಸರ್ಕಾರದಿಂದ ನೇಮಕಗೊಂಡಿದ್ದರು. ಬಾಂಗ್ಲಾದೇಶದಲ್ಲೀಗ ಧ್ರುವೀಕೃತ ಹಾಗೂ ಪ್ರತೀಕಾರ ಸಂಸ್ಕೃತಿಯ ರಾಜಕಾರಣ ಮುನ್ನೆಲೆಗೆ ಬಂದಿದೆ. ವಿಷಮಯಗೊಂಡಿರುವ ಆ ರಾಜಕೀಯ ಪರಿಸರ ರೂಪುಗೊಳ್ಳುವಲ್ಲಿ ಹಸೀನಾ ಅವರ ಪಾತ್ರವೂ ಇದೆ. ಹಸೀನಾ ಅವರ ಪದಚ್ಯುತಿ–ಪಲಾಯನದ ನಂತರ ಪರಿಸ್ಥಿತಿ ಮತ್ತಷ್ಟು ವಿಷಮಿಸಿದ್ದು, ಮುಸ್ಲಿಂ ಮೂಲಭೂತವಾದ ಹಾಗೂ ಅಸಹಿಷ್ಣುತೆ ರಾಜಕಾರಣದಲ್ಲಿ ಬೆರೆತಿದೆ. ಈ ಹೊಸ ಬೆಳವಣಿಗೆಗೆ ಹಸೀನಾ ಅವರು ಬಲಿಪಶುವಾಗಿದ್ದಾರೆ. ಬದಲಾದ ಸನ್ನಿವೇಶದಲ್ಲಿ, ವಿಶೇಷವಾಗಿ ಅವಾಮಿ ಲೀಗ್ ನಿಷೇಧದ ನಂತರ ಬಾಂಗ್ಲಾದೇಶದಲ್ಲಿ ಮುಕ್ತ ಚುನಾವಣೆ ನಡೆಯುವ ಸಾಧ್ಯತೆ ಇಲ್ಲವಾಗಿದೆ. ಆದರೆ, ಪ್ರತಿಕೂಲ ಸನ್ನಿವೇಶಗಳ ನಡುವೆಯೂ ಅವಾಮಿ ಲೀಗ್ ಈಗಲೂ ಪ್ರಭಾವಿ ಶಕ್ತಿಯಾಗಿ ಉಳಿದಿದೆ ಎನ್ನುವುದಕ್ಕೆ, ಹಸೀನಾ ಅವರ ವಿಚಾರಣೆಗೆ ವಿರೋಧ ವ್ಯಕ್ತಪಡಿಸಿ ಕರೆನೀಡಿದ್ದ ಬಂದ್‌ಗೆ ದೊರೆತ ಉತ್ತಮ ಪ್ರತಿಕ್ರಿಯೆ ನಿದರ್ಶನವಾಗಿದೆ.

ಶೇಖ್ ಹಸೀನಾ ಅವರಿಗೆ ವಿಧಿಸಲಾಗಿರುವ ಮರಣದಂಡನೆ ಶಿಕ್ಷೆಗೂ, ಪ್ರತೀಕಾರ ಸಂಸ್ಕೃತಿಯ ಮತೀಯ ರಾಜಕಾರಣ ಬಾಂಗ್ಲಾದೇಶದಲ್ಲಿ ಮುನ್ನೆಲೆಗೆ ಬಂದಿರುವುದಕ್ಕೂ ಸಂಬಂಧವಿದೆ.

ಮರಣದಂಡನೆ ಶಿಕ್ಷೆ ಪ್ರಕಟಗೊಂಡ ನಂತರ ಹಸೀನಾ ಅವರನ್ನು ಹಸ್ತಾಂತರಿಸುವಂತೆ ಬಾಂಗ್ಲಾದೇಶದ ಸರ್ಕಾರ ಭಾರತವನ್ನು ಮತ್ತೆ ಮತ್ತೆ ಒತ್ತಾಯಿಸಿದೆ. ಅಮಾನವೀಯ ಪ್ರಕರಣಕ್ಕೆ ಸಂಬಂಧಿಸಿದಂತೆ ಶಿಕ್ಷೆಗೊಳಗಾಗಿರುವ ವ್ಯಕ್ತಿಗೆ ಯಾವುದಾದರೂ ದೇಶ ಆಶ್ರಯ ನೀಡುವುದು ನ್ಯಾಯಕ್ಕೆ ಅಗೌರವ ಎಂದು ಅಲ್ಲಿನ ಸರ್ಕಾರ ಹೇಳಿದೆ. ಈ ಒತ್ತಾಯ ಮತ್ತು ಹೇಳಿಕೆಗೆ ಭಾರತ ಅತ್ಯಂತ ಸಂಯಮದಿಂದ ಪ್ರತಿಕ್ರಿಯಿಸಿದ್ದು, ಬಾಂಗ್ಲಾದೇಶದ ಜನರ ಹಿತಾಸಕ್ತಿಗೆ ಬದ್ಧವಾಗಿರುವುದಾಗಿ ಸ್ಪಷ್ಟಪಡಿಸಿದೆ; ನೆರೆಯ ದೇಶದ ಎಲ್ಲ ಭಾಗೀದಾರರೊಂದಿಗೆ ರಚನಾತ್ಮಕವಾಗಿ ತೊಡಗಿಸಿಕೊಳ್ಳುವುದಾಗಿಯೂ ಹೇಳಿದೆ. ಹಸೀನಾ ಅವರಿಗೆ ವಿಧಿಸಲಾಗಿರುವ ಶಿಕ್ಷೆಯನ್ನು ಪ್ರಶ್ನಿಸುವ ಇಲ್ಲವೇ ವಿಮರ್ಶಿಸುವ ಪ್ರಯತ್ನಕ್ಕೂ ಭಾರತ ಮುಂದಾಗಿಲ್ಲ. ಆದರೆ, ಹಸೀನಾ ಅವರನ್ನು ಹಸ್ತಾಂತರಿಸುವಂತೆ ಬಾಂಗ್ಲಾದೇಶ ಮಾಡುತ್ತಿರುವ ತೀವ್ರ ಒತ್ತಾಯ, ಭಾರತಕ್ಕೆ ರಾಜತಾಂತ್ರಿಕ ಪರೀಕ್ಷೆಯಾಗಿ ಪರಿಣಮಿಸಿದೆ. ದಶಕಗಳಿಂದ ಸ್ನೇಹ ಹೊಂದಿರುವ ನಾಯಕಿಯನ್ನು ಭಾರತ ಹಸ್ತಾಂತರಿಸಲಾರದು. 2026ರ ಫೆಬ್ರುವರಿಯಲ್ಲಿ ನಡೆಯುವ ಚುನಾವಣೆಯ ನಂತರ ಬಾಂಗ್ಲಾದೇಶದ ಒತ್ತಾಯ ಮತ್ತಷ್ಟು ಬಲಗೊಳ್ಳುವುದು ನಿಶ್ಚಿತ. ಆ ಸೂಕ್ಷ್ಮ ಸನ್ನಿವೇಶವನ್ನು ನಿಭಾಯಿಸುವುದು ಭಾರತದ ರಾಜತಾಂತ್ರಿಕ ಜಾಣ್ಮೆಗೆ ಬಹುದೊಡ್ಡ ಸವಾಲಾಗಲಿದೆ.

ಚಾಟಿ

ಮಾತಿನ ವಿವೇಕ

ಜಾತಿ, ಸೆಕ್ಸಿಸ್ಟ್ ಮತ್ತು ಫ್ಯೂಡಲ್ ಅರ್ಥವಿರುವ ಸ್ಥಳೀಯ ಹೇಳಿಕೆಗಳು ಮತ್ತು ಗಾದೆಗಳು ನಮ್ಮ ಸಂಸ್ಕೃತಿಯಲ್ಲಿವೆ. ಸಮಾನತಾವಾದಿಗಳಾಗಿ ನಾವು ಇಂತಹ ಅವಮಾನಕಾರಿ ಪದಗಳನ್ನು ಬಳಕೆ ಮಾಡದೇ ಇರಲು ಜನರಲ್ಲಿ ಜಾಗೃತಿ ಮೂಡಿಸಬೇಕು.

ಚೇತನ್ 'ಅಹಿಂಸಾ', ನಟ, 'ಎಕ್ಸ್'ನಿಂದ

ಕಿಡಿನುಡಿ

ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದ ದಿನಕ್ಕೊಂದು ಲೂಟಿ ನಡೆಯುತ್ತಲೇ ಇದೆ. ಅದೇ ಪಟ್ಟಿಗೆ ಇದೀಗ ಕಸ ಗುಡಿಸುವ ಮಷಿನ್ ಸೇರಿದೆ. ಕನ್ನಡಿಗರ ತೆರಿಗೆ ಹಣವನ್ನು ಕಸ ಗುಡಿಸುವ ಮಷಿನ್ ಹೆಸರಲ್ಲಿ ರಾಜ್ಯ ಸರ್ಕಾರ ಲೂಟಿ ಮಾಡುತ್ತಿದೆ.

ಆರ್. ಅಶೋಕ, ವಿಧಾನಸಭಾ ವಿರೋಧ ಪಕ್ಷದ ನಾಯಕ

25 ವರ್ಷಗಳ ಹಿಂದೆ

ಸೋಮವಾರ, 20-11-2000

• ತ್ರಿಪುರಾ: ಜನಾಂಗೀಯ ಗಲಭೆಗೆ ಕನಿಷ್ಠ 18 ಮಂದಿ ಬಲಿ

ಅಗರ್ತಲ, ನ. 19 (ಯುಎನ್ಐ)– ಉತ್ತರ ತ್ರಿಪುರಾದ ಕಾಂಚನಪುರದಲ್ಲಿ ಇಂದು ರಾಷ್ಟ್ರೀಯ ತ್ರಿಪುರಾ ವಿಮೋಚನಾ ರಂಗದ (ಎನ್ಎಲ್ಎಫ್‌ಟಿ) ಉಗ್ರಗಾಮಿಗಳ ಗುಂಡಿನ ದಾಳಿ ಹಾಗೂ ಅನಂತರ ನಡೆದ ಹಿಂಸಾಚಾರಗಳಲ್ಲಿ ಮಹಿಳೆಯರು ಹಾಗೂ ಮಕ್ಕಳು ಸೇರಿದಂತೆ ಕನಿಷ್ಠ 18 ಮಂದಿ ಸತ್ತಿದ್ದಾರೆ.

ಇಂದು ಮುಂಜಾನೆ ಕಾಂಚನಪುರ ಬಳಿಯ ಬರಾಹಲ್ದಿ ಗ್ರಾಮಕ್ಕೆ ನುಗ್ಗಿದ ಶಸ್ತ್ರಸಜ್ಜಿತ ಉಗ್ರಗಾಮಿಗಳು ಮನಬಂದಂತೆ ಗುಂಡು ಹಾರಿಸಲು ಆರಂಭಿಸಿದರು. ಆಗ ಇಬ್ಬರು ಮಕ್ಕಳು ಸೇರಿದಂತೆ ಏಳು ಮಂದಿ ಸ್ಥಳದಲ್ಲೇ ಸತ್ತರು. ಈ ಘಟನೆಯಲ್ಲಿ ಇತರ ಐವರು ತೀವ್ರವಾಗಿ ಗಾಯಗೊಂಡರು.

• ಸೀಮೆಎಣ್ಣೆ, ಅಡುಗೆ ಅನಿಲ ಬೆಲೆ ಸ್ವಲ್ಪ ಪ್ರಮಾಣ ಇಳಿಕೆ

ನವದೆಹಲಿ, ನ. 19 (ಯುಎನ್ಐ)– ತೃಣಮೂಲ ಕಾಂಗ್ರೆಸ್ ಮತ್ತು ಮಿತ್ರಪಕ್ಷಗಳ ತೀವ್ರ ಒತ್ತಡದ ಫಲವಾಗಿ ಕೇಂದ್ರ ಸರ್ಕಾರವು ಇಂದು ಅಡುಗೆ ಅನಿಲ ಮತ್ತು ಸೀಮೆಎಣ್ಣೆಯ ಹೆಚ್ಚಿಸಿದ ಬೆಲೆಯನ್ನು ಆಂಶಿಕವಾಗಿ ಕಡಿಮೆ ಮಾಡಿದೆ.

ಸೀಮೆಎಣ್ಣೆ ಬೆಲೆ ಪ್ರತಿ ಲೀಟರ್‌ಗೆ ಒಂದು ರೂಪಾಯಿ ಹಾಗೂ ಅಡುಗೆ ಅನಿಲ ದರವನ್ನು ಸಿಲಿಂಡರ್ ಒಂದಕ್ಕೆ ಹತ್ತು ರೂಪಾಯಿಯಂತೆ ಇಳಿಸಲಾಗಿದೆ. ಇಳಿಸಿರುವ ಬೆಲೆಗಳು ಎಂದಿನಿಂದ ಜಾರಿಗೆ ಬರಲಿವೆ ಎಂಬುದನ್ನು ಅನಂತರ ಪ್ರಕಟಿಸುವ ನಿರೀಕ್ಷೆ ಇದೆ.

75 ವರ್ಷಗಳ ಹಿಂದೆ

ಸೋಮವಾರ, 20-11-1950

• 'ಶಾಂತಿಯುತವಾಗಿ ನೇಪಾಳದ ಬಿಕ್ಕಟ್ಟು ಪರಿಹಾರವಾಗಬೇಕು'

ನವದೆಹಲಿ, ನ. 19– 'ನೇಪಾಳದಲ್ಲಿ ಅಂತಃಕಲಹವನ್ನು ಪರಿಹರಿಸಲು ಕೂಡಲೇ ರಾಜಕೀಯ ಹಾಗೂ ಆರ್ಥಿಕ ಸುಧಾರಣೆಗಳನ್ನು ಜಾರಿಗೆ ತರುವುದೊಂದೇ ಮಾರ್ಗ' ಎಂದು ಭಾರತ ಸರ್ಕಾರದ ವಿದ್ಯಾ ಸಚಿವ ಮೌಲಾನಾ ಅಬುಲ್ ಕಲಾಂ ಅಜಾದರು ಇಲ್ಲಿ ತಿಳಿಸಿದರು.

ನೇಪಾಳದ ಒಳ ವ್ಯವಹಾರದಲ್ಲಿ ನಾವು ಮಧ್ಯ ಪ್ರವೇಶಿಸುವುದಕ್ಕೆ ಆಗದಾದರೂ ಅಲ್ಲಿ ಎದ್ದಿರುವ ಅತೃಪ್ತಿಯನ್ನು ನಾವು ಗಮನಿಸಬೇಕು. ನೇಪಾಳವು ಭಾರತದ ನೆರೆಯ ರಾಷ್ಟ್ರ. ಆದ್ದರಿಂದ ಅಲ್ಲಿನ ಬಿಕ್ಕಟ್ಟು ಭಾರತದ ಸ್ವಾತಂತ್ರ್ಯಕ್ಕೆ ಅಪಾಯ ತರಬಹುದು ಎಂದರು.

ಹುಲಿ ಸಂತತಿ ಹೆಚ್ಚಾದದ್ದು ಹೇಗೆ?

ವಿಶ್ಲೇಷಣೆ

ಸಂಜಯ್ ಗುಬ್ಬಿ

ಮಾನವ-ವನ್ಯಜೀವಿ ಸಂಘರ್ಷಕ್ಕೆ ಹಲವು ವನ್ಯಜೀವಿ ಪ್ರಭೇದಗಳು ಕಾರಣವಾದರೂ– ಆನೆ, ಚಿರತೆ ಹಾಗೂ ಹುಲಿ, ಮಾನವ ಪ್ರಾಣಹಾನಿಗೆ ಮುಖ್ಯವಾಗಿ ಕಾರಣವಾಗುವ ಪ್ರಭೇದಗಳು. ಪ್ರತಿ ವನ್ಯಜೀವಿ ಪ್ರಭೇದದ ಸಂಘರ್ಷಕ್ಕೆ ಕಾರಣಗಳು ಮತ್ತು ಪರಿಹಾರ ಮಾರ್ಗಗಳು ಬೇರೆಯಾಗಿರುತ್ತವೆ ಹಾಗೂ ಪರಿಹಾರಗಳು ಕೆಲವೊಮ್ಮೆ ಆಯಾ ಪ್ರದೇಶಕ್ಕೆ ಅನುಗುಣವಾಗಿರುತ್ತವೆ. ಈ ವ್ಯತ್ಯಾಸದ ಕಾರಣದಿಂದಲೇ ಪ್ರಸಕ್ತ ಬರಹದಲ್ಲಿ ಮಾನವ-ಹುಲಿ ಸಂಘರ್ಷವನ್ನಷ್ಟೇ ಚರ್ಚಿಸಲಾಗಿದೆ.

2022ರ ಸರ್ಕಾರಿ ಅಂಕಿಅಂಶಗಳ ಪ್ರಕಾರ ರಾಜ್ಯದಲ್ಲಿ 563 ಹುಲಿಗಳಿದ್ದವು. ಈ ಸಂಖ್ಯೆಯಲ್ಲಿ ಶೇ 52ರಷ್ಟು ಹುಲಿಗಳು ಬಂಡೀಪುರ ಮತ್ತು ನಾಗರಹೊಳೆ ಅಭಯಾರಣ್ಯಗಳಲ್ಲಿ ದಾಖಲಾಗಿವೆ. ಇನ್ನುಳಿದ ಮೂರು ಹುಲಿ ಯೋಜನಾ ಪ್ರದೇಶಗಳಲ್ಲಿ ಬರೀ ಶೇ 15ರಷ್ಟು ಹುಲಿಗಳು ದಾಖಲಾಗಿವೆ. ಬಂಡೀಪುರ ಮತ್ತು ನಾಗರಹೊಳೆಯಲ್ಲಿ ಅತೀ ಹೆಚ್ಚು ಹುಲಿಗಳು ಇರುವುದಕ್ಕೆ ಮುಖ್ಯ ಕಾರಣ: ಈ ಕಾಡುಗಳು ಹುಲಿಗಳ ವಾಸಕ್ಕೆ ಪ್ರಶಸ್ತವಾಗಿರುವುದು ಮತ್ತು ನಾಲ್ಕು ದಶಕಗಳಿಂದ ಅಲ್ಲಿ ಆಗಿರುವ ಉತ್ತಮ ಸಂರಕ್ಷಣಾ ಕಾರ್ಯಗಳು. ಹುಲಿಗಳ ಸಂಖ್ಯೆ ಈ ಪ್ರದೇಶಗಳಲ್ಲಿ ಸ್ಥಿರವಾಗಿ ಹೆಚ್ಚುತ್ತಲೇ ಇರುವುದಕ್ಕೆ ಹುಲಿಗಳಿಗೆ ಅನುಕೂಲವಾಗುವ ಹಾಗೆ ಈ ಆವಾಸಸ್ಥಾನಗಳನ್ನು ಉತ್ತಮವಾಗಿ ನಿರ್ವಹಿಸಿರುವುದು ಕಾರಣವಾಗಿದೆ. ಅಂದರೆ, ಪ್ರಾಣಿಗಳಿಗೆ ವರ್ಷಪೂರ್ತಿ ನೀರು ಸಿಗುವ ಹಾಗೆ ಮಾಡಲು ಹೆಚ್ಚು ಹೆಚ್ಚು ಕೆರೆಗಳನ್ನು ತೋಡುವ, ನೀರು ಹಿಡಿದಿಡಲು ತಡೆಗೋಡೆಗಳನ್ನು ನಿರ್ಮಿಸುವ, ಮತ್ತು ಸಸ್ಯಾಹಾರಿ ಪ್ರಾಣಿಗಳಿಗೆ ಮೇವು ಸಿಗಲೆಂದು ನೈಸರ್ಗಿಕ ಕಾಡನ್ನು ಹುಲ್ಲುಗಾವಲುಗಳನ್ನಾಗಿ ಕೃತಕವಾಗಿ ಪರಿವರ್ತಿಸುವ ಚಟುವಟಿಕೆಗಳು ಇಲ್ಲಿ ನಡೆದಿವೆ.

ಈ ಆವಾಸಸ್ಥಾನದ ಕೃತಕ ಮಾರ್ಪಾಡಿನಿಂದ ದೊಡ್ಡ ಮಾಂಸಾಹಾರಿ ಪ್ರಾಣಿಗಳಿಗೆ ಅವಶ್ಯವಾದ ಜಿಂಕೆಗಳ ಸಂಖ್ಯೆ ಏರಿಕೆಯಾಗಿ, ಹುಲಿಗಳ ಸಂಖ್ಯೆಯೂ ಹೆಚ್ಚಿದೆ. ಬಂಡೀಪುರದಲ್ಲಿ 2014ರಲ್ಲಿ 120 ಹುಲಿಗಳಿದ್ದು, ಆ ಸಂಖ್ಯೆ 2022ರಲ್ಲಿ 150ಕ್ಕೆ ಏರಿದೆ ಎಂದು ಅಂಕಿಅಂಶಗಳು ಹೇಳುತ್ತವೆ. ನಿರಂತರವಾಗಿ ಹೆಚ್ಚುತ್ತಿರುವ ಹುಲಿಗಳ ಸಂಖ್ಯೆಗೆ ಅನುಗುಣವಾಗಿ ಕಾಡು ಹಿಗ್ಗುತ್ತಿಲ್ಲ. ಹಾಗಾಗಿ, ಬಂಡೀಪುರ ಮತ್ತು ನಾಗರಹೊಳೆ, ಅವುಗಳ ಪಾರಿಸರಿಕಧಾರಣಾ ಸಾಮರ್ಥ್ಯ ಮೀರಿ ಹೆಚ್ಚು ಹುಲಿಗಳಿಗೆ ನೆಲೆಯಾಗಿವೆ.

ಹುಲಿಗಳಿಗೆ ನೈಸರ್ಗಿಕವಾಗಿ ವೈರಿಗಳಿಲ್ಲ. ಸಂಪನ್ಮೂಲಗಳ ಕೊರತೆ, ನೈಸರ್ಗಿಕವಾಗಿ ಆಗುವ ಗಾಯಗಳು ಮತ್ತು ಇತರ ಹುಲಿಗಳ ದಾಳಿಯಿಂದ ಸಾವಿಗೀಡಾಗುವುದು ಅವುಗಳ ನೈಸರ್ಗಿಕ ಮರಣಕ್ಕೆ ಮುಖ್ಯ ಕಾರಣಗಳು. ನೈಸರ್ಗಿಕ ಮರಣ, ಅವುಗಳ ಸಂಖ್ಯೆಯನ್ನು ಆ ಪ್ರದೇಶದ ಪಾರಿಸರಿಕಧಾರಣಾ ಮಿತಿಯಲ್ಲಿ ಇರಿಸಲು ಸಹಕಾರಿಯಾಗುತ್ತದೆ. ಆದರೆ, ನಾವು ನೀರು ಮತ್ತು ಆಹಾರವನ್ನು ಅನೈಸರ್ಗಿಕವಾಗಿ ಹೆಚ್ಚಿಸುತ್ತಿರುವುದರಿಂದ ಹುಲಿಗಳ ಸಂಖ್ಯೆ ಹೆಚ್ಚಾಗಿದೆ, ಕಾಡಿನಿಂದಾಚೆಯೂ ಅವು ಮನೆ ಮಾಡಿಕೊಳ್ಳುತ್ತಿವೆ. ಇಂದು ಬಂಡೀಪುರ– ನಾಗರಹೊಳೆಯಲ್ಲಿ ಹುಟ್ಟಿ ಬೆಳೆದ 50ಕ್ಕೂ ಹೆಚ್ಚು ಹುಲಿಗಳು ಮೈಸೂರು, ಚಾಮರಾಜನಗರ ಮತ್ತು ಕೊಡಗು ಜಿಲ್ಲೆಗಳ ಹೊಲ–ತೋಟಗಳಲ್ಲಿ ಸೇರಿಕೊಂಡಿವೆ.

ಎಷ್ಟು ದಿನ, ಕೇವಲ ಈ ಎರಡು ಪ್ರದೇಶಗಳಲ್ಲಿ ಹುಲಿಗಳ ಸಂಖ್ಯೆಯನ್ನು ಹೆಚ್ಚಿಸುವುದು? ಬಂಡೀಪುರ-ನಾಗರಹೊಳೆ ಪ್ರದೇಶಗಳ ಹುಲಿಗಳ ಪಾರಿಸರಿಕಧಾರಣಾ ಶಕ್ತಿ ಸುಮಾರು 200 ಹುಲಿಗಳು ಮಾತ್ರ. ಆದರೆ, ಅಲ್ಲೀಗ 290ಕ್ಕೂ ಹೆಚ್ಚು ಹುಲಿಗಳಿವೆ.

ಇತರೆ ಹುಲಿ ಸಂರಕ್ಷಣಾ ಪ್ರದೇಶಗಳಿಗೆ ಹೋಲಿಸಿದರೆ, ಬಂಡೀಪುರ ಮತ್ತು ನಾಗರಹೊಳೆಯಲ್ಲಿ ಮಾತ್ರ ಹುಲಿಗಳ ಸಂಖ್ಯೆ ಸ್ಥಿರವಾಗಿ ಹೆಚ್ಚುತ್ತಿರುವುದು ಏಕೆ ಎನ್ನುವ ಪ್ರಶ್ನೆ ಸಹಜ. ಅದಕ್ಕೆ ಅಲ್ಲಿ ನಡೆಯುತ್ತಿರುವ ಪ್ರವಾಸೋದ್ಯಮ ಹಾಗೂ ಅದರಿಂದ ಬರುತ್ತಿರುವ ಆದಾಯವೇ ಕಾರಣ.

> ನಾಗರಹೊಳೆ, ಬಂಡೀಪುರ ಅರಣ್ಯಪ್ರದೇಶದಲ್ಲಿ ಹುಲಿಗಳ ಸಂಖ್ಯೆ ಹೆಚ್ಚುತ್ತಿದೆ. ಇದರ ಪರಿಣಾಮ ನಾಡಿನ ಮೇಲಾಗುತ್ತಿದೆ. ವನ್ಯಜೀವಿ ಸಂರಕ್ಷಣೆಯನ್ನು ನಾವು ಭಾವುಕವಾಗಿ ನೋಡದೆ, ನೈಸರ್ಗಿಕ ವಿವೇಕದ ನೆಲೆಗಟ್ಟಿನಲ್ಲಿ ನೋಡಬೇಕಾಗಿದೆ. ನಿಸರ್ಗದ ಧಾರಣಾಶಕ್ತಿಯ ಮೇಲೆ ಹಸ್ತಕ್ಷೇಪ ನಡೆದಷ್ಟೂ ವ್ಯತಿರಿಕ್ತ ಪರಿಣಾಮಗಳು ಹೆಚ್ಚುತ್ತವೆ.

ಹಿಂದೆ ವನ್ಯಜೀವಿ ಪ್ರದೇಶಗಳಿಂದ ಬಂದ ಪ್ರವಾಸೋದ್ಯಮದ ಆದಾಯವನ್ನು ಕ್ರೋಡೀಕರಿಸಿ, ರಾಜ್ಯದ ರಾಷ್ಟ್ರೀಯ ಉದ್ಯಾನ ಮತ್ತು ವನ್ಯಜೀವಿಧಾಮಗಳಿಗೆ ಅಗತ್ಯಕ್ಕೆ ಅನುಸಾರವಾಗಿ ಹಂಚಲಾಗುತ್ತಿತ್ತು. 2006ರ ವನ್ಯಜೀವಿ ಸಂರಕ್ಷಣಾ ಕಾಯ್ದೆಯಲ್ಲಿ ಆದ ತಿದ್ದುಪಡಿಯಿಂದಾಗಿ, ಆಯಾ ಪ್ರದೇಶದ ಪ್ರವಾಸೋದ್ಯಮದ ಆದಾಯವನ್ನು ಅದೇ ವನ್ಯಜೀವಿಧಾಮದಲ್ಲಿ ಖರ್ಚು ಮಾಡಬೇಕಾಗಿದೆ. ಪ್ರಸ್ತುತ, ವಾರ್ಷಿಕವಾಗಿ ಬಂಡೀಪುರ ಮತ್ತು ನಾಗರಹೊಳೆಗಳಿಗೆ ತಲಾ ₹35 ಕೋಟಿ ಪ್ರವಾಸೋದ್ಯಮದ ಆದಾಯ ಬರುತ್ತಿದೆ. ಇದನ್ನು ಕೆರೆ ತೋಡಲು, ನೀರಿನಕಟ್ಟೆ ಕಟ್ಟಲು, ಹೆದ್ದಾರಿಗಳಲ್ಲಿ ಕಮಾನುಗಳನ್ನು ನಿರ್ಮಿಸಲು, ಇನ್ನಿತರೆ ಕಾಮಗಾರಿಗಳಿಗೆ ವಿನಿಯೋಗಿಸಲಾಗುತ್ತಿದೆ. ಈ ಖರ್ಚಿನ ಸ್ವರೂಪ ಬದಲಾಗಬೇಕು.

ವನ್ಯಜೀವಿಗಳ ಸಂತತಿ ಹೆಚ್ಚಳದ ಬೆಲೆ ತೆರುವವರು ಕಾಡಿನ ಸುತ್ತಮುತ್ತಲಿರುವ ಜನರು. ಪ್ರತಿನಿತ್ಯವೂ ಅವರ ಬೆಳೆಗಳನ್ನು ಆನೆ, ಕಾಡು ಹಂದಿ, ಜಿಂಕೆ, ನವಿಲು ಇನ್ನಿತರ ವನ್ಯಜೀವಿಗಳು ನಾಶಪಡಿಸುತ್ತವೆ; ಅವರ ಜಾನುವಾರುಗಳನ್ನು ಹುಲಿ, ಚಿರತೆಗಳು ಭಕ್ಷಿಸುತ್ತವೆ. ವನ್ಯಜೀವಿ ಪ್ರವಾಸೋದ್ಯಮದ ಮೇಲೆ ಅವಲಂಬಿತರಾಗಿರುವ ಕೆಲವೇ ಕೆಲವು ಸ್ಥಳೀಯ ಜನರನ್ನು ಬಿಟ್ಟರೆ, ವನ್ಯಜೀವಿಗಳಿಂದ ಸ್ಥಳೀಯ ಜನ ಯಾವುದೇ ಅನುಕೂಲಗಳನ್ನು ಕಾಣುತ್ತಿಲ್ಲ. ಅವುಗಳು ಅವರಿಗೆ ತೊಂದರೆಗಳ ಮೂಲವಾಗಿ ಕಾಣುತ್ತಿವೆ. ಹಾಗಾಗಿ, ಪ್ರವಾಸೋದ್ಯಮದ ಗಳಿಕೆಯಲ್ಲಿ ಕನಿಷ್ಠ ಶೇ 50ರಷ್ಟು ಹಣವನ್ನು ಕಾಡಿನ ಸುತ್ತಮುತ್ತಲ ಹಳ್ಳಿಗಳ ಅಭಿವೃದ್ಧಿಗೆ, ಅಥವಾ ಮಾನವ–ವನ್ಯಜೀವಿ ಸಂಘರ್ಷದ ಪರಿಹಾರಕ್ಕೆ, ಇನ್ನುಳಿದ ಶೇ 50 ಹಣವನ್ನು ಅರಣ್ಯ ಇಲಾಖೆಯ ತಾತ್ಕಾಲಿಕ ನೌಕರರ ಸಂಬಳ, ಕನಿಷ್ಠ ಸವಲತ್ತುಗಳು, ತರಬೇತಿ ಚಟುವಟಿಕೆಗಳು, ಇನ್ನಿತರೆ ಸಂರಕ್ಷಣಾ ಕಾರ್ಯಗಳಿಗೆ ವಿನಿಯೋಗ ಮಾಡಿಕೊಳ್ಳಬೇಕು.

ಸ್ಥಳೀಯ ಜನರಿಗೆ ಉದ್ಯೋಗಾವಕಾಶ ಹೆಚ್ಚಿಸಲು ಮತ್ತು ವನ್ಯಜೀವಿಗಳಿಗೆ ಆಗುತ್ತಿರುವ ತೊಂದರೆಗಳನ್ನು ಕಡಿಮೆಗೊಳಿಸಲು ವನ್ಯಜೀವಿಧಾಮಗಳಲ್ಲಿ ಜೆಸಿಬಿ ಉಪಯೋಗವನ್ನು ನಿರ್ಬಂಧಿಸಿ, ಆ ಕೆಲಸಗಳನ್ನು ಜನರಿಂದ ಮಾಡಿಸಿದರೆ, ಸ್ಥಳೀಯ ಉದ್ಯೋಗಾವಕಾಶಗಳು ಹೆಚ್ಚಿದಂತಾಗುತ್ತದೆ.

ವನ್ಯಜೀವಿಗಳೊಂದಿಗಿನ ಸಂಘರ್ಷ ಕಡಿಮೆ ಆಗಬೇಕಾದರೆ, ನಮ್ಮ ಕೆಲವು ಜನಪ್ರಿಯ ಅಭಿಪ್ರಾಯಗಳನ್ನು ಬದಲಾಯಿಸಿಕೊಳ್ಳಬೇಕಾಗಿದೆ. ವನ್ಯಜೀವಿ ಸಂರಕ್ಷಣೆಯನ್ನು ವೈಜ್ಞಾನಿಕ ಮತ್ತು ಸಾಮಾನ್ಯ ಗ್ರಹಿಕೆಯ ದೃಷ್ಟಿಕೋನದಿಂದ ನೋಡಬೇಕಾಗಿದೆ. ಕಾಡಿನಲ್ಲಿ ನೀರಿಲ್ಲ, ಮೇವಿಲ್ಲ; ಹಾಗಾಗಿ, ವನ್ಯಜೀವಿಗಳು ಕಾಡಿನಿಂದ ಆಚೆ ಬಂದು ಜನರಿಗೆ ತೊಂದರೆ ಕೊಡುತ್ತಿವೆ ಎಂದು ಕಳೆದ ಎರಡು ದಶಕಗಳಿಂದ ನೂರಾರು ಕೆರೆಗಳನ್ನು, ಸಾವಿರಾರು ಇಂಗು ಗುಂಡಿಗಳನ್ನು ತೋಡಿ, ಸಿಕ್ಕ ಸಿಕ್ಕ ಕೆರೆಗಳಿಗೆಲ್ಲ ಸೌರಶಕ್ತಿ ಪಂಪ್ ಅಳವಡಿಸಿ, ವರ್ಷಪೂರ್ತಿ ನೀರು ಸಿಗುವ ಹಾಗೆ ಮಾಡಿದ್ದೇವೆ. ಹಾಗಿದ್ದ ಮೇಲೆ ಬಂಡೀಪುರ ಮತ್ತು ನಾಗರಹೊಳೆಯಲ್ಲಿ ಮಾನವ–ವನ್ಯಜೀವಿ ಸಂಘರ್ಷ ಕಡಿಮೆ ಆಗಬೇಕಿತ್ತಲ್ಲವೇ? ಇದೇ ವಿಚಾರ ಕಾಡಿನಲ್ಲಿರುವ ಕಳೆಗಳಿಗೂ ಅನ್ವಯವಾಗುತ್ತದೆ. ಕಳೆಗಳಿಂದ ಸಸ್ಯಾಹಾರಿಗಳಿಗೆ ಆಹಾರ ಸಿಗುತ್ತಿಲ್ಲವೆಂದರೆ, ಅವುಗಳ ಸಂಖ್ಯೆ ಹೆಚ್ಚುತ್ತಿರುವುದಾದರೂ ಹೇಗೆ? ಎಲ್ಲ ಸಸ್ಯಾಹಾರಿ ಪ್ರಾಣಿಗಳು ನಾವು ಬೆಳೆದ ಆಹಾರ ಸಸ್ಯಗಳ ಮೇಲೆ ಅವಲಂಬಿತವಾಗಿದ್ದರೆ, ರಾಜ್ಯದಲ್ಲಿರುವ ಲಕ್ಷಾಂತರ ಜಿಂಕೆಗಳು ಕಾಡಿನಿಂದಾಚೆ ಇರಬೇಕಾಗಿತ್ತು.

ಡಿಜಿಟಲ್ ಮಾಧ್ಯಮ ಜನಪ್ರಿಯವಾದ ಮೇಲೆ ಕಾಡಿನಲ್ಲಿ ನೈಸರ್ಗಿಕವಾಗಿ ಗಾಯಗೊಂಡ ಹುಲಿಗಳಿಗೆ ಚಿಕಿತ್ಸೆ ನೀಡುವುದು ಅಥವಾ ಹುಲಿ ಮರಿಗಳ ತಾಯಿ ಕಾಣೆಯಾದರೆ, ಮೃಗಾಲಯದ ಪ್ರಾಣಿಗಳಂತೆ ಅವುಗಳ ಲಾಲನೆ ಪಾಲನೆ ಮಾಡುವುದು ನಡೆಯುತ್ತಿದೆ. ಇದರಿಂದ ಅವುಗಳ ಸಂಖ್ಯೆ ಅನೈಸರ್ಗಿಕವಾಗಿ ಹೆಚ್ಚುತ್ತದೆ. ವನ್ಯಜೀವಿಗಳ ಸಹಜ ಅಥವಾ ನೈಸರ್ಗಿಕ ಸಾವಿಗೆ ಅಡ್ಡಿಪಡಿಸಬಾರದು. ಅವುಗಳ ಸಂಖ್ಯೆಯನ್ನು ಪಾರಿಸರಿಕ ಸಮತೋಲನದಲ್ಲಿ ಇಡಲು ಮತ್ತು ಸಂಘರ್ಷ ಕಡಿಮೆಗೊಳಿಸುವ ದೃಷ್ಟಿಯಿಂದ ನೈಸರ್ಗಿಕ ಕಾರಣಗಳಿಂದ ಗಾಯಗೊಂಡ ವನ್ಯಜೀವಿಗಳಿಗೆ ಅರಣ್ಯಪ್ರದೇಶದೊಳಗೆ (ವನ್ಯಜೀವಿಧಾಮ ಮತ್ತು ಪ್ರಾದೇಶಿಕ ವಿಭಾಗಗಳ ಅರಣ್ಯ ಪ್ರದೇಶದೊಳಗೆ) ಚಿಕಿತ್ಸೆ ನೀಡುವುದನ್ನು ಸ್ಥಗಿತಗೊಳಿಸಬೇಕು. ಡಿಜಿಟಲ್ ಮಾಧ್ಯಮದಿಂದ ಇಂತಹ ವಿಚಾರಕ್ಕೆ ಬರುವ ಒತ್ತಡಗಳನ್ನು ಗಣನೆಗೆ ತೆಗೆದುಕೊಳ್ಳದೆ, ವೈಜ್ಞಾನಿಕ ದೃಷ್ಟಿಕೋನದಿಂದ ವನ್ಯಜೀವಿಗಳ ಸಂಖ್ಯೆಯನ್ನು ನೈಸರ್ಗಿಕಧಾರಣಾ ಮಟ್ಟಕ್ಕೆ ತರಬೇಕಾಗಿದೆ.

ಜಾನುವಾರು ನಷ್ಟವಾದಾಗ ಸರ್ಕಾರ ಕೊಡುವ ಪರಿಹಾರ ರೈತರಿಗೆ ತಲಪುವುದಕ್ಕೆ ಒಂದು ವರ್ಷದಷ್ಟು ಸಮಯ ತೆಗೆದುಕೊಳ್ಳುತ್ತಿದೆ. ಇದರಿಂದ ಜನ ತಾಳ್ಮೆ ಕಳೆದುಕೊಂಡು ವನ್ಯಜೀವಿಗಳ ಬಗ್ಗೆ ನಿರಾಶಾವಾದದ ಭಾವನೆ ಹೊಂದಿದ್ದಾರೆ. ಸಂತ್ರಸ್ತ ರೈತರಿಗೆ ಎರಡು ವಾರದೊಳಗೆ ಪರಿಹಾರ ಸಿಗುವ ಹಾಗೆ ಮಾಡಿದರೆ ಅವರಿಗೆ ಸ್ವಲ್ಪ ನೆಮ್ಮದಿಯಾಗುತ್ತದೆ.

ಹುಲಿಗಳ ಸಂಖ್ಯೆ ಮಾನವ ಪ್ರಧಾನವಾಗಿರುವ ಪ್ರದೇಶಗಳಲ್ಲಿ ಹೆಚ್ಚಾಗುತ್ತಿರುವುದು ವನ್ಯಜೀವಿ ಸಂರಕ್ಷಣಾ ದೃಷ್ಟಿಕೋನದಿಂದ ಸಂತೋಷದ ವಿಚಾರವಾದರೂ, ಅದನ್ನು ಸಾಮಾಜಿಕ ಧಾರಣಾ ಶಕ್ತಿಯ ನೋಟದಿಂದ ಅವಲೋಕಿಸಬೇಕು. ಇಲ್ಲವಾದಲ್ಲಿ, ವನ್ಯಜೀವಿಗಳ ವಿಚಾರದಲ್ಲಿ ಸಮಾಜ ಕಾನೂನನ್ನು ಕೈಗೆ ತೆಗೆದುಕೊಳ್ಳುತ್ತದೆ. ಇದನ್ನು, ಹಾಸನ ಜಿಲ್ಲೆಯಲ್ಲಿ ಆನೆಗಳ ವಿಚಾರವಾಗಿ ನೋಡುತ್ತಿದ್ದೇವೆ.

ಮಾನವ–ವನ್ಯಜೀವಿ ಸಂಘರ್ಷವನ್ನು ಕಡಿಮೆಗೊಳಿಸಲು ನಾವು ಮಾಡುತ್ತಿರುವ ತಪ್ಪುಗಳನ್ನು ಸರಿಪಡಿಸಿಕೊಳ್ಳಬೇಕಾಗಿದೆ. ಕಟ್ಟುನಿಟ್ಟಿನ ಕ್ರಮಗಳನ್ನು ಇಂದು ಕೈಗೊಳ್ಳಲು ಪ್ರಾರಂಭಿಸಿದರೆ, ಹತ್ತು ವರ್ಷಗಳಲ್ಲಿ ಮಾನವ–ವನ್ಯಜೀವಿ ಸಂಘರ್ಷದಲ್ಲಿ ಧನಾತ್ಮಕ ಬದಲಾವಣೆ ನೋಡಬಹುದು.

ವಾಚಕರ ವಾಣಿ

ನೇಮಕಾತಿ ವಯೋಮಿತಿ ಸಡಿಲಗೊಳಿಸಿ

ರಾಜ್ಯ ಸರ್ಕಾರವು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮೂಲಕ ವಿವಿಧ ಇಲಾಖೆಗಳಲ್ಲಿನ 708 ಹುದ್ದೆಗಳ ಭರ್ತಿಗೆ ಅಧಿಸೂಚನೆ ಹೊರಡಿಸಿದೆ. ಇದರಿಂದ ಸರ್ಕಾರಿ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಕಾಯುತ್ತಿದ್ದ ಲಕ್ಷಾಂತರ ಅಭ್ಯರ್ಥಿಗಳ ಮೊಗದಲ್ಲಿ ಮಂದಹಾಸ ಮೂಡಿದೆ. ಆದರೆ, ಅಭ್ಯರ್ಥಿಗಳ ಗರಿಷ್ಠ ವಯೋಮಿತಿಯಲ್ಲಿ ಕೇವಲ 3 ವರ್ಷಗಳನ್ನಷ್ಟೇ ಸಡಿಲಿಕೆ ಮಾಡಲಾಗಿದೆ. ತಮಿಳುನಾಡು, ಕೇರಳ, ಆಂಧ್ರಪ್ರದೇಶ, ತೆಲಂಗಾಣ ಹಾಗೂ ಇತರ ರಾಜ್ಯಗಳಲ್ಲಿ 7ರಿಂದ 10 ವರ್ಷದವರೆಗೆ ಗರಿಷ್ಠ ವಯೋಮಿತಿ ಸಡಿಲಿಸಿರುವ ನಿದರ್ಶನವಿದೆ. ರಾಜ್ಯ ಸರ್ಕಾರವು ಗರಿಷ್ಠ ವಯೋಮಿತಿಯನ್ನು ಇನ್ನಷ್ಟು ವರ್ಷ ಸಡಿಲಿಸಿದರೆ ಅನುಕೂಲವಾಗಲಿದೆ.

ಪ್ರಶಾಂತ್ ಕುಮಾರ್ ಎ.ಪಿ., ಮೈಸೂರು

ಎನ್. ನರಸಿಂಹಯ್ಯ ಕೊಡುಗೆ ಅನನ್ಯ

'ಎನ್. ನರಸಿಂಹಯ್ಯ ನೆನಪಿಗೆ ಏನೂ ಬೇಡವೇ?' ಲೇಖನ (ಲೇ: ಎನ್.ಎಸ್. ಶಂಕರ್, ಪ್ರ.ವಾ., ನ. 18) ನನ್ನ ಬಾಲ್ಯವನ್ನು ನೆನಪಿಸಿತು. ಆಗ 'ಚಂದಮಾಮ' ಮತ್ತು ಎನ್. ನರಸಿಂಹಯ್ಯ ಅವರ ಪತ್ತೆದಾರಿ ಕಾದಂಬರಿಗಳು ನನಗೆ ತುಂಬಾ ಪ್ರಿಯವಾಗಿದ್ದವು. 'ಮುಂದೇನಾಗುತ್ತೆ..?' ಎಂದು ತಿಳಿಯುವ ಕುತೂಹಲ ತಡೆಯಲಾಗದೇ ಒಂದು ಪುಸ್ತಕ ಓದಲು ಪ್ರಾರಂಭ ಮಾಡಿದರೆ, ಅದನ್ನು ಪೂರ್ತಿ ಓದಿ ಮುಗಿಸಿಯೇ ಮೇಲೇಳುತ್ತಿದ್ದುದು. ಹಾಗಾಗಿ, ಪತ್ತೆದಾರ ಪುರುಷೋತ್ತಮನ ಹೆಸರು ಇಂದಿಗೂ ನೆನಪಲ್ಲಿ ಇದೆ. ನರಸಿಂಹಯ್ಯ ಅವರ ವ್ಯಕ್ತಿತ್ವದ ಪರಿಚಯ ಇರಲಿಲ್ಲ. ಲೇಖನದಲ್ಲಿ ಆ ಬಗ್ಗೆ ತಿಳಿದು, ಅವರ ಬಗ್ಗೆ ಮನಸ್ಸು ತುಂಬಿ ಬಂದಿತು.

ಎಲ್.ಟಿ. ಸರಸ್ವತಿ, ಸಾಗರ

ನಗರೀಕರಣ: ಖಗಸಂಕುಲಕ್ಕೆ ಆಪತ್ತು

ಪಕ್ಷಿಗಳು ಮಾನವನ ದೈನಂದಿನ ಬದುಕಿನೊಂದಿಗೆ ಬೆಸೆದುಕೊಂಡಿವೆ. ಪಾರಿಸರಿಕ ಸಮತೋಲನ ಕಾಪಾಡುವಲ್ಲಿ ಅವುಗಳ ಕೊಡುಗೆ ಹಿರಿದು. ಬೀಜ ಪ್ರಸರಣ, ಕೀಟ ನಿಯಂತ್ರಣ ಸೇರಿದಂತೆ ರೈತನ ಪಾಲಿಗೆ ಜೀವನಾಡಿಯಾಗಿವೆ. ಆದರೆ, ಅತಿಯಾದ ನಗರೀಕರಣ ಅವುಗಳ ಗೋಣು ಮುರಿದಿದೆ. ಮನೆಯ ಅಂಗಳದಲ್ಲಿ ಕಂಡುಬರುತ್ತಿದ್ದ ಹಲವು ಪಕ್ಷಿಗಳು ಆವಾಸನಾಶದಿಂದ ಅಳಿವಿನಂಚಿಗೆ ತಲುಪಿವೆ. ಮತ್ತೊಂದೆಡೆ ಅರಣ್ಯ ನಾಶ, ಕೃಷಿಯಲ್ಲಿ ಅತಿಯಾದ ರಾಸಾಯನಿಕಗಳ ಬಳಕೆಯಿಂದ ಖಗಸಂಕುಲ ಸಂಕಷ್ಟಕ್ಕೆ ಸಿಲುಕಿದೆ. ಪರಿಸರ ಮಾಲಿನ್ಯದಿಂದ ಅವುಗಳ ಸಂತಾನೋತ್ಪತ್ತಿಯಲ್ಲಿ ಏರುಪೇರಾಗುತ್ತಿದೆ. 'ಹಕ್ಕಿಗಳ ಸಂಗದಲ್ಲಿ ರೆಕ್ಕೆ ಮೂಡುವುದೆನಗೆ, ಹಾರುವುದು ಹೃತ್ಪಕ್ಷಿ ಲೋಕಗಳ ಕೊನೆಗೆ' ಎಂದು ಕುವೆಂಪು ಪರವಶರಾಗಿ ನುಡಿದಿದ್ದಾರೆ. ಹಾಗಾಗಿ ಬೆರಗಿನ, ಬೆಡಗಿನ ಪಕ್ಷಿಗಳ ಬದುಕನ್ನು ಉಳಿಸಬೇಕಿದೆ.

ಯೋಗೇಂದ್ರ ಎಸ್.ಆರ್., ತುಮಕೂರು

ರೈತ ಸಂಘದ ಹೋರಾಟ ಕಬ್ಬಿಗೆ ಮಾತ್ರವೆ?

ಇತ್ತೀಚೆಗೆ ಕಬ್ಬು ಬೆಲೆ ಹೆಚ್ಚಳಕ್ಕೆ ಆಗ್ರಹಿಸಿ ಬೆಳಗಾವಿಯಲ್ಲಿ ಕರ್ನಾಟಕ ರಾಜ್ಯ ರೈತ ಸಂಘದ ನೇತೃತ್ವದಡಿ ಬೃಹತ್ ಹೋರಾಟ ನಡೆಯಿತು. ಸರ್ಕಾರವೂ ಹೋರಾಟಕ್ಕೆ ಮಣಿಯಿತು. ಹಾಗಿದ್ದರೆ ರೈತ ಸಂಘದ ಹೋರಾಟ ಕಬ್ಬು ಬೆಳೆಗಷ್ಟೇ ಸೀಮಿತವೇ? ಈರುಳ್ಳಿ ಬೆಲೆ ಕುಸಿತದಿಂದಾಗಿ ರಾಜ್ಯದ ರೈತರು ಸಾಕಷ್ಟು ನಷ್ಟ ಅನುಭವಿಸಿದ್ದಾರೆ. ಖರ್ಚು ಮಾಡಿದ ಹಣವೂ ಕೈಸೇರದೆ ಸಾಲದ ಸುಳಿಗೆ ಸಿಲುಕಿದ್ದಾರೆ. ಮೆಕ್ಕೆಜೋಳ, ರಾಗಿ, ಭತ್ತ, ಈರುಳ್ಳಿ ಬೆಲೆ ಕುಸಿದಾಗಲೂ ಹೋರಾಟ ಮಾಡಿದರೆ ಸಣ್ಣ ರೈತರಿಗೆ ನ್ಯಾಯ ಸಿಗುತ್ತದಲ್ಲವೆ?

ಸಿದ್ದು ಪೂಜಾರಿ, ಬೆಂಗಳೂರು

ವಿ.ವಿ.ಗೆ ಅಂಟಿದ ಅತಿರೇಕಗಳ ಅಪಸವ್ಯ

ಕುವೆಂಪು ವಿಶ್ವವಿದ್ಯಾಲಯದಲ್ಲಿ ಭಗವದ್ಗೀತೆ ಕುರಿತು ನಡೆದ ವಿಚಾರ ಸಂಕಿರಣವನ್ನು ಕೆಲವರು ವಿರೋಧಿಸಿದ್ದಾರೆ. ಈ ವಿಷಯದಲ್ಲಿ ಬೇಕೆಂದೇ ಕುವೆಂಪು ಮತ್ತು ಯು.ಆರ್. ಅನಂತಮೂರ್ತಿ ಅವರ ಹೆಸರನ್ನೆಲ್ಲ ಎಳೆದು ತಂದಿದ್ದಾರೆ. ಇದರಲ್ಲಿ ಎಷ್ಟು ಜನ ಭಗವದ್ಗೀತೆಯನ್ನಾಗಲಿ, ಕುವೆಂಪು- ಅನಂತಮೂರ್ತಿ ಸಾಹಿತ್ಯವನ್ನಾಗಲಿ ಓದಿದ್ದಾರೆಂದು ತಿಳಿಯದು. ವಿವಾದಕ್ಕೆ ಪ್ರತಿಕ್ರಿಯಿಸಿರುವ ಕುಲಪತಿ ಶರತ್ ಅನಂತಮೂರ್ತಿ, 'ಯಾವುದೋ ಲೇಬಲ್ ಹಚ್ಚಿ ಎಲ್ಲವನ್ನೂ ಹಾಳು ಮಾಡುವುದು ಬೇಡ' ಎಂದಿದ್ದಾರೆ. ಸತ್ಯ ಹೇಳಿರುವ ಅವರ ಧೀಮಂತಿಕೆ ಶ್ಲಾಘನೀಯ.

ಈಗ ಸತ್ಯ ಯಾರಿಗೂ ಬೇಡ. ಬದಲಿಗೆ, ಎಲ್ಲದರಲ್ಲೂ ಎಡ-ಬಲ, ಬ್ರಾಹ್ಮಣ-ಶೂದ್ರ, ಮೆಜಾರಿಟಿ-ಮೈನಾರಿಟಿ ಇತ್ಯಾದಿ ಅತಿರೇಕಗಳ ಅಪಸವ್ಯವಿದೆ. ನಮ್ಮ ಸಾಹಿತ್ಯ, ವಿಶ್ವ ವಿದ್ಯಾಲಯಗಳು, ಅಕಾಡೆಮಿಗಳಲ್ಲೂ ಈ ರೋಗ ಉಲ್ಬಣಿಸಿದೆ. ವಿಶ್ವವಿದ್ಯಾಲಯಗಳು ಜ್ಞಾನಸೃಷ್ಟಿ ಮತ್ತು ವೈದುಷ್ಯದ ಆಡುಂಬೊಲಗಳಾಗಿ ಇರಬೇಕಾಗಿತ್ತು. ಆದರೆ, ಈಗ ಜಾತಿ, ಧರ್ಮ, ರಾಜಕೀಯದ ತೊಟ್ಟಿಗಳಾಗಿರುವುದು ದುರಂತ.

ಬಿ.ಎಸ್. ಜಯಪ್ರಕಾಶ ನಾರಾಯಣ, ಅಗ್ರಹಾರ ಬೆಳಗುಲಿ

ಸಾರಿಗೆ ನೌಕರರ ಬಗ್ಗೆ ಅನಾದರ ಸಲ್ಲದು

ಕಳೆದ 38 ತಿಂಗಳಿನಿಂದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಗಳ ನೌಕರರ ಬಾಕಿ ವೇತನ ಪಾವತಿಯಾಗಿಲ್ಲ. ನೌಕರರು ಹಗಲು–ರಾತ್ರಿ ಎನ್ನದೆ ಸೇವೆ ಸಲ್ಲಿಸುತ್ತಿದ್ದಾರೆ. ತಂದೆ, ತಾಯಿ, ಮಕ್ಕಳನ್ನು ಮನೆಯಲ್ಲಿ ಬಿಟ್ಟು ದೂರದ ಊರುಗಳಿಗೆ ಸಂಚರಿಸುತ್ತಾರೆ. ನೌಕರರಿಗೆ ಪ್ರತಿ ತಿಂಗಳು ವೇತನ ಸಿಗದಿದ್ದರೆ ಕುಟುಂಬದ ನಿರ್ವಹಣೆ ಕಷ್ಟಕರ. ಹಲವು ವರ್ಷಗಳಿಂದ ವೇತನ ಪರಿಷ್ಕರಿಸಿಲ್ಲ. ತಮ್ಮ ವೇತನ ಹಾಗೂ ಇತರ ಭತ್ಯೆಗಳನ್ನು ಸದನದಲ್ಲಿ ಚರ್ಚೆ ಇಲ್ಲದೆ ಹೆಚ್ಚಿಸಿಕೊಳ್ಳುವ ಜನಪ್ರತಿನಿಧಿಗಳು, ಸಾರಿಗೆ ನೌಕರರ ವೇತನ ಹೆಚ್ಚಳಕ್ಕೆ ನಿರ್ಲಕ್ಷ್ಯವಹಿಸಿರುವುದು ಅಮಾನವೀಯ.

ಸಂತೋಷ ಪೂಜಾರಿ, ತಡಲಗಿ

ಚುರುಮುರಿ

ಲಂಚವೇ ತಾಯಿ–ತಂದೆ!

• ಗುರು ಪಿ.ಎಸ್.

'ಇಲ್ಲಿ ವ್ಯಂಗ್ಯ, ಮೂದಲಿಕೆ ಮತ್ತು ಕಾಲೆಳೆಯುವುದನ್ನು ಸಹಿಸಲಾಗುವುದಿಲ್ಲ' ಕಾಗದದಲ್ಲಿ ದೊಡ್ಡದಾಗಿ ಬರೆದು ಬೋರ್ಡ್‌ನಂತೆ ಹಿಡಿದು ನಿಂತೆ.

'ಇದೇನ್ರೀ ನಿಮ್ಮ ಹೊಸ ವರಸೆ. ಮದುವೆಗೆ ರೆಡಿಯಾಗಿ ಅಲಂಕಾರ ಬೇಡ ಅಂದ್ರು ಅಂದಂಗಾಯ್ತಿದು' ಎಂದು ನಕ್ಕಳು ಹೆಂಡತಿ.

'ನೋಡು, ನೋಡು, ಇದೇ ಬೇಡ ಅನ್ನೋದು. ಈ ವ್ಯಂಗ್ಯವೆಲ್ಲ ಬೇಡ ಅಂತಾನೇ ಬೋರ್ಡ್ ಹಿಡ್ಕೊಂಡಿದೀನಿ'.

'ಚಿಂತಾಮಣಿ ಕೇಸ್ ಆಯ್ತಿದು' ಎಂದಳು.

'ಅಂದ್ರೆ?'

'ಅಂದ್ರೆ, ಚಿಂತಾಮಣಿಯ ಸಬ್ ರಿಜಿಸ್ಟ್ರಾರ್ ಒಬ್ಬರು, ಇಲ್ಲಿ ಲಂಚವನ್ನು ಸ್ವೀಕರಿಸುವುದಿಲ್ಲ ಎಂದು ಬೋರ್ಡ್ ಹಾಕಿಕೊಂಡಿದ್ದರು'.

'ಪಾಪ, ಪ್ರಾಮಾಣಿಕರು'.

'ಪ್ರಾಮಾಣಿಕತೆ ತಗೊಂಡ್ ಏನ್ಮಾಡ್ತೀರಾ, ಅವರನ್ನ ಅಲ್ಲಿಂದ ಎತ್ತಂಗಡಿ ಮಾಡಿಸಿ 3 ತಿಂಗಳಾದರೂ ಅವರಿಗೆ ಇನ್ನೂ ಹುದ್ದೆ ಕೊಟ್ಟಿಲ್ಲ. ಬೋರ್ಡೂ ಕಿತ್ತು ಹಾಕಿದಾರಂತೆ'.

'ಓಹ್, ಅಂದ್ರೆ ಈಗ ಅಲ್ಲಿ ಲಂಚ ಸ್ವೀಕರಿಸಲಾಗುವುದು ಎಂದಂತಾಯ್ತು' ನಾನೂ ನಕ್ಕೆ.

'ಏನ್ ನಗ್ತೀರಾ, ಈಗ ನಿಮ್ಮ ಬೋರ್ಡ್ ಕಿತ್ತು ಹಾಕ್ತೀರೋ, ಹೊಟ್ಟೆಗೆ ಕೂಳು ಇಲ್ಲದೆ ಮೂಲೇಲಿ ಮಲಗ್ತೀರೋ ಯೋಚನೆ ಮಾಡಿ' ಎಂದಳು.

'ಪ್ರಾಮಾಣಿಕವಾಗಿ ನಮ್ಮ ಉದ್ದೇಶ, ಆಶಯ, ಆಸೆಯನ್ನ ಹೇಳ್ಕೊಳ್ಳೋದೇ ತಪ್ಪಾ?' ಅಂದೆ ದೀನನಾಗಿ.

'ಹುಚ್ಚುಚ್ಚಾಗಿ ಬೋರ್ಡ್ ಹಾಕ್ಕೊಂಡ್ರೆ ಸರ್ಕಾರವೇ ಬಿಡಲ್ಲ. ನಾನು ಬಿಡ್ತೀನಾ?'

'ಲಂಚ ಸ್ವೀಕರಿಸುವುದಿಲ್ಲ ಅನ್ನೋದು ಹುಚ್ಚುತನವಾ?'

'ಮತ್ತೇನ್ರೀ... ಈಗ ಎರಡೂವರೆ ವರ್ಷ ಆದ್ಮೇಲೆ ನನಗೆ ಸಿಎಂ ಮಾಡ್ತೀನಿ ಅಂದಿದ್ರಿ, ಈಗ ಮಾಡಿ ಎಂದು ಯಾರೋ ಬೋರ್ಡ್ ಹಾಕ್ಕೊಂಡು ಕೂತರೆ ಹೇಗಿರುತ್ತೆ, ನೀವೇ ಯೋಚನೆ ಮಾಡಿ' ಎಂದಳು.

'ಎಲ್ಲಿಂದ ಎಲ್ಲಿಗೋ ಹೋಗ್ತಿಯಲ್ಲಮ್ಮ ನೀನು'

'ಬೆತ್ತಲೆ ಜಗತ್ತಿನಲ್ಲಿ ಬಟ್ಟೆ ಹಾಕ್ಕೊಂಡೋರೆ ಹುಚ್ಚರು. ಎಲ್ಲೆಡೆ, ಲಂಚ ತಗೋಳೋ ಜನರಿರುವಾಗ ಪ್ರಾಮಾಣಿಕರೇ ಇಲ್ಲಿ ಮೂರ್ಖರು' ಎಂದಳು ವೇದಾಂತಿಯಂತೆ.

'ಅಂದ್ರೆ ಏನದರ ಅರ್ಥ'

'ನಾನು ನಿಮ್ಮ ಕಾಲೆಳೆಯೋದನ್ನ ನಿಲ್ಲಿಸೋಕಾಗಲ್ಲ. ಆ ಬೋರ್ಡ್ ಬಿಸಾಕಿ ಊಟಕ್ಕೆ ಬನ್ನಿ ಅಂತ ಅರ್ಥ' ಎಂದು ಒಳ ಹೋದಳು.

ಸಂಗತ

ಹಬ್ಬಲಿ ಪುಸ್ತಕಪ್ರೀತಿ, ಓದಾಗಲಿ ಸಂಸ್ಕೃತಿ

ಎಳೆಯರಿಗೆ ಪುಸ್ತಕಸಂಸ್ಕೃತಿ ಪರಿಚಯಿಸುವುದು ಅವರ ಆರೋಗ್ಯ ಹಾಗೂ ಮನೋವಿಕಾಸಕ್ಕೆ ಪೂರಕ. ನಾಡು–ನುಡಿ ಬಲಗೊಳಿಸಲೂ ಪುಸ್ತಕಪ್ರೀತಿ ಪೂರಕ.

• ರಾಜಕುಮಾರ ಕುಲಕರ್ಣಿ

'ಕನ್ನಡ ರಾಜ್ಯೋತ್ಸವ', 'ಮಕ್ಕಳ ದಿನಾಚರಣೆ' ಮತ್ತು 'ಗ್ರಂಥಾಲಯ ಸಪ್ತಾಹ' ಮೂರೂ ಒಂದೇ ತಿಂಗಳಲ್ಲಿ ಬರುವುದು ಕಾಕತಾಳೀಯ ಹೌದಾದರೂ, ಈ ಮೂರು ಸಂಗತಿಗಳಿಗೆ ಸಾಂಸ್ಕೃತಿಕವಾಗಿ ಒಳಸಂಬಂಧವಿದೆ. ರಾಜ್ಯೋತ್ಸವ ನಾಡು–ನುಡಿ ಸಂಭ್ರಮವಾದರೆ, ಉಳಿದೆರಡು ಆ ಸಂಭ್ರಮ ನಿರಂತರವಾಗಿರಲು ಅಗತ್ಯವಾದ ಜೀವದ್ರವ್ಯಗಳು.

ನವೆಂಬರ್ 14ರ 'ಮಕ್ಕಳ ದಿನಾಚರಣೆ'ಯಂದೇ ಆರಂಭವಾಗುವ ಗ್ರಂಥಾಲಯ ಸಪ್ತಾಹದ ಆಚರಣೆ ನವೆಂಬರ್ 20ರಂದು ಕೊನೆಗೊಳ್ಳುತ್ತದೆ. ಮಕ್ಕಳು ಮೊಬೈಲ್ ಫೋನ್ ವ್ಯಸನಿಗಳಾಗಿದ್ದು, ಅವರಲ್ಲಿ ಪುಸ್ತಕಗಳ ಓದಿನ ಹವ್ಯಾಸ ಕ್ಷೀಣಿಸುತ್ತಿದೆ ಎನ್ನುವ ಆರೋಪ ಕೇಳಿಬರುತ್ತಿರುವ ಹಿನ್ನೆಲೆಯಲ್ಲಿ, 'ಗ್ರಂಥಾಲಯ ಸಪ್ತಾಹ'ವನ್ನು ಕಾಟಾಚಾರಕ್ಕೆಂದು ಆಚರಿಸದೆ, ಅರ್ಥಪೂರ್ಣವಾಗಿಸಬೇಕಿದೆ. ಪುಸ್ತಕಗಳ ಓದಿಗೆ ವಿಮುಖರಾಗುತ್ತಿರುವ ಮಕ್ಕಳನ್ನು ಮತ್ತೆ ಪುಸ್ತಕಗಳತ್ತ ಕರೆತರುವ ಆಚರಣೆ ಇದಾಗಬೇಕು.

ಕುವೆಂಪು ಅವರಿಂದ ಇಂದಿನ ಯುವ ಬರಹಗಾರರವರೆಗೆ ಅನೇಕ ಲೇಖಕರು ಮಕ್ಕಳಿಗೆಂದು ಬರೆದ ಪುಸ್ತಕಗಳು ಕನ್ನಡದಲ್ಲಿ ಹೇರಳವಾಗಿವೆ. ಸಂಪದ್ಭರಿತ ಮಕ್ಕಳ ಸಾಹಿತ್ಯ ಸಾರ್ವಜನಿಕ ಗ್ರಂಥಾಲಯಗಳಲ್ಲಿ ಮಕ್ಕಳ ಓದಿಗೆ ಲಭ್ಯವಾಗಬೇಕು. ಗ್ರಂಥಾಲಯ ಸಪ್ತಾಹದ ಸಂದರ್ಭ ಲೈಬ್ರರಿಗಳಲ್ಲಿರುವ ಮಕ್ಕಳ ಸಾಹಿತ್ಯ ಕೃತಿಗಳನ್ನು ಪ್ರದರ್ಶಿಸುವ ಮೂಲಕ ಪಾಲಕರ ಹಾಗೂ ಮಕ್ಕಳ ಗಮನಕ್ಕೆ ತರುವುದು ಅಗತ್ಯ. ಆದರೆ, ಸಾರ್ವಜನಿಕ ಗ್ರಂಥಾಲಯಗಳಲ್ಲಿ ಮಕ್ಕಳ ಪುಸ್ತಕಗಳ ಕೊರತೆ ಇದೆ ಎನ್ನುವ ದೂರು ಕೇಳಿಬರುತ್ತಿದೆ. ಮಕ್ಕಳ ಪುಸ್ತಕಗಳಿದ್ದರೂ ಅವುಗಳನ್ನು ಪ್ರತ್ಯೇಕವಾಗಿ ವ್ಯವಸ್ಥೆಗೊಳಿಸದೆ ಇರುವುದು ಇನ್ನೊಂದು ಸಮಸ್ಯೆ.

ಕೋವಿಡ್ ಸಾಂಕ್ರಾಮಿಕದ ಸಂದರ್ಭದಲ್ಲಿ ಗ್ರಾಮೀಣ ಗ್ರಂಥಾಲಯಗಳಲ್ಲಿ 'ಓದುವ ಬೆಳಕು' ಕಾರ್ಯಕ್ರಮದ ಮೂಲಕ ಮಕ್ಕಳಲ್ಲಿ ಓದುವ ಆಸಕ್ತಿ ಬೆಳೆಸಲು ಯೋಜನೆ ರೂಪಿಸಲಾಯಿತು. ಈ ಯೋಜನೆಯನ್ನು ಪರಿಣಾಮಕಾರಿಯಾಗಿ ಕಾರ್ಯಗತಗೊಳಿಸಲಾಗಿದೆಯೇ ಎನ್ನುವ ಪ್ರಶ್ನೆಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಉತ್ತರದಾಯಿಯಾಗಿದೆ. ಸರ್ಕಾರಿ ಶಾಲೆಗಳಲ್ಲಿ ಕಲಿಯುತ್ತಿರುವ ಮಕ್ಕಳಿಗೆ ಪುಸ್ತಕಗಳ ಓದಿನ ಸೌಲಭ್ಯ ಒದಗಿಸಲು ಗ್ರಾಮೀಣ ಗ್ರಂಥಾಲಯಗಳಲ್ಲಿ ಸದಸ್ಯರೆಂದು ನೋಂದಣಿ ಮಾಡಿಕೊಳ್ಳಲಾಗಿದೆ. ನೋಂದಣಿಯಾದ ಮಕ್ಕಳಿಗೆ ಅಗತ್ಯವಾದ ಪುಸ್ತಕಗಳನ್ನು ಒದಗಿಸುವುದು ಇಲಾಖೆಯ ಜವಾಬ್ದಾರಿಯಾಗಿದೆ. ಯೋಜನೆಗಳು ಕೇವಲ ಕೈಪಿಡಿಗೆ ಮತ್ತು ಉದ್ಘಾಟನೆಗೆ ಸೀಮಿತವಾಗದೆ ಕಾರ್ಯರೂಪಕ್ಕೆ ಬರಬೇಕು. ಗ್ರಾಮೀಣ ಗ್ರಂಥಾಲಯಗಳನ್ನು ಮಕ್ಕಳ ಓದಿಗೆ ಅನುಕೂಲವಾಗುವಂತೆ ಅಭಿವೃದ್ಧಿಪಡಿಸಬೇಕಿದೆ.

ಮೂಲ ಸೌಕರ್ಯಗಳ ಕೊರತೆಯಿರುವ ಸರ್ಕಾರಿ ಶಾಲೆಗಳಲ್ಲಿ ಗ್ರಂಥಾಲಯಗಳನ್ನು ನಿರೀಕ್ಷಿಸುವಂತಿಲ್ಲ. ಖಾಸಗಿ ಶಾಲೆಗಳಲ್ಲೂ ಮಕ್ಕಳ ಗ್ರಂಥಾಲಯಗಳ ಸಂಖ್ಯೆ ನಿರೀಕ್ಷಿತ ಪ್ರಮಾಣದಷ್ಟಿಲ್ಲ. ಶಾಲೆಗಳಲ್ಲಿ ಪಠ್ಯಪುಸ್ತಕಗಳಾಚೆ ವಿದ್ಯಾರ್ಥಿಗಳು ಬೇರೆ ಪುಸ್ತಕಗಳನ್ನು ಓದಲು ಅವಕಾಶ ಇಲ್ಲವಾಗಿದೆ. ಸಾಹಿತ್ಯದ ಪುಸ್ತಕಗಳ ಓದಿನಿಂದ ವಿದ್ಯಾರ್ಥಿಗಳ ಸಮಯ ವ್ಯರ್ಥ ಎನ್ನುವ ಮನೋಭಾವ ಶಿಕ್ಷಕರು ಮತ್ತು ಪಾಲಕರಲ್ಲಿ ಮನೆಮಾಡಿದೆ. ಹಿಂದೆಲ್ಲ ಶಾಲೆಗಳ ವೇಳಾಪಟ್ಟಿಯಲ್ಲಿನ ಕೊನೆಯ ಅವಧಿ ನೈತಿಕ ಶಿಕ್ಷಣಕ್ಕೆ ಮೀಸಲಾಗಿರುತ್ತಿತ್ತು. ಶಿಕ್ಷಕರು ವಿದ್ಯಾರ್ಥಿಗಳಿಗೆ ನೀತಿಕಥೆಗಳನ್ನು ಬೋಧಿಸುತ್ತಿದ್ದರು. ಸದ್ಯದ ವಾತಾವರಣವನ್ನು ಗಮನಿಸಿದರೆ, ಪಾಲಕರು ಮಕ್ಕಳ ಶಿಕ್ಷಣ ಎನ್ನುವ ಸರಕಿನ ಮೇಲೆ ಬಂಡವಾಳ ಹೂಡುತ್ತಿರುವಂತೆ ಭಾಸವಾಗುತ್ತದೆ.

ಕೋಟ್ಯಂತರ ರೂಪಾಯಿ ಖರ್ಚು ಮಾಡಿ ಮನೆಕಟ್ಟಿಸುವ ಪಾಲಕರು ತಮಗಾಗಿ ಮತ್ತು ಮಕ್ಕಳಿಗಾಗಿ ಮನೆಯಲ್ಲಿ ಪುಸ್ತಕಗಳ ಸಂಗ್ರಹಕ್ಕಾಗಿ ಪುಟ್ಟ ಕೋಣೆಯನ್ನು ನಿರ್ಮಿಸುತ್ತಿಲ್ಲ. ಸ್ನಾನಗೃಹದಿಂದ ದೇವರ ಕೋಣೆಯವರೆಗೆ ಪ್ರತಿ ಹಂತದಲ್ಲಿ ಅತ್ಯಂತ ಆಸಕ್ತಿ ಮತ್ತು ಮುತುವರ್ಜಿಯಿಂದ ಯೋಜನೆ ರೂಪಿಸಿ ಮನೆ ನಿರ್ಮಿಸುವವರಿಗೆ ಪುಸ್ತಕದ ಗೂಡು ಬೇಕೆನ್ನಿಸುತ್ತಿಲ್ಲ. ಪಾಠ ಮಾಡುವ ಶಿಕ್ಷಕರ ಮನೆಗಳಲ್ಲೂ ಓದಲು ಪುಸ್ತಕಗಳು ಸಿಗುತ್ತಿಲ್ಲ. ಮಕ್ಕಳಲ್ಲಿ ಪುಸ್ತಕಪ್ರೀತಿ ಒಂದು ಸಂಸ್ಕೃತಿಯಾಗಿ ರೂಪುಗೊಳ್ಳುವಲ್ಲಿ ಕುಟುಂಬದ ಹಿರಿಯರ ಓದುವ ಹವ್ಯಾಸ ಮುಖ್ಯ ಪಾತ್ರವಹಿಸುತ್ತದೆ.

ಮಕ್ಕಳ ಹಟ ಮತ್ತು ಗಲಾಟೆಯನ್ನು ನಿಯಂತ್ರಿಸಲು ಪಾಲಕರೇ ಮುಂದಾಗಿ ಮಕ್ಕಳ ಕೈಗೆ ಮೊಬೈಲ್ ಫೋನ್ ಕೊಡುತ್ತಿದ್ದಾರೆ. ಮೊಬೈಲ್ ಫೋನ್ ಬದಲು ಮಕ್ಕಳ ಕೈಗೆ ಪುಸ್ತಕಗಳನ್ನು ಕೊಡುವುದು ಅವರ ಆರೋಗ್ಯದ ದೃಷ್ಟಿಯಿಂದ ಉತ್ತಮವಾದದ್ದು.

ಇಂದು ವಿದ್ಯಾರ್ಥಿ ಸಮೂಹ ಸಂವಹನಕ್ಕಾಗಿ ಬಳಸುತ್ತಿರುವ ಭಾಷೆ ಗಾಬರಿ ಹುಟ್ಟಿಸುವಂತಿದೆ. ಮೊಬೈಲ್ ತಂತ್ರಜ್ಞಾನದ ಸಹಾಯದಿಂದ ಪದಗಳನ್ನು ತುಂಡರಿಸಿ ಸಂಕ್ಷಿಪ್ತ ರೂಪದಲ್ಲಿ ಬಳಸುತ್ತಿದ್ದಾರೆ. ಭಾವನೆಗಳು ಎಮೋಜಿ ರೂಪದಲ್ಲಿ ವ್ಯಕ್ತವಾಗುತ್ತಿವೆ. ಯುವಸಮೂಹದ ಈ ನಡೆ ಶಬ್ದಸೂತಕ ವಾತಾವರಣವನ್ನು ಸೃಷ್ಟಿಸುತ್ತಿದೆ. ಭವಿಷ್ಯದಲ್ಲಿ ಮನುಷ್ಯ ಮಾತನಾಡುವ ಕೌಶಲವನ್ನೇ ಕಳೆದುಕೊಳ್ಳಬಹುದೇನೋ ಎನ್ನುವ ಆತಂಕ ಎದುರಾಗಿದೆ. ಈ ಆತಂಕದ ನಿವಾರಣೆಗೆ ಪುಸ್ತಕಗಳ ಓದು ಪರ್ಯಾಯ ಮಾರ್ಗವಾಗಿದೆ.

ಪುಸ್ತಕಗಳ ಓದು ಶಬ್ದಗಳ ಮತ್ತು ಭಾಷೆಯ ಬಳಕೆಯನ್ನು ಹೆಚ್ಚಿಸುತ್ತದೆ. ಓದಿನಿಂದ ಕಲ್ಪನೆಯ ಸಾಮರ್ಥ್ಯ ವೃದ್ಧಿಸುತ್ತದೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಮಕ್ಕಳ ಮೇಲೆ ಎಐ ದೌರ್ಜನ್ಯ

ಅಂಕುಶವೇ ಇಲ್ಲದ ಅವಿವೇಕ

• ಸುಕೃತ ಎಸ್.

ಇಂದಿನ ಆಧುನಿಕ ಯುಗದಲ್ಲಿ ಮಕ್ಕಳು ಮಾಹಿತಿಗಾಗಿ ತಂತ್ರಜ್ಞಾನದ ಮೇಲೆ ಬಹುವಾಗಿ ಅವಲಂಬಿತರಾಗಿದ್ದಾರೆ. ಈ ತಂತ್ರಜ್ಞಾನವೇ ಅವರಿಗೆ ಮಾರಕವೂ ಆಗಿದೆ. ದುಷ್ಕೃತ್ಯ ಎಸಗುವವರು ಮಕ್ಕಳನ್ನು ಲೈಂಗಿಕ ದೌರ್ಜನ್ಯದ ಸಂತ್ರಸ್ತರನ್ನಾಗಿ ಮಾಡುತ್ತಿದ್ದಾರೆ.

ಕೃತಕ ಬುದ್ಧಿಮತ್ತೆ (ಎಐ) ಕಾಲಘಟ್ಟದಲ್ಲಿ ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯ ಎಸಗಲು ಈ ತಂತ್ರಜ್ಞಾನವೇ ಅಸ್ತ್ರವಾಗಿದೆ. ಲೈಂಗಿಕವಾಗಿ ಉದ್ರೇಕಗೊಳಿಸಲು ಮಕ್ಕಳೇ ಚಾಟ್ ಮಾಡುತ್ತಿದ್ದಾರೆ ಎನ್ನುವಂತೆ ಚಾಟ್ ಸೃಷ್ಟಿಸುವುದು, ತಂತ್ರಜ್ಞಾನದ ಮೂಲಕ ಮಕ್ಕಳ ಚಿತ್ರಗಳನ್ನು ನಗ್ನಗೊಳಿಸಿ ಅಶ್ಲೀಲ ವಿಡಿಯೊಗಳಲ್ಲಿ ಬಳಸಿಕೊಳ್ಳುವುದು... ಇಂತಹ ಅತಿರೇಕಗಳು ವ್ಯಾಪಕವಾಗಿ ನಡೆಯುತ್ತಿವೆ.

ವಿಶ್ವ ಸಂಸ್ಥೆಯ 'ಜೆನರೇಟಿವ್ ಎಐ: ಎ ನ್ಯೂ ಥ್ರೆಟ್ ಫಾರ್ ಆನ್‌ಲೈನ್ ಚೈಲ್ಡ್ ಸೆಕ್ಸುವಲ್ ಎಕ್ಸ್‌ಪ್ಲಾಯ್ಟೇಷನ್ ಆ್ಯಂಡ್ ಅಬ್ಯೂಸ್' ವರದಿಯಲ್ಲಿ ಈ ಎಲ್ಲವನ್ನೂ ವಿವರಿಸಲಾಗಿದೆ. 2023ರಿಂದ ಈಚೆಗೆ ಇಂಥ ಪ್ರಕರಣಗಳು ಹೆಚ್ಚಾಗಿವೆ. ತಮಗೆ ಗೊತ್ತಿಲ್ಲದಂತೆ ಮಕ್ಕಳು ಸಂತ್ರಸ್ತರಾಗುತ್ತಿದ್ದಾರೆ. ಪ್ರೌಢಾವಸ್ಥೆಗೆ ಬಂದಿರುವ ಮಕ್ಕಳೇ (ಬಹುಪಾಲು ಪ್ರಕರಣಗಳಲ್ಲಿ ಹೆಣ್ಣುಮಕ್ಕಳು) ಇಂಥ ಕೃತ್ಯಗಳಲ್ಲಿ ಸಂತ್ರಸ್ತರಾಗುತ್ತಾರೆ.

ವಿಶ್ವಸಂಸ್ಥೆಯ ಪ್ರಕಾರ, ಅಶ್ಲೀಲ ವಿಡಿಯೊ ವೀಕ್ಷಣೆ ಮಾಡುವ ಒಟ್ಟು ಪುರುಷರಲ್ಲಿ ಮಕ್ಕಳ ಅಶ್ಲೀಲ ವಿಡಿಯೊವನ್ನು ಶೇ 65ರಷ್ಟು ಮಂದಿ ವೀಕ್ಷಿಸುತ್ತಾರೆ. ಇವರಲ್ಲಿ ಶೇ 37ರಷ್ಟು ಪುರುಷರು ತಮ್ಮ ಲೈಂಗಿಕ ಬಯಕೆಯನ್ನು ತೀರಿಸಿಕೊಳ್ಳಲು ಮಕ್ಕಳನ್ನು ನೇರವಾಗಿ ಬಳಸಿಕೊಳ್ಳುತ್ತಾರೆ. ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯ ಎಸಗುವವರಲ್ಲಿ ಪುರುಷರೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ.

ಎಐ ಮೂಲಕ ಸೃಷ್ಟಿಸಿದ ಅಶ್ಲೀಲ ವಿಡಿಯೊ/ಚಿತ್ರಗಳ ಕುರಿತು ಅಮೆರಿಕದ 'ನ್ಯಾಷನಲ್ ಸೆಂಟರ್ ಫಾರ್ ಮಿಸ್ಸಿಂಗ್ ಆ್ಯಂಡ್ ಎಕ್ಸ್‌ಪ್ಲಾಯ್ಟೆಡ್ ಚಿಲ್ಡ್ರನ್' (ಎನ್‌ಸಿಎಂಇಸಿ) ಎನ್ನುವ ಸರ್ಕಾರೇತರ ಸಂಸ್ಥೆಗೆ ಕಳೆದ ಎರಡು ವರ್ಷಗಳಲ್ಲಿ ಬಂದ ದೂರಿನ ಸಂಖ್ಯೆ ಇದು

ಹೆಚ್ಚು 'ನೈತಿಕ' ಎನ್ನುವ ವಾದ

ಎಐ ಮೂಲಕ ಅಶ್ಲೀಲ ವಿಡಿಯೊ ಸೃಷ್ಟಿಸುವವರ ಮೂಲ ಉದ್ದೇಶ ಹಣ ಮಾಡುವುದು. ಎಐ ತಂತ್ರಜ್ಞಾನದ ತಿಳಿವಳಿಕೆ ಇರುವವರು ಮತ್ತೊಬ್ಬರಿಗಾಗಿ ವಿಡಿಯೊ ಸೃಷ್ಟಿಸಿ ಹಣ ಮಾಡುತ್ತಾರೆ. ಇಲ್ಲವೇ ಮತ್ತೊಬ್ಬರ ಮಾನ ಕಳೆಯುವುದಕ್ಕಾಗಿ, ಬ್ಲ್ಯಾಕ್‌ಮೇಲ್ ಮಾಡಿ ಹಣ ಗಳಿಸುವುದಕ್ಕಾಗಿ ವಿಡಿಯೊ ಮಾಡುತ್ತಾರೆ. ಕೆಲವರು ಎಐ ತಂತ್ರಜ್ಞಾನದಲ್ಲಿ ತಮಗಿರುವ ಕೌಶಲ ತೋರಿಸುವುದಕ್ಕೂ ಇಂಥ ವಿಡಿಯೊಗಳನ್ನು ಸೃಷ್ಟಿಸುತ್ತಾರೆ. ಮಕ್ಕಳ ಮೇಲಿನ ದೌರ್ಜನ್ಯದ ವಿಡಿಯೊ ನೋಡುವುದಕ್ಕಿಂತ ಎಐ ತಂತ್ರಜ್ಞಾನದ ಮೂಲಕ ಸೃಷ್ಟಿಸಿದ ವಿಡಿಯೊವು ಹೆಚ್ಚು ನೈತಿಕವಾಗಿರುತ್ತದೆ ಎನ್ನುವುದು ದುಷ್ಕೃತ್ಯ ಎಸಗುವವರ ವಾದ ಎನ್ನುವುದನ್ನು ವರದಿಯಲ್ಲಿ ವಿವರಿಸಲಾಗಿದೆ.

ಎಐ: ದೌರ್ಜನ್ಯದ ಮುಖಗಳು

- **ಎಐ ಚಾಟ್ ಮಾದರಿ:** ಲೈಂಗಿಕವಾಗಿ ಉದ್ರೇಕಗೊಳ್ಳಲು ಮಕ್ಕಳೇ ಚಾಟ್ ಮಾಡುತ್ತಿದ್ದಾರೆ ಎನ್ನುವಂತೆ ಚಾಟ್ ಮಾದರಿಗಳನ್ನು ಸೃಷ್ಟಿಸುವುದು
- **ವಿವರ:** ಮಕ್ಕಳ ಮೇಲೆ ಹೇಗೆಲ್ಲಾ ಲೈಂಗಿಕ ದೌರ್ಜನ್ಯ ಎಸಗಬಹುದು ಎಂಬ ವಿವರ ಇರುವ ಕಂಟೆಂಟ್ ಸೃಷ್ಟಿ
- **ಚಿತ್ರ ಸೃಷ್ಟಿ:** ಮಕ್ಕಳ ಅಶ್ಲೀಲ ಚಿತ್ರಗಳನ್ನು ಸೃಷ್ಟಿಸಲು ಎಐಗೆ ಪ್ರೇರೇಪಿಸುವಂತಹ ಸಂದೇಶಗಳು
- **ಫೋಟೊ ಬಳಕೆ:** ಮಕ್ಕಳ ಅಶ್ಲೀಲ ಚಿತ್ರಗಳನ್ನು ಸೃಷ್ಟಿಸುವುದಕ್ಕಾಗಿಯೇ ಮಕ್ಕಳ ಚಿತ್ರಗಳನ್ನು ಸೆರೆಹಿಡಿಯುವುದು
- **ಮರುಸೃಷ್ಟಿ:** ಈಗಾಗಲೇ ಇರುವ ಮಕ್ಕಳ ಅಶ್ಲೀಲ ಚಿತ್ರಗಳನ್ನು ಬಳಸಿಕೊಂಡು ಮತ್ತೊಮ್ಮೆ ಬೇರೆ ರೀತಿಯ ಅಶ್ಲೀಲ ಚಿತ್ರಗಳನ್ನು ಸೃಷ್ಟಿಸುವುದು

ಮತ್ತೆ ಮತ್ತೆ ಸಂತ್ರಸ್ತರು

- **ಎಐ ಚಾಟ್ ಮಾದರಿ ಸಿದ್ಧಪಡಿಸುವುದು:** ಈಗಾಗಲೇ ಇರುವ ಮಕ್ಕಳ ಅಶ್ಲೀಲ ಚಿತ್ರಗಳನ್ನು ಮತ್ತು ಹೊಸದಾಗಿ ಸೆರೆಹಿಡಿದ ಚಿತ್ರಗಳನ್ನು ಎಐ ಡಾಟಾಬೇಸ್‌ಗೆ ನೀಡಲಾಗುತ್ತದೆ. ಇದರಿಂದ ಮಕ್ಕಳ ಹೊಸ ಹೊಸ ಅಶ್ಲೀಲ ಚಿತ್ರಗಳನ್ನು ಸೃಷ್ಟಿಸಲಾಗುತ್ತದೆ. ಎಲ್‌ಎಐಒಎನ್–5ಬಿ ಎನ್ನುವ ಟ್ರೇನಿಂಗ್ ಡಾಟಾಬೇಸ್‌ಗೆ ಈಗಾಗಲೇ ಲಭ್ಯ ಇರುವ ಸುಮಾರು 3,000 ಮಕ್ಕಳ ಅಶ್ಲೀಲ ಚಿತ್ರಗಳನ್ನು ಮತ್ತು ಕೆಲವು ಹೊಸದಾಗಿ ತೆಗೆದ ಚಿತ್ರಗಳನ್ನು ನೀಡಲಾಗಿದೆ
- **ಹೊಸ ಚಿತ್ರಗಳ ಬಳಕೆ:** ಪೋಷಕರು ತಾವು ಸಾಮಾಜಿಕ ಜಾಲತಾಣಗಳಲ್ಲಿ ಅಥವಾ ಬೇರೆ ಯಾವುದೇ ಆನ್‌ಲೈನ್ ವೇದಿಕೆಗಳಲ್ಲಿ ಹಂಚಿಕೊಂಡ ತಮ್ಮ ಮಕ್ಕಳ ಚಿತ್ರಗಳನ್ನು ಬಳಸಿಕೊಳ್ಳಲಾಗುತ್ತದೆ. ಇಂಥ ಚಿತ್ರಗಳನ್ನು ಬಳಸಿಕೊಂಡು ಮಕ್ಕಳನ್ನು ನಗ್ನವಾಗಿರುವಂತೆ ಚಿತ್ರ ಸೃಷ್ಟಿಸಲಾಗುತ್ತದೆ. 'ನ್ಯೂಡಿಟಿ' ಆ್ಯಪ್‌ಗಳು ಲಭ್ಯವಿವೆ. ಇಲ್ಲಿ ಯಾರದ್ದೇ ಚಿತ್ರಗಳನ್ನು ಹಾಕಿದರೆ, ಅದು ಅವರ ನಗ್ನ ಚಿತ್ರಗಳನ್ನು ರೂಪಿಸಿ ಕೊಡುತ್ತದೆ. ಇಂಥ ಆ್ಯಪ್‌ಗಳ ಮೂಲಕವೇ ಮಕ್ಕಳ ನಗ್ನಚಿತ್ರ ಸೃಷ್ಟಿಸಲಾಗುತ್ತದೆ
- **ಚಿತ್ರ ತಿದ್ದುವುದು:** ಒಂದು ವೇಳೆ, ಮಗುವೊಂದು ಈಗಾಗಲೇ ಸಂತ್ರಸ್ತವಾಗಿರುತ್ತದೆ. ಅದರ ಪೋಷಕರು ಈ ಬಗ್ಗೆ ದೂರು ನೀಡಿ, ನ್ಯಾಯಾಲಯದ ಮೆಟ್ಟಿಲನ್ನೂ ಹತ್ತಿರುತ್ತಾರೆ. ಆನ್‌ಲೈನ್‌ನ ಎಲ್ಲಾ ವೇದಿಕೆಗಳಿಂದ ಅಶ್ಲೀಲ ಚಿತ್ರ ಅಥವಾ ವಿಡಿಯೊವನ್ನು ತೆಗೆದುಹಾಕಿ ಎಂದು ನ್ಯಾಯಾಲಯ ತೀರ್ಪನ್ನೂ ನೀಡುತ್ತದೆ. ಆದರೂ ಅಶ್ಲೀಲ ವಿಡಿಯೊ ಸೃಷ್ಟಿಸುವವರಿಗೆ ಕೃತಕ ಬುದ್ಧಿಮತ್ತೆಯು ಈ ಎಲ್ಲ ಚಿತ್ರ ಮತ್ತು ವಿಡಿಯೊಗಳನ್ನು ಹುಡುಕಿಕೊಡುತ್ತದೆ. ಸ್ವಲ್ಪ ತಿದ್ದುಪಡಿ ಮೂಲಕ ಇವುಗಳನ್ನು ಮತ್ತೊಮ್ಮೆ ಬಳಸಿಕೊಳ್ಳಲಾಗುತ್ತದೆ
- **ದೊಡ್ಡವರ ಚಿತ್ರಗಳನ್ನು ಸಣ್ಣವರಂತೆ ಮಾಡುವುದು:** ಎಐ ತಂತ್ರಜ್ಞಾನ ಬಳಸಿಕೊಂಡು ದೊಡ್ಡವರ ಚಿತ್ರಗಳನ್ನು ಸಣ್ಣ ವಯಸ್ಸಿನ ಮಕ್ಕಳಂತೆ ಸೃಷ್ಟಿಸಲಾಗುತ್ತದೆ. ಸಾರ್ವಜನಿಕ ವಲಯದಲ್ಲಿ ಹೆಸರುವಾಸಿ ಆಗಿರುವವರ ಚಿತ್ರಗಳನ್ನು ಬಳಸಿಕೊಂಡು ಇದೇ ರೀತಿ ಚಿತ್ರಗಳನ್ನು ತಿದ್ದಿ, ಅವರಿಗೆ ಅವಮಾನ ಆಗುವಂತೆ ಮಾಡುವ ಉದ್ದೇಶವೂ ಇಂಥ ಕೃತ್ಯದ ಹಿಂದಿದೆ

ಐದು ವರ್ಷಗಳಿಂದ ಭಾರತದಲ್ಲೇ ಅತಿ ಹೆಚ್ಚು

ಅಶ್ಲೀಲ ವಿಡಿಯೊಗಳಿಗಾಗಿ ಮಕ್ಕಳನ್ನು ಅತಿ ಹೆಚ್ಚು ಬಳಸಿಕೊಂಡ ದೇಶ ಭಾರತ. ಸತತ ಐದು ವರ್ಷಗಳಿಂದಲೂ ಪರಿಸ್ಥಿತಿ ಹೀಗೆಯೇ ಇದೆ. ಎನ್‌ಸಿಎಂಇಸಿ ಸಂಸ್ಥೆಯ ಮಾಹಿತಿ ಇದು.

ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ವಿಡಿಯೊ, ಚಿತ್ರಗಳನ್ನು ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡಿದಾಗ, ಅಮೆರಿಕ ಮೂಲದ ಅಂಥ ಆನ್‌ಲೈನ್ ವೇದಿಕೆಗಳು ಈ ಸಂಸ್ಥೆಗೆ ಮಾಹಿತಿ ನೀಡುತ್ತವೆ. ಈ ಸಂಸ್ಥೆಯಿಂದ ಮಾಹಿತಿ ವಿನಿಮಯಕ್ಕೆ ಭಾರತ ಸರ್ಕಾರವು 2019ರಲ್ಲಿ ಒಪ್ಪಂದ ಮಾಡಿಕೊಂಡಿದೆ. (ಈ ಮಾಹಿತಿಯು ಎಐ ತಂತ್ರಜ್ಞಾನದ ಮೂಲಕ ಸೃಷ್ಟಿದ ವಿಡಿಯೊ/ಚಿತ್ರಗಳದ್ದಲ್ಲ)



ಪ್ರತ್ಯೇಕ ಕಾನೂನಿಲ್ಲ

ಭಾರತದಲ್ಲಿ ಮಕ್ಕಳ ಮೇಲಿನ ದೌರ್ಜನ್ಯದ ವಿಡಿಯೊಗಳನ್ನು ಚಿತ್ರೀಕರಿಸುವುದು, ಇಂಥ ವಿಡಿಯೊಗಳನ್ನು ಇಟ್ಟುಕೊಳ್ಳುವುದು ಪೋಕ್ಸೊ ಕಾಯ್ದೆಯಡಿ ಅಪರಾಧ ಎಂದು ಇತ್ತೀಚೆಗಷ್ಟೇ ಸುಪ್ರೀಂ ಕೋರ್ಟ್ ಮಹತ್ವದ ತೀರ್ಪು ನೀಡಿದೆ. ಐಟಿ ಕಾಯ್ದೆ, ಐಟಿ ನಿಯಮಗಳು, ಡಿಜಿಟಲ್ ವೈಯಕ್ತಿಕ ದತ್ತಾಂಶ ರಕ್ಷಣೆ ಕಾಯ್ದೆ... ಹೀಗೆ ವಿವಿಧ ಕಾಯ್ದೆಗಳ ಅಡಿಯಲ್ಲಿ ಮಕ್ಕಳೂ ಸೇರಿ ಎಲ್ಲರಿಗೂ ರಕ್ಷಣೆ ನೀಡಲಾಗಿದೆ. ಆದರೆ, ಎಐ ತಂತ್ರಜ್ಞಾನದ ಮೂಲಕ ಸೃಷ್ಟಿಸುವ ವಿಡಿಯೊಗಳಿಗೆ ಯಾವುದೇ ತಡೆ ಇಲ್ಲ. ಇದು ಅಕ್ರಮವೂ ಅಲ್ಲ.

ತಂತ್ರಜ್ಞಾನವನ್ನು ಬಳಸಿಕೊಂಡು ಅಶ್ಲೀಲ ವಿಡಿಯೊ, ಚಿತ್ರ, ಡೀಪ್‌ಫೇಕ್ ಚಿತ್ರ ಸೃಷ್ಟಿಸುವುದಕ್ಕೆ ಬ್ರಿಟನ್‌ನಲ್ಲಿ ನಿರ್ಬಂಧ ಹೇರಿ, ಕಾನೂನು ರೂಪಿಸಲಾಗಿದೆ. 2025ರ ಫೆಬ್ರುವರಿಯಲ್ಲಿ ಕಾನೂನು ಜಾರಿಗೆ ತರಲಾಗಿದೆ. ಜಗತ್ತಿನಲ್ಲಿಯೇ ಮೊದಲ ಬಾರಿಗೆ ಬ್ರಿಟನ್ ಇಂಥ ಕಾನೂನು ರೂಪಿಸಿದೆ.

ಸಂತ್ರಸ್ತರನ್ನು ಗುರುತಿಸಲು ತೊಡಕು

ಎಐ ಮೂಲಕ ಅಶ್ಲೀಲ ವಿಡಿಯೊ ಸೃಷ್ಟಿಸಲು ಬಳಕೆಯಾಗುವ ಸಂತ್ರಸ್ತರನ್ನು ಗುರುತಿಸುವುದು ಪೊಲೀಸರಿಗೆ ಸವಾಲಾಗಿ ಪರಿಣಮಿಸಿದೆ. ಇದರಿಂದಾಗಿ ಮಕ್ಕಳನ್ನು ರಕ್ಷಿಸಲೂ ಸಾಧ್ಯವಾಗುತ್ತಿಲ್ಲ. ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯದ ವಿಡಿಯೊವನ್ನೇ ಇಟ್ಟುಕೊಂಡು ಎಐ ತಂತ್ರಜ್ಞಾನದ ಮೂಲಕ ಸಣ್ಣಪುಟ್ಟ ಬದಲಾವಣೆ ಮಾಡಲಾಗುತ್ತದೆ. ಉದಾಹರಣೆಗೆ, ಮಕ್ಕಳ ಕೈಗೆ ಆರನೇ ಬೆರಳು ಸೇರಿಸುವುದು, ಕಣ್ಣು ಮಿಟುಕಿಸುತ್ತಿಲ್ಲ ಎಂಬಂತೆ ಮಾಡಲಾಗುತ್ತದೆ.

ಅಶ್ಲೀಲ ವಿಡಿಯೊವನ್ನು ಸೃಷ್ಟಿಸುವುದು ಮತ್ತು ಇಂಥ ವಿಡಿಯೊಗಳನ್ನು ಇಟ್ಟುಕೊಳ್ಳುವುದು ಎಲ್ಲ ದೇಶಗಳಲ್ಲಿಯೂ ಅಪರಾಧ. ಆದರೆ, ಎಐ ತಂತ್ರಜ್ಞಾನದ ಮೂಲಕ ವಿಡಿಯೊ ಸೃಷ್ಟಿಸುವುದು, ವಿಡಿಯೊ ನೋಡುವುದು ಅಪರಾಧವಲ್ಲ. ನೈಜ ವಿಡಿಯೊಕ್ಕೆ ಕೆಲವು ತಿದ್ದುಪಡಿ ಮಾಡಿ, 'ಇದು ಎಐ ತಂತ್ರಜ್ಞಾನದಿಂದ ಸೃಷ್ಟಿಸಿದ ವಿಡಿಯೊ' ಎಂದು ಪೊಲೀಸರನ್ನು ನಂಬಿಸುವುದು ಅಪರಾಧಿಗಳಿಗೆ ಸುಲಭವಾಗುತ್ತದೆ.

ರಾಷ್ಟ್ರೀಯ

ಆಂಧ್ರ ಪ್ರದೇಶ ಪೊಲೀಸರು ಬುಧವಾರ ವಿಶೇಷ ಕಾರ್ಯಾಚರಣೆ ಮೂಲಕ ವಿಜಯವಾಡ ಸೇರಿ ಐದು ಜಿಲ್ಲೆಗಳಿಂದ 50 ನಕ್ಸಲರನ್ನು ಬಂಧಿಸಿದ್ದಾರೆ –ಪಿಟಿಐ ಚಿತ್ರ

ಆಂಧ್ರ ಪ್ರದೇಶದಲ್ಲಿ ಮತ್ತೆ ಎನ್‌ಕೌಂಟರ್: 7 ನಕ್ಸಲರ ಹತ್ಯೆ

ಪ್ರಜಾವಾಣಿ ವಾರ್ತೆ/ಪಿಟಿಐ

ಅಮರಾವತಿ: ಆಂಧ್ರ ಪ್ರದೇಶದಲ್ಲಿ ನಕ್ಸಲರ ವಿರುದ್ಧ ಕಾರ್ಯಾಚರಣೆ ಮುಂದುವರಿದಿದ್ದು, ಅಲ್ಲೂರಿ ಸೀತಾ ರಾಮರಾಜು ಜಿಲ್ಲೆಯ ಮಾರೇಡುಮಿಲ್ಲಿ ಅರಣ್ಯ ಪ್ರದೇಶದಲ್ಲಿ ಬುಧವಾರ ಮತ್ತೆ ಏಳು ಮಂದಿಯನ್ನು ಪೊಲೀಸರು ಎನ್‌ಕೌಂಟರ್‌ನಲ್ಲಿ ಹತ್ಯೆ ಮಾಡಿದ್ದಾರೆ.

ಮಂಗಳವಾರ ಇಲ್ಲಿಂದ 7 ಕಿ.ಮೀ. ದೂರದಲ್ಲಿ ನಡೆದಿದ್ದ ಎನ್‌ಕೌಂಟರ್‌ನಲ್ಲಿ ನಕ್ಸಲರ ಕೇಂದ್ರ ಸಮಿತಿ ಸದಸ್ಯ, ಛತ್ತೀಸಗಢದ ಮಾಡವಿ ಹಿಡ್ಮಾ ಮತ್ತು ಆತನ ಪತ್ನಿ ಮದಕಂ ರಾಜೆ ಸೇರಿ ಒಟ್ಟು 6 ನಕ್ಸಲರನ್ನು ಆಂಧ್ರ ಪ್ರದೇಶ ಪೊಲೀಸರು ಹತ್ಯೆ ಮಾಡಿದ್ದರು.

ಬುಧವಾರ ಎನ್‌ಕೌಂಟರ್‌ನಲ್ಲಿ ಮೃತಪಟ್ಟವರಲ್ಲಿ ಮೂವರು ಮಹಿಳೆಯರೂ ಸೇರಿದ್ದಾರೆ' ಎಂದು ಆಂಧ್ರ ಪ್ರದೇಶದ ಗುಪ್ತಚರ ವಿಭಾಗದ ಎಡಿಜಿಪಿ ಮಹೇಶ್‌ಚಂದ್ರ ಲಡ್ಡಾ ಇಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಎನ್‌ಕೌಂಟರ್‌ನಲ್ಲಿ ಹತ್ಯೆ ಮಾಡಲಾಗಿರುವ ನಕ್ಸಲರ ಗುರುತು ಪತ್ತೆ ಕಾರ್ಯ ನಡೆಯುತ್ತಿದೆ. ಇವರಲ್ಲಿ ಒಬ್ಬರನ್ನು ಮೆಟ್ಟೂರಿ ಜೋಗರಾವ್ ಅಲಿಯಾಸ್ ಟೆಕ್ ಶಂಕರ್ ಎಂದು ಗುರುತಿಸಲಾಗಿದೆ.

ಆಂಧ್ರದ ಶ್ರೀಕಾಕುಳಂ ಜಿಲ್ಲೆಯ ಟೆಕ್ ಶಂಕರ್, ಆಂಧ್ರ–ಒಡಿಶಾ ಗಡಿ ಪ್ರದೇಶದ ಮಾವೋವಾದಿ ಘಟಕದ ಉಸ್ತುವಾರಿಯಾಗಿದ್ದು, ಶಸ್ತ್ರಾಸ್ತ್ರ, ಬಾಂಬ್ ತಯಾರಿಕೆ, ಬಳಕೆ ಸೇರಿದಂತೆ ತಾಂತ್ರಿಕ ಪರಿಣತಿ ಪಡೆದಿದ್ದ ಎಂದು ಲಡ್ಡಾ ಹೇಳಿದರು.

50 ನಕ್ಸಲರ ಬಂಧನ

ಆಂಧ್ರಪ್ರದೇಶ ಪೊಲೀಸರು ಮಂಗಳವಾರ ಮತ್ತು ಬುಧವಾರ ಕೃಷ್ಣ, ಎಲೂರು, ಎನ್‌ಟಿಆರ್ ವಿಜಯವಾಡ, ಕಾಕಿನಾಡ ಸೇರಿದಂತೆ 5 ಜಿಲ್ಲೆಗಳಲ್ಲಿ ತ್ವರಿತ ಕಾರ್ಯಾಚರಣೆ ನಡೆಸಿ 50 ನಕ್ಸಲರನ್ನು ಬಂಧಿಸಿದ್ದಾರೆ. ಇದರಲ್ಲಿ ಮಾವೋವಾದಿಗಳ ವಿಶೇಷ ವಲಯ ಸಮಿತಿ, ವಿಭಾಗೀಯ ಸಮಿತಿ ಹಾಗೂ ಸ್ಥಳೀಯ ಸಮಿತಿ ಸದಸ್ಯರೂ ಸೇರಿದ್ದಾರೆ. ಹೆಚ್ಚಿನವರು ದಕ್ಷಿಣ ಬಸ್ತಾರ್ ದಂಡಕಾರಣ್ಯ ವಲಯದಲ್ಲಿ ಕಾರ್ಯಚಟುವಟಿಕೆ ನಡೆಸುತ್ತಿದ್ದರು.

'ಯಾರೂ ತಪ್ಪಿಸಿಕೊಳ್ಳದಂತೆ ಹಾಗೂ ಸಾರ್ವಜನಿಕರಿಗೆ ಯಾವುದೇ ತೊಂದರೆ ಆಗದಂತೆ ಇಡೀ ಕಾರ್ಯಾಚರಣೆಯನ್ನು ಅತ್ಯಂತ ಕರಾರುವಾಕ್ಕಾಗಿ ನಡೆಸಲಾಯಿತು' ಎಂದು ವಿಶೇಷ ತನಿಖಾ ತಂಡದ ಮುಖ್ಯಸ್ಥ ರಾಮಕೃಷ್ಣ ಸುದ್ದಿಸಂಸ್ಥೆಗೆ ತಿಳಿಸಿದರು.

ತೆಲಂಗಾಣ: 'ಇಂದಿರಮ್ಮ ಸೀರೆ ಯೋಜನೆ' ಘೋಷಣೆ

ಹೈದರಾಬಾದ್ (ಪಿಟಿಐ): ಅರ್ಹ ಒಂದು ಕೋಟಿ ಮಹಿಳೆಯರಿಗೆ ಸೀರೆ ಹಂಚುವ 'ಇಂದಿರಮ್ಮ ಸೀರೆ ವಿತರಣೆ ಯೋಜನೆ'ಯನ್ನು ಮುಖ್ಯಮಂತ್ರಿ ರೇವಂತ ರೆಡ್ಡಿ ಅವರು ಮಾಜಿ ಪ್ರಧಾನಿ ಇಂದಿರಾ ಗಾಂಧಿ ಅವರ ಜಯಂತಿ ದಿನದಂದು ಘೋಷಣೆ ಮಾಡಿದರು.

ಎರಡು ಹಂತಗಳಲ್ಲಿ ಸೀರೆ ಹಂಚಿಕೆ ನಡೆಯಲಿದೆ. ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುವ ಅರ್ಹ ಮಹಿಳೆಯರಿಗೆ ಡಿ.9ರ ಒಳಗೆ ಸೀರೆ ಹಂಚಲಾಗುತ್ತದೆ. ಎರಡನೇ ಹಂತದಲ್ಲಿ ನಗರ ಪ್ರದೇಶಗಳಲ್ಲಿ ಇರುವ ಅರ್ಹ ಮಹಿಳೆಯರಿಗೆ ಸೀರೆ ಹಂಚಲಾಗುತ್ತದೆ. ಈ ಹಂತವನ್ನು ಅಂತರರಾಷ್ಟ್ರೀಯ ಮಹಿಳಾ ದಿನದಂದು (ಮಾ.1) ಪೂರ್ಣಗೊಳಿಸಲಾಗುತ್ತದೆ.

ಮಾಜಿ ಪ್ರಧಾನಿ ಇಂದಿರಾ ಗಾಂಧಿ ಅವರ ಜಯಂತಿ ಅಂಗವಾಗಿ ನಡೆದ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಮಾತನಾಡಿ, 'ಸೀರೆ ನೇಯ್ಗೆಗೆ ಸಮಯ ಬೇಕಾಗುವುದರಿಂದ ಎರಡು ಹಂತಗಳಲ್ಲಿ ವಿತರಣೆ ನಡೆಸಲಾಗುವುದು. ಸಚಿವೆಯರು, ಶಾಸಕಿಯರು ಇಂದಿರಮ್ಮ ಸೀರೆಗಳನ್ನು ಉಡುವುದರ ಮೂಲಕ ಈ ಸೀರೆಗಳಿಗೆ ರಾಯಭಾರಿಗಳಾಗಬೇಕು' ಎಂದರು.

24,600 ಸಿಸಿಪಿಡಬ್ಲುಸಿ ಯೋಜನೆ ಅಡಿ ಸೈಬರ್ ಅಪರಾಧದ ಕುರಿತ ಜಾಗೃತಿ, ಇಂಥ ಅಪರಾಧಗಳ ತನಿಖೆ ಮತ್ತು ವಿಧಿ ವಿಜ್ಞಾನ ಪ್ರಯೋಗಗಳ ಬಗ್ಗೆ ದೇಶದಾದ್ಯಂತ ತರಬೇತಿ ಪಡೆದ ಪೊಲೀಸರು, ವಕೀಲರು ಮತ್ತು ನ್ಯಾಯಾಂಗದ ಅಧಿಕಾರಿಗಳ ಸಂಖ್ಯೆ



* ಲೋಕಸಭೆಗೆ ಕೇಂದ್ರ ಸರ್ಕಾರ ನೀಡಿದ ಉತ್ತರ

ಅನುದಾನ ಬಿಡುಗಡೆ ಮಾಡದ ಕೇಂದ್ರ

ಮಹಿಳೆ ಮತ್ತು ಮಕ್ಕಳ ವಿರುದ್ಧ ಸೈಬರ್ ಅಪರಾಧ ತಡೆ ಯೋಜನೆಯನ್ನು (ಸಿಸಿಪಿಡಬ್ಲುಸಿ) 2017–18ರಲ್ಲಿ ಕೇಂದ್ರ ಸರ್ಕಾರ ಜಾರಿಗೆ ತಂದಿತ್ತು. ಜಾರಿಗೆ ತಂದ ವರ್ಷ ಎಲ್ಲಾ ಕೇಂದ್ರಾಡಳಿತ ಪ್ರದೇಶ ಮತ್ತು ರಾಜ್ಯಗಳಿಗೆ ಅನುದಾನ ಬಿಡುಗಡೆ ಮಾಡಿತ್ತು. ಆ ಬಳಿಕ ಈ ಯೋಜನೆ ಅಡಿಯಲ್ಲಿ ಕೇಂದ್ರ ಸರ್ಕಾರವು ಹೆಚ್ಚಿನ ಹಣವನ್ನು ಬಿಡುಗಡೆ ಮಾಡಿಯೇ ಇಲ್ಲ. 2019–20ನೇ ಆರ್ಥಿಕ ವರ್ಷದ ಬಳಿಕ ಆಂಧ್ರಪ್ರದೇಶ, ತೆಲಂಗಾಣ, ಮಧ್ಯಪ್ರದೇಶ ಸೇರಿ ಕೆಲವೇ ರಾಜ್ಯಗಳಿಗೆ ಅಲ್ಪವೇ ಮೊತ್ತವನ್ನು ಬಿಡುಗಡೆ ಮಾಡಿದೆ.

ಮಕ್ಕಳ ಮೇಲೆ ನಡೆಯುವ ಇಂಥ ಸೈಬರ್ ಅಪರಾಧಗಳ ಬಗ್ಗೆ ಲೋಕಸಭೆಯಲ್ಲಾಗಲಿ, ರಾಜ್ಯಸಭೆಯಲ್ಲಾಗಲಿ ಕೇಳಿರುವ ಪ್ರಶ್ನೆಗಳ ಸಂಖ್ಯೆ ಬಹಳ ಕಡಿಮೆ. ಸೈಬರ್ ಅಪರಾಧ ತಡೆಯ ಬಗ್ಗೆ ಕೇಂದ್ರ ಸರ್ಕಾರವು ತೆಗೆದುಕೊಂಡ ಕ್ರಮಗಳ ಬಗ್ಗೆ ಸಂಸದರು ಪ್ರಶ್ನೆ ಕೇಳಿದ್ದಾರೆ. 'ಪೊಲೀಸ್ ಮತ್ತು ಶಾಂತಿ–ಸುವ್ಯವಸ್ಥೆಯು ರಾಜ್ಯಗಳ ಜವಾಬ್ದಾರಿ' ಎಂದು ಕೇಂದ್ರ ಸರ್ಕಾರ ಉತ್ತರ ನೀಡಿದೆ.

ಮಕ್ಕಳ ಮೇಲೆ ನಡೆಯುತ್ತಿರುವ ಸೈಬರ್ ಅಪರಾಧಗಳ ಬಗ್ಗೆ ಕರ್ನಾಟಕವೂ ಸೇರಿದಂತೆ ಇತರೆ ರಾಜ್ಯಗಳು ತೆಗೆದುಕೊಂಡ ಕ್ರಮಗಳ ಬಗ್ಗೆ ವರದಿಯಾಗಿಲ್ಲ. ಇದಕ್ಕಾಗಿ ಅನುದಾನ ಮೀಸಲಿಟ್ಟ ಬಗ್ಗೆಯೂ ಮಾಹಿತಿ ಇಲ್ಲ.

ಸಹಿಸುವ ಶಕ್ತಿ

ಪಿ.ಚಂದ್ರಿಕಾ

ಅನಾಥರು, ರೋಗಗ್ರಸ್ತರ ಸೇವೆಯನ್ನು ಮಾಡುತ್ತಿದ್ದ ನಿಸ್ವಾರ್ಥ ವ್ಯಕ್ತಿಯೊಬ್ಬನ ಬಗ್ಗೆ ಕೇಳಿ ತಿಳಿದು ಆತನ ಬಳಿಗೆ ಅತ್ಯಂತ ಶ್ರೀಮಂತ ಮತ್ತು ಸುಂದರಿಯಾದ ಹೆಣ್ಣೊಬ್ಬಳು ಬರುತ್ತಾಳೆ. ಅವಳಿಗೆ ಪ್ರಚಾರದ ಹುಚ್ಚು- ತನ್ನಂಥವರು ಈ ಕೆಲಸದಲ್ಲಿ ಭಾಗಿಯಾದರೆ ಜಗತ್ತು ಕೊಂಡಾಡುತ್ತದೆ ಎನ್ನುವ ಭಾವ. ಆಕೆ ಅವನ ಬಳಿಗೆ ಬಂದು, 'ನಿನ್ನ ಹಾಗೆ ನಾನೂ ಈ ಜನರ ಸೇವೆ ಮಾಡುತ್ತೇನೆ. ಅವಕಾಶ ಕೊಡು' ಎಂದು ಮನವಿ ಮಾಡುತ್ತಾಳೆ. ಆದರೆ, ಅವಳ ಕಣ್ಣುಗಳಲ್ಲಿ ಅಲ್ಲಿದ್ದ ಅಸಹಾಯಕರ ಬಗ್ಗೆ ತಿರಸ್ಕಾರ ಮತ್ತು ಅಸಹನೆ ಮಡುಗಟ್ಟಿರುತ್ತದೆ. ಇದನ್ನು ಗಮನಿಸಿದ ನಿಸ್ವಾರ್ಥಿಯು ಆಕೆಯನ್ನು ಉದ್ದೇಶಿಸಿ, 'ನಿನ್ನ ಉದ್ದೇಶ ಬಹಳ ಒಳ್ಳೆಯದ್ದೇ. ಆದರೆ ಈ ಕೆಲಸ ಮಾಡಲಿಕ್ಕೆ ಕೆಲವು ನಿಯಮಗಳನ್ನು ಪಾಲಿಸಬೇಕಾಗುತ್ತದೆ' ಎನ್ನುತ್ತಾನೆ. ಆಗ ಆ ಯುವತಿಯು ತನ್ನಂಥವಳು ಇಂಥಾ ಕೆಲಸ ಮಾಡಲಿಕ್ಕೆ ಮುಂದೆ ಬಂದಿರುವುದೇ ದೊಡ್ಡದು, ಅಂಥದ್ದರಲ್ಲಿ ನಿಯಮ ಬೇರೆ ಪಾಲಿಸಬೇಕೇ ಎಂದುಕೊಂಡು ಅಸಡ್ಡೆಯಿಂದ, 'ಹೇಳಿ, ಅದೇನು ನಿಯಮ' ಎಂದು ಕೇಳುತ್ತಾಳೆ.

ಆಗ ನಿಸ್ವಾರ್ಥಿಯು, 'ಇದು ತೋರಿಕೆಯ ಕೆಲಸವಲ್ಲ. ನಿನ್ನ ಈ ಉಡುಪುಗಳನ್ನು ನೋಡಿ ಅಸಹಾಯಕರಾದ ಈ ಜೀವಗಳು ನಿನ್ನ ಹತ್ತಿರ ಬರಲು ಅಂಜಿಕೊಳ್ಳುತ್ತಾರೆ. ನಿನ್ನ ಬೆಲೆಬಾಳುವ ಒಡವೆಗಳು ಅವರ ಕಣ್ಣುಗಳನ್ನು ಕುಕ್ಕಿ ಕಣ್ಣು ಕಾಣಿಸದಂತಾಗುತ್ತದೆ. ಅದಕ್ಕೆ ನೀನು ಸಾಮಾನ್ಯವಾದ ಉಡುಪನ್ನು ಧರಿಸಿ, ಈ ಒಡವೆಗಳನ್ನು ಕಳಚಿಟ್ಟು ಬಾ' ಎನ್ನುತ್ತಾನೆ. ಅದನ್ನು ಕೇಳಿ ಕೋಪಗೊಂಡ ಆಕೆ, 'ನನ್ನನ್ನು ಏನೆಂದು ತಿಳಿದಿರುವೆ? ನನ್ನ ಶ್ರೀಮಂತಿಕೆ, ವೈಭವ ನೋಡಬೇಕು ನೀನು. ನಾನು ಹುಟ್ಟುವಾಗಲೇ ನನಗಾಗಿ ಚಿನ್ನದ ತೊಟ್ಟಿಲು ಸಿದ್ಧವಾಗಿತ್ತು. ಅಂಥಾ ನಾನು ನಿನಗೆ ಸಹಾಯ ಮಾಡಲಿಕ್ಕೆ ಬಂದರೆ ನನ್ನ ಮೇಲೆ ನಿಯಮಗಳನ್ನು ಹೇರುತ್ತಿರುವೆಯಾ' ಎಂದು ಕೂಗತೊಡಗಿದಳು.

ನಸುನಕ್ಕ ನಿಸ್ವಾರ್ಥಿಯು, 'ಇನ್ನು ಎಷ್ಟೇ ಪ್ರಯತ್ನ ಪಟ್ಟರೂ ನೀನು ಮಾತ್ರ ಈ ಜನಗಳ ಸೇವೆ ಮಾಡಲಾರೆ' ಎನ್ನುತ್ತಾನೆ. ಈ ಮಾತುಗಳನ್ನು ಕೇಳಿದ ಶ್ರೀಮಂತ ಸುಂದರಿಯು ಕೋಪದಿಂದ, 'ನನಗೆ ಅಸಾಧ್ಯ ಎನ್ನುವುದೇ ಇಲ್ಲ. ಅದನ್ನು ನಾನು ಒಪ್ಪಲಾರೆ' ಎನ್ನುತ್ತಾಳೆ. ಆಗ ನಿಸ್ವಾರ್ಥಿಯು, 'ನನ್ನ ಮಾತುಗಳನ್ನು ಸ್ವಲ್ಪ ತಾಳ್ಮೆಯಿಂದ ಕೇಳು. ನಿನ್ನ ಬಟ್ಟೆ ಮತ್ತು ಒಡವೆ ನಿನ್ನ ಅಹಂಕಾರದ ಪ್ರತೀಕ. ಅಸಹಾಯಕ ಜೀವಗಳು ಪ್ರೀತಿಯನ್ನು ಬೇಡುತ್ತವೆ. ಅಹಂಕಾರ ಯಾವತ್ತೂ ಪ್ರೀತಿಯನ್ನು ಕೊಡಲಾರದು. ನನ್ನ ಮಾತುಗಳ ಮರ್ಮವನ್ನು ಅರ್ಥ ಮಾಡಿಕೊಳ್ಳುವ ವ್ಯವಧಾನವೂ ಇಲ್ಲದ ನಿನಗೆ ಸಹನೆ ಅನ್ನುವುದು ಬಹುದೂರದ ಮಾತು. ಮಾತುಗಳನ್ನೇ ಸಹಿಸಿಕೊಳ್ಳಲು ಆಗದ ನಿನಗೆ, ಈ ಜನರ ದಾರುಣ ಸ್ಥಿತಿಯಿಂದ ಉಂಟಾಗುವ ವಿಕಾರಗಳನ್ನು ಸಹಿಸಿಕೊಳ್ಳಲು ಸಾಧ್ಯವಾದೀತೇ? ನಿನ್ನ ಅಹಂಕಾರ, ಒಣಪ್ರತಿಷ್ಠೆ ಎಲ್ಲವನ್ನು ಬದಿಗಿಟ್ಟು ಬಾ. ಅವತ್ತು ನಿನಗೆ ಸೇವೆಯ ಜಗತ್ತು ತನ್ನ ಬಾಗಿಲನ್ನು ತೆರೆಯುತ್ತದೆ' ಎಂದ.

ನಿಸ್ವಾರ್ಥವಾಗಿ ಕೆಲಸ ಮಾಡುವುದು ಸುಲಭವಲ್ಲ. ನಾನು ಎನ್ನುವ ಅಹಂಕಾರವನ್ನು ಕಳಚಿಕೊಳ್ಳುವುದು ಅತ್ಯಂತ ಪ್ರಾಜ್ಞಸ್ಥಿತಿ. ಆ ಸ್ಥಿತಿಯಲ್ಲಿ ತಾಯೊಬ್ಬಳು ಕಾಲಿಂದ ಒದ್ದ ತನ್ನ ಮಗುವನ್ನು ಎದೆಗೆ ಆನಿಸಿಕೊಂಡ ಹಾಗೆ ಜಗತ್ತನ್ನು ಆನಿಸಿಕೊಳ್ಳಲು ಸಾಧ್ಯವಾಗುತ್ತದೆ. ❖

ಪದಬಂಧ 6629

ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ವಿಜ್ಞಾನವನ್ನು ಬಲ್ಲವನೀತ (3)
2.ಓಟನ್ನು ಚಲಾಯಿಸುವ ಸ್ಥಳ (4)
4.ಸಾಗಿಸುವಿಕೆಯ ಪರ್ಯಾಯ ಪದ (3)
5.ನಗುತ್ತಿರುವ ವದನ (4)
7.ಲಿಖಿತವಾಗಿ ಮಾಡುವ ಅರಿಕೆ (3)
9.ಮಲೆನಾಡಿನ ಹೆಬ್ಬಾಗಿಲು ಎನ್ನಲಾಗುವ ಈ ನಗರವು ಜಿಲ್ಲೆಯೂ ಆಗಿದೆ (4)
11.ಕಠೋರವಾದ ಕೈ! (2)
12.ಗರತಿಯ ನಡಗೆ! (2)
13.ಓಟನ್ನು ನೀಡುವುದು (4)
15.ಕರದಲ್ಲಿ ಕೊನೆಗೊಂಡ ಮಿಶ್ರಣ (3)
17.ಶೌರ್ಯಸಾಹಸಗಳನ್ನು ವರ್ಣಿಸುವ ಕಾವ್ಯ (4)
19.ದನವಿರುವ ಮನೆ (3)
20.ಸುಮಾರು ಮೂರು ಮೈಲುಗಳ ಒಂದು ಅಳತೆ (4)
21.ಆಹಾರ ಇಲ್ಲಿದೆ (3)

ಮೇಲಿಂದ ಕೆಳಕ್ಕೆ

1.ವಿವಾದವಿಲ್ಲದ ಮದುವೆ! (3)
2.ಮನದನ್ನೆ ಇರುವ ಗೃಹ (2)
3.ಗಮನವಿಟ್ಟು ನೋಡಿ! ಆಕಾಶ ಕಾಣುತ್ತಿದೆ! (3)
4.ಮರ ಬೆಟ್ಟ ಮುಂತಾದವುಗಳ ತುದಿ ಉಲ್ಟಾ ಕಾಣುತ್ತಿದೆ (3)
6.ವಾರದ ಕೊನೆಗೆ ಕಾಣಿಸಿರುವ ಆರೋಹಿ (3)
7.ನೆಯ್ಗೆ ಯಂತ್ರವಿದು (2)
8.ಬಿನ್ನಹಕ್ಕೊಂದು ಪರ್ಯಾಯ ಪದ (3)
10.ರಾಕ್ಷಸನು ಇಲ್ಲಿ ತಿರುಗಿ ನಿಂತಿದ್ದಾನೆ (3)
11.ಭಾರೀ ಪೆಟ್ಟಿಗೆಯಿಲ್ಲಿ ತಿರುವು ಮುರುವಾಗಿದೆ (3)
12.ಯುದ್ಧವಿಲ್ಲಿ ಉಲ್ಟಾ ಕಾಣುತ್ತಿದೆ (3)
13.ಮಧುರ ಫಲಗಳನ್ನು ನೀಡುವ ವೃಕ್ಷ (2)
14.ಇದು ಹೊಸದು (3)
16.ಕರಿಯಲ್ಲಿರುವ ಸುಗಂಧದ್ರವ್ಯ (3)
18.ವ್ಯವಸಾಯಗಾರನ ಅಳಲು! (3)
19.ಸದರಿಯಲ್ಲಿಯೇ ಯೋಗ್ಯವಾದುದು ಇದೆ! (2)



6628ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಉತ್ಪ್ರೇಕ್ಷೆ 2.ಕಡುಹಗೆ 4.ಹರಿಹಾಯು 6.ಸಿಂಬಳ 7.ಸುಹ 9.ಕಪೋತ 11.ಹರ 13.ಮೆಲುಕು 14.ಪರೀಕ್ಷಕ 16.ತರಕಲು 17.ಅರಳೆ

ಮೇಲಿಂದ ಕೆಳಕ್ಕೆ:
1.ಉದಾಹರಿಸು 2.ಕರ್ಮ 3.ಹಣೆಬರಹ 5.ಯುವಕ 8.ಹಲಾಲುಕೋರ 10.ತದ್ರೂಪ 12.ರಣಕಹಳೆ 15.ಜೂಲು

ಸುಡೊಕು 6613

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

		6		4		3		5
			5		7			
	9	2		3		7		1
2	1		9		3	6		
				1				3
3	8			5			7	
9		8						7
	6			9			3	
4		3			1	2		6

6612 ಸುಡೊಕು

2	4	8	1	6	3	5	9	7
7	5	6	4	9	8	2	3	1
1	3	9	2	5	7	4	8	6
6	1	5	9	7	4	8	2	3
3	9	7	8	1	2	6	5	4
8	2	4	6	3	5	7	1	9
5	6	3	7	2	1	9	4	8
9	8	2	3	4	6	1	7	5
4	7	1	5	8	9	3	6	2

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

20 ನವೆಂಬರ್ 2025 ಗುರುವಾರ ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಕಾರ್ತಿಕ ಕೃಷ್ಣ ಅಮಾವಾಸ್ಯೆ ಗಂ 12-17 ನಕ್ಷತ್ರ: ವಿಶಾಖ ಗಂ 10-59 **ಯೋಗ:** ಶೋಭನ ಗಂ. 9-53 **ಕರಣ:** ನಾಗ ಗಂ. 12-17 ವೃಶ್ಚಿಕ ಮಾಸದ 05 ನೇ ದಿನ. **ಮಳೆ ನಕ್ಷತ್ರ :** ಅನುರಾಧ 1 ನೇ ಪಾದ. **ರಾಹುಕಾಲ :** ಮಧ್ಯಾಹ್ನ 01-30 - 03-00 **ಸೂರ್ಯೋದಯ :** 06-36 **ಸೂರ್ಯಾಸ್ತ :** 05-57 ಮುಸ್ಲಿಂ ದಿನಾಂಕ : 28 ಜುಮಾದುಲ್ಲಾವಲ್ **ಅದೃಷ್ಟ ಸಂಖ್ಯೆ :** 11, 5

ಮೇಷ: ಸಕಲ ಜವಾಬ್ದಾರಿಗಳನ್ನು ಸುಲಭೋಪಾಯದಲ್ಲಿ ನಿಭಾಯಿಸಿ ಚಾಕಚಕ್ಯತೆಯನ್ನು ಪ್ರದರ್ಶಿಸುವಿರಿ. ಜಗಳಲ್ಲೂ ಉಪಾಯದಿಂದ ವರ್ತಿಸಿದರೆ ಸಹೋದರರ ಜತೆಗೆ ನಿಷ್ಠುರವಾಗುವ ಸಾಧ್ಯತೆಗಳು ಕಡಿಮೆಯಾಗುತ್ತವೆ.

ವೃಷಭ: ನಿಮ್ಮ ಸ್ವಂತಕ್ಕೆಂದು ನೀವು ತೆಗೆದಿಡುವ ಹಣವನ್ನು ಸಹ ಈ ಬಾರಿ ಇತರೆ ಖರ್ಚುಗಳಿಗೆ ಬಳಸುವಿರಿ. ದುಷ್ಟರ ಸಹವಾಸದಿಂದಾಗಿ ಹಾದಿ ತಪ್ಪುತ್ತಿರುವ ಮಕ್ಕಳ ಬಗ್ಗೆ ಎಷ್ಟು ಮೇಲ್ವಿಚಾರಣೆ ನಡೆಸಿದರು ಕಡಿಮೆ ಎಂದೆನಿಸಬಹುದು.

ಮಿಥುನ: ಯಾವ ವಿಷಯದ ಬಗ್ಗೆಯೇ ಆದರೂ ಅತ್ಯಂತ ಆಳವಾದ ಯೋಚನೆ ಬೇಡ. ವಿದೇಶ ಪ್ರಯಾಣ ಕೈಗೊಳ್ಳುವ ಕಾರ್ಯಕ್ರಮವಿರುವುದರಿಂದ ಎಲ್ಲಾ ತಯಾರಿಯನ್ನು ಮಾಡಿಕೊಳ್ಳುವಿರಿ. ಸಂಗಾತಿಯ ಸಲಹೆಗಳತ್ತ ಗಮನ ಕೊಡಿ.

ಕರ್ಕಾಟಕ: ಉದಯೋನ್ಮುಖ ಕವಿಗಳಿಗೆ ಛಂದೋಬದ್ಧ ಕೃತಿಗೆ ಹಿರಿಯ ಸಾಹಿತಿಗಳಿಂದ ಪ್ರಶಂಸೆ ದೊರೆಯುವುದು. ಸ್ನೇಹಿತರಲ್ಲಿ ಹಣಕಾಸಿನ ವಿಚಾರಕ್ಕೆ ಮನಸ್ತಾಪ ಬರದಂತೆ ಎಚ್ಚರವಹಿಸಿ. ಔಷಧಿ ಮಾರಾಟಗಾರರಿಗೆ ಲಾಭ.

ಸಿಂಹ: ಪರಿಶ್ರಮಕ್ಕೆ ತಕ್ಕ ಆದಾಯವಿಲ್ಲದೆ ಸೊರಗಿರುವ ನಿಮಗೆ ಹಲವಾರು ಕನಸುಗಳು ಈಡೇರುವ ಅವಕಾಶ ಅಪರಿಚಿತ ವ್ಯಕ್ತಿ ತೋರುವರು. ಕಡೆಯ ಸಮಯದದಲ್ಲಿ ಅಪಾಯದಿಂದ ಪಾರಾಗುವುದು ನಿರಾಳತೆ ತರಲಿದೆ.

ಕನ್ಯಾ: ಈ ದಿನ ನೀವು ಮಾಡುವ ತಪ್ಪಿನಿಂದಾಗಿ ಜೀವನ ಪರ್ಯಂತ ನೆನಪಿಟ್ಟುಕೊಳ್ಳುವ ಪಾಠವನ್ನು ಕಲಿಯುವಂತಾಗಲಿದೆ. ಮಕ್ಕಳ ಮಾತುಗಳು ಗೊಂದಲಗಳನ್ನು ಸೃಷ್ಟಿಸಬಹುದು. ನಿಮ್ಮ ವಿರೋಧಿಗಳು ರಾಜಿಯಾಗಲಿದ್ದಾರೆ.

ತುಲಾ: ಪ್ರಾಮಾಣಿಕವಾಗಿ ಹಾಗೂ ನಿಷ್ಠೆಯಿಂದ ಕೆಲಸಕಾರ್ಯದಲ್ಲಿ ತೊಡಗಿಸಿಕೊಂಡಲ್ಲಿ ನಿಧಾನವಾಗಿ ಯಶಸ್ಸು ಪ್ರಾಪ್ತಿಯಾಗುವುದು. ಕಟ್ಟಡ ನಿರ್ಮಾಣದವರು ಹೊರ ಊರಿನಲ್ಲಿನ ಗುತ್ತಿಗೆ ಪಡೆವಲ್ಲಿ ಯಶಸ್ವಿಯಾಗುವಿರಿ.

ವೃಶ್ಚಿಕ: ಮುಖ್ಯವಾದ ವಿಷಯವನ್ನು ಮುಖ್ಯವಾದ ವ್ಯಕ್ತಿಯ ಜೊತೆ ಮಾತನಾಡಲು ಮರೆತಿದ್ದರಿಂದ ದಿನಚರಿಯಲ್ಲಿ ವಿಳಂಬ ಅನುಭವಿಸುವಂತೆ ಆಗುವುದು. ಕೆಲವು ಮೂಲಭೂತ ಬದಲಾವಣೆಗಳಾಗುವ ಸಾಧ್ಯತೆ ಇದೆ.

ಧನು: ನಿಮ್ಮ ಕೆಲಸಗಳನ್ನು ಸಾಧಿಸಿಕೊಳ್ಳಬೇಕಿದ್ದರೆ ಅವಿರತ ಶ್ರಮ ಅಗತ್ಯವಾಗುವುದು. ರಾಸಾಯನಿಕ ಔಷಧಿಗಳ ಬಳಕೆಗಿಂತ ತೈಲಗಳ ಲೇಪನದಂತಹ ಚಿಕಿತ್ಸೆ ಮಾಡಿಕೊಳ್ಳುವುದರಿಂದ ಕಾಲು ನೋವು ನಿವಾರಣೆಯಾಗುವುದು.

ಮಕರ: ನಿಮ್ಮ ಹಳೇಯ ಶಾಲೆಗೆ ಭೇಟಿ ನೀಡುವುದರ ಜೊತೆಗೆ ಈಗಿನ ವಿದ್ಯಾರ್ಥಿಗಳ ಜೊತೆ ಸಂವಾದ ನಡೆಸುವ ಮೂಲಕ ಅವರಿಗೆ ಮಾರ್ಗದರ್ಶನ ಮಾಡುವಿರಿ. ವ್ಯವಹಾರಸ್ಥರಿಗೆ ಲಾಭ ಹಾಗೆಯೇ ನಷ್ಟವೂ ಇರಲಾರದು.

ಕುಂಭ: ಷೇರುಗಳಲ್ಲಿ ಹೂಡಿಕೆ ಮಾಡುವುದು ಸದ್ಯದ ಪರಿಸ್ಥಿತಿಯಲ್ಲಿ ಲಾಭದಾಯಕವಾಗಿ ತೋರುವುದಿಲ್ಲ. ವಾತ್ಸಲ್ಯ, ಪ್ರೀತಿಯಿಂದ ಕುಟುಂಬದವರ ಮನಸ್ಸನ್ನು ಗೆಲ್ಲುವಿರಿ. ವಿದ್ಯಾರ್ಥಿಗಳಿಗೆ ಜ್ಞಾನ ದೊರೆತು ಆನಂದವಾಗಲಿದೆ.

ಮೀನ: ತವರು ಮನೆಯ ಜಗಳ ಗಂಡನ ಮನೆಯಲ್ಲಿರುವ ನಿಮ್ಮ ಮನಃಶಾಂತಿಯನ್ನು ಕೆಡಿಸುತ್ತದೆ. ಕಾರ್ಮಿಕರ ಅಸಹಕಾರದಿಂದ ಗೃಹ ನಿರ್ಮಾಣ ವಿಳಂಬವಾಗುತ್ತದೆ. ಸಂಗಾತಿಯಿಂದ ಉಡುಗೊರೆ ಸಿಗಲಿದೆ.

ಗುಂಡಣ್ಣ

ಅಡಿಕೆ ಧಾರಣೆ

ಕುಮಟಾ		ಹೊಸತು	26000-40000		56009-92896
ಚಾಲಿ	44089-48499	ಹಳತು	45000-54000	**ಶಿರಸಿ**	
ಚಿಪ್ಪು	29999-36899	**ಶಿವಮೊಗ್ಗ**		ಬೆಟ್ಟೆ	43099-54089
ಕೋಕ	12109-31039	ಬೆಟ್ಟೆ	50520-74099	ಬಿಳೆಗೋಟು	28809-39700
ಫ್ಯಾಕ್ಟರಿ	8210-23629	ಗೊರಬಲು	19000-41509	ಚಾಲಿ	44298-49899
ಹೊಸಚಾಲಿ	33039-36900	ಹೊಸತು	48009-59399	ಕೆಂಪುಗೋಟು	29399-36899
ಪುತ್ತೂರು		ರಾಶಿ	47669-59599	ರಾಶಿ	52659-59999
ಕೋಕ	20000-31500				

ಸಹಭಾಗಿತ್ವಕ್ಕೆ ಅಮೆರಿಕ, ಪೋಲೆಂಡ್ ಒಲವು: ಸಚಿವ ಎಂ.ಬಿ. ಪಾಟೀಲ

ಪ್ರಜಾವಾಣಿ ವಾರ್ತೆ

ಎಂ.ಬಿ. ಪಾಟೀಲ

ಬೆಂಗಳೂರು: ಉನ್ನತ ಶಿಕ್ಷಣ, ತಂತ್ರಜ್ಞಾನ, ಕೈಗಾರಿಕಾ ಕ್ಷೇತ್ರ ಸೇರಿದಂತೆ ಕರ್ನಾಟಕದ ಹಲವು ಕ್ಷೇತ್ರಗಳಲ್ಲಿ ಸಹಭಾಗಿತ್ವ ಕುರಿತು ಅಮೆರಿಕ ಹಾಗೂ ಪೋಲೆಂಡ್ ದೇಶಗಳ ಪ್ರತಿನಿಧಿಗಳ ಜತೆ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಬುಧವಾರ ಚರ್ಚೆ ನಡೆಸಿದರು.

ಭಾರತದಲ್ಲಿನ ಅಮೆರಿಕನ್ ಕಾನ್ಸುಲ್ ಜನರಲ್ ಕ್ರಿಸ್ ಹಾಡ್ಜಸ್ ಮತ್ತು ಪೋಲೆಂಡ್ ದೇಶದ ಡಿಜಿಟಲೀಕರಣ ಖಾತೆ ಸಹಾಯಕ ಸಚಿವ ಡೇರಿಯಸ್ ಸ್ಟಾಂಡರ್ಸ್ಕಿ ಅವರ ಜತೆ ಪ್ರತ್ಯೇಕ ಮಾತುಕತೆ ನಡೆಸಿದ ಅವರು, ರಾಜ್ಯದಲ್ಲಿ ಹೂಡಿಕೆ ಮಾಡಲು ಇರುವ ಅವಕಾಶಗಳ ಕುರಿತು ಮನವರಿಕೆ ಮಾಡಿಕೊಟ್ಟರು.

ನಂತರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಅಮೆರಿಕದ ವಿಶ್ವವಿದ್ಯಾಲಯಗಳು, ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಗಳು, ಮೆಡ್-ಟೆಕ್ ಕಂಪನಿಗಳಿಗೆ ರಾಜ್ಯದಲ್ಲಿ ವಿಪುಲ ಅವಕಾಶಗಳಿದ್ದು, ಸಹಭಾಗಿತ್ವದಿಂದ ಹೆಚ್ಚು ಅನುಕೂಲವಾಗಲಿದೆ' ಎಂದರು.

'ಪೋಲೆಂಡ್‌ನ ಉನ್ನತ ಶಿಕ್ಷಣ, ಸಂಶೋಧನೆ, ಆಧುನಿಕ ತಂತ್ರಜ್ಞಾನ, ವಾಣಿಜ್ಯ, ತಂತ್ರಜ್ಞಾನ ಮತ್ತು ರಕ್ಷಣಾ ಉದ್ಯಮಗಳಲ್ಲಿ ಕರ್ನಾಟಕದೊಂದಿಗೆ ಸಹಭಾಗಿತ್ವ ಹೊಂದಲು ಇರುವ ಅವಕಾಶಗಳ ಕುರಿತು ಚರ್ಚೆ ನಡೆಸಲಾಯಿತು. ಭಾರತ ಮತ್ತು ಪೋಲೆಂಡ್ 2023ರಿಂದ 2028ರವರೆಗೆ ಚಾಲ್ತಿಯಲ್ಲಿರುವ ಐದು ವರ್ಷಗಳ ಕ್ರಿಯಾ ಯೋಜನೆಯನ್ನು ಹೊಂದಿವೆ. ಗಣಿಗಾರಿಕೆ, ಸೈಬರ್ ಭದ್ರತೆ, ಆರೋಗ್ಯ, ಇಂಧನ ಮತ್ತು ಸುಸ್ಥಿರತೆ ಕ್ಷೇತ್ರಗಳಲ್ಲಿ ಪರಸ್ಪರ ಸಹಕಾರ ನೀಡುತ್ತಿವೆ. ಮುಂದಿನ ಹಂತಕ್ಕೆ ಕೊಂಡೊಯ್ಯಲು ಪೋಲೆಂಡ್ ಒಲವು ತೋರಿದೆ. ರಾಜ್ಯದ ಕೈಗಾರಿಕಾ ಕಾರ್ಯಪರಿಸರ, ನೀತಿ, ರಿಯಾಯಿತಿ ಕುರಿತು ವಿವರಿಸಲಾಯಿತು' ಎಂದು ಮಾಹಿತಿ ನೀಡಿದರು.

ನಿಯೋಗದಲ್ಲಿ ಪೋಲೆಂಡ್ ರಾಯಭಾರ ಕಚೇರಿಯ ಮುಖ್ಯಸ್ಥ ಪಿಯೋಟರ್ ಸ್ವಿಟ್ಸ್ಕಿ, ಟೋಮಾಸ್ ವೆಲ್ಡೋಮಾಸ್, ಕೈಗಾರಿಕಾ ಇಲಾಖೆ ಪ್ರಧಾನ ಕಾರ್ಯದರ್ಶಿ ಸೆಲ್ವಕುಮಾರ್, ಆಯುಕ್ತ ಗುಂಜನ್ ಕೃಷ್ಣ, ಉದ್ಯೋಗ ಮಿತ್ರ ವ್ಯವಸ್ಥಾಪಕ ನಿರ್ದೇಶಕ ದೊಡ್ಡ ಬಸವರಾಜು ಉಪಸ್ಥಿತರಿದ್ದರು.

ಬೆಂಗಳೂರಿನಾಚೆ ಉದ್ಯಮ: 'ನಿಪುಣ' ವಿಸ್ತರಣೆ

ಬೆಂಗಳೂರು ತಂತ್ರಜ್ಞಾನ ಶೃಂಗಸಭೆಯಲ್ಲಿ ಹಲವು ಒಪ್ಪಂದ: ಐ.ಟಿ, ಬಿ.ಟಿ ನಂತರ ಡೀಪ್ ಟೆಕ್‌ಗೆ ಒತ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ನಗರದಾಚೆಗೂ ಮಾಹಿತಿ ತಂತ್ರಜ್ಞಾನ ಉದ್ಯಮ–ಉದ್ಯೋಗ ವಿಸ್ತರಣೆಗೆ ಒತ್ತು ನೀಡುವ ಉದ್ದೇಶದಿಂದ ರಾಜ್ಯ ಸರ್ಕಾರವು 'ನಿಪುಣ ಕರ್ನಾಟಕ' ಯೋಜನೆ ಜಾರಿಗೊಳಿಸಲು ಮುಂದಾಗಿದೆ.

ಸ್ಥಳೀಯ ಆರ್ಥಿಕ ಉತ್ತೇಜನ ಕಾರ್ಯಕ್ರಮವನ್ನು (ಲೀಪ್) ಉತ್ತೇಜಿಸಲು ಎರಡನೇ ಹಂತದ ನಗರಗಳಲ್ಲಿ ಪರಿಣಾಮಕಾರಿಯಾಗಿ ಜಾರಿಗೊಳಿಸಲು ಉದ್ಯಮಗಳೊಂದಿಗೆ ಒಪ್ಪಂದವನ್ನೂ ಮಾಡಿಕೊಂಡಿದೆ.

ಮಾಹಿತಿ ತಂತ್ರಜ್ಞಾನ ಹಾಗೂ ಜೈವಿಕ ತಂತ್ರಜ್ಞಾನ ಇಲಾಖೆಯು ಆಯೋಜಿಸಿರುವ ಬೆಂಗಳೂರು ತಂತ್ರಜ್ಞಾನ ಶೃಂಗಸಭೆಯ ಎರಡನೇ ದಿನವಾದ ಬುಧವಾರ ಬೆಂಗಳೂರಿನ ಆಚೆಗಿನ ಕರ್ನಾಟಕದ ಅಭಿವೃದ್ಧಿ ಕುರಿತು ಹೆಚ್ಚು ಚರ್ಚೆ ನಡೆಯಿತು. ಮುಂದಿನ ಹತ್ತು ವರ್ಷ ಮಾಹಿತಿ ತಂತ್ರಜ್ಞಾನ ಹಾಗೂ ಜೈವಿಕ ತಂತ್ರಜ್ಞಾನದ ನಂತರ ಕರ್ನಾಟಕದಲ್ಲಿ ಡೀಪ್ ಟೆಕ್ ಪ್ರಗತಿಯ ಕಾಲ ಎಂದು ಪ್ರಕಟಿಸಲಾಯಿತು.

ನಿಪುಣ ಯೋಜನೆಯಡಿ ಪ್ರತಿಷ್ಠಿತ ಕಾರ್ಪೊರೇಟ್‌ಗಳಾದ ಕ್ವಾಲ್‌ಕಮ್, ಎಲ್ ಫೋ, ಸ್ಟ್ಯಾಂಡರ್ಡ್ ಚಾರ್ಟರ್ಡ್ ಮತ್ತು ಸುಮಾರು ಕಂಪನಿಗಳ ಉದ್ಯೋಗಗಳ ತರಬೇತಿ ನೀಡಲಿದ್ದಾರೆ. ಐಸಿಟಿ ಅಕಾಡೆಮಿ, ಎಆರ್‌ಡಬ್ಲ್ಯು.-ಎಸ್, ಎಫ್‌ಐಯುಆಎಲ್ ಮತ್ತು ಎವಿಎಸ್‌ಜಿಎಕ್ಸ್-ತರಬೇತಿ ಪಾಲುದಾರ ಸಂಸ್ಥೆಗಳಾಗಿವೆ. 4,000 ಯುವ ಜನರ ವೃತ್ತಿ ಕೌಶಲ ಹೆಚ್ಚಿಸುವ ನಿರೀಕ್ಷೆ ಹೊಂದಲಾಗಿದೆ ಎಂದು ಶೃಂಗಸಭೆಯಲ್ಲಿ ಘೋಷಿಸಲಾಯಿತು.

ಪ್ರತಿಕಾರ್ಯಕ್ರಮದಲ್ಲಿ ಮಾತನಾಡಿದ ಐಟಿ-ಬಿಟಿ ಸಚಿವ ಪ್ರಿಯಾಂಕ್ ಖರ್ಗೆ, 'ಬೆಂಗಳೂರಿನ ಆಚೆಗೆ ಮಾಹಿತಿ ತಂತ್ರಜ್ಞಾನ ಉದ್ಯಮವನ್ನು ವಿಸ್ತರಿಸಲು ಕಾರ್ಯಕ್ರಮ ರೂಪಿಸಿದ್ದೇವೆ. ಇದರ ಭಾಗವಾಗಿಯೇ ಕೌಶಲ ತರಬೇತಿ ಹಾಗೂ ಉದ್ಯೋಗ ಒದಗಿಸುವ ನಿಪುಣ, ಲೀಪ್ ಯೋಜನೆಗೆ ಒತ್ತು ನೀಡಲಾಗಿದೆ. ಕೃತಕ ಬುದ್ಧಿಮತ್ತೆ, ಸೈಬರ್ ಸುರಕ್ಷತೆ, ಡೇಟಾ ಸೈನ್ಸ್ ಕ್ಷೇತ್ರಗಳಲ್ಲಿ ತರಬೇತಿ ನೀಡಿ ಹೆಚ್ಚಿನ ಉದ್ಯೋಗ ನಿರೀಕ್ಷಿಸಲಾಗಿದೆ' ಎಂದು ತಿಳಿಸಿದರು.

ಕಿಯೋನಿಕ್ಸ್ ಅಧ್ಯಕ್ಷ ಶರತ್ ಬಚ್ಚೇಗೌಡ ಮಾತನಾಡಿ, 'ಐದು ನಗರಗಳಲ್ಲಿ ಐದು ಉದ್ಯಮ ವಿಸ್ತರಿಸುವ ಯೋಜನೆಗೆ ಒಪ್ಪಂದವಾಗಿದೆ. ₹2,600 ಕೋಟಿ ಹೂಡಿಕೆಯಾಗಿದ್ದು, 3,500 ಉದ್ಯೋಗ ಲಭಿಸಲಿದೆ. 450ಕ್ಕೂ ಹೆಚ್ಚು ನವೋದ್ಯಮಗಳು ಬೆಂಗಳೂರಿನ ಆಚೆಗಿನ ಮಂಗಳೂರು, ಮೈಸೂರು, ಹುಬ್ಬಳ್ಳಿ – ಧಾರವಾಡ ನಗರಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಇನ್ನಷ್ಟು ಉತ್ತೇಜನ ನೀಡಲಾಗುವುದು' ಎಂದರು.

8 ವರ್ಷದ ಬಾಲಕನ ನವೋದ್ಯಮ

ತಂತ್ರಜ್ಞಾನ ಶೃಂಗಸಭೆಯ ಎರಡನೇ ದಿನ ನವೋದ್ಯಮಗಳ 50 ಹೊಸ ಆವಿಷ್ಕಾರ ಮತ್ತು ಪರಿಹಾರಗಳನ್ನು ಬಿಡುಗಡೆ ಮಾಡಲಾಯಿತು. ಅವುಗಳಲ್ಲಿ ಕೇವಲ 8 ವರ್ಷದ ಕಿರಿಯ ಅತ್ವಿಕ್ ಅಮಿತ್ ಕುಮಾರ್ ಬಿಡುಗಡೆ ಮಾಡಿದ ರೋಬೋಕನೆಕ್ಟ್ ಡಿಜಿಟಲ್ ಬಿಸಿನೆಸ್ ಕಾರ್ಡ್ ಒಂದು. ಈ ಸ್ಮಾರ್ಟ್ ತಂತ್ರಜ್ಞಾನವು ನೆಟ್‌ವರ್ಕಿಂಗ್ ಅನ್ನು ಇನ್ನಷ್ಟು ಸುಲಭವಾಗಿಸಿ ಬ್ರ್ಯಾಂಡಿಂಗ್ ಅನ್ನು ಸರಳಗೊಳಿಸಲಿದೆ.

ಸಚಿವ ಪ್ರಿಯಾಂಕ್ ಖರ್ಗೆ ಜತೆ ಅತ್ವಿಕ್ ಅಮಿತ್ ಕುಮಾರ್ ಸೆಲ್ಫಿ

- **₹1,500 ಕೋಟಿ ಹೂಡಿಕೆ, 1,000 ಉದ್ಯೋಗ** — ತುಮಕೂರಿನಲ್ಲಿ ಎಚ್‌ವಿಎನ್‌ನಿಂದ ಪಿಸಿಬಿ ಉತ್ಪಾದನಾ ಘಟಕ
- **₹250 ಕೋಟಿ ಹೂಡಿಕೆ, 300 ಉದ್ಯೋಗ** — ತುಮಕೂರಿನಲ್ಲಿ ಎಲ್‌ಎಸಿ ಕಂಪನಿಯಿಂದ ಪಿಸಿಬಿ ಉತ್ಪಾದನಾ ಘಟಕ
- **700 ಉದ್ಯೋಗ, 30 ಎಕರೆ ಜಾಗ** — ಧಾರವಾಡದಲ್ಲಿ ಸೋಲಾರ್, ಎಲೆಕ್ಟ್ರಿಕ್ ವಾಹನ ಬಿಡಿಭಾಗ ಉತ್ಪಾದನಾ ಘಟಕ
- **600 ಉದ್ಯೋಗ, 54 ಎಕರೆ ಜಾಗ** — ಗೌರಿಬಿದನೂರಿನಲ್ಲಿ ಲೀಥಿಯಂ ಬ್ಯಾಟರಿ ಮರುಬಳಕೆ ಘಟಕ
- **₹100 ಕೋಟಿ ಹೂಡಿಕೆ, 500 ಉದ್ಯೋಗ** — ಚಿಕ್ಕಬಳ್ಳಾಪುರದಲ್ಲಿ ಡ್ರೋನ್ ಟೆಸ್ಟಿಂಗ್ ಘಟಕ ಸ್ಥಾಪನೆ

ಬೆಂಗಳೂರು ಅಂತರರಾಷ್ಟ್ರೀಯ ಪ್ರದರ್ಶನ ಕೇಂದ್ರದಲ್ಲಿ ನಡೆಯುತ್ತಿರುವ ಬೆಂಗಳೂರು ಟೆಕ್ ಶೃಂಗದಲ್ಲಿ ರೋಬೊ ನಾಯಿಯನ್ನು ಕಂಡು ಪೊಲೀಸ್ ನಾಯಿ ಬೊಗಳಿದ ದೃಶ್ಯವನ್ನು ಮೊಬೈಲ್ ಮೂಲಕ ಸೆರೆ ಹಿಡಿದ ಯುವಕರು
ಪ್ರಜಾವಾಣಿ ಚಿತ್ರ: ಪ್ರಶಾಂತ್ ಎಚ್‌.ಜಿ.

ಕಸ ವಿಂಗಡಿಸುವ ಎಐ ಬುಟ್ಟಿ

ತಂತ್ರಜ್ಞಾನ ಶೃಂಗಸಭೆಯಲ್ಲಿ ಕೃತಕ ಬುದ್ಧಿಮತ್ತೆ (ಎಐ) ಆಧಾರಿತ ಕಸದ ಬುಟ್ಟಿಯೂ ಆಕರ್ಷಿಸುತ್ತಿದೆ.

ಈ ಎಐ ಆಧಾರಿತ ಯಂತ್ರದಲ್ಲಿ 6 ಬುಟ್ಟಿಗಳಿವೆ. ನೀವು ಬಿಸಾಕಬೇಕಿರುವ ವಸ್ತುವನ್ನು ಆ ಯಂತ್ರದ ಮುಂದೆ ಹಿಡಿದರೆ ಸಾಕು, ನಿಮ್ಮ ಕೈಯಲ್ಲಿ ಪ್ಲಾಸ್ಟಿಕ್ ಇದೆಯೋ, ಗಾಜಿನ ಬಾಟಲಿ ಇದೆಯೋ, ಹಸಿ ಪದಾರ್ಥವಿದೆಯೋ ಎಂಬುದನ್ನು ಎಐ ಸೆನ್ಸರ್ ಗುರುತಿಸಿ ಪೂರಕವಾದ ಬುಟ್ಟಿಯ ಬಾಗಿಲು ತೆರೆಯುತ್ತದೆ.

'ಬೆಂಗಳೂರಿನ ಎಚ್‌ಎಸ್‌ಆರ್ ಲೇಔಟ್‌ನ ಎಐ ಸ್ಮಾರ್ಟ್ ಬಿನ್ ಎಂಬ ಕಂಪನಿ ಅಭಿವೃದ್ಧಿಪಡಿಸಿದೆ. ಪೇಟೆಂಟ್‌ನೊಂದಿಗೆ ಮಾರುಕಟ್ಟೆಗೆ ಬಿನ್ ಪ್ರೊ ಅನ್ನು ತರುತ್ತಿದ್ದು, ಮೊದಲ ಹಂತದಲ್ಲಿ ವಿಮಾನ ನಿಲ್ದಾಣ, ರೈಲು ನಿಲ್ದಾಣ, ಮಾಲ್ ಗುರಿಯಾಗಿಸಿಕೊಂಡಿದೆ. 400 ಲೀಟರ್ ಸಾಮರ್ಥ್ಯದ ಬಿನ್ ಪ್ರೊ ಬೆಲೆ ₹ 40ಸಾವಿರದಿಂದ ₹ 1.5 ಲಕ್ಷ ಆಗಲಿದೆ' ಎಂದು ಸಂಸ್ಥೆಯ ಸಂಸ್ಥಾಪಕ ಅನುಪಮ್ ಮಹಾಜನ್ ಹೇಳಿದರು.

> **ಚೀನಾ, ಅಮೆರಿಕಕ್ಕೆ ಹೋಲಿಸಿದರೆ ಭಾರತ ಎಐ ಹಾಗೂ ಡೀಪ್‌ಟೆಕ್ ತಂತ್ರಜ್ಞಾನ ವಲಯದಲ್ಲಿ ಹಿಂದೆ ಇದೆ. ಇದಕ್ಕಾಗಿಯೇ ಡೇಟಾ ಕೇಂದ್ರವನ್ನು ಆರಂಭಿಸಿ ಒಂದೆಡೆ ಮಾಹಿತಿ ಕಲೆ ಹಾಕಲು ಒತ್ತು ನೀಡುತ್ತಿದ್ದೇವೆ**
> **ಅಭಿಷೇಕ್ ಸಿಂಗ್,** ಹೆಚ್ಚುವರಿ ಕಾರ್ಯದರ್ಶಿ, ಭಾರತ ಸರ್ಕಾರ

> **ಚಂದ್ರಯಾನ 4 ಮತ್ತು 5ರ ಯೋಜನೆಯನ್ನು ಮುಂದಿನ ಮೂರು ದಶಕದಲ್ಲಿ ಜಾರಿಗೊಳಿಸಲು ಇಸ್ರೊ ಅಣಿಯಾಗುತ್ತಿದೆ. ಬಾಹ್ಯಾಕಾಶ ವಲಯದಲ್ಲಿ ವಿಶ್ವದಲ್ಲೇ ಮುಂಚೂಣಿಯ ಮೂರನೇ ದೇಶವಾಗುವತ್ತ ಬೆಳೆಯುತ್ತಿದೆ**
> **ವಿ.ನಾರಾಯಣನ್,** ಇಸ್ರೊ ಅಧ್ಯಕ್ಷ, ಬೆಂಗಳೂರು

ASTRO YATRA

ಕೊಳ್ಳೆಗಾಲದ ಪ್ರಸಿದ್ಧ ಮಾಂತ್ರಿಕರು
ತಾತ ಮುತ್ತಾತನ ಕಾಲದಿಂದ ವಂಶ ಪಾರಂಪರಿಕ
ಮೋಡಿ ಮಾಂತ್ರಿಕರು ರಾಮಣ್ಣನವರು
ಕೊಳ್ಳೆಗಾಲದಿಂದ ನೇರ ಪರಿಹಾರ. 7090929523
ಮದುವೆಯಲ್ಲಿ ವಿಳಂಬ, ಸಂತಾನ ದೋಷ, ಮನೆಯಲ್ಲಿ ಅಶಾಂತಿ, ಗಂಡ ಹೆಂಡತಿ ಕಲಹ, ಮರಣ ಭಯ, ಆರೋಗ್ಯ ಸಮಸ್ಯೆ, ವ್ಯಾಪಾರದಲ್ಲಿ ನಷ್ಟ, ರಾಜಕೀಯ ಸೋಲು, ಶತ್ರುಗಳ ಕಾಟ, ಮಾಟ-ಮಂತ್ರ ದೋಷ, ಇಷ್ಟಪಟ್ಟವರು ನಿಮ್ಮಂತೆ ಆಗಲು, ಸ್ತ್ರೀ-ಪುರುಷ ವಶೀಕರಣ ಮಾಡಿಕೊಡುತ್ತಾರೆ.
ನಿಮ್ಮ ಸಮಸ್ಯೆ ಏನೇ ಇದ್ದರು 3 ದಿನದಲ್ಲಿ ಕೊಳ್ಳೆಗಾಲದ ಬಲಿಷ್ಠ, ಕೇರಳದ ನೀಗೂಡ ಪ್ರಯೋಗಗಳಿಂದ ಶಾಶ್ವತ ಪರಿಹಾರ ಶತ:ಸಿದ್ಧ.
ವಿಳಾಸ (ಕೊಳ್ಳೆಗಾಲ) ಮೋಡಿ ರಾಮಣ್ಣ. 7090929523

ಷೇರುಪೇಟೆ ವಹಿವಾಟು	
ಹಿಂದಿನ ಅಂತ್ಯ	84,673
ಇಂದಿನ ಅಂತ್ಯ	85,186
ಏರಿಕೆ	513



ಎನ್‌ಎಸ್‌ಇ ನಿಫ್ಟಿ	
ಹಿಂದಿನ ಅಂತ್ಯ:	25,910
ಇಂದಿನ ಅಂತ್ಯ:	26,052
ದಿನದ ಗರಿಷ್ಠ:	26,074
ಏರಿಕೆ	142

ಮೊಟ್ಟೆ ಧಾರಣೆ (ಎನ್‌ಇಸಿಸಿ)		
ಬೆಂಗಳೂರು	100 ಕ್ಕೆ	₹670
	12 ಕ್ಕೆ	₹96
ಮೈಸೂರು:	100 ಕ್ಕೆ	₹670

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)	
ಆರ್‌ಎಸ್‌ಎಸ್-4	₹182
ಆರ್‌ಎಸ್‌ಎಸ್-5	₹177
ಗುಡ್ ಲಾಟ್	₹164

ರಾಮನಗರ ರೇಷ್ಮೆಗೂಡು	
ಮಿಶ್ರತಳಿ (ಸಿ.ಬಿ)	₹555-785
ದ್ವಿತಳಿ (ಬಿ.ವಿ)	₹600-875

ಮುದ್ರೆಮನೆ ಕಾಫಿ (50 ಕೆಜಿಗೆ)	
ಎಪಿ	₹29500
ಎಸಿ	₹15540
ಆರ್‌ಪಿ	₹19250
ಆರ್‌ಸಿ	₹10870

ಮುಂಬೈ ಧಾರಣೆ (ಶೇಂಗಾ) 19-11-2025	
ಜಾವಾ 70/80(ಹೊಸ)	10600-10700
ಜಾವಾ 80/90(ಹೊಸ)	9900-10000
ದಪ್ಪ ಮಧ್ಯಪ್ರದೇಶ (ಹೊಸ)	7800-7900
ದಪ್ಪ ಗುಜರಾತ್ (ಹೊಸ)	8900-9000
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1525 (1525)
ಒಂದು ವಾರದ ಡೆಲಿವರಿ	1520 (1520)
ಪಾಮ್ ವಾರದ ಡೆಲಿವರಿ	1258 (1248)
ಸೂರ್ಯಕಾಂತಿ ಎಣ್ಣೆ ಕಚ್ಚಾ	1410 (1400)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,23,400 (1,22,400)
ಬೆಳ್ಳಿ ಕೆ.ಜಿಗೆ	1,57,900 (1,53,700)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಜಿಯೊ ಗ್ರಾಹಕರಿಗೆ ಗೂಗಲ್ ಜೆಮಿನಿ 3

ನವದೆಹಲಿ (ಪಿಟಿಐ): ಗೂಗಲ್ ಕಂಪನಿಯ ಎ.ಐ. ಪರಿಕರವಾಗಿರುವ 'ಜೆಮಿನಿ ಪ್ರೊ'ವನ್ನು ತನ್ನ ಬಳಕೆದಾರರಿಗೆ 18 ತಿಂಗಳ ಅವಧಿಗೆ ಉಚಿತವಾಗಿ, ವಯಸ್ಸಿನ ನಿರ್ಬಂಧ ಇಲ್ಲದೆ ನೀಡಲಾಗುತ್ತದೆ ಎಂದು ಜಿಯೊ ಕಂಪನಿಯು ಬುಧವಾರ ಹೇಳಿದೆ.

ಜೆಮಿನಿ ಪ್ರೊ ಯೋಜನೆಯ 18 ತಿಂಗಳ ಚಂದದಾರಿಕೆಯ ಮೌಲ್ಯವು ₹35,100 ಎಂದು ಜಿಯೊ ಹೇಳಿದೆ. 'ಅನ್ಲಿಮಿಟೆಡ್ 5ಜಿ' ಬಳಕೆ ಮಾಡುತ್ತಿರುವ ಎಲ್ಲ ಅರ್ಹ ಗ್ರಾಹಕರಿಗೆ ಈ ಕೊಡುಗೆ ಸಿಗಲಿದೆ ಎಂದು ಕಂಪನಿ ಹೇಳಿದೆ.

'ಗೂಗಲ್ ಎ.ಐ. ಪ್ರೊ' ಚಂದಾದಾರಿಕೆಯನ್ನು ಅರ್ಹ ಬಳಕೆದಾರರಿಗೆ 18 ತಿಂಗಳು ಉಚಿತವಾಗಿ ನೀಡಲಾಗುತ್ತದೆ ಎಂದು ಕಂಪನಿಯು ಈ ಮೊದಲೇ ಹೇಳಿತ್ತು. ಆದರೆ 18 ವರ್ಷದಿಂದ 25 ವರ್ಷದ ನಡುವಿನವರಿಗೆ ಇದನ್ನು ಆದ್ಯತೆಯ ಮೇರೆಗೆ ನೀಡಲಾಗುತ್ತದೆ ಎಂದು ಕಂಪನಿ ಹೇಳಿತ್ತು. ಈಗ ವಯಸ್ಸಿನ ನಿರ್ಬಂಧವನ್ನು ಇಲ್ಲವಾಗಿಸಿದೆ.

ಮೈ ಜಿಯೊ ಆ್ಯಪ್ ಬಳಸಿ ಈ ಸೌಲಭ್ಯವನ್ನು ಪಡೆದುಕೊಳ್ಳಬಹುದು. ಗೂಗಲ್ ಕಂಪನಿಯು 'ಜೆಮಿನಿ 3'ಯನ್ನು ತಾನು ಇದುವರೆಗೆ ಅಭಿವೃದ್ಧಿಪಡಿಸಿರುವ 'ಅತ್ಯಂತ ಬುದ್ಧಿವಂತ ಮಾದರಿ' ಎಂದು ಕರೆದಿದೆ.

ವಿವರಣೆಗೆ ಕಾರಣ ಒದಗಿಸುವಲ್ಲಿ ಜೆಮಿನಿ 3 ಆವೃತ್ತಿಯು ಅತ್ಯಾಧುನಿಕವಾಗಿದೆ, ಸೃಜನಶೀಲ ಆಲೋಚನೆಗಳಲ್ಲಿನ ಸೂಕ್ಷ್ಮಗಳನ್ನು ಅರ್ಥ ಮಾಡಿಕೊಳ್ಳುವಂತೆ ಇದನ್ನು ರೂಪಿಸಲಾಗಿದೆ, ಕ್ಲಿಷ್ಟಕರವಾದ ಸಮಸ್ಯೆಯೊಂದನ್ನು ಪರಿಹರಿಸುವ ವಿಚಾರದಲ್ಲಿಯೂ ಇದು ಮುಂದಿದೆ ಎಂದು ಗೂಗಲ್ ಹೇಳಿದೆ.

ಬಳಕೆದಾರರು ಇರಿಸುವ ಮನವಿಯ ಉದ್ದೇಶ ಏನು, ಅದರ ಒಟ್ಟು ಅರ್ಥ ಏನು ಎಂಬುದನ್ನು ಅರ್ಥ ಮಾಡಿಕೊಳ್ಳುವ ವಿಚಾರದಲ್ಲಿ ಜೆಮಿನಿ 3 ಬಹಳ ಸುಧಾರಣೆ ಕಂಡಿದೆ ಎಂದು ಗೂಗಲ್ ತಿಳಿಸಿದೆ.

ದೇಶದ ದೂರಸಂಪರ್ಕ ಸೇವಾ ಕಂಪನಿಯು ಎ.ಐ. ಸೇವೆ ಒದಗಿಸುವ ಮೂಲಕ ಗ್ರಾಹಕರ ಸಂಖ್ಯೆಯನ್ನು ಹೆಚ್ಚಿಸಲು ಯತ್ನಿಸುತ್ತಿರುವ ಸಂದರ್ಭದಲ್ಲಿ ಜಿಯೊ ಕಂಪನಿಯು ಈ ಕೊಡುಗೆಯನ್ನು ನೀಡಿದೆ.

ಗ್ಯಾಂಗ್‌ಸ್ಟರ್ ಅನ್ಮೋಲ್ ಬಿಷ್ಣೋಯಿ ಸೆರೆ

ಒಂದನೇ ಪುಟದಿಂದ...

ಅಮೆರಿಕದಲ್ಲಿ ಇದ್ದುಕೊಂಡೇ ಅನ್ಮೋಲ್ ಭಾರತದಲ್ಲಿ ಅಪರಾಧ ಕೃತ್ಯಗಳನ್ನು ಸಂಘಟಿಸುತ್ತಿದ್ದ. ಜೈಲಿನಲ್ಲಿರುವ ಸಹೋದರ ಲಾರೆನ್ಸ್ ಬಿಷ್ಣೋಯಿ ಪರವಾಗಿ ದಾಳಿಗಳನ್ನು ನಡೆಸುತ್ತಿದ್ದ. ಲಾರೆನ್ಸ್ ತಂಡದ ಹಲವು ಶೂಟರ್‌ಗಳಿಗೆ ಈತ ಆಶ್ರಯ ಕಲ್ಪಿಸಿದ್ದ.

'ಭಯೋತ್ಪಾದಕರು, ಗ್ಯಾಂಗ್‌ಸ್ಟರ್‌ಗಳು, ಶಸ್ತ್ರಾಸ್ತ್ರ ಕಳ್ಳಸಾಗಣೆದಾರರನ್ನು ಸೇರಿಸಿ ಬಿಷ್ಣೋಯಿ ಸಹೋದರರು ನಿರ್ಮಿಸಿಕೊಂಡಿದ್ದ ಅಕ್ರಮ ಕೋಟೆಯನ್ನು ಭೇದಿಸಿರುವ ಎನ್‌ಐಎ ತನಿಖೆಯನ್ನು ಮುಂದುವರಿಸಿದೆ' ಎಂದು ಮೂಲಗಳು ತಿಳಿಸಿವೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ
General

ಕರ್ನಾಟಕದಾದ್ಯಂತ ಕಂಪನಿಗಳಿಗೆ Work from Home ಕೆಲಸಕ್ಕೆ ಯುವಕರು, ಯುವತಿಯರು ಬೇಕಾಗಿದ್ದಾರೆ. 18000-25000 7th, 10th, Any Degree 8095043191

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 15,000/-ರಿಂದ 20,000/-. ESI, PF, ಫೆಡರಲ್ ಬ್ಯಾಂಕ್ ನಿಂದ 10ಲಕ್ಷ ಇನ್ಶೂರೆನ್ಸ್ ಸೌಲಭ್ಯ ವಿರುತ್ತದೆ. ಬೆಂಗಳೂರು-76. ತಕ್ಷಣಸಂಪರ್ಕಿಸಿ: 9008835841, 9606385001.

ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th, PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

ಕರ್ನಾಟಕದಾದ್ಯಂತ ಪ್ರಾರಂಭವಾಗಿರುವ ಕಂಪನಿಗಳಿಗೆ, ಆಫೀಸ್ ಗಳಿಗೆ 7th,PUC, ಡಿಗ್ರಿ ಆದಂತ ಯುವಕ, ಯುವತಿಯರು ಬೇಕಾಗಿದ್ದಾರೆ 18,900-47000 (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9916788422.

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ,ತಿಂಗಳಿಗೆ, 15,000.ರಿಂದ 20,000. ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777503, 8884777502.

ರಿಯಲ್ ಎಸ್ಟೇಟ್ ಸೆಲ್ಲಿಂಗ್
Residential/ Commercial
Nagarabhavi
A-KHATA NEWLY built fully furnished G+3 house(1200 sqft) for sale in Herohalli - Nagarbhavi Bangalore-560091 7259676076

ಪ್ರವಾಸ
Travel
★ಶ್ರೀಶ್ರೇಯಸ್ ಟೂರ್ಸ್★ 04.12.2025,04.01.2026 4ದಿನಗಳು ಅಖಂಡ ಒರಿಸ್ಸಾರಾಜ್ಯ ಪ್ರವಾಸ.04.01.2026 04.02.2026 6ದಿನಗಳು ಅಡಮಾನ್ ದ್ವೀಪಪ್ರವಾಸ. 09.12.2025 15 ದಿನಗಳು ಅಖಂಡ ಮಧ್ಯಪ್ರದೇಶ ರಾಜ್ಯ (ಅಮರಕಂಠಕ,ಮಯ್ಯಾರ್ ಸಹಿತ).01.12.2025 12.12.2025 10ದಿನಗಳು ಅಖಂಡ ಆಂಧ್ರತೆಲಂಗಾಣ ರಾಜ್ಯಪ್ರವಾಸ.22.11.2025 12.12.2025,22.12.2025 10ದಿನಗಳು ಅಖಂಡ ಕೇರಳರಾಜ್ಯ ಪ್ರವಾಸ.06.12.2025 22.12.2025,22.01.2026 04/06/08ದಿನಗಳು ಕಾಶಿ ಪ್ರಯಾಗ್,ಗಯಾ, ನೈಮಿಷ್ಯಾರಣ್ಯ,ದೇವಘರ್. 11.12.2025 12/16/21ದಿನಗಳು ಈಶಾನ್ಯ ರಾಜ್ಯಗಳ (ಸೆವೆನ್ ಸಿಸ್ಟರ್ಸ್) ಅಸ್ಸಾಂ, ಅರುಣಾಚಲ, ಮೇಘಾಲಯ,ಮಣಿಪುರ,ತ್ರಿಪುರ ನಾಗಲ್ಯಾಂಡ್,ಮಿಝೋರಾಂ. 8073824856 9206979202 9846954639

ಪುರಿಜಗನ್ನಾಥ್ ಕಾಶಿವಿಶ್ವನಾಥ ಅಯೋಧ್ಯ ರಾಮ ಜನ್ಮಭೂಮಿ ಯಾತ್ರ. ವೈಷ್ಣೋದೇವಿ ಕಾಶ್ಮೀರ್ ಟೂರ್ ಗ್ಯಾಂಗ್‌ಟಾಕ್ ಡಾರ್ಜಿಲಿಂಗ್ ಪ್ರವಾಸ. ಸಂಪರ್ಕಿಸಿ. ವಿಜಯ ಟ್ರಾವೆಲ್ಸ್ ಬೆಂಗಳೂರು. 9035911899

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಮಹಿಳಾ ಉದ್ಯಮಿಗಳಿಗೆ ಕಡಿಮೆ ಬಡ್ಡಿಗೆ ಸಾಲ: ಸಚಿವೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಮಹಿಳೆಯರು ಸಣ್ಣ ಪ್ರಮಾಣದ ಉದ್ಯಮಗಳನ್ನು ಸ್ಥಾಪಿಸಲು ಎಲ್ಲ ಬೆಂಬಲ ನೀಡಲಾಗುವುದು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮಿ ಹೆಬ್ಬಾಳಕರ್ ಭರವಸೆ ನೀಡಿದರು.

ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ (ಎಫ್‌ಕೆಸಿಸಿಐ) ಆಯೋಜಿಸಿದ್ದ ಅಂತರರಾಷ್ಟ್ರೀಯ ಮಹಿಳಾ ಉದ್ದಿಮೆದಾರರ ದಿನಾಚರಣೆಯ ಸಮಾರೋಪದಲ್ಲಿ ಮಾತನಾಡಿದ ಅವರು, 'ಮಹಿಳಾ ಉದ್ಯಮಿಗಳಿಗೆ ಅಥವಾ ಸ್ವಂತ ಉದ್ಯಮ ಆರಂಭಿಸಲು ಬಯಸುವ ಮಹಿಳೆಯರಿಗೆ ಸರ್ಕಾರವು ಶೇ 3ರ ಬಡ್ಡಿ ದರದಲ್ಲಿ ₹5 ಕೋಟಿವರೆಗೆ ಸಾಲ ನೀಡುತ್ತದೆ' ಎಂದರು.

ಮಹಿಳೆಯರ ಸಬಲೀಕರಣದ ಉದ್ದೇಶದ 'ಗೃಹಲಕ್ಷ್ಮಿ' ಯೋಜನೆಗೆ ಸರ್ಕಾವು ₹32,000 ಕೋಟಿ ಇರಿಸಿದೆ. ಮಹಿಳೆಯರ ಅಭಿವೃದ್ಧಿಗಾಗಿ ಸರ್ಕಾರ ವಾರ್ಷಿಕ ₹52 ಸಾವಿರ ಕೋಟಿ ಖರ್ಚು ಮಾಡುತ್ತಿದೆ ಎಂದರು.

'ನಾನು ಎರಡು ಸಕ್ಕರೆ ಕಾರ್ಖಾನೆಗಳನ್ನು ಹೊಂದಿದ್ದೇನೆ. ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರಿಗೆ ಉದ್ಯೋಗ ನೀಡಿದ್ದೇನೆ' ಎಂದು ತಿಳಿಸಿದರು.

ಎಫ್‌ಕೆಸಿಸಿಐ ಅಧ್ಯಕ್ಷೆ ಉಮಾ ರೆಡ್ಡಿ, ಹಿರಿಯ ಉಪಾಧ್ಯಕ್ಷರಾದ ಸಾಯಿರಾಮ್ ಪ್ರಸಾದ್, ಉಪಾಧ್ಯಕ್ಷ ಬಿ.ಪಿ.ಶಶಿಧರ್ ಮತ್ತಿತರರು ಇದ್ದರು.

ಎಫ್‌.ಸಿ. ಪರೀಕ್ಷಾ ಶುಲ್ಕ ಹೆಚ್ಚಳ

ನವದೆಹಲಿ (ಪಿಟಿಐ): 20 ವರ್ಷಕ್ಕಿಂತ ಹಳೆಯದಾದ ವಾಹನಗಳ ಎಫ್‌.ಸಿ. ಪರೀಕ್ಷಾ ಶುಲ್ಕವನ್ನು ಕೇಂದ್ರ ಸರ್ಕಾರ ಹೆಚ್ಚಿಸಿದೆ. ನವೀಕರಣ ಶುಲ್ಕವನ್ನು ಹೆಚ್ಚಿಸಿದ ಕೆಲವೇ ತಿಂಗಳಲ್ಲಿ ಈ ಹೆಚ್ಚಳ ಆಗಿದೆ.

ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯ ಹೊರಡಿಸಿರುವ ಅಧಿಸೂಚನೆ ಪ್ರಕಾರ, 20 ವರ್ಷಕ್ಕಿಂತ ಹಳೆಯದಾದ ಎಲ್‌ಎಂವಿಗಳಿಗೆ (ಲಘು ಮೋಟಾರು ವಾಹನ) ಎಫ್‌.ಸಿ. ಪರೀಕ್ಷೆ ಶುಲ್ಕವನ್ನು ಈಗಿರುವ ₹10 ಸಾವಿರದ ಬದಲು ₹15 ಸಾವಿರಕ್ಕೆ ಹೆಚ್ಚಿಸಲಾಗಿದೆ. 20 ವರ್ಷಗಳಿಗಿಂತ ಹಳೆಯದಾದ ಟ್ರಕ್ ಮತ್ತು ಬಸ್ಸುಗಳ ಎಫ್‌.ಸಿ. ಪರೀಕ್ಷಾ ಶುಲ್ಕವನ್ನು ಈಗಿನ ₹3,500ರ ಬದಲು ₹25 ಸಾವಿರಕ್ಕೆ ಹೆಚ್ಚಿಸಲಾಗಿದೆ. ಇಷ್ಟೇ ವರ್ಷ ಹಳೆಯದಾದ ಮಧ್ಯಮ ಗಾತ್ರದ ವಾಣಿಜ್ಯ ವಾಹನಗಳು ₹20 ಸಾವಿರ ಶುಲ್ಕ, ಲಘು ಮೋಟಾರು ವಾಹನಗಳು ₹15 ಸಾವಿರ ಪಾವತಿಸಬೇಕಿದೆ.

20 ವರ್ಷಗಳಿಗಿಂತ ಹಳೆಯದಾದ ದ್ವಿಚಕ್ರ ವಾಹನಗಳು ಎಫ್‌.ಸಿ. ಪರೀಕ್ಷೆಯ ಶುಲ್ಕವನ್ನು ಇದುವರೆಗಿನ ₹600ರ ಬದಲು ₹2,000 ಪಾವತಿಸಬೇಕಿದೆ.

ಎಕ್ಸೆಲ್‌ಸಾಫ್ಟ್ ಟೆಕ್ನಾಲಜೀಸ್ ಐಪಿಒ ಶುರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈಸೂರು ಮೂಲದ ಎಕ್ಸೆಲ್‌ಸಾಫ್ಟ್ ಟೆಕ್ನಾಲಜೀಸ್ ಕಂಪನಿಯ ಸಾರ್ವಜನಿಕ ಷೇರು ಮಾರಾಟ (ಐಪಿಒ) ಪ್ರಕ್ರಿಯೆ ಬುಧವಾರದಿಂದ ಆರಂಭವಾಗಿದೆ.

ಪ್ರತಿ ಈಕ್ವಿಟಿ ಷೇರಿನ ಬೆಲೆಯನ್ನು ₹114ರಿಂದ ₹120ಕ್ಕೆ ನಿಗದಿಪಡಿಸಲಾಗಿದೆ. ಐಪಿಒಗೆ ಬಿಡ್ ಸಲ್ಲಿಸಲು ಶುಕ್ರವಾರ (ನವೆಂಬರ್ 21) ಕೊನೆಯ ದಿನ ಎಂದು ಕಂಪನಿ ತಿಳಿಸಿದೆ.

ಕಂಪನಿಯು ಐಪಿಒ ಮೂಲಕ ₹500 ಕೋಟಿ ಬಂಡವಾಳ ಸಂಗ್ರಹಿಸಲು ಮುಂದಾಗಿದೆ. ಈಗಾಗಲೇ ಆರಂಭಿಕ ಹೂಡಿಕೆದಾರರಿಂದ (ಆ್ಯಂಕರ್ ಇನ್‌ವೆಸ್ಟರ್ಸ್) ₹150 ಕೋಟಿ ಸಂಗ್ರಹಿಸಿದೆ.

ಮೆಕ್ಕೆಜೋಳ: ದರ ಕುಸಿತದ ಭೀತಿ

ಬೆಂಬಲ ಬೆಲೆ ಘೋಷಿಸಿದರೂ ಆರಂಭವಾಗದ ಖರೀದಿ ಪ್ರಕ್ರಿಯೆ

ವಿಶ್ವಜ ಕಾಡದೇವರ

ರಬಕವಿಬನಹಟ್ಟಿ (ಬಾಗಲಕೋಟೆ ಜಿಲ್ಲೆ): ರಬಕವಿ ಬನಹಟ್ಟಿ ವ್ಯಾಪ್ತಿಯಲ್ಲಿ ಬೆಳೆದ ಸಾವಿರಾರು ಕ್ವಿಂಟಲ್ ಮೆಕ್ಕೆಜೋಳಕ್ಕೆ ಸೂಕ್ತ ಬೆಲೆ ಸಿಗದೇ, ರೈತರು ಪರದಾಡುವಂತಾಗಿದೆ.

ಮಹಾರಾಷ್ಟ್ರದ ಅಡತಿಯಲ್ಲಿ ಕ್ವಿಂಟಲ್ ಮೆಕ್ಕೆಜೋಳಕ್ಕೆ ₹ 1,890 ದರ ನಿಗದಿಯಾಗಿದ್ದರೆ, ಇಲ್ಲಿನ ಸ್ಥಳೀಯ ಮಾರುಕಟ್ಟೆಯಲ್ಲಿ ₹1,700ಕ್ಕೆ ಕುಸಿದಿದೆ. ಕಳೆದ ವರ್ಷ ಜೂನ್ ಮತ್ತು ಜುಲೈ ತಿಂಗಳಲ್ಲಿ ಮೆಕ್ಕೆಜೋಳ ಕ್ವಿಂಟಲ್‌ಗೆ ₹3,000ದಿಂದ ₹3,100ರವರೆಗೆ ಮಾರಾಟವಾಗಿತ್ತು' ಎಂದು ರೈತ ಸದಾಶಿವ ಬಂಗಿ ತಿಳಿಸಿದರು.

'ಸರ್ಕಾರ ಸಾಧ್ಯವಾದಷ್ಟು ಬೇಗ ಬೆಂಬಲ ಬೆಲೆ ಘೋಷಿಸಿ, ಮೆಕ್ಕೆಜೋಳ ಖರೀದಿಗೆ ಮುಂದಾಗಬೇಕು. ಇಲ್ಲದಿದ್ದರೆ ರೈತರಿಗೆ ತೊಂದರೆಯಾಗಲಿದೆ' ಎಂದು ರೈತ ಸಿದ್ದು ಗೌಡಪ್ಪನವರ ಆತಂಕ ವ್ಯಕ್ತಪಡಿಸಿದರು.

'ಕಾಳು ಖರೀದಿ, ಗೊಬ್ಬರ, ಔಷಧ ಸೇರಿದಂತೆ ಎಕರೆ ಜಮೀನಿನಲ್ಲಿ ಮೆಕ್ಕೆಜೋಳ ಕೃಷಿಗೆ ಅಂದಾಜು ₹35 ಸಾವಿರ ಖರ್ಚಾಗುತ್ತದೆ. ಆದರೆ, ಬೆಲೆ ಹೀಗೆ ಕುಸಿದರೆ ಏನು ಮಾಡುವುದು? ನಮಗೆ ದಿಕ್ಕೇ ತೋಚುತ್ತಿಲ್ಲ' ಎಂದು ರೈತರು ಅಳಲು ತೋಡಿಕೊಂಡರು.

'ಮೆಕ್ಕೆಜೋಳದಿಂದ ಎಥೆನಾಲ್ ಉತ್ಪಾದಿಸಲಾಗುತ್ತಿದೆ. ರಫ್ತು ಆಗುತಿತ್ತು. ಈಗ ಎರಡೂ ಸ್ಥಗಿತಗೊಂಡಿದೆ. ಈ ಬಾರಿ ಉತ್ತಮ ಇಳುವರಿ ಬಂದಿದೆ. ಅದರೆ ಬೆಲೆ ಕುಸಿದಿದೆ' ಎಂದರು.

> **ಮೆಕ್ಕೆಜೋಳ ಖರೀದಿಗೆ ಕೇಂದ್ರ ತೆರೆಯಲು ಸರ್ಕಾರ ಆದೇಶಿಸಿಲ್ಲ. ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಕೆಯಾಗಿದೆ. ಬೆಂಬಲ ಬೆಲೆ ಕ್ವಿಂಟಲ್‌ಗೆ ₹2,400 ನಿಗದಿ ಆಗಿದೆ**
> **ವಿ.ಡಿ.ಪಾಟೀಲ,** ಕೃಷಿ ಮಾರಾಟ ಸಹಾಯಕ ನಿರ್ದೇಶಕ, ಎಪಿಎಂಸಿ ಬಾಗಲಕೋಟೆ

> **ರಬಕವಿ ವ್ಯಾಪ್ತಿಯಲ್ಲಿ ಸದ್ಯ 80 ಕ್ವಿಂಟಲ್‌ಗೂ ಹೆಚ್ಚು ಮೆಕ್ಕೆಜೋಳ ದಾಸ್ತಾನಿದೆ. ಸೂಕ್ತ ಬೆಲೆ ಇಲ್ಲ. ಅವುಗಳ ರಕ್ಷಣೆಯೇ ಸಮಸ್ಯೆಯಾಗಿದೆ**
> **ಧರೆಪ್ಪ ಉಳ್ಳಾಗಡ್ಡಿ,** ರೈತ



ಇಂದು ಲಕ್ಷ್ಮೇಶ್ವರ ಬಂದ್

ಲಕ್ಷ್ಮೇಶ್ವರ (ಗದಗ ಜಿಲ್ಲೆ): 'ಮೆಕ್ಕೆಜೋಳ ಖರೀದಿಗೆ ಕೇಂದ್ರ ಆರಂಭಕ್ಕೆ ಆಗ್ರಹಿಸಿ ರೈತರು ಐದು ದಿನದಿಂದ ಲಕ್ಷ್ಮೇಶ್ವರದ ಶಿಗ್ಲಿ ಕ್ರಾಸ್‌ನಲ್ಲಿ ಅಹೋರಾತ್ರಿ ಧರಣಿ ನಡೆಸುತ್ತಿದ್ದು, ಗುರುವಾರ ಲಕ್ಷ್ಮೇಶ್ವರ ಬಂದ್‌ಗೆ ಕರೆ ಕೊಟ್ಟಿದ್ದಾರೆ.

'ಮಾರುಕಟ್ಟೆಯಲ್ಲಿ ಮೆಕ್ಕೆಜೋಳ ದರ ಕ್ವಿಂಟಲ್‌ಗೆ ₹ 1,700 ರಿಂದ ₹1,400ಕ್ಕೆ ಕುಸಿದಿದೆ. ಸರ್ಕಾರ ತಕ್ಷಣವೇ ಖರೀದಿ ಕೇಂದ್ರ ತೆರೆದು ರೈತರಿಗೆ ನೆರವಾಗಬೇಕು' ಎಂದು ರೈತ ಮುಖಂಡ ಮಂಜುನಾಥ ಮಾಗಡಿ ಒತ್ತಾಯಿಸಿದರು.

ಪ್ರಶ್ನೋತ್ತರ

ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ರಾಜೇಂದ್ರ, ತುಮಕೂರು

- **ಪ್ರಶ್ನೆ: ನಾನು ಮತ್ತು ನನ್ನ ತಮ್ಮ ಒಂದು ಮನೆಯನ್ನು ಹೊಂದಿದ್ದೇವೆ. ಇದನ್ನು ಬಾಡಿಗೆಗೆ ನೀಡಿದ್ದೇವೆ. ಈ ಮನೆಯ ಬಾಡಿಗೆಯನ್ನು ನಾವು ಸಮಾನವಾಗಿ ಹಂಚಿಕೊಂಡು ಬರುತ್ತಿದ್ದೇವೆ. ಇದಕ್ಕೆ ನಾವು ಮನೆ ತೆರಿಗೆ ಕಟ್ಟುತ್ತಿದ್ದು ಇದನ್ನೂ ನಾನೇ ತೆರುತ್ತಿದ್ದೇನೆ. ಬಾಡಿಗೆದಾರರು, ಬಾಡಿಗೆ ಹಣವನ್ನು ನನ್ನ ಹಾಗೂ ನನ್ನ ತಮ್ಮನ ಬ್ಯಾಂಕ್ ಖಾತೆಗೆ ಜಮಾ ಮಾಡುತ್ತಿದ್ದಾರೆ. ಅವರು ಬ್ಯಾಂಕ್ ಉದ್ಯೋಗಿ ಆಗಿರುವುದರಿಂದ ಅವರಿಗೆ ನಾವು ಬಾಡಿಗೆ ರಸೀದಿ ಕೊಡಬೇಕಾಗುತ್ತದೆ. ನನ್ನ ಪ್ರಶ್ನೆ ಏನೆಂದರೆ, ನಾವು ಯಾವ ರೀತಿ ಈ ಬಾಡಿಗೆ ಆದಾಯವನ್ನು ತೋರಿಸಿಕೊಳ್ಳಬೇಕು. ನಮಗೆ ನಮ್ಮದೇ ಆದ ವೈಯಕ್ತಿಕ ಆದಾಯವೂ ಇದೆ. ಈ ಬಗ್ಗೆ ಸಲಹೆ ನೀಡಿ.**

ಉತ್ತರ: ಜಂಟಿ ಹೆಸರಿನಲ್ಲಿ ಇರುವ ಆಸ್ತಿಯಿಂದ ಬರುವ ಬಾಡಿಗೆ ಆದಾಯವನ್ನು ಸರಿಯಾಗಿ ತೋರಿಸುವುದು ಆದಾಯ ತೆರಿಗೆ ಕಾಯ್ದೆಯ ನಿಯಮಗಳಿಗೆ ಒಳಪಡುತ್ತದೆ. ಒಂದು ಮನೆ ಇಬ್ಬರು ವ್ಯಕ್ತಿಗಳ ಒಡೆತನದಲ್ಲಿದ್ದರೆ, ಕಾನೂನು ಪ್ರಕಾರ ಅವರ ಮಾಲೀಕತ್ವದ ಪ್ರಮಾಣಕ್ಕೆ ಅನುಗುಣವಾಗಿ ಬಾಡಿಗೆ ಆದಾಯವನ್ನು ಪ್ರತ್ಯೇಕವಾಗಿ ತೋರಿಸಿಕೊಳ್ಳಬೇಕಾಗುತ್ತದೆ. ನೀವು ಹಾಗೂ ನಿಮ್ಮ ತಮ್ಮ, ಮನೆಯಲ್ಲಿ 50:50 ಹಂಚಿಕೆ ಹೊಂದಿದ್ದರೆ, ಬಾಡಿಗೆಯಲ್ಲಿನ ಒಟ್ಟು ವಾರ್ಷಿಕ ಮೌಲ್ಯವನ್ನು ಸಮಾನವಾಗಿ ಇಬ್ಬರ ಪ್ರತ್ಯೇಕ ಆದಾಯವಾಗಿ ಪರಿಗಣಿಸಲಾಗುತ್ತದೆ.

ಬಾಡಿಗೆದಾರರು ಬಾಡಿಗೆ ಮೊತ್ತವನ್ನು ಇಬ್ಬರ ಖಾತೆಗೆ ಪ್ರತ್ಯೇಕವಾಗಿ ಜಮಾ ಮಾಡುತ್ತಿರುವುದು ತೆರಿಗೆ ದೃಷ್ಟಿಯಿಂದಲೂ ಸರಿಯೆ. ಏಕೆಂದರೆ ಇದು ಕೂಡಾ ಆದಾಯದ ಸಮಾನ ಹಂಚಿಕೆಯನ್ನು ದೃಢಪಡಿಸುವ ದಾಖಲೆಯಾಗುತ್ತದೆ. ಜೊತೆಗೆ, ನಿಮ್ಮ ಹೆಸರಿನಲ್ಲಿ ಪಾವತಿಸಿದ ಮನೆ ತೆರಿಗೆಯನ್ನು ನಿಮ್ಮಿಬ್ಬರ ಆದಾಯ ಹಂಚಿಕೆಯ ಅನುಪಾತದಲ್ಲಿ ಪ್ರತ್ಯೇಕವಾಗಿ ಪರಿಗಣಿಸಬೇಕಾಗುತ್ತದೆ. ಬಾಡಿಗೆ ರಸೀದಿ ನೀಡುವಾಗಲೂ ನೀವು ಮತ್ತು ನಿಮ್ಮ ತಮ್ಮನ ಹೆಸರು, ಮನೆಯಲ್ಲಿ ನಿಮ್ಮ ಒಡೆತನ, ನಿಮ್ಮ ಪಾನ್ ಕಾರ್ಡ್ ಸಂಖ್ಯೆ ಮತ್ತು ಬಾಡಿಗೆ ವಿವರಗಳನ್ನು ಸಹ ಸೇರಿಸುವುದು ಉತ್ತಮ.

ಆದಾಯ ತೆರಿಗೆ ರಿಟರ್ನ್ಸ್‌ನಲ್ಲಿ, ಇಬ್ಬರೂ ತಮ್ಮ ತಮ್ಮ ಆದಾಯದ ಪ್ರಮಾಣವನ್ನು ಇತರೆ ವರ್ಗದ ಆದಾಯದೊಂದಿಗೆ ತೋರಿಸಿಕೊಳ್ಳಬೇಕು. ಬಾಡಿಗೆಯಿಂದ ಬರುವ ವಾರ್ಷಿಕ ಮೌಲ್ಯದಿಂದ ಶೇಕಡ 30ರಷ್ಟು ಸ್ಟ್ಯಾಂಡರ್ಡ್ ಡಿಡಕ್ಷನ್ ಮತ್ತು ನಿಮ್ಮ ತೆರಿಗೆ ಪದ್ಧತಿಯ ಆಯ್ಕೆಯನ್ನು ಅನುಸರಿಸಿ. ಗೃಹಸಾಲ ಬಡ್ಡಿ ಇದ್ದರೆ ಅದನ್ನು ಕಡಿತಗೊಳಿಸುವ ಅವಕಾಶ ಇದೆ. ನಂತರ ಉಳಿದ ಆದಾಯವು ನಿಮ್ಮ ವೈಯಕ್ತಿಕ ಆದಾಯದೊಂದಿಗೆ ಸೇರಿಸಿ ಒಟ್ಟು ತೆರಿಗೆಗೊಳಪಡುವ ಆದಾಯವೆಂದು ಪರಿಗಣಿಸಲಾಗುತ್ತದೆ. ಜಂಟಿ ಬಾಡಿಗೆ ಆದಾಯದ ಸರಿಯಾದ ದಾಖಲೆಗಳಾಗಿ ನಿಮ್ಮ ಆಸ್ತಿ ದಾಖಲೆ, ಮನೆಯ ಖಾತಾ, ಬಾಡಿಗೆ ಒಪ್ಪಂದ, ಬಾಡಿಗೆ ಜಮಾ ಆದ ಬ್ಯಾಂಕ್ ಸ್ಟೇಟ್‌ಮೆಂಟ್‌ಗಳು ಹಾಗೂ ತೆರಿಗೆ ರಸೀದಿಗಳನ್ನು ಕಾಪಾಡಿಟ್ಟುಕೊಳ್ಳುವುದು ಬಹಳ ಮುಖ್ಯ.

ಆದರ್ಶ್ ಗಿಣಿಮುಗೆ, ಊರು ತಿಳಿಸಿಲ್ಲ

- **ಪ್ರಶ್ನೆ: ನಮ್ಮ ತಾಯಿಯು ಅಂಗನವಾಡಿ ಕಾರ್ಯಕರ್ತೆಯಾಗಿದ್ದು, ಅವರು ಕಳೆದ ನಾಲ್ಕು ವರ್ಷಗಳಲ್ಲಿ ಸಂಪಾದನೆ ಮಾಡಿದ ಉಳಿತಾಯದ ₹2 ಲಕ್ಷ ಮೊತ್ತವನ್ನು ಬ್ಯಾಂಕ್ ಆಫ್ ಬರೋಡಾದ ಮ್ಯೂಚುವಲ್ ಫಂಡ್‌ನಲ್ಲಿ ಹೂಡಿಕೆ ಮಾಡಿದ್ದೇವೆ. ಪ್ರಶ್ನೆ ಏನೆಂದರೆ, ಈ ಹಣವು ಎರಡು ಪಟ್ಟು ಆಗುತ್ತೆ ಅಂತ ಬ್ಯಾಂಕ್ ಸಿಬ್ಬಂದಿ ಹೇಳಿದ್ದಾರೆ. ಆದರೆ ಇದಕ್ಕೆ ಎಷ್ಟು ವರ್ಷ ಸಮಯ ಬೇಕಾಗಬಹುದು? ಹೂಡಿಕೆಯ ಅವಧಿಯಲ್ಲಿ, ಸ್ವಲ್ಪ ಪ್ರಮಾಣದಲ್ಲಿ ರಿಸ್ಕ್ ಇದೆ ಎಂದು ಸಹ ಹೇಳಿದ್ದಾರೆ. ಆದರೆ ದೀರ್ಘ ಕಾಲ ಹೂಡಿಕೆ ಮಾಡುವುದಿದ್ದರೆ, ಯಾವುದೇ ತೊಂದರೆಯಿಲ್ಲ ಎಂದು ಹೇಳಿದ್ದಾರೆ.**

ಉತ್ತರ: ನಿಮ್ಮ ತಾಯಿಯವರು ತಮ್ಮ ಪರಿಶ್ರಮದ ಮೂಲಕ ಸಂಗ್ರಹಿಸಿದ ಹಣವನ್ನು ಮ್ಯೂಚುವಲ್ ಫಂಡ್‌ನಲ್ಲಿ ಹೂಡಿಕೆ ಮಾಡಿರುವುದು ಅತ್ಯಂತ ಉತ್ತಮ ಆರ್ಥಿಕ ನಿರ್ಧಾರ. ಆದರೆ ಹೆಚ್ಚಿನ ಮ್ಯೂಚುವಲ್ ಫಂಡ್‌ಗಳು ಮಾರುಕಟ್ಟೆ ಆಧಾರಿತ ಹೂಡಿಕೆ ಆಗಿರುವುದರಿಂದ, ಇದರ ಲಾಭವು ಬ್ಯಾಂಕ್ ಬಡ್ಡಿದರದಂತೆ ನಿಗದಿ ಆಗುವುದಿಲ್ಲ. ಹೀಗಾಗಿ ನಿಮ್ಮ ಹಣ ದುಪ್ಪಟ್ಟು ಆಗುತ್ತದೆ ಎಂಬ ಮಾತು ಸಾಧ್ಯವಾದರೂ, ಅದಕ್ಕೆ ಬೇಕಾಗುವ ಸಮಯ ನಿಖರವಾಗಿರದು ಮತ್ತು ಅದು ಆಯ್ಕೆ ಮಾಡಿದ ಫಂಡ್‌ನ ಪ್ರಕಾರ ಹಾಗೂ ಅದರ ರಿಸ್ಕ್ ಮಟ್ಟದ ಮೇಲೆ ಅವಲಂಬಿತವಾಗಿರುತ್ತದೆ. ನೀವು ನೀಡಿದ ಮಾಹಿತಿಯಲ್ಲಿ ಯಾವ ವರ್ಗ ಎಂಬ ಬಗ್ಗೆ ಹೆಚ್ಚಿನ ಮಾಹಿತಿ ಇಲ್ಲ. ಉದಾಹರಣೆಗೆ, ಈಕ್ವಿಟಿ, ಬ್ಯಾಲೆನ್ಸ್ಡ್, ಡೆಬ್ಟ್, ಸೇವಿಂಗ್ಸ್, ಕಾಂಟ್ರಾ ಫಂಡ್ ಇತ್ಯಾದಿ ಯಾವುದೂ ಆಗಿರಬಹುದು. ಆದರೆ ಈ ಬಗ್ಗೆ ಕೆಲವು ವಿಚಾರಗಳನ್ನು ಈ ಕೆಳಗಿನಂತೆ ಅವಲೋಕಿಸಬೇಕಾಗುತ್ತದೆ.

ಸಾಮಾನ್ಯವಾಗಿ ಈಕ್ವಿಟಿ ಆಧಾರಿತ ಮ್ಯೂಚುವಲ್ ಫಂಡ್‌ಗಳು ಹೆಚ್ಚಿನ ರಿಸ್ಕ್ ಹೊಂದಿದ್ದರೂ, ದೀರ್ಘಾವಧಿಯಲ್ಲಿ ಹೆಚ್ಚು ಲಾಭ ನೀಡುವ ಸಾಮರ್ಥ್ಯ ಹೊಂದಿರುತ್ತವೆ. ಈ ಹಣ ಎರಡು ಪಟ್ಟು ಆಗುತ್ತದೆ ಎಂದು ಬ್ಯಾಂಕ್ ಸಿಬ್ಬಂದಿ ಹೇಳಿದ್ದಾರೆಂದರೆ, ಅವರು ಸಾಧ್ಯತೆಯ ಬಗ್ಗೆ ಮಾತನಾಡಿರಬಹುದು; ಆದರೆ ಎಷ್ಟು ವರ್ಷಗಳಲ್ಲಿ ಎಂಬುದನ್ನು ಸ್ಪಷ್ಟಪಡಿಸಿಲ್ಲ ಅಥವಾ ನಿಖರ ಠೇವಣಿ ಹೊರತುಪಡಿಸಿ ಅದನ್ನು ಹೇಳುವುದು ಯಾರಿಂದಲೂ ಅಸಾಧ್ಯ ಕೂಡಾ. ಉದಾಹರಣೆಗೆ, ₹2 ಲಕ್ಷ ಮೊತ್ತವು 5 ವರ್ಷಗಳಲ್ಲಿ ಎರಡು ಪಟ್ಟು ಆಗುತ್ತದೆ ಎಂದರೆ, ವರ್ಷಕ್ಕೆ ಸರಾಸರಿ ಲಾಭ ಸುಮಾರು ಶೇ 14.87ರಷ್ಟು ಹಣ ವೃದ್ಧಿ ಆಗಿರಬೇಕು ಎಂದರ್ಥ. ಈ ಮಟ್ಟದ ಲಾಭವು ಕೆಲವು ಉತ್ತಮ ಈಕ್ವಿಟಿ ಫಂಡ್‌ಗಳಲ್ಲಿ ಸಾಧ್ಯವಾದರೂ, ಅದು ಯಾವತ್ತೂ ಖಚಿತ ಎಂದು ಹೇಳಲು ಸಾಧ್ಯವಿಲ್ಲ. ಅದೇ ರೀತಿ ಇದನ್ನು ಅಲ್ಲಗಳೆಯುವಂತೆಯೂ ಇಲ್ಲ. ಕಾರಣ, ಇದು ನಾವು ವಿಮರ್ಶಿಸುವ ಸಮಯದ ಮಾರುಕಟ್ಟೆಯನ್ನು ಅವಲಂಬಿಸಿದೆ. ಹೀಗಾಗಿ ನೀವು ಯಾವ ವರ್ಗದ ಹೂಡಿಕೆಯನ್ನು ಆಯ್ಕೆ ಮಾಡಿಕೊಂಡಿದ್ದೀರಿ ಎಂಬುದನ್ನು ಆಧರಿಸಿ ಇದು ನಿರ್ಣಯವಾಗುತ್ತದೆ.

ಹೂಡಿಕೆ ಜಗತ್ತಿನ ಒಂದು ಮೂಲಭೂತ ನಿಯಮ ಎಂದರೆ–ರಿಸ್ಕ್ ಹೆಚ್ಚಿದಷ್ಟೂ ಲಾಭದ ಸಾಧ್ಯತೆ ಹೆಚ್ಚುವುದು. ಮಾರ್ಕೆಟ್ ಆಧಾರಿತ ಫಂಡ್‌ಗಳಲ್ಲಿ ಏರಿಳಿತಗಳು ಸಹಜ. ಆದ್ದರಿಂದ ದೀರ್ಘಾವಧಿ ಹೂಡಿಕೆ (5 ವರ್ಷದಿಂದ 10 ವರ್ಷ) ಮಾಡಿದರೆ ಮಾತ್ರ ಉತ್ತಮ ಲಾಭ ಪಡೆಯುವ ಸಾಧ್ಯತೆ ಹೆಚ್ಚುತ್ತದೆ. ಆದರೆ ಹಣವನ್ನು ದೀರ್ಘಕಾಲ ನಿರ್ವಹಣೆ ಮಾಡಬೇಕು.

ಸ್ಥಿರ ಬಡ್ಡಿ ನೀಡುವ ಠೇವಣಿ ತರಹದ ಕಡಿಮೆ ರಿಸ್ಕ್ ಇರುವ ಹೂಡಿಕೆಗಳಲ್ಲಿ ಶೇಕಡ 6-7ರ ದರದಲ್ಲಿ ಹಣ ಎರಡು ಪಟ್ಟು ಆಗಲು ಸಾಮಾನ್ಯವಾಗಿ 10ರಿಂದ 12 ವರ್ಷಗಳಷ್ಟು ಸಮಯ ಬೇಕಾಗುತ್ತದೆ. ಆದ್ದರಿಂದ ಸುರಕ್ಷಿತವಾಗಿ ಅಥವಾ ಬೇಗನೆ ಎರಡು ಪಟ್ಟು ಹಣ ಆಗಲು ಸಾಕಷ್ಟು ಕಾಯಬೇಕಾಗುತ್ತದೆ ಮತ್ತು ಅನಿಶ್ಚಿತತೆ ಇದ್ದಾಗ ಮಾಹಿತಿ ಪರಾಮರ್ಶಿಸಬೇಕಾಗುತ್ತದೆ. ನಿಮ್ಮ ತಾಯಿಯ ಹೂಡಿಕೆ ದೀರ್ಘಾವಧಿಗೆ ಆಗಿರುವುದರಿಂದ, ಸರಿಯಾದ ಈಕ್ವಿಟಿ ಫಂಡ್ ಆಯ್ಕೆ ಮಾಡಿ ಹಾಗೂ ಒಂದೇ ಬಾರಿ ಹೂಡಿಕೆ ಮಾಡುವುದಕ್ಕಿಂತ ಹಲವು ಹಂತಗಳಲ್ಲಿ ಮುಂದಿನ ಹೂಡಿಕೆಗಳನ್ನು ಮಾಡುವುದು ಸೂಕ್ತ.

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001.
ಇ-ಮೇಲ್: businessdesk@prajavani.co.in

ಗುರುವಾರ • ನವೆಂಬರ್ 20, 2025
ಪ್ರಜಾವಾಣಿ
ಪ್ರಜಾಪ್ಲಸ್
| ಮನರಂಜನೆ | ಜಾಹೀರಾತು | ಪ್ರೋತ್ಸಾಹ | ಉದ್ಯಮ ಅಭಿವೃದ್ಧಿ

‘ಇವನೇ ಶ್ರೀನಿವಾಸ’ಗೆ ಶಿವಣ್ಣ ಸಾಥ್

ಪ್ರತಾಪ್

ಪೌರಕಾರ್ಮಿಕನಾಗಿ ಕೆಲಸ ಮಾಡುತ್ತಿರುವ ಪ್ರತಾಪ್ ನಾಯಕನಾಗಿ ಕಾಣಿಸಿಕೊಂಡಿರುವ ‘ಇವನೇ ಶ್ರೀನಿವಾಸ’ ಚಿತ್ರದ ಫಸ್ಟ್‌ಲುಕ್ ಹಾಗೂ ಟೀಸರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ನಟ ಶಿವರಾಜ್‌ಕುಮಾರ್ ಚಿತ್ರದ ಟೀಸರ್ ಬಿಡುಗಡೆಗೊಳಿಸಿ ತಂಡಕ್ಕೆ ಶುಭ ಹಾರೈಸಿದರು.

ಈ ಚಿತ್ರಕ್ಕೆ ಎಸ್.ಕುಮಾರ್ ಚಿತ್ರಕಥೆ, ಸಂಭಾಷಣೆ ಬರೆದು ನಿರ್ದೇಶನ ಮಾಡಿದ್ದಾರೆ. ‘ಸೋಷಿಯಲ್ ಮೀಡಿಯಾದಿಂದ ಏನೇನೆಲ್ಲ ತೊಂದರೆ ಆಗುತ್ತಿದೆ ಎಂಬುದನ್ನು ಈ ಚಿತ್ರದಲ್ಲಿ ಹೇಳಿದ್ದೇವೆ. ಪ್ರತಾಪ್ ನಾಯಕನಾಗಿ ನಟಿಸುವ ಜತೆಗೆ ನಿರ್ಮಾಣ ಕೂಡ ಮಾಡಿದ್ದಾರೆ. ಪ್ರತಿದಿನ ಸಾಮಾಜಿಕ ಜಾಲತಾಣಗಳ ಮೂಲಕ ನಡೆಯುತ್ತಿರುವ ಕ್ರೈಂ, ವಂಚನೆಯ ಬಗ್ಗೆ ಈ ಚಿತ್ರದ ಮೂಲಕ ಹೇಳಹೊರಟಿದ್ದೇವೆ. ನಮ್ಮ ವೈಯಕ್ತಿಕ ವಿಚಾರಗಳನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಅಪ್‌ಲೋಡ್ ಮಾಡಬಾರದು. ಇದರಿಂದ ನಮ್ಮ ಮಾಹಿತಿ ತಿಳಿದುಕೊಳ್ಳುವ ವಂಚಕರು ಹೇಗೆ ಕಿರುಕುಳ, ತೊಂದರೆ ನೀಡುತ್ತಾರೆ ಎಂಬುದೇ ಚಿತ್ರಕಥೆ’ ಎಂದರು ನಿರ್ದೇಶಕ.

ನಾಯಕಿಯಾಗಿ ಪ್ರಿಯಾ ಆರಾಧ್ಯ ನಟಿಸಿದ್ದಾರೆ. ಮೋಹನ್ ಜುನೇಜಾ ಅವರು ನಟಿಸಿದ ಕೊನೆಯ ಚಿತ್ರವಿದು. ಚಿಲ್ಲರ್ ಮಂಜ, ಸುಶ್ಮಿತಾ ಉಳಿದ ಪಾತ್ರಗಳಲ್ಲಿದ್ದಾರೆ. ಬೆಂಗಳೂರು, ಮೈಸೂರು, ಕೋಲಾರ, ತುಮಕೂರು ಸುತ್ತಮುತ್ತ ಚಿತ್ರೀಕರಣಗೊಂಡಿದೆ.

ಚಿತ್ರದಲ್ಲಿ ಮೂರು ಸಾಹಸ ದೃಶ್ಯಗಳು ಹಾಗೂ ಮೂರು ಹಾಡುಗಳಿದ್ದು ಹರ್ಷ ಕೋಗೋಡ್, ಶ್ರೀಹರಿ, ಸುಭಾಶ್ ಸಂಗೀತವಿದೆ. ಮುಂಜಾನೆ ಮಂಜು ಛಾಯಾಚಿತ್ರಗ್ರಹಣ, ಅರವಿಂದರಾಜ್ ಸಂಕಲನ ಚಿತ್ರಕ್ಕಿದೆ. ❖

ನೆನಪುಗಳ ಮಾತು ಮಧುರ ಟ್ರೇಲರ್


ರೇಖಾ ರಮೇಶ್

ಸಿನಿ ಪತ್ರಕರ್ತ ಅಫ್ಜಲ್ ಕಥೆ, ಚಿತ್ರಕಥೆ ಬರೆದು ನಿರ್ದೇಶಿಸಿರುವ ‘ನೆನಪುಗಳ ಮಾತು ಮಧುರ’ ಚಿತ್ರದ ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ.

‘ನಾಲ್ಕು ಕಥೆಗಳ ಸಂಗಮ. ಒಂದು ಕಥೆ ಇಪ್ಪತ್ತೈದು ನಿಮಿಷಗಳ ಅವಧಿ ಇರುತ್ತದೆ. ನಾಲ್ಕು ಕಥೆಗಳು ಬೇರೆಯದೆ ಆಯಾಮದಲ್ಲಿ ಸಾಗುತ್ತವೆ. ನಾವು ಎದುರು-ಸುತ್ತಿರುವ ಹಾಗೂ ನೋಡುತ್ತಿರುವ ಕೆಲವು ವಿಷಯಗಳೆ ಈ ಚಿತ್ರದ ಕಥೆಗೆ ಸ್ಫೂರ್ತಿ. ಇದು ನನ್ನ ನಿರ್ದೇಶನದ ಮೂರನೇ ಚಿತ್ರ. ಸದ್ಯದಲ್ಲೇ ಚಿತ್ರ ತೆರೆಗೆ ಬರಲಿದೆ’ ಎಂದರು ನಿರ್ದೇಶಕ.

ಸೆವೆನ್ ರಾಜ್ ನಾಯಕನಾಗಿ ನಟಿಸುವುದರ ಜತೆಗೆ ಬಂಡವಾಳವನ್ನೂ ಹೂಡಿದ್ದಾರೆ. ವಸಿಷ್ಠ ಬಂಟನೂರು, ರಣವೀರ್, ರಾಜ್ ಪ್ರಭು, ಅಂಜಲಿ, ರೇಖಾ ರಮೇಶ್ ಮುಂತಾದವರು ಚಿತ್ರದಲ್ಲಿದ್ದಾರೆ.

ನಾಗಶೇಖರ್ ಹೊಸ ಚಿತ್ರಕ್ಕೆ ಚಾಲನೆ

ನಿರ್ದೇಶಕ ನಾಗಶೇಖರ್ ನಟ ಕೂಡ ಹೌದು. ಅವರು ನಾಯಕನಾಗಿ ನಟಿಸುತ್ತಿರುವ ‘ವಾರ್ತೆಗಳು ಓದುತ್ತಿರುವವರು ಶಂಕರ್‌ನಾಗ್’ ಚಿತ್ರ ಇತ್ತೀಚೆಗಷ್ಟೇ ಸೆಟ್ಟೇರಿದೆ. ಈ ಚಿತ್ರಕ್ಕೆ ಜಿಯಾ ಉಲ್ಲಾ ಖಾನ್ ಅವರು ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ.

ಹಾಸ್ಯ ಕಲಾವಿದನಾಗಿ ಚಿತ್ರರಂಗಕ್ಕೆ ಬಂದ ನಾಗಶೇಖರ್ ಈ ಹಿಂದೆ ‘ಮೈನಾ’, ‘ಸಂಜು ವೆಡ್ಸ್ ಗೀತಾ’ ಮೊದಲಾದ ಸೂಪರ್‌ಹಿಟ್ ಚಿತ್ರಗಳನ್ನು ನೀರ್ದೇಶಿಸಿದ್ದರು.

ವಿ.ಎನ್. ಕಿರಣ್ (ವಾಸಣ್ಣ) ಅರ್ಪಿಸುತ್ತಿರುವ ಈ ಚಿತ್ರಕ್ಕೆ ರಾಮ್ ಚಿರು ಅವರು ಬಂಡವಾಳ ಹೂಡುತ್ತಿದ್ದಾರೆ. ಇದೇ ತಿಂಗಳಿನಿಂದಲೇ ಪೂರ್ಣಪ್ರಮಾಣದಲ್ಲಿ ಚಿತ್ರೀಕರಣ ಪ್ರಾರಂಭವಾಗಲಿದೆ ಎಂದು ಚಿತ್ರತಂಡ ಹೇಳಿದೆ.

ಚಿತ್ರದ ಸಹ ನಿರ್ಮಾಣ, ಸಂಗೀತ ನಿರ್ದೇಶನ ಕೂಡ ನಾಗಶೇಖರ್ ಅವರದ್ದೆ. ಚಿತ್ರದ ಉಳಿದ ತಾಂತ್ರಿಕವರ್ಗ ಹಾಗೂ ಕಲಾವಿದರ ಬಗ್ಗೆ ಸದ್ಯದಲ್ಲೇ ಮಾಹಿತಿ ನೀಡುವುದಾಗಿ ತಂಡ ಹೇಳಿದೆ.

ಹೊರಬಂತು ‘ಚಿತ್ರಲಹರಿ’ ಟೀಸರ್

ಕೆ.ಆರ್ ಸುರೇಶ್ ನಿರ್ದೇಶನದ ‘ಚಿತ್ರಲಹರಿ’ ಚಿತ್ರದ ಟೀಸರ್ ಹಾಗೂ ಹಾಡುಗಳು ಇತ್ತೀಚೆಗಷ್ಟೇ ಬಿಡುಗಡೆಗೊಂಡಿವೆ.

‘ಎರಡು ಕಥೆಗಳ ಸುತ್ತ ಈ ಚಿತ್ರದ ಕಥೆ ಸಾಗುತ್ತದೆ. ಆದರೆ ಕ್ಲೈಮ್ಯಾಕ್ಸ್ ಒಂದೇ ಆಗಿರುತ್ತದೆ. ಕೋವಿಡ್ ಸಮಯದಲ್ಲೇ ಸಿದ್ಧವಾದ ಕಥೆಯಿದು. ಆದರೆ ಕಳೆದ ವರ್ಷ ಚಿತ್ರೀಕರಣ ಪ್ರಾರಂಭವಾಯಿತು. ಬೆಂಗಳೂರಿನಲ್ಲೇ ಬಹುತೇಕ ಚಿತ್ರೀಕರಣ ನಡೆದಿದೆ. ಚಿತ್ರ ತೆರೆಗೆ ಬರಲು ಸಿದ್ಧವಿದೆ. ಪ್ರೀತಿ, ಆ್ಯಕ್ಷನ್, ಸೆಂಟಿಮೆಂಟ್...ಹೀಗೆ ನೋಡುಗರಿಗೆ ಬೇಕಾದ ಎಲ್ಲಾ ಅಂಶಗಳಿರುವ ಚಿತ್ರ’ ಎಂದರು ನಿರ್ದೇಶಕ.

ಕೇಸರಿ ನಂದನ ಸಿನಿ ಕ್ರಿಯೇಷನ್ಸ್ ಲಾಂಛನದಲ್ಲಿ ನವನೀತ ಲಕ್ಷ್ಮೀ ನಿರ್ಮಿಸಿದ್ದಾರೆ. ವರುಣ್ ದೇವಯ್ಯ ಹಾಗೂ ಶ್ರೀಕಾಂತ್ ನಾಯಕರು. ಗಾನ್ವಿ ಹಾಗೂ ಹರ್ಷಿತ ನಾಯಕಿಯರು. ಸೂರ್ಯತೇಜ, ಶ್ರೀನಾಥ್, ಪ್ರದೀಪ್, ಚಂದ್ರು, ರಂಗ, ಸತೀಶ್ ಗೌಡ, ತೇಜಸ್ವಿನಿ, ಪದ್ಮ ಮುಂತಾದವರು ತಾರಾಬಳಗ-ದಲ್ಲಿದ್ದಾರೆ.

ಸತೀಶ್ ಸಂಗೀತ, ಸೆಂಥಿಲ್ ಕುಮಾರ್ ಛಾಯಾಚಿತ್ರಗ್ರಹಣವಿದೆ.

ನತಾಶಾ ಸಾಗರ್ ನಿಧನ



ಬೆಂಗಳೂರು: ಜೂನಿಯರ್ ಅಥ್ಲೆಟಿಕ್ಸ್ ವಿಭಾಗದ ಮಾಜಿ ಅಥ್ಲೀಟ್ ನತಾಶಾ ಸಾಗರ್ (36) ಅವರು ಅಲ್ಪಕಾಲದ ಅನಾರೋಗ್ಯದಿಂದಾಗಿ ಮಂಗಳವಾರ ನಿಧನರಾದರು.

ದಯಾನಂದ ಸಾಗರ್ ವಿಶ್ವ ವಿದ್ಯಾಲಯದ ಕುಲಪತಿ ಡಾ. ಡಿ ಹೇಮಚಂದ್ರ ಸಾಗರ್ ಮತ್ತು ಗೀತಾ ಎಚ್. ಸಾಗರ್ ಅವರ ಪುತ್ರಿ ನತಾಶಾ ಅವರು 2003 ರಿಂದ 2007ರಲ್ಲಿ ಜೂನಿಯರ್ ಅಥ್ಲೆಟಿಕ್ಸ್‌ನಲ್ಲಿ ಉತ್ತಮ ಸಾಧನೆ ಮಾಡಿದ್ದವರು.

2003ರಲ್ಲಿ ಶಿವಮೊಗ್ಗದಲ್ಲಿ ನಡೆದಿದ್ದ 14 ವರ್ಷದೊಳಗಿನವರ ರಾಷ್ಟ್ರೀಯ ಜೂನಿಯರ್ ಟ್ರಯಥ್ಲಾನ್‌ನಲ್ಲಿ ಚಿನ್ನದ ಪದಕ ಜಯಿಸಿದ್ದರು. ಲಾಂಗ್ ಜಂಪ್, ಹೈಜಂಪ್, ಟ್ರಿಪಲ್ ಜಂಪ್, 100 ಮೀ. ಹರ್ಡಲ್ಸ್ ಮತ್ತು ಪೆಂಟಾಥ್ಲಾನ್‌ನಲ್ಲಿ ಅವರು ಪದಕಗಳನ್ನು ಜಯಿಸಿದ್ದರು.

ನಿಖತ್, ಜೈಸ್ಮಿನ್ ಫೈನಲ್‌ಗೆ ಲಗ್ಗೆ

ಬಾಕ್ಸಿಂಗ್ ವಿಶ್ವಕಪ್: ಪ್ರಶಸ್ತಿ ಸುತ್ತಿಗೆ ಹಿತೇಶ್, ಸಚಿನ್

ಗ್ರೇಟರ್ ನೊಯಿಡಾ (ಪಿಟಿಐ): ಸುಮಾರು ಇಪ್ಪತ್ತೊಂದು ತಿಂಗಳುಗಳಿಂದ ಪದಕ ಜಯದ ಬರ ಎದುರಿಸಿದ್ದ ಭಾರತದ ನಿಕತ್ ಜರೀನ್ ಕಡೆಗೂ ಬಾಕ್ಸಿಂಗ್ ವಿಶ್ವಕಪ್ ಫೈನಲ್ ಪ್ರವೇಶಿಸಿದರು. ಇದರೊಂದಿಗೆ ಅವರು ಪದಕ ಖಚಿತಪಡಿಸಿಕೊಂಡರು.

ನಿಕತ್ ಅವರಲ್ಲದೇ ಜೈಸ್ಮಿನ್ ಲಂಬೋರಿಯಾ, ಜಾದುಮಣಿ ಸಿಂಗ್ ಮಂದೆನಬಮ್, ಪವನ್ ಬರ್ತವಾಲ್, ಸಚಿನ್ ಸಿವಾಚ್ ಮತ್ತು ಹಿತೇಶ್ ಗುಲಿಯಾ ಅವರೂ ಬೇರೆ ಬೇರೆ ತೂಕದ ವಿಭಾಗಗಳಲ್ಲಿ ಫೈನಲ್ ಪ್ರವೇಶಿಸಿದ್ದಾರೆ.

ಎರಡು ಬಾರಿಯ ವಿಶ್ವ ಚಾಂಪಿಯನ್ ನಿಕತ್ ಅವರು ಹೋದ ವರ್ಷದ ಫೆಬ್ರುವರಿಯಲ್ಲಿ ನಡೆದಿದ್ದ ಸ್ಟ್ರಾಂಡ್ಜಾ ಸ್ಮಾರಕ ಚಾಂಪಿಯನ್‌ಷಿಪ್‌ನಲ್ಲಿ ಪದಕ ಜಯಿಸಿದ್ದೇ ಕೊನೆ. ಅಲ್ಲದೇ ಕಳೆದ ಒಂದು ವರ್ಷದಿಂದ ಭುಜದ ಗಾಯದಿಂದಾಗಿ ಕಣಕ್ಕಿಳಿದಿರಲಿಲ್ಲ. ಹೋದ ಸೆಪ್ಟೆಂಬರ್‌ನಲ್ಲಿ ಅವರು ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ರಿಂಗ್‌ಗೆ ಇಳಿದಿದ್ದರು.

ಅವರು ಬುಧವಾರ ನಡೆದ 51ಕೆ.ಜಿ. ಸೆಮಿಫೈನಲ್‌ನಲ್ಲಿ ಉಜ್ಬೇಕಿಸ್ತಾನದ ಜನೀವ್ ಗುಲ್ಸೇವರ್ ವಿರುದ್ಧ ಗೆದ್ದರು. ಚಿನ್ನದ ಪದಕ ಸುತ್ತಿನಲ್ಲಿ ನಿಕತ್ ಅವರು ಚೈನಿಸ್ ತೈಪೆಯ ಗುವಾ ಯೀ ಯುವಾನ್ ವಿರುದ್ಧ ಸೆಣಸಲಿದ್ದಾರೆ.

ಮಹಿಳೆಯರ 57 ಕೆ.ಜಿ ವಿಭಾಗದ ಹಾಲಿ ವಿಶ್ವ ಚಾಂಪಿಯನ್ ಜೈಸ್ಮಿನ್ ನಾಲ್ಕರ ಘಟ್ಟದಲ್ಲಿ 5–0ಯಿಂದ ಕಜಕಸ್ತಾನದ ಉಲ್ಜನ್ ಸರ್ಸೆನಬೆಕ್ ವಿರುದ್ಧ ಗೆದ್ದರು.

ಗ್ರೇಟರ್ ನೊಯಿಡಾದಲ್ಲಿ ಬುಧವಾರ ನಡೆದ ವಿಶ್ವಕಪ್ ಬಾಕ್ಸಿಂಗ್ ಸೆಮಿಫೈನಲ್‌ನಲ್ಲಿ ಭಾರತದ ನಿಕತ್ ಜರೀನ್ (ಬಲ) ಅವರು ತಮ್ಮ ಎದುರಾಳಿ ಉಜ್ಬೇಕಿಸ್ತಾನದ ಹನೀವಾ ಗುಲ್ಸೇವರ್ ಅವರಿಗೆ ಪಂಚ್ ಮಾಡಿದರು

ಪುರುಷರ 50 ಕೆ.ಜಿ. ವಿಭಾಗದ ಸೆಮಿಫೈನಲ್‌ನಲ್ಲಿ ಜಾದುಮಣಿ ಸಿಂಗ್ ಅವರು ಆಸ್ಟ್ರೇಲಿಯಾದ ಒಮರ್ ಇಜಾಜ್ ವಿರುದ್ಧ ಗೆದ್ದರು. ಪವನ್ ಭರ್ತವಾಲಾ (55ಕೆಜಿ), ಸಚಿನ್ ಸಿವಾಚ್ (60 ಕೆ.ಜಿ) ಮತ್ತು ಹಿತೇಶ್ ಗುಲಿಯಾ (70 ಕೆ.ಜಿ) ಕೂಡ ಫೈನಲ್ ಪ್ರವೇಶಿಸಿದ್ದಾರೆ.

ನೀರಜ್ ಫೋಗಟ್ (65 ಕೆ.ಜಿ), ಜುಗನೂ (85 ಕೆ.ಜಿ) ಮತ್ತು ಸುಮಿತ್ ಕುಂದು (75 ಕೆ.ಜಿ) ಅವರು ಸೋಲಿನೊಂದಿಗೆ ಟೂರ್ನಿಯಿಂದ ನಿರ್ಗಮಿಸಿದರು.

ಗೋವಾ ಚಿತ್ರೋತ್ಸವ ಇಂದು ಆರಂಭ

ಮಾಂಡವಿ ನದಿ ದಂಡೆಯ ಉದ್ದಕ್ಕೂ ಅದ್ದೂರಿ ಮೆರವಣಿಗೆ

• ಪ್ರೇಮಕುಮಾರ್ ಹರಿಯಬ್ಬೆ

ಪಣಜಿ: ಕಳೆದ ಕೆಲವು ವರ್ಷಗಳಿಂದ ಒಳಾಂಗಣದಲ್ಲಿ ನಡೆಯುತ್ತಿದ್ದ ಗೋವಾ ಅಂತರರಾಷ್ಟ್ರೀಯ ಚಲನಚಿತ್ರೋತ್ಸವದ ಉದ್ಘಾಟನೆ ಈ ವರ್ಷ ಹೊರಾಂಗಣದಲ್ಲಿ ನಡೆಯಲಿದೆ.

ಪಣಜಿಯ ದಯಾನಂದ ಬಾಂದೋಡ್ಕರ್ ರಸ್ತೆಯಲ್ಲಿರುವ ಗೋವಾ ಸರ್ಕಾರದ ಹಳೇ ಸಚಿವಾಲಯದ ಮುಂಭಾಗದಲ್ಲಿ ಗುರುವಾರ ಸಂಜೆ ವರ್ಣರಂಜಿತ ಮೆರವಣಿಗೆಯ ಉದ್ಘಾಟನೆಯೊಂದಿಗೆ ಚಿತ್ರೋತ್ಸವ ಆರಂಭವಾಗಲಿದೆ. ಇದು ಐವತ್ತಾರನೇಯ ಚಿತ್ರೋತ್ಸವ.

ಕೇಂದ್ರ ಪ್ರಸಾರ ಖಾತೆ ರಾಜ್ಯ ಸಚಿವ ಎಲ್ ಮುರುಗನ್, ಮುಖ್ಯಮಂತ್ರಿ ಪ್ರಮೋದ್ ಸಾವಂತ್, ಭಾರತೀಯ ಸಿನಿಮಾರಂಗದ ಗಣ್ಯರು, ಚಿತ್ರೋತ್ಸವದ ಸಂಘಟಕರು ಈ ಸಂದರ್ಭದಲ್ಲಿ ಉಪಸ್ಥಿತರಿರುವರು.

ಮಾಂಡವಿ ನದಿ ದಂಡೆಯ ಉದ್ದಕ್ಕೂ ಮೂರೂವರೆ ಕಿಲೋಮೀಟರ್ ಕ್ರಮಿಸುವ ಮೆರವಣಿಗೆಯಲ್ಲಿ ನೂರಕ್ಕೂ ಹೆಚ್ಚು ಜಾನಪದ ಕಲಾ ತಂಡಗಳು, ನೃತ್ಯ ಮತ್ತು ಗಾಯನ ಕಲಾವಿದರು ಪಾಲ್ಗೊಳ್ಳುವರು. ಭಾರತೀಯ ಸಿನಿಮಾದ ಹೆಜ್ಜೆಗಳನ್ನು ಬಿಂಬಿಸುವ ಸ್ತಬ್ಧಚಿತ್ರಗಳು ಮೆರವಣಿಗೆಯಲ್ಲಿ ಸಾಗಲಿವೆ. ಮೆರವಣಿಗೆ ವೀಕ್ಷಿಸಲು ಸಾವಿರಾರು ಜನರಿಗೆ ವ್ಯವಸ್ಥೆ ಕಲ್ಪಿಸಲಾಗಿದೆ. ಕಲಾ ಅಕಾಡೆಮಿ ಬಳಿ ಮೆರವಣಿಗೆ ಕೊನೆಗೊಳ್ಳಲಿದೆ.

ಉದ್ಘಾಟನೆ ಬಳಿಕ ಪಣಜಿ, ಮಡಗಾಂವ್, ಪೊರ್ವರಿಂಗಳ ಹದಿಮೂರು ತೆರೆಗಳಲ್ಲಿ ಬ್ರೆಜಿಲ್ ದೇಶದ, ಗೇಬ್ರಿಯಲ್ ಮಸ್ಕಾರೊ ನಿರ್ದೇಶನದ ದಿ ಬ್ಲೂ ಟ್ರಯಲ್ ಚಿತ್ರ ಪ್ರದರ್ಶನಗೊಳ್ಳಲಿದೆ.

ನ.21ರಿಂದ 28ರ ವರೆಗೆ 81 ದೇಶಗಳ 240 ಕ್ಕೂ ಹೆಚ್ಚು ಸಿನಿಮಾಗಳು ಪ್ರದರ್ಶನಗೊಳ್ಳಲಿವೆ. ಜಪಾನ್, ಚಿತ್ರೋತ್ಸವದ ಫೋಕಸ್ ರಾಷ್ಟ್ರವಾಗಿದ್ದು, ಆ ದೇಶದ ಆರು ಚಿತ್ರಗಳಲ್ಲದೆ ಸ್ಪೇನ್ ಮತ್ತು ಆಸ್ಟ್ರೇಲಿಯಾ ದೇಶಗಳ ಚಿತ್ರಗಳ ವಿಶೇಷ ಪ್ರದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದೆ. ಚಿತ್ರೋತ್ಸವದಲ್ಲಿ 44 ವಿದೇಶಿ ಮತ್ತು 13 ಭಾರತೀಯ ಸಿನಿಮಾಗಳ ಮೊದಲ (ಪ್ರೀಮಿಯರ್) ಪ್ರದರ್ಶ-

ನಗಳು ನಡೆಯಲಿವೆ. ಭಾರತೀಯ ಪನೋರಮಾ ವಿಭಾಗದಲ್ಲಿ ಕನ್ನಡದ ವನ್ಯ (ನಿ:ದೇವೇಂದ್ರ ಬಡಿಗೇರ್), ಸು ಫ್ರಮ್ ಸೋ (ನಿ:ಪ್ರಕಾಶ್ ಜೆ ಪಿ ತುಮಿನಾಡ್) ಮತ್ತು ತುಳು ಭಾಷೆಯ ಇಂಬು (ನಿ:ಶಿವಧ್ವಜ್ ಶೆಟ್ಟಿ) ಸೇರಿದಂತೆ ಒಟ್ಟು 20 ಕಥಾಚಿತ್ರಗಳು ಮತ್ತು 20 ನಾನ್‌ಫೀಚರ್ ಚಿತ್ರಗಳು ಪ್ರದರ್ಶನಗೊಳ್ಳಲಿವೆ. ತಮಿಳಿನ ಅಮರನ್ ಪನೋರಮಾ ವಿಭಾಗದ ಉದ್ಘಾಟನಾ ಚಿತ್ರವಾಗಿದ್ದು, ಅದು ಸ್ಪರ್ಧಾ ವಿಭಾಗದಲ್ಲೂ ಸ್ಥಾನ ಪಡೆದಿದೆ. ಈ ವಿಭಾಗದಲ್ಲಿ 15 ಚಿತ್ರಗಳು ಪ್ರದರ್ಶನಗೊಳ್ಳಲಿವೆ.

ಭಾರತೀಯ ಸಿನಿಮಾರಂಗಕ್ಕೆ ವಿಶೇಷ ಕೊಡುಗೆ ನೀಡಿದ ಮತ್ತು ಈ ವರ್ಷ ಶತಮಾನೋತ್ಸವ ವರ್ಷಾಚರಣೆ ನಡೆಯುತ್ತಿರುವ ನಟ ನಿರ್ದೇಶಕ ಗುರುದತ್, ನಿರ್ಮಾಪಕ, ನಿರ್ದೇಶಕ ರಾಜ್‌ಕೋಸ್ಲಾ, ಹೊಸ ಅಲೆಯ ಚಿತ್ರಗಳ ನಿರ್ದೇಶಕ ಋತ್ವಿಕ್ ಘಟಕ್, ತೆಲುಗು ನಟಿ ಪಿ. ಭಾನುಮತಿ, ಸಂಗೀತ ನಿರ್ದೇಶಕರಾದ ಭೂಪೇನ್ ಹಜಾರಿಕಾ ಮತ್ತು ಸಲೀಲ್ ಚೌಧರಿ ಅವರ ಚಿತ್ರಗಳು ಪ್ರದರ್ಶನಗೊಳ್ಳಲಿವೆ.

ನ.28ರಂದು ನಡೆಯುವ ಸಮಾರೋಪ ಸಮಾರಂಭದಲ್ಲಿ ಕಳೆದ 50 ವರ್ಷಗಳ ಸಿನಿಮಾ ಸಾಧನೆಗಾಗಿ ನಾಯಕ ನಟರಾದ ರಜನಿಕಾಂತ್ ಮತ್ತು ನಂದಮೂರಿ ಬಾಲಕೃಷ್ಣ ಅವರನ್ನು ಗೌರವಿಸುವ ಕಾರ್ಯಕ್ರಮವಿದೆ. ಉಳಿದಂತೆ ಫಿಲಂ ಬಜಾರ್ ಮತ್ತು ಭವಿಷ್ಯದ ಸಿನಿಮಾ ಪ್ರತಿಭಾವಂತರ ಜತೆ ವಿಚಾರ ವಿನಿಮಯ ಮತ್ತು ಸಿನಿಮಾ ಕುರಿತು ಸಂವಾದ, ಚರ್ಚೆಗಳಿಗೆ ವೇದಿಕೆ ಕಲ್ಪಿಸಲಾಗಿದೆ.

ಚಿಟಿಕೆ ಸುದ್ದಿ

ವಿಶ್ವಕಪ್‌ಗೆ ಅರ್ಹತೆ ಪಡೆದ ಕ್ಯುರಸಾವೊ!

ಕಿಂಗ್‌ಸ್ಟನ್ (ಜಮೈಕಾ), (ಎಪಿ): ಜನಸಂಖ್ಯೆ ಆಧಾರವಾಗಿಟ್ಟುಕೊಂಡು ನೋಡಿದರೆ, ಕೆರೀಬಿಯನ್ ದ್ವೀಪ ಸಮೂಹದ ಕ್ಯುರಸಾವೊ 2026ರ ಫಿಫಾ ವಿಶ್ವಕಪ್ ಫುಟ್‌ಬಾಲ್‌ಗೆ ಅರ್ಹತೆ ಪಡೆದ ಅತಿ ಚಿಕ್ಕ ದೇಶವೆನಿಸಿದೆ.

ಡಚ್ಚರ ಅಧೀನದಲ್ಲಿದ್ದ, ಈಗ ಸ್ವಾಯತ್ತ ರಾಷ್ಟ್ರವಾಗಿರುವ ಕ್ಯುರಸಾವೊದ ಜನಸಂಖ್ಯೆ ಕೇವಲ 1,56,000. ಈ ಹಿಂದೆ ಈ ದಾಖಲೆ ಐಸ್‌ಲ್ಯಾಂಡ್ (ಜನಸಂಖ್ಯೆ 3,50,000) ಹೆಸರಿನಲ್ಲಿತ್ತು. ಐಸ್‌ಲ್ಯಾಂಡ್ 2018ರ ರಷ್ಯಾ ವಿಶ್ವಕಪ್‌ನಲ್ಲಿ ಆಡಿತ್ತು

ನೆದರ್ಲೆಂಡ್ಸ್‌ನಲ್ಲಿ ಹುಟ್ಟಿಬೆಳೆದ ಆಟಗಾರರನ್ನೇ ನೆಚ್ಚಿಕೊಂಡು ಈ ದ್ವೀಪದ ತಂಡ ಕಟ್ಟಲಾಗಿದೆ.

2016ರಲ್ಲಿ ನೆದರ್ಲೆಂಡ್ಸ್ ಪರ ವಿಶ್ವಕಪ್ ಅರ್ಹತಾ ಸುತ್ತು ಆಡಿದ್ದ ಡಿಫೆಂಡರ್ ಜೋಶು ಬ್ರೆನೆಟ್ ಸಹ ಕ್ಯುರಸಾವೊ ತಂಡದಲ್ಲಿದ್ದಾರೆ.

ಮ್ಯಾಂಚೆಸ್ಟರ್ ಯುನೈಟೆಡ್‌ಗೆ ಆಡಿದ ತಹಿತ್ ಚೊಂಗ್ ಅವರು ಕ್ಯುರಸಾವೊದಲ್ಲಿ ಜನಿಸಿದ ಆಟಗಾರ.

ಕಾಲ್ತುಳಿತ: ದೋಷಾರೋಪ ಪಟ್ಟಿ ಸಿದ್ಧ

ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ದುರಂತ: ಆರ್‌ಸಿಬಿ, ಡಿಎನ್‌ಎ, ಕೆಎಸ್‌ಸಿಎ ಹೊಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಂ.ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಜೂನ್ 4ರಂದು ಸಂಭವಿಸಿದ್ದ ಕಾಲ್ತುಳಿತ ದುರಂತ ಪ್ರಕರಣದ ತನಿಖೆ ನಡೆಸಿರುವ ಸಿಐಡಿ, ನ್ಯಾಯಾಲಯಕ್ಕೆ ಅಂತಿಮ ದೋಷಾರೋಪ ಪಟ್ಟಿ ಸಲ್ಲಿಸಲು ಸಿದ್ಧತೆ ಮಾಡಿಕೊಂಡಿದೆ. 2,200 ಪುಟಗಳ ದೋಷಾರೋಪ ಪಟ್ಟಿ ಸಿದ್ಧವಾಗಿದೆ.

ಕಾಲ್ತುಳಿತದಿಂದಾಗಿ 11 ಮಂದಿ ಮೃತಪಟ್ಟಿದ್ದರು. ಈ ಬಗ್ಗೆ ಶೀಘ್ರದಲ್ಲೇ ಕೋರ್ಟ್‌ಗೆ ವರದಿ ಸಲ್ಲಿಸಲಾಗುವುದು ಎಂದು ಪೊಲೀಸರು ಹೇಳಿದರು.

‘ದುರಂತಕ್ಕೆ ಡಿಎನ್‌ಎ (ಇವೆಂಟ್ ಮ್ಯಾನೇಜ್‌ಮೆಂಟ್), ಆರ್‌ಸಿಬಿ ಫ್ರ್ಯಾಂಚೈಸಿ ಹಾಗೂ ಕೆಎಸ್‌ಸಿಎ ಕಾರಣ. ಮೂರೂ ಸಂಸ್ಥೆಗಳು ಲೋಪ ಎಸಗಿರುವುದು ತನಿಖೆ ವೇಳೆ ಪತ್ತೆಯಾಗಿವೆ. ಹಲವು ಸಾಕ್ಷ್ಯಗಳು ಸಿಕ್ಕಿವೆ. ಎಲ್ಲವನ್ನೂ ಕ್ರೋಡೀಕರಿಸಿ ನ್ಯಾಯಾಲಯಕ್ಕೆ ಅಂತಿಮ ವರದಿ ಸಲ್ಲಿಸಲಾಗುವುದು’ ಎಂದು ಪೊಲೀಸರು ಹೇಳಿದರು.

ಪ್ರತ್ಯಕ್ಷ ಸಾಕ್ಷಿಗಳು ಹಾಗೂ ಗಾಯಾಳುಗಳ ಹೇಳಿಕೆಗಳನ್ನು ದಾಖಲು ಮಾಡಿಕೊಳ್ಳಲಾಗಿತ್ತು. ಸಿ.ಸಿ.ಟಿ.ವಿ ಕ್ಯಾಮೆರಾಗಳ ಪರಿಶೀಲನೆ ನಡೆಸಲಾಗಿತ್ತು. ತನಿಖೆ ವೇಳೆ, ಮೂರೂ ಸಂಸ್ಥೆಗಳ ಲೋಪಗಳು ಪತ್ತೆಯಾಗಿವೆ ಎಂದು ಸಿಐಡಿ ಮೂಲಗಳು ತಿಳಿಸಿವೆ.

ವಿಜಯೋತ್ಸವಕ್ಕೂ ಮುನ್ನ ಸರಿಯಾದ ವ್ಯವಸ್ಥೆ ಮಾಡಿಕೊಂಡಿರಲಿಲ್ಲ. ಪೊಲೀಸ್ ಅಧಿಕಾರಿಗಳಿಗೆ ಮೊದಲೇ ಮಾಹಿತಿ ನೀಡಿರಲಿಲ್ಲ. ತರಾತುರಿಯಲ್ಲಿ ಪೊಲೀಸರಿಗೆ ಮಾಹಿತಿ ನೀಡಿದ್ದರಿಂದ ಭದ್ರತಾ ವ್ಯವಸ್ಥೆ ಮಾಡಿಕೊಳ್ಳುವುದು ಕಷ್ಟವಾಗಿತ್ತು ಎಂದು ಮೂಲಗಳು ಹೇಳಿವೆ.

ಟಿಕೆಟ್ ಬಗ್ಗೆ ಆರ್‌ಸಿಬಿ ಗೊಂದಲ ಹುಟ್ಟಿಸಿದ್ದು ಘಟನೆಗೆ ಮೊದಲ ಕಾರಣವಾಗಿದೆ. ಭದ್ರತಾ ವಿಚಾರವಾಗಿ ಡಿಎನ್‌ಎಯಿಂದ ವ್ಯವಸ್ಥೆ ಆಗಿರಲಿಲ್ಲ. ಖಾಸಗಿ ಸೆಕ್ಯುರಿಟಿ ಏಜೆನ್ಸಿ ಬಳಕೆಯೂ ವಿಫಲವಾಗಿದೆ. ಪೊಲೀಸರ ಜೊತೆ ಸರಿಯಾದ ಮಾತುಕತೆ ನಡೆಸದೆ ಕಾರ್ಯಕ್ರಮ ಆಯೋಜನೆ ಮಾಡಿರುವುದು ತನಿಖೆ ವೇಳೆ ಪತ್ತೆಯಾಗಿದೆ ಎಂದು ಮೂಲಗಳು ಹೇಳಿವೆ.

ಘಟನೆಯ ಬಳಿಕ ಕಬ್ಬನ್‌ಪಾರ್ಕ್ ಪೊಲೀಸ್ ಠಾಣೆಯಲ್ಲಿ ಯುಡಿಆರ್ ಪ್ರಕರಣ ದಾಖಲಾಗಿತ್ತು. ಮೃತ ಕುಟುಂಬಸ್ಥರ ಆಕ್ರೋಶ ಹೆಚ್ಚಾದ ಬೆನ್ನಲ್ಲೇ ಕೆಎಸ್‌ಸಿಎ, ಡಿಎನ್‌ಎ (ಇವೆಂಟ್ ಮ್ಯಾನೇಜ್‌ಮೆಂಟ್) ಹಾಗೂ ಆರ್‌ಸಿಬಿ ಫ್ರ್ಯಾಂಚೈಸಿಯ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡು ಪೊಲೀಸರು ತನಿಖೆ ಆರಂಭಿಸಿದ್ದರು.

ಅದಾದ ಮೇಲೆ ಕಬ್ಬನ್‌ಪಾರ್ಕ್ ಠಾಣೆಯಲ್ಲಿ ದಾಖಲಾಗಿದ್ದ ಎರಡೂ ಪ್ರಕರಣಗಳ ತನಿಖೆಯನ್ನೂ ರಾಜ್ಯ ಸರ್ಕಾರವು ಸಿಐಡಿಗೆ ವಹಿಸಿತ್ತು. ಕಾಲ್ತುಳಿತ ಘಟನೆಗೆ ಕಾರಣವಾದ ಅಂಶಗಳನ್ನು ಸಿಐಡಿ ತನಿಖಾಧಿಕಾರಿಗಳು ಪತ್ತೆ ಮಾಡಿದ್ದಾರೆ.

‘ಕ್ರೀಡಾಂಗಣದ ಗೇಟ್‌ಗಳ ಬಳಿಯ ಅವ್ಯವಸ್ಥೆ, ಪೊಲೀಸರ ನಿಯೋಜನೆ ಹಾಗೂ ನೂಕುನುಗ್ಗಲು ಉಂಟಾಗಲು ಕಾರಣವೇನು ಎಂಬುದರ ಬಗ್ಗೆ ತನಿಖೆ ನಡೆಸಲಾಗಿದೆ. ಈ ಎಲ್ಲ ಅಂಶಗಳನ್ನು ವರದಿಯಲ್ಲಿ ಉಲ್ಲೇಖಿಸಲಾಗಿದೆ’ ಎಂದು ಮೂಲಗಳು ತಿಳಿಸಿವೆ.

ರಾಜ್ಯ ಲೀಗ್ ಬ್ಯಾಸ್ಕೆಟ್‌ಬಾಲ್: ಪ್ರಶಸ್ತಿ ಸುತ್ತಿನ ಪಂದ್ಯಗಳು ಇಂದು

ಬೆಂಗಳೂರು: ರಾಜ್ಯ ಬ್ಯಾಸ್ಕೆಟ್‌ಬಾಲ್ ಸಂಸ್ಥೆ ಆಯೋಜಿಸಿರುವ ಎ, ಬಿ ಮತ್ತು ಸಿ ಡಿವಿಷನ್ ಲೀಗ್ ಟೂರ್ನಿಗಳ ಪ್ರಶಸ್ತಿ ಸುತ್ತಿನ ಪಂದ್ಯಗಳು ಗುರುವಾರ ನಡೆಯಲಿವೆ. ಇಲ್ಲಿನ ಕಂಠೀರವ ಒಳಾಂಗಣ ಕ್ರೀಡಾಂಗಣದಲ್ಲಿ ಪಂದ್ಯಗಳು ನಡೆಯಲಿವೆ.

ಎಸ್. ರಂಗರಾಜನ್ ಸ್ಮರಣಾರ್ಥ ಟ್ರೋಫಿಗಾಗಿ ನಡೆಯುತ್ತಿರುವ ‘ಸಿ’ ಡಿವಿಷನ್ ಲೀಗ್‌ನ ಫೈನಲ್ ಪಂದ್ಯವು ಬೆಳಿಗ್ಗೆ 11.30ಕ್ಕೆ ಆರಂಭವಾಗಲಿದೆ. ಎಂಇಜಿ ಬ್ಯಾಸ್ಕೆಟ್ ಬಾಲ್ ಕ್ಲಬ್ ಹಾಗೂ ಎಚ್‌ಬಿಆರ್ ತಂಡಗಳು ಟ್ರೋಫಿಗಾಗಿ ಸೆಣಸಲಿವೆ.

ಎಂ.ಸಿ. ಶ್ರೀನಿವಾಸ ಸ್ಮರಣಾರ್ಥ ಟ್ರೋಫಿಗಾಗಿ ನಡೆಯುತ್ತಿರುವ ‘ಬಿ’ ಡಿವಿ ಷನ್ ಲೀಗ್‌ನ ಪ್ರಶಸ್ತಿ ಸುತ್ತಿನಲ್ಲಿ ಜಿಎಸ್‌ಟಿ ಕಸ್ಟಮ್ಸ್ ಹಾಗೂ ಭಾರತ್ ಎಸ್‌ಯು ತಂಡಗಳು ಸೆಣಸಲಿವೆ. ಪಂದ್ಯವು ಮಧ್ಯಾಹ್ನ 1 ಗಂಟೆಗೆ ಆರಂಭವಾಗಲಿದೆ.

ಎನ್.ಸಿ. ಪರಪ್ಪ ಸ್ಮರಣಾರ್ಥ ಟ್ರೋಫಿಗಾಗಿ ನಡೆಯುತ್ತಿರುವ ‘ಎ’ ಡಿವಿಷನ್ ಲೀಗ್‌ನ ಫೈನಲ್ ಪಂದ್ಯವು ಮಧ್ಯಾಹ್ನ 3.30ಕ್ಕೆ ನಡೆಯಲಿದೆ. ಯಂಗ್ ಓರಿಯನ್ಸ್ ಬಿ.ಸಿ. ಹಾಗೂ ಬ್ಯಾಂಕ್ ಆಫ್ ಬರೋಡಾ ತಂಡಗಳು ಟ್ರೋಫಿಗಾಗಿ ಸೆಣಸಲಿವೆ.

ಸೌತ್ ಯುನೈಟೆಡ್ ಎಫ್‌ಸಿ ತಂಡಕ್ಕೆ ಜಯ

ಬೆಂಗಳೂರು: ಸಂಘಟಿತ ಆಟ ಆಡಿದ ಸೌತ್ ಯುನೈಟೆಡ್ ಫುಟ್‌ಬಾಲ್ ಕ್ಲಬ್ ತಂಡವು ಕೆಎಸ್‌ಎಫ್‌ಎ ಸೂಪರ್ ಡಿವಿಷನ್ ಲೀಗ್ ಚಾಂಪಿಯನ್‌ಷಿಪ್ ಪಂದ್ಯದಲ್ಲಿ ಬುಧವಾರ 4–0 ಗೋಲುಗಳಿಂದ ಎಂಇಜಿ ಆ್ಯಂಡ್ ಸೆಂಟರ್ ಫುಟ್‌ಬಾಲ್ ಕ್ಲಬ್ ವಿರುದ್ಧ ಸುಲಭ ಜಯ ದಾಖಲಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ದಿನದ ಇತರ ಪಂದ್ಯಗಳಲ್ಲಿ ಕೊಡಗು ಎಫ್‌ಸಿ ತಂಡವು 4–1ರಿಂದ ಭಾರತ್ ಬೆಂಗಳೂರು ಎಫ್‌ಸಿ ವಿರುದ್ಧ ಹಾಗೂ ಸ್ಪೋರ್ಟಿಂಗ್ ಕ್ಲಬ್ ಬೆಂಗಳೂರು ತಂಡವು 3–1ರಿಂದ ಎಂಎಫ್‌ಎಆರ್ ಸ್ಟುಡೆಂಟ್ಸ್ ಯೂನಿಯನ್ ಎಫ್‌ಸಿ ವಿರುದ್ಧ ಜಯ ಗಳಿಸಿದವು.

ಎರಡನೇ ಸುತ್ತಿಗೆ ಭಾರತದ ಐವರು

ಸಿಡ್ನಿ (ಪಿಟಿಐ): ಅನುಭವಿಗಳಾದ ಲಕ್ಷ್ಯ ಸೇನ್, ಎಚ್.ಎಸ್. ಪ್ರಣಯ್ ಸೇರಿದಂತೆ ಭಾರತದ ಐದು ಮಂದಿ ಆಟಗಾರರು, ಆಸ್ಟ್ರೇಲಿಯಾ ಓಪನ್ ಸೂಪರ್ 500 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಬುಧವಾರ ಎರಡನೇ ಸುತ್ತಿಗೆ ಮುನ್ನಡೆದರು.

ಲಕ್ಷ್ಯ ಸೇನ್

ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ನಾಲ್ಕನೇ ಸ್ಥಾನ ಪಡೆದಿದ್ದ ಲಕ್ಷ್ಯ ಮೊದಲ ಸುತ್ತಿನಲ್ಲಿ 21–17, 21–13 ರಿಂದ ತೈವಾನ್ ಸು ಲಿ ಯಾಂಗ್ ಅವರನ್ನು ನೇರ ಗೇಮ್‌ಗಳಿಂದ ಸೋಲಿಸಿದರು.

2023ರಲ್ಲಿ ಈ ಟೂರ್ನಿಯ ರನ್ನರ್ ಅಪ್ ಆಗಿದ್ದ ಪ್ರಣಯ್ ಆರಂಭದಲ್ಲಿ ಪರದಾಡಿದರೂ ಚೇತರಿಸಿಕೊಂಡು ವಿಶ್ವ ಕ್ರಮಾಂಕದಲ್ಲಿ 85ನೇ ಸ್ಥಾನದಲ್ಲಿರುವ ಯೊಹಾನೆಸ್ ಸವುತ್ ಮಾರ್ಸೆಲಿನೊ ಅವರನ್ನು 6–21, 21–12, 21–17 ರಿಂದ ಸೋಲಿಸಿದರು.

ಈ ವರ್ಷದ ಆರಂಭದಲ್ಲಿ ಅಮೆರಿಕದ ಓಪನ್‌ನಲ್ಲಿ ತಮ್ಮ ಮೊದಲ ಸೂಪರ್ 300 ಟೂರ್ನಿ ಜಯಿಸಿದ್ದ ಆಯುಷ್ ಶೆಟ್ಟಿ 21–11, 21–15 ರಿಂದ ಕೆನಡಾದ ಸ್ಯಾಮ್ ಯುವಾನ್ ಅವರನ್ನು ಕೇವಲ 33 ನಿಮಿಷಗಳಲ್ಲಿ ಸೋಲಿಸಿದರು.

ತರುಣ್ ಮನ್ನೇಪಲ್ಲಿ ಅವರು ದೀರ್ಘ ಹೋರಾಟ ಕಂಡ ಮೊದಲ ಸುತ್ತಿನಲ್ಲಿ ಡೆನ್ಮಾರ್ಕ್‌ನ ಮ್ಯಾಗ್ನಸ್ ಯೊಹಾನ್ಸನ್ ಅವರನ್ನು 21–13, 17–21, 21–19 ರಿಂದ ಪ್ರಯಾಸದಿಂದ ಸೋಲಿಸಿದರು.

2021ರ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿ ಗೆದ್ದಿದ್ದ ಅನುಭವಿ ಕಿದಂಬಿ ಶ್ರೀಕಾಂತ್ ಕೂಡ ಎರಡನೇ ಸುತ್ತಿಗೆ ಮುನ್ನಡೆದರು. ಅವರು ವಿಶ್ವ ಕ್ರಮಾಂಕದಲ್ಲಿ 20ನೇ ಸ್ಥಾನದಲ್ಲಿರುವ ತೈವಾನ್‌ನ ಲೀ ಚಿಯಾ ಹಾವೊ ಅವರನ್ನು 64 ನಿಮಿಷಗಳ ಹಣಾಹಣಿಯಲ್ಲಿ 21–19, 19–21, 21–16 ರಿಂದ ಸೋಲಿಸಿದರು.

ಆದರೆ ಕಿರಣ್ ಜಾರ್ಜ್ ಹೋರಾಡಿ ಸೋತರು. ಆರನೇ ಶ್ರೇಯಾಂಕದ ಕೆಂಟಾ ನಿಶಿಮೋಟೊ ಅವರು 11–21, 24–22, 21–17 ರಿಂದ ಕಿರಣ್ ವಿರುದ್ಧ ಜಯಗಳಿಸಿದರು. ಮಿಶ್ರ ಡಬಲ್ಸ್‌ನಲ್ಲಿ ಭಾರತದ ಮೋಹಿತ್ ಜಗ್ಲಾನ್- ಲಕ್ಷಿತಾ ಜಗ್ಲಾನ್ ಜೋಡಿ ಮೊದಲ ಸುತ್ತಿನಲ್ಲೇ ನಿರ್ಗಮಿಸಿತು.

ಫುಟ್‌ಬಾಲ್: ರಾಜ್ಯ ತಂಡ ಶುಭಾರಂಭ

ಬೆಂಗಳೂರು: ಕರ್ನಾಟಕ ತಂಡವು ಆಂಧ್ರಪ್ರದೇಶದ ಅನಂತಪುರದಲ್ಲಿ ಬುಧವಾರ ಆರಂಭಗೊಂಡ ಡಾ.ತಾಲಿಮೆರೆನ್ ಆವೊ ಜೂನಿಯರ್ ಬಾಲಕಿಯರ ರಾಷ್ಟ್ರೀಯ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ 4–0ಯಿಂದ ಛತ್ತೀಸಗಢ ತಂಡವನ್ನು ಮಣಿಸಿ ಶುಭಾರಂಭ ಮಾಡಿತು.

ಸಂಘಟಿತ ಆಟ ಆಡಿದ ಯಶಿಕಾ ಹರಿಬಾಬು ನಾಯಕತ್ವದ ರಾಜ್ಯ ತಂಡವು ಆರಂಭದಿಂದಲೇ ಪ್ರಾಬಲ್ಯ ಸಾಧಿಸಿತು. ಯಶಿಕಾ 13ನೇ ನಿಮಿಷದಲ್ಲಿ ಗೋಲು ಹೊಡೆದು ಆರಂಭಿಕ ಮುನ್ನಡೆ ತಂದುಕೊಟ್ಟರು. ಕ್ಯಾಥರಿನ್ ಥಂಗಾ 18ನೇ ನಿಮಿಷದಲ್ಲಿ ಗೋಲು ಗಳಿಸಿ, ಮುನ್ನಡೆಯನ್ನು ಹಿಗ್ಗಿಸಿದರು.

ನಂತರ, ದಿವ್ಯಾ ಶ್ರೀರಾಮ್ (32ನೇ ನಿ. ಹಾಗೂ 38ನೇ ನಿ.) ಅವಳಿ ಗೋಲು ಹೊಡೆದು ಗೆಲುವಿನ ಅಂತರವನ್ನು ಹೆಚ್ಚಿಸಿದರು.

ಕರ್ನಾಟಕ ತಂಡವು ಶುಕ್ರವಾರ ನಡೆಯಲಿರುವ ಲೀಗ್‌ನ ಎರಡನೇ ಪಂದ್ಯದಲ್ಲಿ ಗುಜರಾತ್ ತಂಡವನ್ನು ಎದುರಿಸಲಿದೆ.

ಸೋತ ಅರ್ಜುನ್, ಸೆಮಿಗೆ ವೀ

ಚೆಸ್ ವಿಶ್ವಕಪ್: ಭಾರತದ ಸವಾಲು ಅಂತ್ಯ ನಾಲ್ಕರ ಘಟ್ಟಕ್ಕೆ ಇಸಿಪೆಂಕೊ, ಸಿಂದರೋವ್

ಮುಖ್ಯಾಂಶಗಳು

- ಸೆಮಿಗೆ ಉಜ್ಬೇಕಿಸ್ತಾನದ ಇಬ್ಬರು ಆಟಗಾರರು
- ಸೆಮಿಫೈನಲ್ ಕಣದಲ್ಲಿ ವೀ ಯಿ ಅತಿ ಹೆಚ್ಚಿನ ಕ್ರಮಾಂಕದ (11) ಆಟಗಾರ
- ಕ್ಯಾಂಡಿಡೇಟ್ಸ್‌ಗೆ ಅರ್ಹತೆ: ಅರ್ಜುನ್ ಕನಸು ಭಗ್ನ

ಪಣಜಿ (ಪಿಟಿಐ): ಭಾರತದ ಕೊನೆಯ ಭರವಸೆಯಾಗಿದ್ದ ಗ್ರ್ಯಾಂಡ್ ಮಾಸ್ಟರ್ ಅರ್ಜುನ್ ಇರಿಗೇಶಿ ಅವರು ಫಿಡೆ ಚೆಸ್ ವಿಶ್ವಕಪ್ ಟೂರ್ನಿಯಿಂದ ಹೊರಬಿದ್ದರು. ಚೀನಾದ ಆಟಗಾರ ವೀ ಯಿ ಅವರು ಬುಧವಾರ ನಡೆದ ಮೊದಲ ಸೆಟ್ ಟೈಬ್ರೇಕರ್ ನಂತರ 2.5-1.5 ರಿಂದ ಎರಡನೇ ಶ್ರೇಯಾಂಕದ ಅರ್ಜುನ್ ಅವರನ್ನು ಸೋಲಿಸಿ ಸೆಮಿಫೈನಲ್‌ಗೇರಿದರು. ಇದರೊಂದಿಗೆ ಟೂರ್ನಿಯಲ್ಲಿ ಆತಿಥೇಯ ಭಾರತದ ಸವಾಲು ಎಂಟರ ಘಟ್ಟದಲ್ಲೇ ಅಂತ್ಯಕಂಡಿತು.

ಫಿಡೆ ಕ್ರಮಾಂಕಪಟ್ಟಿಯಲ್ಲಿ 11ನೇ ಕ್ರಮಾಂಕದಲ್ಲಿರುವ ಚೀನಾದ ಆಟಗಾರ, ಟೈಬ್ರೇಕರ್‌ನ ಮೊದಲ ಆಟದಲ್ಲಿ ಆರನೇ ಕ್ರಮಾಂಕದ ಅರ್ಜುನ್ ಅವರನ್ನು ಒತ್ತಡಕ್ಕೆ ಸಿಲುಕಿಸಿದರು. ಕಂಪ್ಯೂಟರ್‌ಗಳ ವಿಶ್ಲೇಷಣೆಯಲ್ಲಿ, ವೀ ಅವರೇ ಸ್ಪಷ್ಟ ಮೇಲುಗೈ ಸಾಧಿಸಿದ್ದು ಕಂಡುಬಂತು. ಆದರೆ 22 ವರ್ಷ ವಯಸ್ಸಿನ ಅರ್ಜುನ್ ಪ್ರತಿರೋಧ ತೋರಿ 66 ನಡೆಗಳಲ್ಲಿ ಆಟ ಡ್ರಾ ಮಾಡುವಲ್ಲಿ ಯಶಸ್ವಿಯಾದರು.

ಎರಡನೇ ಆಟದಲ್ಲಿ ಬಿಳಿಕಾಯಿಗಳಲ್ಲಿ ಆಡಿದ ಅರ್ಜುನ್ ಅವರಿಗೆ ಹಿಡಿತ ಪಡೆಯಲಾಗಲಿಲ್ಲ. ಅವರು ಎದುರಾಳಿಯ ದುರ್ಬಲ ಪಡೆಯೊಂದಕ್ಕೆ ಬದಲಾಗಿ ಪ್ರಬಲ ರೂಕ್ ಕಳೆದುಕೊಂಡರು. ಮಧ್ಯಮ ಹಂತದ ಆಟದಲ್ಲಿ ಆರನೇ ರ‍್ಯಾಂಕ್‌ನಲ್ಲಿದ್ದ ವೀ ಯಿ ಅವರ ಬಿಳಿ ಬಿಷಪ್, ಅರ್ಜುನ್ ಅವರಿಗೆ ಸಾಕಷ್ಟು ತಲೆನೋವು ತಂದೊಡ್ಡಿತು. 79ನೇ ನಡೆಯಲ್ಲಿ ಅರ್ಜುನ್ ಚೆಕ್‌ಮೇಟ್‌ಗೆ ಒಳಗಾದರು.

26 ವರ್ಷ ವಯಸ್ಸಿನ ವೀ ಸೆಮಿಫೈನಲ್ ಪಂದ್ಯದಲ್ಲಿ 'ಫಿಡೆ'ಯನ್ನು ಪ್ರತಿನಿಧಿಸುತ್ತಿರುವ ರಷ್ಯಾದ ಆಟಗಾರ ಆ್ಯಂಡ್ರಿ ಇಸಿಪೆಂಕೊ ಅವರನ್ನು ಎದುರಿಸಲಿದ್ದಾರೆ.

ಉಜ್ಬೇಕಿಸ್ತಾನದ ಆಟಗಾರರ 'ವ್ಯವಹಾರ'ವಾಗಿರುವ ಇನ್ನೊಂದು ಸೆಮಿಫೈನಲ್ ಪಂದ್ಯದಲ್ಲಿ ನೊದಿರ್ಬೆಕ್ ಯಾಕುಬೊಯೇವ್ ಅವರು 19 ವರ್ಷ ವಯಸ್ಸಿನ ಜಾವೊಖಿರ್ ಸಿಂದರೋವ್ ಅವರನ್ನು ಎದುರಿಸಲಿದ್ದಾರೆ. ಈ ಟೂರ್ನಿಯಲ್ಲಿ ಮೊದಲ ಮೂರು ಸ್ಥಾನ ಗಳಿಸುವ ಆಟಗಾರರು ಕ್ಯಾಂಡಿಡೇಟ್ಸ್ ಟೂರ್ನಿಗೆ ಅರ್ಹತೆ ಪಡೆಯುವುದರಿಂದ ಅವರಲ್ಲಿ ಒಬ್ಬರು ಉಜ್ಬೇಕ್ ಆಟಗಾರ ಇರುವುದು ಖಚಿತವಾಗಿದೆ.

23 ವರ್ಷ ವಯಸ್ಸಿನ ಇಸಿಪೆಂಕೊ ಇನ್ನೊಂದು ಕ್ವಾರ್ಟರ್‌ಫೈನಲ್‌ನಲ್ಲಿ 34 ವರ್ಷ ವಯಸ್ಸಿನ ಸ್ಯಾಮ್ ಶಂಕ್ಲಾಂಡ್ (ಅಮೆರಿಕ) ಅವರನ್ನು 4-2 ರಿಂದ ಸೋಲಿಸಿದರು. ಮೊದಲ ಸೆಟ್ ಟೈಬ್ರೇಕಿನಲ್ಲಿ ಇಬ್ಬರೂ ಒಂದೊಂದು ಆಟ ಗೆದ್ದರು. ಇನ್ನೊಂದು ಸೆಟ್‌ನ ಎರಡೂ ಆಟಗಳಲ್ಲಿ ಇಸಿಪೆಂಕೊ ಗೆದ್ದರು.

ಎಂಟರ ಘಟ್ಟದ ಮತ್ತೊಂದು ಪಂದ್ಯದಲ್ಲಿ ಉಜ್ಬೇಕಿಸ್ತಾನದ ಜಾವೊಖಿರ್ ಸಿಂದರೋವ್ 3.5-2.5 ರಿಂದ ಮೆಕ್ಸಿಕೊದ ಹೊಸೆ ಎಡುವಾರ್ಡೊ ಮಾರ್ಟಿನೆಝ್ ಅಲ್ಕಂತಾರ ಅವರನ್ನು ಸೋಲಿಸಿದರು.

ಒಬ್ಬರಿಗಷ್ಟೇ ಅರ್ಹತೆ: ಅರ್ಜುನ್ ಸೋಲಿನೊಡನೆ, ಮುಂದಿನ ವರ್ಷದ ಕ್ಯಾಂಡಿಡೇಟ್ಸ್‌ಗೆ ಭಾರತದ ಒಬ್ಬರಷ್ಟೇ ಆಡುವುದು ಖಚಿತವಾಗಿದೆ. 2025ರ ಪ್ರಮುಖ ಟೂರ್ನಿಗಳಲ್ಲಿ ಉತ್ತಮ ಪ್ರದರ್ಶನ ನೀಡಿರುವ ಕಾರಣ ಪ್ರಜ್ಞಾನಂದ ಆರ್. ಅವರು ಅರ್ಹತೆ ಪಡೆಯುವುದು ನಿಚ್ಚಳವಾಗಿದೆ.

ವಿಶ್ವ ಚಾಂಪಿಯನ್‌ಗೆ ಸವಾಲು ಹಾಕುವ ಆಟಗಾರರನನ್ನು ನಿರ್ಧರಿಸಲು ನಡೆಯುವ ಕ್ಯಾಂಡಿಡೇಟ್ಸ್‌ನಲ್ಲಿ ಎಂಟು ಮಂದಿಗಷ್ಟೇ ಆಡುವ ಅವಕಾಶವಿದೆ.

ಗೆದ್ದ ವೀ ಯಿ ಅವರಿಗೆ ಹಸ್ತಲಾಘವ ನೀಡಿದ ಅರ್ಜುನ್ ಇರಿಗೇಶಿ ಫಿಡೆ ಚಿತ್ರ

ಸೆಮಿಫೈನಲ್ ಮುಖಾಮುಖಿ

- ನೊದಿರ್ಬೆಕ್ ಯಾಕುಬೊಯೇವ್ (37) – ಜಾವೊಖಿರ್ ಸಿಂದರೋವ್ (25)
- ವೀ ಯಿ (11) – ಆ್ಯಂಡ್ರಿ ಇಸಿಪೆಂಕೊ (41)

(ಆವರಣದಲ್ಲಿರುವುದು ಫಿಡೆ ವಿಶ್ವ ಕ್ರಮಾಂಕ)

ಏಕದಿನ ಸರಣಿಗಿಲ್ಲ ಹಾರ್ದಿಕ್, ಬೂಮ್ರಾ?

ಹಾರ್ದಿಕ್ ಪಾಂಡ್ಯ

ಗುವಾಹಟಿ (ಪಿಟಿಐ): ಭಾರತ ಕ್ರಿಕೆಟ್ ತಂಡದ ಆಲ್‌ರೌಂಡರ್ ಹಾರ್ದಿಕ್ ಪಾಂಡ್ಯ ಹಾಗೂ ವೇಗಿ ಜಸ್‌ಪ್ರೀತ್ ಬೂಮ್ರಾ ಅವರು ದಕ್ಷಿಣ ಆಫ್ರಿಕಾ ವಿರುದ್ಧದ ಏಕದಿನ ಸರಣಿಯಲ್ಲಿ ಕಣಕ್ಕಿಳಿಯುವುದು ಅನುಮಾನ ಎನ್ನಲಾಗಿದೆ.

ಮುಂದಿನ ವರ್ಷ ನಡೆಯಲಿರುವ ಐಸಿಸಿ ಟಿ20 ವಿಶ್ವಕಪ್‌ಗೆ ಸಿದ್ಧತೆ ನಡೆಸುವ ಸಲುವಾಗಿ ಹಾಗೂ ಕಾರ್ಯಭಾರ ನಿರ್ವಹಣೆ ಭಾಗವಾಗಿ ಈ ಇಬ್ಬರು ಆಟಗಾರರು ವಿಶ್ರಾಂತಿ ಪಡೆಯಲಿದ್ದಾರೆ ಎಂದು ತಿಳಿದುಬಂದಿದೆ.

'ಹಾರ್ದಿಕ್ ಪಾಂಡ್ಯ ಅವರು ತೊಡೆಯ ಗಾಯದಿಂದ ಗುಣಮುಖರಾಗುತ್ತಿದ್ದಾರೆ. ಆದರೆ, ಸದ್ಯದ ಪರಿಸ್ಥಿತಿಯಲ್ಲಿ ಏಕದಿನ ಪಂದ್ಯ ಆಡುವುದು ಅವರಿಗೆ ಕಷ್ಟವಾಗಲಿದ್ದು, ಟಿ20 ಮಾದರಿಗಷ್ಟೇ ಗಮನ ಹರಿಸುತ್ತಿದ್ದಾರೆ' ಎಂದು ಬಿಸಿಸಿಐ ಮೂಲಗಳು ತಿಳಿಸಿವೆ.

ದಕ್ಷಿಣ ಆಫ್ರಿಕಾ ವಿರುದ್ಧ ಶನಿವಾರದಿಂದ ಎರಡನೇ ಟೆಸ್ಟ್

ಗುವಾಹಟಿಗೆ ಬಂದಿಳಿದ ಗಿಲ್

ನವದೆಹಲಿ (ಪಿಟಿಐ): ದಕ್ಷಿಣ ಆಫ್ರಿಕಾ ಎದುರಿನ ಟೆಸ್ಟ್ ಸರಣಿಯ ಎರಡನೇ ಪಂದ್ಯ ನಡೆಯಲಿರುವ ಗುವಾಹಟಿಗೆ ಭಾರತ ತಂಡದೊಂದಿಗೆ ನಾಯಕ ಶುಭಮನ್ ಗಿಲ್ ಅವರು ಬುಧವಾರ ಬಂದಿಳಿದರು.

26 ವರ್ಷದ ಗಿಲ್ ಅವರು ಕೋಲ್ಕತ್ತದಲ್ಲಿ ನಡೆದಿದ್ದ ಮೊದಲ ಟೆಸ್ಟ್ ಪಂದ್ಯದಲ್ಲಿ ಬ್ಯಾಟಿಂಗ್ ವೇಳೆ ಕುತ್ತಿಗೆಯ ಸ್ನಾಯು ಸೆಳೆತಕ್ಕೊಳಗಾಗಿದ್ದರು. ಅದರಿಂದಾಗಿ ಕೂಡಲೇ ಅವರನ್ನು ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಕೊಡಿಸಲಾಗಿತ್ತು. ಅವರು ಆ ಪಂದ್ಯದ ಎರಡನೇ ಇನಿಂಗ್ಸ್‌ನಲ್ಲಿ ಆಡಿರಲಿಲ್ಲ. ಸರಣಿಯ 2ನೇ ಪಂದ್ಯವು ಇದೇ 22ರಂದು ಗುವಾಹಟಿಯಲ್ಲಿ ಆರಂಭವಾಗಲಿದೆ.

'ಶುಭಮನ್ ಅವರು ಚಿಕಿತ್ಸೆಗೆ ಉತ್ತಮವಾಗಿ ಸ್ಪಂದಿಸುತ್ತಿದ್ದಾರೆ. ಅವರು ಗುವಾಹಟಿಗೆ ತಂಡದೊಂದಿಗೆ ತೆರಳಿದ್ದಾರೆ' ಎಂದು ಬಿಸಿಸಿಐ ಕಾರ್ಯದರ್ಶಿ ದೇವಜೀತ್ ಸೈಕಿಯಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಆದರೆ ಗಿಲ್ ಅವರು ಆಡುವ ಬಗ್ಗೆ ಇನ್ನೂ ಖಚಿತ ಮಾಹಿತಿ ಇಲ್ಲ. ಅವರ ಬದಲಿಗೆ ಆಲ್‌ರೌಂಡರ್ ನಿತೀಶ್ ರೆಡ್ಡಿ ಅವರು ಅವಕಾಶ ಪಡೆಯುವುದು ಖಚಿತವಾಗಿದೆ. ರಾಜ್‌ಕೋಟ್‌ನಲ್ಲಿ ನಡೆಯುತ್ತಿರುವ ದಕ್ಷಿಣ ಆಫ್ರಿಕಾ ಎ ತಂಡದ ಎದುರಿನ ಏಕದಿನ ಸರಣಿಯಲ್ಲಿ ಭಾರತ ಎ ತಂಡದಲ್ಲಿ ಆಡಲಿದ್ದ ನಿತೀಶ್ ಅವರನ್ನು ಕೋಲ್ಕತ್ತಕ್ಕೆ ಕರೆಸಿಕೊಳ್ಳಲಾಗಿದೆ. ಮಂಗಳವಾರ ಅವರು ಅಭ್ಯಾಸದಲ್ಲಿ ಭಾಗವಹಿಸಿದ್ದರು.

ಭಾರತ ತಂಡವು ಮೊದಲ ಟೆಸ್ಟ್ ಪಂದ್ಯದಲ್ಲಿ ಸೋತಿತ್ತು.

ಭಾರತ ತಂಡದ ನಾಯಕ ಶುಭಮನ್ ಗಿಲ್ ಅವರು ಬುಧವಾರ ಗುವಾಹಟಿಗೆ ಬಂದಿಳಿದರು ಪಿಟಿಐ ಚಿತ್ರ

ಪ್ರಿಟೋರಿಯಸ್, ರಿವಾಲ್ಡೊ ಶತಕ

ಅಂತಿಮ ಏಕದಿನ ಪಂದ್ಯ: ದಕ್ಷಿಣ ಆಫ್ರಿಕಾ ಎ ತಂಡಕ್ಕೆ ಜಯ

ರಾಜ್‌ಕೋಟ್ (ಪಿಟಿಐ): ಉದಯೋನ್ಮುಖ ಆಟಗಾರ ಲುವಾನ್ ಡ್ರೆ ಪ್ರಿಟೋರಿಯಸ್ ಅವರ ಅಮೋಘ ಶತಕದ ಬಲದಿಂದ ದಕ್ಷಿಣ ಆಫ್ರಿಕಾ ಎ ತಂಡವು ಭಾರತ ಎ ವಿರುದ್ಧದ 'ಏಕದಿನ' ಕ್ರಿಕೆಟ್ ಪಂದ್ಯದಲ್ಲಿ ಜಯಭೇರಿ ಬಾರಿಸಿತು.

ಇದರೊಂದಿಗೆ ಸರಣಿಯಲ್ಲಿ ಕ್ಲೀನ್ ಸ್ವೀಪ್ ಸೋಲು ಕೂಡ ತಪ್ಪಿಸಿಕೊಂಡಿತು. ಭಾರತ ಎ ತಂಡವು 2-1ರಿಂದ ಸರಣಿಯನ್ನು ತನ್ನದಾಗಿಸಿಕೊಂಡಿತು.

ಬುಧವಾರ ನಡೆದ ಸರಣಿಯ ಮೂರನೇ ಹಾಗೂ ಕೊನೆಯ ಪಂದ್ಯದಲ್ಲಿ ದಕ್ಷಿಣ ಆಫಿಕಾ ಎ ತಂಡವು 73 ರನ್‌ಗಳಿಂದ ಗೆದ್ದಿತು. ಪ್ರಿಟೋರಿಯಸ್ (123; 98ಎಸೆತ) ಮತ್ತು ರಿವಾಲ್ಡೊ ಮೂನಸಾಮಿ (107; 130ಎ) ಅವರು ಜೊತೆಯಾಟದಲ್ಲಿ 241 ರನ್ ಸೇರಿಸಿದರು. ಇದರಿಂದಾಗಿ ತಂಡವು 50 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 325 ರನ್ ಗಳಿಸಿತು.

ಇದಕ್ಕುತ್ತರವಾಗಿ ಭಾರತ ಎ ತಂಡಕ್ಕೆ 49.1 ಓವರ್‌ಗಳಲ್ಲಿ 252 ರನ್ ಗಳಿಸಲು ಮಾತ್ರ ಸಾಧ್ಯವಾಯಿತು.

19 ವರ್ಷದ ಪ್ರಿಟೋರಿಯಸ್ ಅವರನ್ನು ಐಪಿಎಲ್‌ನಲ್ಲಿ ಆಡುವ ರಾಜಸ್ಥಾನ ರಾಯಲ್ಸ್ ತಂಡವು ಉಳಿಸಿಕೊಂಡಿದೆ.

ಸಂಕ್ಷಿಪ್ತ ಸ್ಕೋರು: ದಕ್ಷಿಣ ಆಫ್ರಿಕಾ ಎ : 50 ಓವರ್‌ಗಳಲ್ಲಿ 6ಕ್ಕೆ325 (ಲಹುವಾನ್ ಡ್ರೆ ಪ್ರಿಟೋರಿಯಸ್ 123, ರಿವಾಲ್ಡೊ ಮೂನಸಾಮಿ 107) ಭಾರತ ಎ: 49.1 ಓವರ್‌ಗಳಲ್ಲಿ 252 (ಆಯುಷ್ ಬದೋನಿ 66, ಇಶಾನ್ ಕಿಶನ್ 53, ಎನ್‌ಕಾಬೆಯೊಮಝಿ ಪೀಟರ್ 48ಕ್ಕೆ4) ಫಲಿತಾಂಶ: ದಕ್ಷಿಣ ಆಫ್ರಿಕಾ ಎ ತಂಡಕ್ಕೆ 73 ರನ್‌ಗಳಿಂದ ಜಯ. ಭಾರತ ಎ ತಂಡಕ್ಕೆ 2-1ರಿಂದ ಸರಣಿ ಜಯ.

ಏಕದಿನ ರ‍್ಯಾಂಕಿಂಗ್: ಎರಡನೇ ಸ್ಥಾನಕ್ಕೆ ರೋಹಿತ್ ಶರ್ಮಾ

ದುಬೈ (ಪಿಟಿಐ): ಭಾರತದ ಬ್ಯಾಟಿಂಗ್ ತಾರೆ ರೋಹಿತ್ ಶರ್ಮಾ ಅವರು ಐಸಿಸಿ ಏಕದಿನ ಕ್ರಮಾಂಕ ಪಟ್ಟಿಯಲ್ಲಿ ಬ್ಯಾಟರ್‌ಗಳ ವಿಭಾಗದ ಅಗ್ರಸ್ಥಾನ ಕಳೆದುಕೊಂಡಿದ್ದಾರೆ. ನ್ಯೂಜಿಲೆಂಡ್‌ನ ಡೇರಿಲ್ ಮಿಚೆಲ್ ಅವರು ಬುಧವಾರ ಪ್ರಕಟವಾದ ಹೊಸ ರ‍್ಯಾಂಕಿಂಗ್ ಪಟ್ಟಿಯಲ್ಲಿ ಇದೇ ಮೊದಲ ಬಾರಿ ಅಗ್ರಸ್ಥಾನಕ್ಕೇರಿದ್ದಾರೆ.


ಡೇರಿಲ್ ಮಿಚೆಲ್

ವೆಸ್ಟ್ ಇಂಡೀಸ್ ವಿರುದ್ಧ ಹಾಲಿ ಸರಣಿಯಲ್ಲಿ ಶತಕ ಬಾರಿಸಿದ್ದ ಬಲಗೈ ಬ್ಯಾಟರ್ ಮಿಚೆಲ್, ಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿದ ನ್ಯೂಜಿಲೆಂಡ್‌ನ ಎರಡನೇ ಬ್ಯಾಟರ್ ಎನಿಸಿದ್ದಾರೆ. ಆರಂಭ ಆಟಗಾರರಾಗಿದ್ದ ಗ್ಲೆನ್ ಟರ್ನರ್ 1979ರಲ್ಲಿ ಅಗ್ರಸ್ಥಾನಕ್ಕೇರಿದ ಮೊದಲ ಕಿವೀಸ್ ಆಟಗಾರ ಎನಿಸಿದ್ದರು.

ಮಿಚೆಲ್ 782 ರೇಟಿಂಗ್ ಪಾಯಿಂಟ್ಸ್ ಹೊಂದಿದ್ದಾರೆ. ಇದು ರೋಹಿತ್ ಅವರಿಗಿಂತ ಒಂದು ಹೆಚ್ಚು. ಮುಂಬೈನ ಆಟಗಾರ ಮೂರು ವಾರ ಮಾತ್ರ ಅಗ್ರಸ್ಥಾನದಲ್ಲಿದ್ದರು.

ಮಾರ್ಟಿನ್ ಕ್ರೋವ್, ಆ್ಯಂಡ್ರೂ ಜೋನ್ಸ್, ಕೇನ್ ವಿಲಿಯಮ್ಸನ್, ಮಾರ್ಟಿನ್ ಗಪ್ಟಿಲ್ ಮತ್ತು ರಾಸ್ ಟೇಲರ್ ಅವರೂ ಅಮೋಘ ಪ್ರದರ್ಶನ ನೀಡಿ ಅಗ್ರ ಐದರಲ್ಲಿ ಸ್ಥಾನ ಪಡೆದಿದ್ದರು. ಆದರೆ, ಅಗ್ರಸ್ಥಾನಕ್ಕೇರಿರಲಿಲ್ಲ.

ಐಸಿಸಿ 19 ವರ್ಷದೊಳಗಿನ ಪುರುಷರ ಕ್ರಿಕೆಟ್ ವಿಶ್ವಕಪ್ ಟೂರ್ನಿ ಜ. 15ರಿಂದ

ಭಾರತಕ್ಕೆ ಅಮೆರಿಕ ಮೊದಲ ಎದುರಾಳಿ

ದುಬೈ (ಪಿಟಿಐ): ಭಾರತ ತಂಡವು, 2026ರ ಜನವರಿ 15 ರಿಂದ ಫೆಬ್ರುವರಿ 6ರವರೆಗೆ ನಡೆಯಲಿರುವ ಐಸಿಸಿ 19 ವರ್ಷದೊಳಗಿನ ಪುರುಷರ ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಅಮೆರಿಕ ವಿರುದ್ಧ ಆಡುವ ಮೂಲಕ ತನ್ನ ಅಭಿಯಾನ ಆರಂಭಿಸಲಿದೆ. ಜಿಂಬಾಬ್ವೆ ಮತ್ತು ನಮೀಬಿಯಾದಲ್ಲಿ ಈ ಟೂರ್ನಿ ನಡೆಯಲಿದೆ.

ಕಣದಲ್ಲಿ ಒಟ್ಟು 16 ತಂಡಗಳಿದ್ದು, ಇವುಗಳನ್ನು ನಾಲ್ಕು ಗುಂಪುಗಳಲ್ಲಿ ವಿಂಗಡಿಸಲಾಗಿದೆ. 23 ದಿನಗಳ ಅವಧಿಯಲ್ಲಿ ಒಟ್ಟು 41 ಪಂದ್ಯಗಳನ್ನು ಆಡಲಾಗುವುದು.

ಭಾರತ, ಅಮೆರಿಕ, ಬಾಂಗ್ಲಾದೇಶ ಮತ್ತು ನ್ಯೂಜಿಲೆಂಡ್ ತಂಡಗಳು 'ಎ' ಗುಂಪಿನಲ್ಲಿವೆ. ಜಿಂಬಾಬ್ವೆ, ಪಾಕಿಸ್ತಾನ, ಇಂಗ್ಲೆಂಡ್ ಮತ್ತು ಸ್ಕಾಟ್ಲೆಂಡ್ ತಂಡಗಳು ಬಿ ಗುಂಪಿನಲ್ಲಿವೆ. ಹಾಲಿ ಚಾಂಪಿಯನ್ ಆಸ್ಟ್ರೇಲಿಯಾ, ಐರ್ಲೆಂಡ್, ಜಪಾನ್ ಮತ್ತು ಶ್ರೀಲಂಕಾ 'ಸಿ' ಗುಂಪಿನಲ್ಲಿವೆ. ತಾಂಜಾನಿಯಾ, ವೆಸ್ಟ್ ಇಂಡೀಸ್, ಅಫ್ಗಾನಿಸ್ತಾನ ಮತ್ತು ದಕ್ಷಿಣ ಆಫ್ರಿಕಾ 'ಡಿ' ಗುಂಪಿನಲ್ಲಿವೆ.

ಐಸಿಸಿ ಬುಧವಾರ ವೆಬ್‌ಸೈಟ್‌ನಲ್ಲಿ ವೇಳಾಪಟ್ಟಿಯನ್ನು ಪ್ರಕಟಿಸಿದೆ. ತಾಂಜಾನಿಯಾ ಮೊದಲ ಬಾರಿ ಟೂರ್ನಿಯಲ್ಲಿ ಆಡುತ್ತಿದೆ. ಜಪಾನ್ 2020ರಲ್ಲಿ ಮೊದಲ ಬಾರಿ ಆಡಿದ್ದು, ಈಗ ಎರಡನೇ ಬಾರಿ ಅವಕಾಶ ಪಡೆದಿದೆ.

ಪ್ರತಿ ಗುಂಪಿನಲ್ಲಿ ಮೊದಲ ಮೂರು ಸ್ಥಾನ ಪಡೆದ ತಂಡಗಳು ಸೂಪರ್ ಸಿಕ್ಸ್ ಹಂತದಲ್ಲಿ ಆಡಲಿವೆ. ಇವುಗಳು ತಲಾ ಆರರಂತೆ ಎರಡು ಗುಂಪುಗಳಲ್ಲಿ ಆಡಲಿವೆ. ಸೆಮಿಫೈನಲ್‌ನೊಂದಿಗೆ ನಾಕೌಟ್ ಹಂತ ಆರಂಭವಾಗಲಿದೆ. ಸೆಮಿಫೈನಲ್ ಪಂದ್ಯಗಳಿಗೆ ಮತ್ತು ಫೈನಲ್ ಪಂದ್ಯಕ್ಕೆ ಮೀಸಲು ದಿನವಿದೆ.

ಭಾರತದ ಪಂದ್ಯಗಳು

ಪಂದ್ಯ	ಎದುರಾಳಿ
ಜನವರಿ 15	ಅಮೆರಿಕ
ಜನವರಿ 17	ಬಾಂಗ್ಲಾದೇಶ
ಜನವರಿ 24	ನ್ಯೂಜಿಲೆಂಡ್

(ಎಲ್ಲ ಪಂದ್ಯಗಳು ಕ್ವೀನ್ಸ್ ಕ್ಲಬ್, ಬುಲವಾಯೊದಲ್ಲಿ ನಡೆಯಲಿವೆ)

ಕೂಚ್ ಬಿಹಾರ್: ಕರ್ನಾಟಕ ಗೆಲುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೌಲರ್‌ಗಳಿಗೆ ಹೆಚ್ಚಿನ ನೆರವು ನೀಡುತ್ತಿದ್ದ ಪಿಚ್‌ನಲ್ಲಿ ಮಧ್ಯಮ ಕ್ರಮಾಂಕದ ಬ್ಯಾಟ್ಸ್‌ಮನ್‌ಗಳು ಎಚ್ಚರಿಕೆಯ ಆಟ ಆಡಿದ್ದರಿಂದ ಕರ್ನಾಟಕ ತಂಡವು 19 ವರ್ಷದೊಳಗಿನ-ವರ ಕೂಚ್ ಬಿಹಾರ್ ಟ್ರೋಫಿ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ 3 ವಿಕೆಟ್‌ಗಳಿಂದ ಉತ್ತರಾಖಂಡ ತಂಡವನ್ನು ಮಣಿಸಿತು.

ಇಲ್ಲಿನ ಆಲೂರಿನ ಕೆಎಸ್‌ಸಿಎ ಮೈದಾನದಲ್ಲಿ ನಡೆದ ಪಂದ್ಯದಲ್ಲಿ ಗೆಲುವಿಗೆ 159ರನ್‌ಗಳ ಗುರಿ ಪಡೆದಿದ್ದ ರಾಜ್ಯ ತಂಡ 45.2 ಓವರ್‌ಗಳಲ್ಲಿ 7 ವಿಕೆಟ್‌ಗೆ 162 ರನ್ ಗಳಿಸಿ ಸಂಭ್ರಮಿಸಿತು.

7 ಓವರ್‌ಗಳಲ್ಲಿ 1 ವಿಕೆಟ್‌ಗೆ 44ರನ್‌ಗಳಿಂದ ಅಂತಿಮ ದಿನವಾದ ಬುಧವಾರ ಆಟ ಮುಂದುವರಿಸಿದ ಆತಿಥೇಯ ತಂಡ, ಆರಂಭದದಲ್ಲಿಯೇ ಧ್ರುವ್ ಕೃಷ್ಣನ್ (24; 35ಎ, 3ಬೌಂ) ವಿಕೆಟ್ ಕಳೆದುಕೊಂಡಿತು. 17ನೇ ಓವರ್‌ನ ಎರಡನೇ ಎಸೆತದಲ್ಲಿ ನಾಯಕ ಮಣಿಕಂಠ ಶಿವಾನಂದ್ (14; 25ಎ, 3ಬೌಂ) ಹಾಗೂ ಮರು ಓವರ್‌ನ ಮೊದಲ ಎಸೆತದಲ್ಲಿ ನಿತೀಶ್ ಆರ್ಯ (33; 37ಎ, 4ಬೌಂ) ಪೆವಿಲಿಯನ್ ಸೇರಿದರು.

ಮೊದಲ ಇನಿಂಗ್ಸ್‌ನಲ್ಲಿ ಶತಕ ಬಾರಿಸಿದ್ದ ರೋಹಿತ್ ಎ.ಎ. (6) ಮತ್ತು ವೈಭವ್ ಶರ್ಮಾ (28; 37ಎ, 3ಬೌಂ, 1ಸಿ) 5ನೇ ವಿಕೆಟ್ ಜೊತೆಯಾಟದಲ್ಲಿ 35 ರನ್ ಗಳಿಸಿ ತಂಡಕ್ಕೆ ಆಸರೆಯಾದರು. ಎರಡು ರನ್‌ಗಳ ಅಂತರದಲ್ಲಿ ಇವರಿಬ್ಬರೂ ಔಟಾದರು. ಆಗ ತಂಡದ ಮೊತ್ತ 6 ವಿಕೆಟ್‌ಗೆ 113. ಈ ಹಂತದಲ್ಲಿ ಜೊತೆಯಾದ ವಿಕೆಟ್ ಕೀಪರ್ ರೆಹಾನ್ ಮೊಹಮ್ಮದ್ (ಔಟಾಗದೆ 22; 37ಎ, 1ಬೌಂ) ಮತ್ತು ಸಿದ್ಧಾರ್ಥ್ ಅಖಿಲ್ (20; 23ಎ, 3ಬೌಂ) ತಂಡವನ್ನು ಗೆಲುವಿನ ಹೊಸ್ತಿಲಿಗೆ ತಂದು ನಿಲ್ಲಿಸಿದರು.

ಬಳಿಕ, ರೆಹಾನ್ ಅವರು ಅಕ್ಷತ್ ಪ್ರಭಾಕರ್ (ಔಟಾಗದೇ 8) ಜೊತೆಗೂಡಿ ತಂಡವನ್ನು ಗೆಲುವಿನ ದಡ ಸೇರಿಸಿದರು.

ಸಂಕ್ಷಿಪ್ತ ಸ್ಕೋರ್: ಉತ್ತರಾಖಂಡ; ಮೊದಲ ಇನಿಂಗ್ಸ್: 81.2 ಓವರ್‌ಗಳಲ್ಲಿ 202 ಮತ್ತು 77.1 ಓವರ್‌ಗಳಲ್ಲಿ 191. ಕರ್ನಾಟಕ: ಪ್ರಥಮ ಇನಿಂಗ್ಸ್; 90 ಓವರ್‌ಗಳಲ್ಲಿ 235 ಮತ್ತು 45.2 ಓವರ್‌ಗಳಲ್ಲಿ 7 ವಿಕೆಟ್‌ಗೆ 162 (ಧ್ರುವ್ ಕೃಷ್ಣನ್ 24, ನಿತೀಶ್ ಆರ್ಯ 33, ವೈಭವ್ ಶರ್ಮಾ 28, ರೆಹಾನ್ ಮೊಹಮ್ಮದ್ ಔಟಾಗದೇ 22; ಪ್ರಿಯಾಂಶು ಸಿಂಗ್ 52ಕ್ಕೆ3, ಆಕಾಶ್ ಕುಮಾರ್ 32ಕ್ಕೆ2). ಫಲಿತಾಂಶ: ಕರ್ನಾಟಕಕ್ಕೆ 3 ವಿಕೆಟ್ ಗೆಲುವು.

Toll Free Number: 1800 266 0018

INDIA'S FIRST 5 YEAR WARRANTY *Conditions apply

$ADDITIONAL CASH DISCOUNT AVAILABLE ON Flipkart amazon

Hero MotoCorp Ltd. Regd. Office: The Grand Plaza, Plot No.2, Nelson Mandela Road, Vasant Kunj Phase - II, New Delhi - 110070, India. | CIN: L35911DL1984PLC017354 | For further information, contact your nearest Hero MotoCorp authorised outlet visit us on www.HeroMotoCorp.com. Accessories and features shown may not be a part of standard fitment. Always wear a helmet while riding a two-wheeler. **As per the cumulative dispatch number till March 2023. ≠Highest sales for any 2 Wheeler Corporate Entity in the world for Calendar Year 2022 - Data source: DNA Consult & Advisory's report Assessment of Global Two Wheelers Market (CY22). ^^Based on offers from empanelled dealers on Wheels of Trust platform. ^Finance offer is at the sole discretion of the Financier, subject to its respective T&Cs. Available at select dealerships. *Offer amount and combination of offer may vary for model/variant and states and it is applicable on select models only. For more details, please visit your nearest authorised Hero outlet. $Flipkart offer is subject to the sole discretion & T&Cs of Flipkart. $Amazon offers are subject to the sole discretion & T&Cs of Amazon. # Starting Ex-showroom price for Splendour series.

For all Institutional/Bulk requirements please mail: bangalore@heromotocorp.com

AUTHORISED DEALERS: BENGALURU - HOSUR ROAD: RT KRISHNA HERO - PH: 9289923177. LALBAGH ROAD: PRAKASH HERO - PH: 9289922117. BYATARAYANAPURA: BIMAL HERO - PH: 9289922863. PEENYA: SAI HERO - PH: 9289922830. HOSUR ROAD: RT KRISHNA HERO - PH: 9289923177. BANASHANKARI: SAI HERO - PH: 9289922476. BANASWADI: BHAGATH HERO - PH: 9289922738. MAGADI ROAD: POORNA HERO - PH: 9289923212. MARATHALLI: VAAYURATHA HERO - PH: 9289923811. RAJAJI NAGAR: MAX HERO - PH: 9289923023. KOLAR: SAI BALAJI HERO PH. 9821745024. CHIKKABALLAPUR: MANJUNATH HERO - PH: 9821751332. TUMKUR: SAI HERO - PH: 9289922986. B.H.ROAD – SAI HERO, PH. 7022752841. KAMAKSHIPALYA: POORNA MOTORS – PH: 9606922534. JP NAGAR: SAI HERO, PH: 99002 36280. KANAKPURA ROAD: SAI HERO - 8904677394. HOSKOTE: BHAGATH HERO - PH: 8884600051. K R PURAM: BHAGATH HERO - PH: 7829488706. JIGANI: RT KRISHNA HERO – PH: 8762860999. RT NAGAR: BIMAL HERO 9535327710. TIPTUR: SAI HERO PH. 9164840456. KUNIGAL: SAI HERO - PH: 7022752858. DODDABALLAPURA: BIMAL HERO 9742202125. Associate Dealer: BELATHUR: 9902649569. MADIWALA: 9731660639. BANASHANKARI 3RD STAGE: 9513353864. BANNERGHATTA ROAD: 41209619. KENGERI: 9739275523. YELAHANKA: 28462524, 9341025589. MYSORE ROAD:9611997733. DEVANAHALLI: 9964560599. KANAKAPURA: 9880212346. WHITEFIELD: 9741646466. BAGEPALLI: 282828. SRINIVASPUR: 9738504002. SIDLAGHATTA: 254827. NELAMANGALA: 27723395. PAVAGADA: 9740324639. MADHUGIRI: 9972278989. VIJAYAPURA: 9449619920. SIRA: 9448417393. CHANDAPURA: 9481329064. VIDYARANYAPURA: 9606934533. MAGADI: 9482090890. GOTTIGERE: 81976 78979. Also Available at: DUNNASANDRA: 8310166369. HSR LAYOUT: 7428893265. MATHIKERE: 9035027951. DOMLUR: 7353919910. J.P.NAGAR: 9035024274. RT NAGAR: 9535327710. ATTIBELE: 8050609104. B NARAYANAPURA: 9945472149. VARTHUR: 9900877227. PAPAREDDYPALYA: 9916678309. ANEKAL: 9739519252. KONANKUNTE: 9886122251. SARJAPUR MAIN ROAD: 8762860999. BIDADI: 9844767719. RAMANAGARA: 9663399909. JIGANI: 9986498884. CHIKKANAYAKANAHALLI: 9880807399. TURUVEKERE: 9448403205. KORATAGERE: 9731713711. PERESANDRA: 9901502049.